ಕರ್ಣಾಟಕ ಕಾವ್ಯಕಲಾನಿಧಿ

ಕೋಶಸಂಖ್ಯೆ— ೧೦.

ಮಹಾಕವಿ

ಅಗ್ಗಳದೇವ ವಿರಚಿತಂ.

ಚಂದ್ರಪ್ರಭಪುರಾಣಂ

ದ್ವಿತೀಯ ಸಂಪುಟಂ (ಅಧ್ಯಾಯ ೯-೧೬)

ಎಸ್. ಜಿ. ನರಸಿಂಹಾಚಾರ್

ಗಾರ್ನ್ಮೆಂಟ್ ಕನ್ನಡ ಟ್ರಾನ್ಸ್ಲೇಟರ್, ಎಜುಕೇಷನ್ ಡಿಪಾರ್ಟ್ಮೆಂಟ್, ಮೈಸೂರ್,

ಮತ್ತು

ಮಂ. ಆ. ರಾಮಾನುಜೈಯಂಗಾರ್

ಅಸಿಸ್ಟೆಂಟ್ ಮಾಸ್ಟರ್, ವೆಸ್ಲಿಯನ್ ಮಿಷನ್ ಹೈಸ್ಕೂಲ್, ಮೈಸೂರ್—

ಇವರುಗಳಿಂದ ಶೋಧಿಸಲ್ಪಟ್ಟು

ಮೈಸೂರು:

ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿತವಾಯ್ತು.

೧೯೦೩.

ಉಪೋದ್ಘಾತ.

ಮೂರು ಪ್ರತಿಗಳ ಸಹಾಯದಿಂದ ಈ ಗ್ರಂಥ ತ್ರ ಮುದ್ರಿತವಾಯಿತು. ಈ ಪ್ರತಿಗಳಲ್ಲಿ-

ಒಂದು ಮೈಸೂರು ಸರ್ಕಾರದ ಓರಿಯಂಟಲ್ ಲೈಬ್ರೇರಿಯ ಕೈಬರಹದ ಪುಸ್ತಕ.

ಮತ್ತೊಂದು ಶ್ರವಣಬೆಳಗೊಳದ ಕಡೆಯಿಂದ ಬಂದ ಓಲೆಯಪ್ರತಿ. ಇದರಲ್ಲಿ 'ಖ' ಉಪಯೋಗಿಸಿದೆ. ಈ ಪ್ರತಿಯಲ್ಲಿ ೧೪ ನೆಯ ಆಶ್ವಾಸದ ಕೊನೆಯಲ್ಲಿ ಸುಮಾರು ೯೦ ಪದ್ಯಗಳಷ್ಟು ಗ್ರಂಥವನ್ನು ಯಾರೋ ಆಧುನಿಕರು ಬರೆದು ಸೇರಿಸಿದ್ದಾರೆ. ಆಪದ್ಯಗಳು ಗ್ರಂಥಕರ್ತನದಲ್ಲವೆಂದು ನಿಸ್ಸಂದೇಹವಾಗಿ ತೋರಿಬಂದುದರಿಂದಲೂ, ಅವುಗಳು ಇತರ ಮಾತೃಕೆಗಳಲ್ಲಿ ಇರಲಿಲ್ಲವಾದುದರಿಂದಲೂ, ಆ ಭಾಗವನ್ನು ಅಚ್ಚುಹಾಕದೆ ಬಿಟ್ಟಿದ್ದೇವೆ.

ಮತ್ತೊಂದು ಪ್ರತಿ ಸಾಳಗ್ರಾಮದ ಕಡೆಯಿಂದ ಬಂದುದು.

ಈ ಮಾತೃಕೆಗಳಲ್ಲಿ ಪಾಠಭೇದಗಳು ವಿಶೇಷವಾಗಿರಲಿಲ್ಲವಾಗಿ, ಪಾಠಾಂತರಗಳನ್ನು ಕೊಡಲಿಲ್ಲ.

ಮಾತೃಕೆಗಳನ್ನು ದಯವಿಟ್ಟು ಕಳುಹಿಕೊಟ್ಟುದಕ್ಕಾಗಿ, ಓರಿಯಂಟಲ್ ಲೈಬ್ರೇರಿ ಕ್ಯೂರೆಟರ್ ಮ|| ರಾ|| ಮಹದೇವಶಾಸ್ತ್ರಿಗಳವರಿಗೂ, ಸಾಳಗ್ರಾಮದ ಮ|| ರಾ|| ಬಸ್ತಿಗುಟ್ಟಪ್ಪನವರಿಗೂ, ಶ್ರವಣಬೆಳಗೊಳದ ಸಂಸ್ಕೃತಪಾಠಶಾಲೋಪಾಧ್ಯಾಯರಾದ ಮ|| ರಾ|| ದೋರ್ಬಲಿಶಾಸ್ತ್ರಿಗಳವರಿಗೂ ಬಹಳವಾಗಿ ಕೃತಜ್ಞರಾಗಿರುತ್ತೇವೆ.

ಪೀಠಿಕೆ.

ಕವಿಚರಿತ್ರೆ.

ಈಗ್ರಂಥಕರ್ತನ ಹೆಸರು ಅಗ್ಗಳದೇವನು. "ಮೂಲಸಂಘದೇಶೀಗಣಪುಸ್ತಕಗಚ್ಛಕೊಂಡಕುಂದಾನ್ವಯದೊಳ್" ಜನಿಸಿದವನು. (ಆ. ೧. ೫೩) ಇವನು "ಶಾಂತೀಶನಂದನನು"; ಇವನ ತಾಯಿ "ವಾಚಾಂಬಿಕೆ" (ಆ. ೧. ೫೪); ಗುರು "ತ್ರೈವಿದ್ಯಚಕ್ರವರ್ತಿ" ಯಾದ "ಶ್ರುತಕೀರ್ತಿದೇವನು" (ಆ. ೧. ೫೨; ಆಶ್ವಾಸಾಂತಗದ್ಯ). "ಇಂಗಳೇಶ್ವರಪುರಶ್ರೀತೀರ್ಥಚಂದ್ರಪ್ರಭಂ ಪರಮೇಶಂ" (ಆ. ೧. ೫೨) ಎಂದು ಕವಿಯು ಹೇಳಿಕೊಳ್ಳುವುದರಿಂದ "ಇಂಗಳೇಶ್ವರಪುರವೇ" ಇವನು ಹುಟ್ಟಿದ ಸ್ಥಳವಾಗಿರಬಹುದು. ಈತನು ಜೈನಮತಕ್ಕೆ ಸೇರಿದವನು. "ಅಗ್ಗಳಗಣ್ಣಂ ತೋರ್ಪನಗ್ಗಳಂ ನೃಪಸಭೆಯೊಳ್" ಎಂದು (ಆ. ೧. ೫೭) ಹೇಳಿಕೊಂಡಿರುವುದರಿಂದ ಈತನು ರಾಜಸಭೆಯಲ್ಲಿ ಪ್ರಸಿದ್ಧನಾದ ಕವಿಯಾಗಿದ್ದಂತೆ ತೋರಿಬರುತ್ತದೆ.

ಈತನು ತನ್ನ ಬಿರುದುಗಳನ್ನು ಆಶ್ವಾಸಗಳ ಆದ್ಯಂತಪದ್ಯಗಳಲ್ಲಿಯೂ, ಪ್ರತ್ಯಾಶ್ವಾಸದ ಕೊನೆಯ ಗದ್ಯದಲ್ಲಿಯೂ, ಪ್ರಥಮಾಶ್ವಾಸದ ೫೯ನೆಯ ಪದ್ಯದಲ್ಲಿಯೂ ಹೇಳಿಕೊಂಡಿದ್ದಾನೆ.

ಕವಿಯು ಈ ಗ್ರಂಥವನ್ನು ಶಕ ೧೧೧೧ ರಲ್ಲಿ—ಎಂದರೆ—೧೧೮೯ ರಲ್ಲಿ ಬರೆದಂತೆ ಗ್ರಂಥಾಂತದ ಪದ್ಯದಲ್ಲಿ ಹೇಳಿಕೊಂಡಿರುವುದರಿಂದ ಕ್ರಿ. ಶ. ೧೨ನೆಯ ಶತಮಾನದ ಆದಿಯಲ್ಲಿಯೂ, ೧೧ನೆಯ ಶತಮಾನದ ಅಂತ್ಯಭಾಗದಲ್ಲಿಯೂ ಇದ್ದಿರಬೇಕು.

ಈತನು ಪೂರ್ವಕವಿಗಳಾದ ಪಂಪ, ಪೊನ್ನ, ರನ್ನ— ಇವರುಗಳ ಕಾವ್ಯತ್ರಯವನ್ನು ಆ. ೧. ೬೬ ನೆಯ ಪದ್ಯದಲ್ಲಿ ಸ್ಮರಿಸುತ್ತಾನೆ.

ಈತನು ತನ್ನ ಕವಿತಾಚಾತುರಿಯನ್ನು ಆ. ೧. ಪದ್ಯ. ೫೧, ೫೨, ೫೮, ೫೯ ಲ್ಲಿ ಹೇಳಿಕೊಂಡಿದ್ದಾನೆ. ಈತನ ಬಂಧವು ಅತಿಪ್ರೌಢವಾಗಿದೆ. ಈತನ ಕವಿತಾಸಾಮರ್ಥ್ಯವನ್ನು ಒಬ್ಬ ಕವಿಯು ಹೀಗೆ ಹೊಗಳಿದ್ದಾನೆ-

ನುತಪಾದಪಾಳಿಸಂಶೋ ।
ಭಿತಸರ್ವಸುಪರ್ವಶತಿಸಮರ್ಥತೆಯಿಂ ಶಾ ॥
ಶ್ವತಮೆನಿಪ್ಪುದು ಮಂದರಪ ।
ರ್ವತದಂತಗ್ಗಳನ ಕೃತಿ ಮಹೋನ್ನತಿಯುಕ್ತಂ ॥

ಬೋಧಿಸೆ ದುರ್ಜನಪ್ರಕೃತಿಯುಂ ಬಹುಲಕ್ಷಣಲಕ್ಷ್ಯಮಾರ್ಗಸಂ ।
ಪಾದನದಿಂ ಸಮರ್ಥಿಪನವರ್ ಸಮೆದರ್ಥಕೃತಿಪ್ರತಾನಮಂ ॥
ಬೋಧಿಪನಂದುಮೆಂತುಮಸಮರ್ಥಮದಾಗಿರೆ ತಾನೆನಿಪ್ಪಸಂ ।
ಪಾದಕಬೋಧಕತ್ವದ ಮಹತ್ವದಿನಗ್ಗಳನೇನತರ್ಕ್ಯನೋ! ॥

ಕಿವಿಗಿನಿಗೆಯ್ದು ಮತ್ತೆ ಮನಮಂ ಸೆಱೆಗೆಯ್ದು ತಗುಳ್ದು ಮೆಯ್ಗೆ ಮೆ ।
ಯ್ಯವಿರನಗುರ್ವಿನುರ್ವಿಸಿ ನಿಮಿರ್ಪಳನಮುಂ ದಯೆಗೆಯ್ದು ಕಣ್ಗೆ ಬ ॥
ಲ್ಲವರನದಂತುಮಿಂತಿರೆ ಮರುಳ್ಚುವುದೆಂದೊಡೆ ಪದ್ಮಗರ್ಭನುಂ ।
ಪರ್ವಣಿಸಲಾರ್ಪನೇ ಬಗೆವೊಡಗ್ಗಳದೇವನ ವಾಗ್ವಿಳಾಸಮಂ ॥

ಅತುಳಪ್ರಾಗಲ್ಭ್ಯಗರ್ಭಂ ಭಣಿತಿ ಸತತವೈಚಿತ್ರ್ಯಪಾತ್ರಂ ಕಥಾಸಂ ।
ಗತಿಯರ್ಥವ್ಯಕ್ತಿಯುಕ್ತಂ ಪದತತಿ ರಸನಿಷ್ಯಂದಿಸಂಧಾನಿತಾಳಂ ॥
ಕೃತಿ ನಾನಾಭೇಧಸಂಪಾದನಚತುರತರಂ ರೀತಿಯೆಂಬಂತು ಪೇೞ್ದಂ ।
ಕೃತಿಯಂ ಭವ್ಯಾಬ್ಜಮಿತ್ರಂ ಕವಿಕುಳಕಳಭವ್ರಾತಯೂಥಾಧಿನಾಥಂ ॥

ಈ ಕವಿಯನ್ನು ಆಚಣ್ಣ (ಸು. 1195), ದೇವಕವಿ (ಸು. 1200), ಪಾರ್ಶ್ವ (ಸು. 1205), ಆಂಡಯ್ಯ (ಸು. 1235), ಕಮಲಭವ (ಸು. 1235), ಬಾಹುಬಲಿ (ಸು. 1600) ಮೊದಲಾದವರು ಹೊಗಳಿದ್ದಾರೆ.

ಗ್ರಂಥಪ್ರಶಸ್ತಿ.

ಈ ಗ್ರಂಥಕ್ಕೆ ಚಂದ್ರಪ್ರಭಪುರಾಣವೆಂದು ಹೆಸರು. ಇದಕ್ಕೆ "ಅಗ್ಗಳಲೀಲಾವತಿ" ಎಂಬ ಹೆಸರೂ ಇದ್ದಂತೆ ತೋರಿಬರುತ್ತದೆ. ಅಭಿನವವಾದಿವಿದ್ಯಾನಂದ ಸಂಕಲಿತವಾದ "ಕಾವ್ಯಸಾರ"ದ ಮಾತೃಕೆಯಲ್ಲಿ ಈ ಗ್ರಂಥದಿಂದ ಉದ್ಧೃತವಾದ ಪದ್ಯಗಳ ಕೆಳಗೆ "ಅಗ್ಗಳಲೀಲಾವತಿ" ಎಂದು ಬರೆದಿದೆ. ಇದು ಚಂಪೂಪ್ರಬಂಧ. ಇದರಲ್ಲಿ ೧೬ ಆಶ್ವಾಸಗಳಿವೆ. ಇದು ಅಷ್ಟಮತೀರ್ಥಂಕರನಾದ ಚಂದ್ರಪ್ರಭನ ಚರಿತವಾಗಿದೆ. ಇದೊಂದು ಜೈನರಲ್ಲಿ ಪ್ರಸಿದ್ಧವಾದ ಪುರಾಣ. ಈ ಗ್ರಂಥವನ್ನು ಈತನ ಗುರುವಾದ ಶ್ರುತಕೀರ್ತಿದೇವನ ಆಜ್ಞಾನುಸಾರವಾಗಿ ಬರೆದಂತೆ, ಮದರಾಸ್ ಓರಿಯಂಟಲ್ ಮಾನ್ಯುಸ್ಕ್ರಿಪ್ಟ್ ಲೈಬ್ರೇರಿಯೆಂಬ ಪ್ರಾಚೀನಕೋಶಾಗಾರದಲ್ಲಿರುವ ಬಿಳಗಿಯ ತಾಲ್ಲೋಕು ಶಾಸನದಲ್ಲಿರುವ

"ಶ್ರುತಕೀರ್ತಿದೇವನತ್ಯೂ ।
ರ್ಜಿತಕೀರ್ತಿ ಕನಾತ್ಮಶಿಷ್ಯನಿಂದಗ್ಗಳನಿಂ ॥
ದತಿಶಯಿತಕಾವ್ಯಮಾರ್ಗದೆ ।
ನುತಚಂದ್ರಪ್ರಭಪುರಾಣಮಂ ಪೇಳಿಸಿದಂ ॥"

ಎಂಬ ಪದ್ಯದಿಂದ ತಿಳಿಯಬರುತ್ತದೆ. ಈ ಗ್ರಂಥವನ್ನು "ಪ್ರಾಕ್ತನಪರಮಾಚಾರ್ಯಶ್ರುತಸೇತುಬಲದಿಂದ" ರಚಿಸಿದನೆಂದು ಆ. ೧. ೬೭ರಲ್ಲಿ ಹೇಳಿಕೊಂಡಿದ್ದಾನೆ.

ಈ ಕಾವ್ಯದಲ್ಲಿ ಕವಿಯು ತನ್ನ ವರ್ಣನಾಶಕ್ತಿಯನ್ನು ಚೆನ್ನಾಗಿ ತೋರಿಸುತ್ತಾನೆ.

ಕವಿಯು ಗ್ರಂಥಾವತಾರದಲ್ಲಿ ಚಂದ್ರಪ್ರಭನನ್ನು ಸ್ತುತಿಸಿದ್ದಾನೆ. ಬಳಿಕ ಸಿದ್ಧಾದಿಗಳನ್ನೂ, ಆಚಾರ್ಯರನ್ನೂ, ಉಪಾಧ್ಯಾಯರನ್ನೂ, ಬೋಧಾಲೋಕರನ್ನೂ, ಪಂಚಗುರುಗಳನ್ನೂ, ಜಿನಧರ್ಮವನ್ನೂ, ಯಕ್ಷಿಯು

ಷ್ಠರನ್ನೂ, ಜಿನವಚನವನ್ನೂ, ಸರಸ್ವತಿಯನ್ನೂ ಸ್ತುತಿಸಿ, ಬಳಿಕ ಅನು ಬದ್ಧಕೇವಳಿಗಳಿಂದ ಶ್ರುತಕೀರ್ತಿದೇವನವರೆಗೆ ಗುರುಗಳನ್ನೂ ಕ್ರಮ ವಾಗಿ ಸ್ತುತಿಸಿದ್ದಾನೆ. ಅನಂತರ ಕವಿಯು ಕಾವ್ಯಪ್ರಶಂಸೆಯನ್ನು ಮಾಡಿ, ಬಳಿಕ ಪಂಪ, ಪೊನ್ನ, ರನ್ನ ಇವರುಗಳ ಕಾವ್ಯತ್ರಯವನ್ನು ಸ್ಮರಿಸಿ, ಗ್ರಂಥವನ್ನು ಆರಂಭಿಸಿದ್ದಾನೆ.

ಈ ಗ್ರಂಥದ ಅತಿಶಯವನ್ನು ಆ ೧--೫೮, ೬೫, ೬೬, ೬೮ ಪದ್ಯಗಳಲ್ಲಿಯೂ, ಮತ್ತು ಆ. ೧೬--೮೨, ೮೩, ೮೪, ೮೫, ೮೬ ರ ಲ್ಲಿಯೂ ಹೇಳಿಕೊಂಡಿದ್ದಾನೆ.

ಚಂದ್ರಪ್ರಭಪುರಾಣಂ.

ದ್ವಿತೀಯಸಂಪುಟಂ.

ಆಶ್ವಾಸಾನುಕ್ರಮಣಿಕೆ.

ದ್ವಿತೀಯ ಸಂಪುಟಂ.

ನವಮಾಶ್ವಾಸಂ.

ಶ್ರೀಜಿನಮಂದಿರದಿಂದಂ ।
ಪೂಜೋತ್ಸವಪುಲಕಕಲಿತತನು ಪೊಱಮಟ್ಟಂ ॥
ರಾಜಶಿರೋಮಣಿ ಸುಕೃತಸ ।
ಮಾಜಾಕೃತಿ ಜೈನಜನಮನೋಹರಚರಿತಂ ॥ ೧

ಅನಂತರಂ

ಶೃಂಗಾರಸದನಮಂ ಮಕು ।
ಟಾಂಗದಮಣಿಹಾರಕಟಕಕುಂಡಲನವದೇ ॥
ವಾಂಗವಸನಾತ್ತಪಟಲಕ ।
ಸಂಗತಮಂ ಬಂದು ಲೀಲೆಯಿಂದೊಳಪೊಕ್ಕಂ ॥ ೨

ಅಂತು ಪೊಕ್ಕು,

ಇದಿ ಸೀಮೆಯೆನಗೆ ಸಾಮ್ರಾ ।
ಜ್ಯದ ವಿಭವಕ್ಕೆಂದು ತೋರ್ಪ ತೆಱದಿಂ ಶೃಂಗಾ ॥
ರದ ಚೆಲ್ವೆಸೆದಿರೆ ಕೈಗೈ ।
ದುದಾತ್ತನಾಸ್ಥಾನಮಂಟಪಕ್ಕೇೞ್ತಂದಂ ॥ ೩

ಅಂತು ಚತುರ್ಮುಖದ್ವಾರೋದಾರಮುಪ್ಪತ್ತುಂಗಸರ್ವಾವಸರತವಂಗಮನೇಱಿ ಸಕಲಪ್ರಧಾನಮಂತ್ರಿಪುರೋಹಿತಾಂತರ್ವಂಶಿಕಾಧಿಕೃತರಾಜಪುತ್ರಸಮಾಜಪರಿವೇಷ್ಟಿತನಿಷ್ಟಪಸ್ತಾಷ್ಟಪದವಿಷ್ಟರೋಪವಿಷ್ಟನಜಿತಸೇನಚಕ್ರಧರನಿರೆ

ವರಪಟ್ಟಾಂಶುಕರಾಶಿಯಂ ಸಮದಹಸ್ತಿವ್ರಾತಮಂ ಘೋಟಕೋ ।
ತ್ಕರಮಂ ರತ್ನಸಮೂಹಮಂ ಪತಿಗೆ ದೂತರ್ ತೋಱಿದರ್ ದೇವ ಗು ॥

ರ್ಜರರಾಜಂ ಪದೆದಿತ್ತನಿತ್ತನೊಲವಿಂ ಕಾಳಿಂಗಭೂಪಾಲನಾ ।
ದರದಿಂ ಸಿಂಧುಮಹೀಶನಿತ್ತನೊಸೆದಿತ್ತಂ ಸಿಂಹಳಾಧೀಶ್ವರಂ ॥ ೪

ಎಂದು ತಂದ ಕಪ್ಪಂಗಳಂ ಪೆಸರ್ವೆಸರೊಳ್ ಪೇೞ್ದು ಕುಡೆ ತದಧೀಕ್ಷ್ಯ ತರಪ್ಪರನೊಪ್ಪುಗೊಳಲ್ವೇೞ್ದು ಉಚಿತಸನ್ಮಾನಂಗಳನವರಂ ಬೀಡಿಂಗೆ ಕಳುಪಿ ಬೞಿಯುಂ ವಸಂತಸಮಯಸಂಗತಿಯಿನಪಗತಜೀಮೂತನಾಗಿ ಜಿನಮತದಂತತಿಸ್ವಚ್ಛವುಂ ನಿಶ್ಚಲಮುಂ ಮಹಾಂತಮುಮವಗಾಹಿತಸಮಸ್ತಪದಾರ್ಥಮುಮಾದ ಗಗನಮಂಡಲಮಂ ಚಕ್ರವರ್ತಿ ಮುಖಮಂಡನಕ್ರೀಡೆಯಿಂ ನೋಡುತ್ತಿರ್ಪನ್ನೆಗಂ ತದೇಕದೇಶದೊಳ್

ಇದು ಸುೞಿಗಾಳಿಯಿಂ ನೆಗೆದು ತೋಱುವ ಕಿಂಶುಕಶುಷ್ಕಪತ್ರಮಿಂ ।
ತಿದು ಗಗನಕ್ಕೆ ನಾಡೆ ನಲಿವಾಱಿದದೊಂದು ಕಪೋತಮಂತುಮ ॥
ಲ್ತಿದು ಪರಿದಿರ್ದ ಪಾವಸೆ ಮುಗಿಲ್ಮುಱಿಯೆಂಬಿನಮಿಂಬುಗೆಟ್ಟು ಕಂ ।
ದಿದ ಪಟಿಗಂಚುಗನ್ನಡಿವೊಲೇನಿೞಿದಾದುದೊ ಚಂದ್ರಮಂಡಲಂ ॥ ೫

ಆಗಳ್

ಆಪರಿಪಾಂಡುರಪ್ರತತಿಯಾದ್ಯುತಿಯಾತತಿಯಾಮನೋಭವಪ್ರೋ ।
ದ್ದೀಪನವೃತ್ತಿಯಾಗ್ರಹಪರಿಗ್ರಹಸಂಗತಿಯಾಸುಧಾಮಯ ॥
ವ್ಯಾಪೃತಿಯಾಪ್ರಪೂರ್ಣವಲಯಾಕೃತಿಯೀಗಳದೆತ್ತವೋದುದೆಂ ।
ದಾಪೃಥಿವೀಶ್ವರಂ ಪಗಲ ತಿಂಗಳನಚ್ಚರಿವಟ್ಟು ನೋಡಿದಂ ॥ ೬

ತಿಂಗಳ ಸಿರಿಯಿದು ಮುನ್ನಮೆ ।
ತಿಂಗಳ ಸಿರಿಯಲ್ತು ಪಕ್ಷಮೆಂಬಾಪಕ್ಷಂ ॥
ಸಂಗತಿವಡೆಯದು ಪಗಲೀ ।
ಭಂಗಿ ದಲದಱಿಂದಮಾರೊ ನೆರೆಸಿರಿಯೆಱೆಯರ್ ॥ ೭

ದೇವಗತಿಯಲ್ಲಿ ಪೆಸರ್ವೆ ।
ತ್ತೀವಿಧುಗಂ ಕಾಲವಶದೊಳಂತಾಯ್ತಾಮಿ ॥
ನ್ನೀವಿಷಮಭವದೊಳಾಗದ ।
ದೇವಿಧಿವಟ್ಟಪೆವೊ ಮುಂಬೆ ಶಲಭೋಪಾಯರ್ ॥ ೮

ಇರುಳಾದ ಚೆಲ್ವು ಪಗಲೊೞ್ |
ಸರಿಪುದು ಚಂದ್ರಂಗೆ ರವಿಗೆ ಪಗಲಾದೊಪ್ಪಂ ||
ಪರಿಹರಿಪುದಿರುಳ್ ತಾನೆನೆ |
ನರಂಗೆ ಲೇಸೆಂದುಮೆಂತುಮೇಂ ನಿಂದಪುದೇ || ೯

ಇಂದೆಮಗೆ ಚಂದ್ರಬಲಮುಂ |
ಟೆಂದು ಕೆಲರ್ ನಲಿದು ನಚ್ಚುವರ್ ಚಂದ್ರಂಗಂ ||
ಕಂದುಂ ಕುಂದುಂ ದಿವಸದೊ |
ಳೊಂದಿದುದೆನೆ ಕಳಿವರಾರೊ ಕಾಲದ ಗುಣಮಂ || ೧೦

ಅಂತು ವಾಸರೇಂದುದರ್ಶನಂ ವೈರಾಗ್ಯಸಾಗರವೃದ್ಧಿಯುಂ ಪಡೆಯಲೊಡಂ ಶರೀರಸಂಪದಾಯುರ್ಯೌವನಂಗಳಧ್ರುವಭಾವನೆಯೆ ಮನದೊಳ್ ನಟ್ಟು ನಿಂದು

ಘನಮೆನಿಪುದು ಮತ್ತಂತಪ |
ಘನಮೆನಿಪುದು ಭಾವಿಪೊಡೆ ಘನಾಘನಮುಂ ತಾ ||
ನೆನಿಪುದು ಪೆಸ*ರ್ಗೇಕಸ್ಥಿತಿ |
ಯೆನಿತಿಲ್ಲವಯುವದೊಳಕ್ಕುಮೇ ಅಱಿಯೊಡಲುಂ || ೧೧

ಪಿಡಿವಿಡಿಯೆ ಕರಗುವುದು ಬ |
ಯ್ತೊಡೆ ಮಸಿಯಾಗಿರ್ಪುದಲ್ಲದಿರ್ದೊಡೆ ಪೆ*ಱರ್ಗಾ ||
ಗಡೆ ಬಂದಪೆನೆಂಬುದು ಗಡ |
ಸುಡು ಧನಮೆ ಜಗಕ್ಕೆ ದುಃಖಸಾಧನಮಲ್ತೇ || ೧೨

ಕುತ್ತಂ ಬಿಟ್ಟೊಡೆ ಪಗೆ ಬೆಂ |
ಬತ್ತುವನನುಱಿಯೆ ಕೊಲ್ವುದಹಿಯದು ಮುಂ ತ ||
ಪ್ಪಿತ್ತನೆ ಪೊಡೆವುದು ಬಱಸಿಡಿ |
ಲೆತ್ತಿದು ಮಾನನ*ರ್ಗೆ ಜವನ ಜತ್ತಕುಬಿಲ್ತೇ || ೧೩

ಬಿಡದೆ ಜರೆಯೆಂಬ ಕಾಳ್ಕಿ |
ಚ್ಚಿ*ಡರ್ದೆತ್ತಲುಮಱುರೆ ಮೋಹದಿಂದೋವುವ ಕೆ ||

ಟ್ಟೊಡಲಿನಿತು ಮೋಹದಿರವಂ ।
ಪಡೆದಪುದೊ ಬಱಿಕ್ಕೆ ಮಿಕ್ಕ ಯೌವನವನದೊಳ್ ॥ ೧೪

ಮಂದಗತಿ ಪಿಂಗೆ ಬುಧನ್ಯ ।
ತ್ತಂ ದೊರೆಕೊಳೆ ವಕ್ರತರತಮೋರಿವಿಜಯಧಿ ॥
ಷ್ಣ್ಯಂ ದಲೆನಿಸಿತ್ತು ಮನ್ಮನ ।
ಮಿಂದೆನಗೀದಿವಸದಿಂದು ಗುರುವಾದುದಱಿಂ ॥ ೧೫

ಎಂದು ಮಾಣದೆ

ಆವಧುವಂ ಶಶಿಪ್ರಭೆಯನಾದ್ಯಶಶಿಪ್ರಭೆಯೆಂದು ಚಕ್ರವಂ ।
ಕೋವರ ಚಕ್ರಮೆಂದು ನಿಧಿಯಂ ಲಯಸನ್ನಿಧಿಯೆಂದು ತನ್ನ ಕೇ ॥
ಳೀವನಮಂ ಪರೇತವನಮೆಂದವನೀಶನವಂ ಸಮಂತು ಸಂ ।
ಭಾವಿಸಿದಂದು ಭಾವಿಸದನೊಂದನೆ ದಂದುಗದಿಂದಗಲ್ದುದಂ ॥ ೧೬

ಆಪ್ರಸ್ತಾವದೊಳ್

ಆನೃಪನೋಲಗಕ್ಕೆ ಋಷಿಯಾನನಿವೇದಕನೊರ್ವನೆಯ್ದಿ ಬಂ ।
ದಾನತನಾಗಿ ದೇವ ನಿಜಪುಣ್ಯಮೆ ತಂದವೊಲಿಂದು ಬಂದು ಸಂ ॥
ಜ್ಞಾನಮಯಂ ದಯಾರ್ದ್ರಹೃದಯಂ ಸುತಪೋವಿಭವಂ ಶಿವಂಕರೋ ।
ದ್ಯಾನದೊಳಿರ್ದಪಂ ಪರಿವೃತವ್ರತಿವೃಂದಸಭಂ ಗುಣಪ್ರಭಂ ॥ ೧೭

ಎಂದು ಬಿನ್ನವಿಪುದುಂ ರಥಾಂಗಧರನಾತ್ಮಮನೋರಥಕ್ಕೆ ಸಾರಥಿಯಂ ಪಡೆದೆನೆಂದು ಸಂತಸದಂತನೆಯ್ದಿ

ಪುದಿದ ತೊಡರೆಲ್ಲವನುಂ ಪಱಿ ।
ಯೊದೆದು ಬನಕ್ಕಾಗಿ ನೆಗೆದು ಕದುಪಂ ಕೂಡಲ್ ॥
ಮದಗಜರಾಜಂ ನಡೆವಂ ।
ದದೆ ನಡೆದಂ ಮುದದೆ ಮುನಿಜನಕ್ಕವನೀಶಂ ॥ ೧೮

ಅಂತು ಸಕಲಪುರಜನಪರಿಜನಂ ಬೆನ್ನನೆ ಬರೆ ಬಂದತ್ಯಂತಶುಚಿಯುಂ ವಿವಿಕ್ತಮುಂ ಮನೋಹರಮುಮಪ್ಪ ಋಷ್ಯಾಶ್ರಮಮನಾಶ್ರಿತಶ್ರೀಯನೆಯ್ದೆವರ್ಪಾಗಳ್

ಸುತಪಃಕೃಶೀಕೃತಂ ಸಂ |
ಶ್ರಿತಧೈರ್ಯಂ ಸೂರ್ಯಧಾಮಸಮುದಯಲಕ್ಷ್ಮೀ ||
ಕೃತತನು ತಪಸ್ವಿಯಿರ್ದಂ |
ಪ್ರತಿಮಾಯೋಗದೊಳಖರ್ವಗುಣಗಣನೊರ್ವಂ || ೧೯

ಮತ್ತಂ,

ಸರ್ವಾಂಗಮಲಧರಂ ಪರಿ |
ನಿರ್ವೃತಿಸೌಖ್ಯೋನ್ಮುಖಂ ವ್ಯಪಾಕೃತಮೋಹಂ ||
ಸರ್ವಜ್ಞಸೂಕ್ತಿಪಠನದಿ |
ನೊರ್ವಂ ಖುಷಿಯಿರ್ದನಾತ್ತಗುರುಸೌಹಾರ್ದಂ || ೨೦

ರಾದ್ಧಾಂತಪಾರಗಂ ಗುಣ |
ವೃದ್ಧಂ ಮಾರ್ಗಪ್ರಭಾವನಾರ್ಥದಿನಿರ್ದಂ ||
ಸದ್ಧರ್ಮಕಥಾಕಥನದಿ |
ನಿರ್ದನದೊರ್ವಂ ತಪೋಧನಂ ಜ್ಞಾನಧನಂ || ೨೧

ತನ್ನಿಂದೆ ತಿಳಿದು ತನ್ನಂ |
ತನ್ನೊಳೆ ತಾಂ ನಿಂದು ತನ್ನೊಳುದಯಿಸಿದ ಸುಖಂ ||
ತನ್ನನೆ ತಣಿಸುತ್ತಿರೆ ಮುನಿ |
ಸನ್ನಿಹಿತಧ್ಯಾನನೊಪ್ಪಿದಂ ಪೆಱನೊರ್ವಂ || ೨೨

ಉದ್ಯನ್ನಯಪ್ರಮಾಣಮ |
ಹಾದ್ಯುತಿಯಿಂ ಮಸುಳೆ ಕುನಯಖದ್ಯೋತಂ ತ ||
ತ್ವೋದ್ಯೋತಿಕನೆಸೆದಿರ್ದಂ |
ಹೃದ್ಯಾಕೃತಿಸಾಧುಭಾಸ್ಕರಂ ಮತ್ತೊರ್ವಂ || ೨೩

ಅಂತನೇಕಯೋಗನಿಯೋಗಯುಕ್ತರಪ್ಪ ಪಲಂಬರ್ ಮುನೀಂದ್ರಚಂದ್ರರಂ ಪ್ರತಿವಿಕಸಿತವಿಲೋಚನಾಲೋಕಸಮುದಯಕುಮುದಸ್ರಜಂಗಳಿಂ ಸಾರ್ವಭೌಮನರ್ಚಿಸುತುಂ ತದಾಶ್ರಮಮುಂ ಪುಗುವಾಗಳ್

ತೊಳಪ ಗುಣೋತ್ಕರಂ ಬಳಸಿದೂರ್ಜಿತಧರ್ಮದೆ ಸನ್ನಯೋತ್ಕರಂ |
ಬಳಸಿದ ತತ್ವನಿಶ್ಚಯದೆ ಕೂಡೆ ನಿಜಾಂಚಿತಲಕ್ಷಣೋತ್ಕರಂ ||

ಬಳಸಿದಗಾಧಬೋಧದ ವಿಲಾಸಮನೇೞಿಸಿ ತಾಪಸೋತ್ಕರಂ ।
ಬಳಸಿದ ತದ್ಗುಣಪ್ರಭಮುನಿಪ್ರಭುವೊಪ್ಪಿದನಂದು ನಾಡೆಯುಂ ॥ ೨೪

ಅಗ್ರದೊಳೊಪ್ಪುವ ವಿಮಳಶಿ ।
ಲಾಗ್ರದೊಳಿರೆ ಮುನಿಯ ಮೂರ್ತಿ ನೆನೆಯಿಸಿದುದು ಲೋ ॥
ಕಾಗ್ರದೊಳೊಪ್ಪುವ ವಿಮಲಶಿ ।
ಲಾಗ್ರದೊಳೆಸೆದಿರ್ದ ಸಿದ್ಧಶುದ್ಧಾಕೃತಿಯಂ ॥ ೨೫

ಅದಲ್ಲದೆಯುಂ,

ಕಾವೆಸೆವ ಕೞಿಯು ನೆಯ್ದಿಲ ।
ಪೂವಂ ಪೂಜಿಸಿದ ತೆಱದೆ ತನುಮುನಿಪದರಾ ॥
ಜೀವದ ಕೆಲದೊಳ್ ವೇತ್ರಲ ।
ತಾವೃತವೆಸೆದತ್ತು ಮಸೃಣಪಿಂಛಗುಳುಚ್ಛಂ ॥ ೨೬

ಸ್ಥಳಕಮಳಶಂಕೆಯಿಂ ಯತಿ ।
ಚಳನಂಗಳನೞಿಪಿ ಸಾರ್ದ ಹಂಸನ ಚೆಲ್ವಂ ॥
ತಳೆದೇನೆಸೆದುದೊ ತೊಳತೊಳ ।
ತೊಳಗುವ ಶಶಿಕಾಂತಮಣಿಕಮಂಡಲು ಕೆಲದೊಳ್ ॥ ೨೭

ಅಂತು ಸಮೀಚೀನಸಂಯಮೋಪಕರಣಾಲಂಕೃತನಾಗಿರ್ದ ಮುಮುಕ್ಷುಮುಖ್ಯನಂ ತ್ರಿಪ್ರದಕ್ಷಿಣಂಗೆಯ್ದು ಗುರುಭಕ್ತಿಪೂರ್ವಕಮಭಿವಂದಿಸಲೊಡಂ

ಯತಿ ಪರಸೆ ಧರ್ಮವೃದ್ಧಿ ।
ಶ್ರುತಿಯೊಗೆದುದು ತನ್ಮುಖೇಂದುವಿಂದಂ ಕರ್ಣಾ ॥
ಮೃತಮುತ್ಥಿತಪುಳಕಾಂಕುರ ।
ತತಿಯುಪಹೃತಮೋಹತಾಪಮತಿಮೃದುಮಧುರಂ ॥ ೨೮

ಅನಂತರಮಾಪರಕೆಯೊಡನೊಗೆದಶೇಷರ್ಷಿವೃಷಭದತ್ತಾಶೀರ್ವಾದಮಂ ನೃಪಚಿಂತಾಮಣಿ ಕರ್ಣಪೂರಂಮಾಡಿ ಸಂತಸದಿಂ ಕುಳ್ಳಿರ್ದು

ಚಿತ್ತಶುಭದುದಯವಶದಿಂ ।
ದೆತ್ತಾನುಂ ನೆನೆಯೆ ನಿಮ್ಮನಂತನನೆ ಮುನೀಂ ॥
ದ್ರೋತ್ತಮ ಕೃತಾರ್ಥನೆನೆ ಕಾ ।
ಣುತ್ತೆ ಉಗುತ್ತಿರ್ದನೊಳ್ಪನದನೇವೇಳ್ವೆಂ ॥ ೨೯

ಜನಿತಕುದೃಷ್ಟಿಭ್ರಮಮತಿ ।
ಘನಮೋಹತಮಃಪಟಾವೃತಂ ಜಗಮದಱೊಳ್ ॥
ಮುನಿಭಾನು ಭವದ್ವಾಕ್ಪ್ರಭೆ ।
ಯನಿಶಂ ಬೆಳಗದೊಡೆ ಸತ್ಪ್ರವರ್ತನಮುಂಟೇ ॥ ೩೦

ನೀನಾಲಂಬನಮಾದೆಯ ।
ಧೋನಿಪತಜ್ಜನಕೆ ನಿನ್ನ ನುಡಿ ಸೋಪಾನಂ ॥
ತಾನಾದುದು ಕೈವಲ್ಯಸು ।
ಧಾನಿಳಯಾಗ್ರಾರುರುಕ್ಷುಗಕ್ಷಯಬೋಧಾ ॥ ೩೧

ಮುನಿಪವಚಕೋರರುಚಿಯಿಂದಂ ।
ದಿನಪನವೋಲ್ ಬೆಳಗೆ ಲೋಕಮುಂ ಸತ್ಪಥವ ॥
ರ್ತನಮಿಲ್ಲ ತಮಗೆನಿಪ ದು ।
ರ್ಜನಮನಿತುಮುಲೂಕಜನ್ಮಮಾಗಲೆ ವೇಳ್ಕುಂ ॥ ೩೨

ಎಂದತ್ಯಂತಪ್ರಶ್ರಯಸಮಾಶ್ರಿತೋಕ್ತಿಮುಕ್ತಾಕ್ಷತಂಗಳಂ ದಂತಕಾಂತಿಚಂದನಚರ್ಚೆವೆರಸರ್ಚಿಸಿದ ಭೂಕಾಂತನಂತರಂಗವಿಶುದ್ಧಿಯುಂ ತಪೋನಿಧಿ ಮನದೊಳವಧಾರಿಸಿ ಗುಣಾನುರಾಗಿತ್ವದಿಂದಮಿಂತೆಂದರ್:—

ಇದು ದಲ್ ನಿಮಿತ್ತಭಾವಂ ।
ಮದಕ್ಕೆ ಸಾಜದಿನೆನಿಪ್ಪ ಸಾಮ್ರಾಜ್ಯಂ ತಾ ॥
ನದೆ ನಿನ್ನೊಳ್ ಮತ್ತೊಂದಾ ।
ದುದರ್ಕೆ ನೃಪ ಸಮನಿಸಿತ್ತು ವಿಸ್ಮಯಮೆಮಗಂ ॥ ೩೩

ನಯದಿಂ ಜನಕ್ಕೆ ಪುಣ್ಯೋ ।
ದಯದಿಂ ಪಾರ್ಥಿವಜನಕ್ಕೆ ವಿನಯವಚೋನಿ ॥

ಶ್ವಯದಿಂ ಯೋಗಿಜನಕ್ಕಂ ।
ದಯೆಮಾಡುವೆ ನೀನೆ ದಲ್ ಚಮತ್ಕೃತಿಯೊದವಂ ॥ ೩೪

ಇನಿವಿರಿದು ರಾಜ್ಯಪದದೊಳ ।
ಮಿನಿವಿರಿದು ಸುಖಾನುಭವದೊಳಂ ಕಾಣಲ್ಕಾ ॥
ಗೆನಿಪೆಬಿಕಮವಱೊಳಾದುದು ।
ನಿನಗಂತುಟೆ ಹಿತದೊಳಲ್ಲದೆಸಪನೆ ಚದುರಂ ॥ ೩೫

ಎಂದ ಮುನೀಶಂಗಂದಿಂ ।
ತೆಂದಂ ಧರಣೀಶನೀಶ ನೀಂ ಮಿರ್ದೆಡೆಗೇ ॥
ಬ್ತಂದಪೆನೆಂದಿರೆ ನಿಮ್ಮನೆ ।
ತಂದತ್ತಿಲ್ಲಿಗೆ ಪುರಾಕೃತಂ ಮತ್ಸುಕೃತಂ ॥ ೩೬

ಪರಮದಯಾನಿಧಿಯೆನ್ನೊಳ್ ।
ಕರುಣಂ ನಿಮಗುಳ್ಳೊಡೆನಗೆ ದಯೆಗೆಯ್ವುದು ನೀ ॥
ಮಿರದೆ ಜಿನದೀಕ್ಷೆಯಂ ಬಿ ।
ತ್ತರಿಸುಗುಮೆನಗದುವೆ ಬೞಿಕೆ ನಿರ್ವೃತಿಸುಖಮಂ ॥ ೩೭

ಪಾಪಾರಾತಿಯನಾಂಪುದಲ್ತು ಚತುರಂಗಂ ಸೈನಿಕಂ ಕಾಲಶಂ ।
ಪಾಪಾತಕ್ಕೆ ಸಿತಾತಪತ್ರನಿಕರಂ ಕಾಪಲ್ತು ನಿತ್ತೊರ್ಮೆ ದಲ್ ॥
ಪೋಪಾಗಳ್ ನಿರಯಕ್ಕೆ ಬಂಧುಗಳೊಡಂ ಬಂದಪ್ಪರಲ್ತಿಂ ಭವ ।
ಚಿ ್ರೀಪಾದಾಂತಿಕದೀಕ್ಷೆ ತಾನೆನಗೆ ಮಾಳ್ಕುಂ ಸ್ವಸಂರಕ್ಷೆಯಂ ॥ ೩೮

ಎನೆ ಮುನಿವೃಷಭಂ ಭೂಪನ ।
ಮನದೊಳ್ ಮಾಣದೆ ಪೊದಲ್ದ ವೈರಾಗ್ಯದ ಪೆಂ ॥
ಪನೆ ಪರಿಕಿಸಲೆಂದಾಗ್ರಹ ।
ವಿನಿವರ್ತನಸೂಚಕೋಕ್ತಿಗಳನಿಂತೆಂದಂ ॥ ೩೯

ಕಾರುಣಿಕರ್ ಧರ್ಮಜ್ಞರ್ ।
ಚಾರಿತ್ರಸಮೇತರೆನಿಪ ನಿಮ್ಮನ್ನರನಾ ॥
ಗಾರತೆಯಿಂ ಪಾವನಮನ ।
ಗಾರತೆಯಿಂದೆಸಗುವೆಸಕಮಿಂ ಪೆಱತುಂಟೇ ॥ ೪೦

ಅದಲ್ಲದೆಯುಂ,

ತಳೆವೊಡೆ ಮದ್ವಿಧರ್ ನಿಯಮದಿಂ ಯಮಿಗಳ್ ಕಠಿನಾಂಗಸಂಗತರ್ ।
ತಳೆಗುಮತೀವದುರ್ಧರಮೆನಿಪ್ಪ ತಪೋಭರಮಂ ಭವದ್ವಿಧರ್ ॥
ತಳೆಯಲದೆಂತುಮಾರ್ತಪರೆ ತದ್ಭರಮಂ ಭರದಿಂ ನಿಕಾಮಕೋ ।
ಮಳಕಮನೀಯಕಾಯರವನೀಪತಿ ಕುಂಕುಮಲೇಪಲಾಲಿತರ್ ॥　　೪೦

ಅದುಕಾರಣದಿಂ

ಧರೆಯಂ ಸದ್ಧರ್ಮಾಶ್ರಯ ।
ಧರೆಯನನಾಥೇಯನಱಿಯದಾಕಲ್ಪಂ ನೀಂ ॥
ಧರಿಯಿಸೆ ತಪಮದೆ ಹೀನೋ ।
ದ್ಧರಣದಿನತ್ತೊಂದುಮಲ್ತೆ ಪೇೞ್ ತಪಮುಂಟೇ ॥　　೪೧

ಎನಲೊಡನಜಿತಸೇನಮಹಾರಾಜಂ—ಮುನಿರಾಜ, ಸಂಸಾರಭಯದಿಂ ದೀನಭಾವಮಂ ತಾಳ್ದಿದೆಮ್ಮನುದ್ಧರಿಸೆ ನಿಮಗಮಂತೆಯೆಂದು ತನ್ನ ಹೃದಯದ ಪರಿಚ್ಛೇದಮನೆ ನಿಲೆ ನುಡಿದು ಸಮಸ್ತಕ್ಷಾತ್ರಭಾರಮಂ ಜಿತಶತ್ರುವೆಂಬ ಪುತ್ರನೊಳ್ ನಿಱಿಸಿ ತಾನುಮುಪಶಮಭಾವದೊಳ್ ನಿಂದು ಬೞಿಯಂ ಲೋಕಾಯತವಾದಿಯಂತೆ ಆಸಾಧಿತಗುರುಮತನುಂ ವಿರಹಿಯಂತೆ ಮುಕ್ತಾಭರಣನುಂ ಸಾಯಂತನತರಣಿಯಂತೆ ಪರಿಹೃತಾಂಬರನುಂ ದಿನಮುಖಸರೋಜಾಕರದಂತೆ ವಿಕಚತಾಸಮೇತನುಂ ಶಿಶಿರಸಮಯದಂತಾರೂಢತಪನುಮಾಗಲೊಡಂ,

ಸುತಯುವತಿಜ್ಞಾತಿ ಪ್ರಕ್ರ ।
ತಿತತಿವ್ಯಾಮೋಹಶಿಶಿರದಿಂ ಕೊರಗಿದ ಭೂ ॥
ಪತಿಯ ಮುಖಾಬ್ಜಂ ಸಂಶೋ ।
ಭಿತಮಾದತ್ತಾತಪಃಪ್ರಭಾವಾತಪದಿಂ ॥　　೪೨

ತಿಳಿಯೆ ಜಡಾಶಯಮೆಸಕ ।
ಕ್ಕಳವಡೆ ಮಾರ್ಗಂ ದಿಗಂಬರಶ್ರೀ ತನ್ನೊಳ್ ॥
ಬೆಳಗೆ ಸಮಂತಾತಪಮಂ ।
ತಳೆದೂರ್ಜಿತನಾದನೂರ್ಜದಂದದಿನಾದಂ ॥　　೪೩

ಅರಿಗಳನಂಜಿಸುತುಂ ಪರಿ ।
ಹರಿಸುತ್ತುಂ ವಿಷಯಬಾಧೆಯುಂ ಸದ್ಧನಮುಂ ॥
ಪರಿವರ್ಧಿಸುತುಂ ಕಿಡುತರೆ ।
ಸಿರಿ ಕಿಡದಭ್ಯಾಸಮೆನಿಪ ತೇಜದಿಂ ನಡೆದಂ ॥ ೪೪

ವೃತ್ತಂ

ಗೀತಪ್ರೀತಿ ಜಿನಶ್ರುತಿಶ್ರವಣದಿಂ ಶ್ವೇತಾತಪತ್ರಾರ್ಥಿ ಭೂ ।
ಜಾತಚ್ಛಾಯೆಯಿನಂಗನಾರುಚಿ ವಿರಕ್ತಾಸಕ್ತಿಯಿಂ ಹರ್ಮ್ಯಜಾ ॥
ಡಾತರ್ಷಂ ಗಿರಿಕೂಟಸಂವಸನದಿಂ ಗೆಂಟಾಗೆ ಸಾಮ್ರಾಜ್ಯಲೀ ।
ಲಾತಾತ್ಪರ್ಯಮನಾತಪಸ್ವಿ ತಳೆದಿರ್ದಂ ತತ್ತಪೋರಾಜ್ಯದೊಳ್ ॥ ೪೫

ಅಂತುಪಶಾಂತಮೋಹಸಂತಮಸಂ ಪರಮತಪಃಪ್ರದೀಪಸ್ನೇಹಭೂತ ಜೀವಿತಂ ನಭಸ್ತಿಲಕಾಚಲದೊಳುಪಜೀವಿತಪ್ರಾಯೋಪಗಮನವಿಧಾನನಾತ್ಮೀಯಜೀವಿತಾತ್ಯಯದೊಳ್

ಸುರ... ಶಮೂಲದಿಂದಾ ।
ಉರಜ್ಜು ಮೇಗೊಗೆದ ತಾಣದೊಳ್ ದಿವ್ಯಸುಖಾ ॥
ಕರಮೆನೆ ಪದಿನಾಱನೆಯದು ।
ವರಶೋಭಾನಲ್ಪಮಿರ್ಪುದಚ್ಯುತಕಲ್ಪಂ ॥ ೪೬

ಆಕಲ್ಪದೊಳುಜ್ಜ್ವಲಸಹ ।
ಜಾಕಲ್ಪಂ ಷಡ್ವಿತಸ್ತಿಮಾತ್ರಸುಗಾತ್ರಂ ॥
ಸ್ವೀಕೃತತದಧೀಂದ್ರತ್ವನ ।
ನಾಕುಳನಣಿಮಾದಿಗುಣಗಣಾನ್ವಿತನೊಗೆದಂ ॥ ೪೭

ಅಂತು ಪುಟ್ಟಿ ತನ್ನ ಸಮುಕಟ್ಟಿದಾಯುಷ್ಯದ
ಸಾಗರಮಿರ್ಪತ್ತೆರಡಱ ।
ಭಾಗದನಿತೆ ಮಾಸಮಾಗೆ ಸುಯ್ವಂ ನೆನೆವೊಂ ॥
ಭೋಗೇಚ್ಛೆ ಪುಟ್ಟಿದೊಡೆ ತ ।
ತ್ಸಾಗರಸಮ್ಮಿತಸಹಸ್ರಮಾಸಕ್ಕಣಿಸಂ ॥ ೪೮

ಮೂನೂಱೈವತ್ತೆಸೆವ ವಿ ।
ಮಾನಂಗಳ್ಗಮಲಮಣಿಮಯಂಗಳ್ಗೆ ಸಮೀ ॥
ಚೀನನವಚೀನರಚಿತವಿ ।
ತಾನಂಗಳ್ಗೊಡೆಯನಾದನಾದಿವಿಜೇಂದ್ರಂ ॥ ೪೯

ಮೂವತ್ತಿರ್ವರ್ ಸ್ವೀಕೃತ ।
ದೇವಿಯರಱುವತ್ತುಮೂವರಾವಲ್ಲಭಿಕಾ ॥
ದೇವಿಯರೆಸೆವೆಣ್ಬರ್ ಮಾ ।
ದೇವಿಯರಾತನ ಮನಕ್ಕೆ ಸಲೆ ನೆಲೆಯಾದರ್ ॥ ೫೦

ಎಣಿಕೆಗಳುಂಬಂ ಪರಿಜನ ।
ಗಣನೆಗೆ ಬಂದಚ್ಚರಿಯರುಮಂ ತದ್ದೇವೀ ॥
ಗಣದೊಳಗಾರೊರ್ವರ ವಿಕ ।
ರಣಸಂಭವದೇವಿಯರ್ಕಳಂ ಫಣಿಪತಿಗಂ ॥ ೫೧

ಪ್ರಕಟಂ ಮೂವತ್ತುಮೂವರ್ ಸುಮನರಯುತಸಂಖ್ಯಾನ್ವಿತರ್ ಸಂದ ಸಾ ।
ಮಾನಿಕಲೋಕರ್ ದೇವಪಾಲಾಹ್ವಯಯುತದಿವಿಜರ್ ನಾಲ್ವರಿತ್ತಂಗರಕ್ಷಾ ॥
ಧಿಕೃತರ್ ನಾಲ್ವತ್ತುಸಾಸಿರ್ವರಮರರಿವರಾತ್ಮೀಯಪಾದದ್ವಯಾರಾ ।
ಧಕರಾದರ್ ತತ್ಸುರೇಂದ್ರಂಗಮಲತರತಪಸ್ಸಾರ್ಥಸಾಮರ್ಥ್ಯದಿಂದಂ ॥ ೫೨

ಒಳಗಣ ಪೊಱಗಣ ನಡುವಣ ।
ವಿಳಾಸಮಂ ತಳೆದ ಮೂಱು ಸಭೆಯುಂ ದೇವಂ ॥
ಗಳವಟ್ಟುವಾತನೊಳ್ ಸಂ ।
ಗಳಿಸಿದ ಪುಣ್ಯಪ್ರಭಾವಮಂ ತ್ರಿಗುಣಿಪವೋಲ್ ॥ ೫೩

ವರಕರಿತುರಗಂ ರಥಕಿಂ ।
ಕರವೃಷಗಂಧರ್ವನರ್ತಕೀಪ್ರಮುಖಂ ಬಂ ॥
ಧುರಸಪ್ತಾನೀಕಂ ನಿಜ ।
ಪರಿಕರಮೆನೆ ಸುರನ ಸೈಪದೇನಚ್ಚರಿಯೋ ॥ ೫೪

ಎನಿಸಿ ತತ್ಕಲ್ಪವಲ್ಲರಿಗೆ ನಿಜಶರೀರಪಾರಿಜಾತನುನಡಪುರ್ವಮಾಡಿ,

ಒಯ್ಯದೆ ಪೊಯ್ಯದೊಂದು ಪುರುಷಸ್ಪದ ಚುಂಬಿಸದಿಂಪು ದೇವಿಯರ್ ।
ಮೆಯ್ಯಳವಾಜೆ ಕೂಡಿಸದ ಕೂಟದ ಸಂತಸಮೆಂಬಿವೆಲ್ಲಮಾ ॥
ರಯ್ಯೆ ಮನಃಪ್ರವೀಚರಣದಿಂ ಸಮಸಂದುಚಿತಾರ್ಥವೃತ್ತಿ ತ ।
ಳ್ವೊಯ್ಯೆ ಮನೋಜಕೇಳಿಗೆಮರಂ ತಣಿದಂ ಸುರತೋಪಭೋಗದೊಳ್ ॥

ಅದಲ್ಲದೆಯುಮಾತನೋರೊರ್ಮೆ ತನಗೆ ಸಹಜಮಾದಣಿಮಾಸಾಮಗ್ರಿಯಿಂ ನೆಲನನವ್ಯಗ್ರತೆಯಿನುರ್ಚಿ ಪೋಗಿ ನಾಗಭವನದ ಕೃತ್ರಿಮಚೈತ್ಯಯಾತ್ರೆಯಂ ನಿರ್ವರ್ತಿಸಿಯುಂ, ಓರೊರ್ಮೆ ಮಹಿಮಾಮಹಾತ್ಮ್ಯದಿಂ ಮೇರುಗಿರಿಯ ನಾಲ್ಕುಂ ಬನದ ಜಿನಭವನಂಗಳಂ ತಚ್ಛೈಲಮೂಲದಿಂ ಚೂಳಿಕೆವರಂ ಬಳೆದು ಬಲವಂದು ಬಂದಿಸಿಯುಂ, ಓರೊರ್ಮೆ ಗರಿಮೋರುತಾಶ್ಚರ್ಯದಿಂ ವರ್ಯಜಿನಬಿಂಬಸವನಪಾವನೀಭೂತಸ್ರೋತಮಪ್ಪಗಾಧಗಂಗಾನದೀಹ್ರದಂಗಳೊಳ್ ಪಾತಾಳಮೂಲಂಬರಂ ಮುಳುಗಿ ನಿಜಗಾತ್ರಮಂ ಪವಿತ್ರೀಕರಿಸಿಯುಂ, ಓರೊರ್ಮೆ ಲಘಿಮಾಲಘುಬಲದಿಂ ನಿತ್ಯಚೈತ್ಯಸವನನಿಮಿತ್ತಂ ಸ್ವಯಂಭೂರಮಣಸಾಗರೋದಕಾದಾನಕ್ಕಸಂಖ್ಯಾತದ್ವೀಪಸಮುದ್ರಂಗಳಂ ನಿಮಿಷಮಾತ್ರದಿನತಿಕ್ರಮಿಸಿಯುಂ, ಓರೊರ್ಮೆ ನಿಜಪ್ರಾಪ್ತಿಸಾಮರ್ಥ್ಯದಿಂದಿರ್ದೆಡೆಯೊಳಿರ್ದು ನಿಜಭುಜಲತಾಪ್ರತಾನಮಂ ನಿಮಿರ್ಚಿ ನಂದೀಶ್ವರದ್ವೀಪದ ಜಿನೇಂದ್ರಾಗಾರಸಾಂಧ್ಯಬಂಧುರತೂರ್ಯಂಗಳಂ ಬಾಜಿಸಿಯುಂ, ಓರೊರ್ಮೆ ನಿಜಪ್ರಾಕಾಮ್ಯಪ್ರಭಾವದಿಂ ವಿದೇಹತೀರ್ಥಕೃತ್ಕಲ್ಯಾಣಮಂಗಳಂಗಳೊಳ್ ಸೌಧರ್ಮೇಂದ್ರನೊಡನೆ ಲಾಸ್ಯತಾಂಡವಚತುರಿತನೃತ್ಯಂಗಳಂ ತತ್ತದ್ರೂಪಂಗಳಂ ಸಂಪಾದಿಸಿಯುಂ, ಓರೊರ್ಮೆ ತನ್ನೀಶತ್ವಶಕ್ತಿಯಿಂ ಪಂಚಗುರುಚರಣಪೂಜೋಪಚಾರಸಜ್ಜೀಕರಣದೊಳ್ ಸಕಲಸುರಸಮಾಜಮಂ ಪರಿಚಾರಕತ್ವದೊಳ್ ಯೋಜಿಸಿಯುಂ, ಓರೊರ್ಮೆ ವಶಿತ್ವಾತಿಶಯದಿಂ ವೀತರಾಗರೂಪಗುಣವಸ್ತುವರ್ಣನಾನುಬದ್ಧತ್ರಿಮಾರ್ಗಗೀತಂಗಳಂ ತ್ರಿವಿಧಮಾರ್ಗಂಗಳೊಳ್ ಪಾಡಿ ಗಂಧರ್ವಗೀರ್ವಾಣರಂ ವಶೀಕೃತರಂ ಮಾಡಿಯುಂ ಇಂತಷ್ಟಗುಣಂಗಳನಿಷ್ಟದೇವತೋಪಮಿಷ್ಟಿಯಿಂ ಸಫಲಂ ಮಾಡುತ್ತುಮಿಂತು

ಅನತಿಶಯಪುಣ್ಯಪುಣ್ಯಾ ।
ರ್ಚನತತ್ಪರನಾಮರುದ್ವರಂ ವಿವಿಧವಿನೋ ॥

ದನಸೇತುಯಾನದಿಂ ಜೀ ।
ವನಸಾಗರನಿಕರದಂತನಿಂತೈತಂದಂ ॥ ೫೬

ಅಂತು ದೂರಾಯುಸ್ಸಾಗರಪಾರಗನಾಗಲೊಡಂ

ನಿಜಕುಸುಮಸ್ರಜಂ ಕೊರಗಿದತ್ತು ಮೊಗಂ ಕೊರಗಿತ್ತೆ ಭೂಷಣ ।
ವ್ರಜರುಚಿಸಂಚಯಂ ತೊಲಗಿದತ್ತು ಋತಂ ತೊಲಗಿತ್ತೆ ನೋಡೆ ಭೂ ॥
ಮಿಜನಿಕರಂ ಕರಂ ನಡುಗಿದತ್ತು ಮನಂ ನಡುಗಿತ್ತೆ ಪೇೞೆ ಕ ।
ಲ್ಪಜಪತಿಗೆಂದು ತಮ್ಮೊಳುಲಿದರ್ ಸುರರೇಂ ವಿಭು ಭಾವಿತಾತ್ಮನೋ ॥ ೫೭

ಅಮರಾಪ್ಯಯವೊಂದುಂ ವ್ಯ ।
ರ್ಥಮಾದೊಡೇನಚ್ಯುತೇಂದ್ರನಾಯುಶ್ಚ್ಯುತಿಯೊಳ್ ॥
ಸುಮನೋಲೋಕಸ್ವವಿಬುಧ ।
ಸಮಾಖ್ಯೆಗಂ ನಾಡೆ ಮಾಡಿದಂ ಸಾರ್ಥತೆಯಂ ॥ ೫೮

ಅಂತು ಸಮಾಹಿತಚಿತ್ತನಾಗಿ

ಸ್ಮೃತಿನುತತತ್ವದೊಳ್ ನುತಿ ಜಿನೇಂದ್ರಪದಾಬ್ಜದೊಳುಕ್ತಿ ತದ್ಗುಣ ।
ಸ್ತುತಿಶತದೊಳ್ ಮನೋವಿರತಿ ಭೋಗಕದಂಬದೊಳಂಬುವೆತ್ತ ಸಂ ॥
ಗತಿ ಸತತಂ ಸಮಾಧಿವಿಧಿಯೊಳ್ ಸಮಸಂದಿರೆ ಸಾರ್ದ ಬಾಳಪಂ ।
ಡಿತವೃತಿಯಿಂ ಸುರಂ ಸುಮನರಂ ತಲೆದೂಗಿಸಿದಂ ನಿರಂತರಂ ॥ ೫೯

ಅಮೃತಮುಣಿಸಾತ್ಮರಕ್ಷಕ ।
ರಮರ್ತ್ಯರಾರಯ್ಯೆ ಸಗ್ಗಮದು ದುರ್ಗಮೆನಿ ॥
ಪ್ಪಮರರ್ಗಂ ಮೃತಿಯುಮನಿಂ ।
ಸಮನಿಸಿತೆನೆ ಮತ್ತ ನನರ್ಗೆ* ನಿತ್ತರಮುಂಟೇ ॥ ೬೦

ಅನಂತರಂ

ಸುಮನಸ್ಸ್ರುತ್ಯನುಗಮದೊಳ್ ।
ದ್ರುಮದಿಂದೆ ನೆಲಕ್ಕೆ ಬೀೞ್ವವೋಲಾಯುರ್ವ್ಯ ॥
ತ್ಕ್ರಮದೊಳ್ ನಾಕಾನೋಕಹ ।
ದೆ ಮಹೀಭಾಗಕ್ಕೆ ಮಂಡನಂದಾಸುಮನಂ ॥ ೬೧

ಬಂದು ಕನಕಪ್ರಭಂಗಮ ।
ನಿಂದಿತೆ ತತ್ಸ್ತುತಿ ಸುವರ್ಣಮಾಲೆಗೆವಖಿಲಾ ॥
ನಂದಕರಚರಿತನಂತಾ ।
ವೃಂದಾಕರನಂದು ಪುಟ್ಟಿದ .....ಸಾದ್ಯಂ ॥ ೬೦

ಕ್ರಮದಿಂದಿಂತೆಲ್ಲಮಂ ಶ್ರೀಧರಯತಿಪತಿ ಸರ್ವಾವಧಿಶ್ರೀಧರಂ ಪೇ ।
ಳೆ ಮಹೀಶಂ ಪದ್ಮನಾಭಂ ಭವಸಮುದಯವೃತ್ತಾಂತಮಂ ತಾನೆ ಕೇಳ್ದು॥
ತ್ತ ಮನಂಗೊಂಡೀಶಲೋಕಕ್ಕೆ ದಿಟಮೆನಿಪಂತಿಂಬೆ ಮುಂದಪ್ಪಬೇನಾ।
ನುಮನೊಂದಂ ಪೇಳಿಮೆಂದಂ ಬಳಿಕ ಮುಕುಳಿತಾತ್ಮೀಯಹಸ್ತಾರವಿಂದಂ॥

ಎನಲೊಡಂ ತತ್ಸಭಾಜನಮನಸ್ಸಂಶಯತಮಸ್ಸಮುದಯಮಂ ತೊಳ್ದ ವಂತೆ ದಂತಕಾಂತಿಚಂದ್ರಾತಪಮಂ ಪಸರಿಸೆ ತನ್ಮುನೀಂದ್ರಚಂದ್ರನನ ಗ್ರಂತೆಂದಂ:—

ಯುಷ್ಮತ್ಪುರಕ್ಕೆ ಕರಿಪತಿ ।
ಭೀಷ್ಮಮಹಾವರ್ಷಮೊಂದು ಬರ್ಕುಂ ಬರ್ಪಿ ॥
ಗ್ರೀಷ್ಮರ್ತುವಿನೊಳಧಿಕಮ ।
ದೋಷ್ಮಮದಂ ಕಂಡು ನಂಬಿಮಿನ್ನುಳಿದುದುಮಂ ॥ ೬೪

ಎಂದು ಬೆಸಸುವುದುಮನಂತರಂ ತದೀಯಪಾದಪದ್ಮಂಗಳಂ ಪದ್ಮನಾಭಂ ಸನಾಭಿಜನಸಮೇತಂ ಬೀಳ್ಕೊಂಡು ಬಂದು ನಿಜರಾಜಧಾನಿಯಂ ರತ್ನಸಂ ಚಯಮಂ ಪೊಕ್ಕು ರತ್ನತ್ರಯಾಲಂಕೃತಂ ಸುಖದಿನಿರ್ಪನ್ನೆಗಂ

ಅತಿತಪ್ತೋದ್ಧೃಪ್ತಧೂಳೀಪಿಹಿತಮಹಿತಳಂ ತುಂಗವಾತೂಳಕಾಲಿಂ ।
ಗಿತರೋಚಿರೋಮಂಡಲಂ ಪ್ರೋಚ್ಛ್ವಲಿತಮರುಮರೀಚೀಜಾಲದಿಕ್ಸಂ ॥
ತತಿ ಬಂದತ್ತಂದಗುರ್ವಿಂ ಬಗೆಗೆ ಪಡೆದಮೋಘಂ ಸಮುದ್ಧೂತಮಾಘಂ ।
ಹೃತನದ್ಯೌಘಂ ವಿಮೇಘಂ ಜನಿತಜನಮನೋಗ್ಲಾನಿದಾಘಂ ನಿದಾಘಂ॥ ೬೫

ನದನದ್ಯೌಘಾಂಬುವಂ ಪೀರ್ದೆಳೆ ನೆಱೆಯದೆ ಬಾಯ್ವಿಟ್ಟವೊಲ್ ಬೀಡೆ ಗಳ್ ಪ । ರ್ವಿದುವುಷ್ಣಾಂಶುಪ್ರಭಾಮಂಡಲದ ಪುದುವಿನಿಂ ಬೆಂದವೋಲಾಗ ಸಂ ಕಂ ॥ ದಿದುದಾದಂ ದಿಗ್ವಧೂಸಂತತಿಯೊದವಿದ ತಾಪಕ್ಕೆ ಮೆಯ್ಯಂ

ನವಳ್ವಂ । ದದೆ ಘೇರೀರಾ[illegible]ರ್ವಿರ್ದೆಬ್ಬಿದು ದೆಸೆಗಳೊಳೇಂ ಗ್ರೀಷ್ಮ
ಮಾದತ್ತೊ ಭೀಷ್ಮಂ ॥ ೬೬

ನಯನೌಘಚ್ಚಲದಿಂದೆ ನೈದಿಲೆಸಳಂ ಶಕ್ರಂ ಮುಸುಂಕಿಟ್ಟನೈ ।
ದೆ ಯಮಂ ಛಾಯೆಯನೊಂದಿನಿತ್ತಗಲದಿರ್ಪಂ ಪಾಶಹಸ್ತಂ ಪಯೋ ॥
ಧಿಯನಾಶ್ರೈಸಿಸನಾವಗಂ ತುಹಿನಭೂಮೀಧ್ರಕ್ಕೆ ಸಾರ್ದಂ ಹರ ।
ಪ್ರಿಯನಾವರ್ತಿಸೆ ತಳ್ತು ನಾಲ್ದೆಸೆಯುಮಂ ಗ್ರೀಷ್ಮಪ್ರತಾಪೋದಯಂ ॥

ಜ್ವಲನೋಷ್ಮಗ್ರೀಷ್ಮತಾಪಕ್ಕಗಿದಡವಿಗಳೊಳ್ ಬೈಗುವ್ರೊಟ್ಟಿಪ್ಪಿನಂ
ಪ । ಲ್ವಲಶಯ್ಯೋದ್ದೇಶಮಂ ಪೊರ್ದಿದುದಿರದೆ ಮುಹುಶ್ಶೃಂಗನಿಸ್ತಾಡನ
ಪ್ರೋ ॥ ಚ್ಚಲಿತಾಂಭಶ್ಶೀಕರಂ ಸೈರಿಭವಿಸರಮಗಾಧಸ್ರವಂತೀಹ್ರದಾಂತ ।
ರ್ಜಲದೊಳ್ ನಿಷ್ಕಂಪಿತಾಂಗಂ ಮುಳಿಗಿದುದು ಬಹಿಃಪುಷ್ಕರಂ ಹಸ್ತಿ
ಯೂಥಂ ॥ ೬೮

ಬಿಡದಿನ್ನುಂ ತನ್ನನೆನ್ನನ್ವಯದ ಗಜಮವೆಂಟುಂ ಕೊರಲ್ಗೊಂಡು ಪೊ
ತ್ತು । ದೊರ್ಡಮೆಮ್ಮೊಳ್ ಕಾಯ್ವನಿಂತೀಯವನಿ ಮೆಱೆದಪಳ್ ಮಾಣದೆಂ
ದೆಂದು ಪ್ರಯ್ಯಲ್ಗು ॥ ಡುವಂತಾತ್ಮಾಗ್ರಹಸ್ತಂಗಳೊಳನಕಿರಣೋದ್ಭೀತಿ
ಯಿಂ ಪಲ್ಲವಂಗ । ಳ್ವಿಡಿದುಗ್ರಗ್ರೀಷ್ಮದೊಳ್ ಸಾಮಜವಿತತಿ ತೊಟಿಲ್ದ
ತ್ತು ವಾವಾರ್ಂಛೆಯಿಂದಂ ॥ ೬೯

ಉರಿವ ನಿದಾಘತಾಪದೊಳೆ ಮೇರುನಗಂ ಪೊಱಪೋಗೆ ಸುತ್ತಲುಂ ।
ಕರಗಿ ಬಱಿಕ್ಕಿಳಾವಳಯದೆಣ್ದೆಸೆಗಂ ನೆಱೆ ಸೂಸಿ ಕಾಟಿಪ್ಪರಂ ॥
ಬರಿದು ಬಿಲಸ್ಥಲಂಗಳೊಳಪೊಕ್ಕುಱಿದಿರ್ದದಲ್ಲದಂದು ಪೇಟ್ ।
ಜರಗಿನ ಪೊಂಗ ಮೀ ನೆಲಕಮಾವುದೊ ಸಂಗತಿವೆತ್ತ ಕಾರಣಂ ॥ ೭೦

ಬೇಸಗೆಯ ಬಿಸಲೊಳಾಕ್ಕೈ ।
ಲಾಸನಗಂ ನೆಱೆಯೆ ಕರಗಿ ಕಣ್ಗೆಟ್ಟ ಕರಂ ॥
ಸೂಸಿ ಪರಿದಪ್ಪುದು ದೆಸೆಗೆಸೆ ।
ಮಾಸರಮಾಗಿರ್ದಪ್ಪೊಗೆದ ಮೃಗತೃಷ್ಣಿಕೆಗಳ್ ॥ ೭೧

ಬಿಸಿಲಬಿಸಿರೆ ಕರಗಿ ಹರಿವ ।
ಶ್ಮಸಾರಮಂ ಗಿರಿಯ ನಿರ್ಝರಂಗೆತ್ತೀಂ ಚುಂ ॥
ಬಿಸಿ ಚಂಚು ಬೇಯೆ ತಲೆಬಿದಿ ।
ರ್ದ*ಸುವರೆಯಾದುದೊ ತೃಷಾರ್ತನೊಂದು ಮಯೂರಂ ॥ ೭೨

ಕಡುವಿಸಿಲ ಕಾಯ್ಪಿನಿಂ ಬಿದು ।
ವ್ರೊಡೆದುಗೆ ಬಿಸುವುತ್ತು ಸೋರ್ವ ಸೀರ್ಪನಿಗೆತ್ತೊಂ ॥
ದೆಡೆವಡಗದೆ ನೊಣೆದು ನವಿಲ್ ।
ಮಿಡುಕಿದುದತಿತೃಷ್ಣೆಯೀಗುವೊರ್ದೆ*ಗದನಲಿಲಂ ॥ ೭೩

ಪಬಿ ಬೇಗೆವ್ರೋಗೆ ತನ್ನಯ ।
ನೆಬಿಲನೆ ಬೇಱೊಂದುಗೆತ್ತು ಸಾರ್ವೞಪಿಂದಂ ॥
ಸುೞಿದೆಡಕಂ ಬಲಕಂ ಬಸ ।
ವೞಿದುದು ಬೇಸಗೆಯ ಬಿಸಿಲೊಳೊಂದಿಭಕಳಭಂ ॥ ೭೪

ಬಿಸಿಲೊಳ್ ಬಿಬ್ಬರಂ ಬಿಱಿದ ಮಸ್ತಕಶುಕ್ತಿಕೆಯಿಂದೆ ಮುತ್ತುಮುಂ ।
ದೆಸೆ ಕವಿತಂದೊಡಾಂತಿರುತೆ ನೋವುಮನಿಂತಿದಪೂರ್ವತೋಯಭೃ ॥
ದ್ವಿಸರದೆ ವಾಃಕಣಂಗಳುಗುತಂದಸ್ರವೆಂದೆ ಪೊಡರ್ಪುಗೆಯ್ದು ಪೂ ।
ರಿಸುವೞಪಿಂದೆ ಪುಷ್ಕರಮನೆತ್ತಿದುದಂದು ನಭಕ್ಕದೊಂದಿಭಂ ॥ ೭೫

ಪರಿಪೂರ್ಣಗರ್ಭಭರದಿಂ ।
ಬರಲಾಱದೆ ನಿಂದೊಡೈದಿ ನದಿಯಂ ಜಲಮಂ ॥
ಪಿರಿದೂಡಿ ಬಂದು ತೆಗೆತೆಗೆ ।
ದಿರದೆಱೆದುದು ಕರಣಿಯಿಂದೆ ಕರಿಣಿಗಿಭೇಂದ್ರಂ ॥ ೭೬

ಬದವಿದ ಬೆಟ್ಟ ಬೇಸಗೆಯ ಕೂರ್ವಿಸಿಲರ್ವಿಸೆ ಬೆರ್ಚೆ ವಾಯುವೇ ।
ಱಿದ ಹರಿಣಂ ಸಮುತ್ಪ್ಲುತದಿನಿಂದುವ ಬಿಂಬವ ನೋಡಿ ಪ್ರೋಕ್ಷ್ಯ ಮ ॥
ಧ್ಯದೊಳೊಸಱುತ್ತು ಮಿರ್ಪ ಸುಧೆಗಂ ಕುೞಿವಾ*ಲ ನೆಬಿಲ್ಗಮಲ್ಲಿ ಪೋ ।
ಗದೆ ನೆಲಸಿರ್ದುದಲ್ಲದೊಡದೆಲ್ಲಿಯದೇಣಶಶಾಂಕಸಂಗಮಂ ॥ ೭೭

ಭಾವಿಸಿ ನೋಡಿ ದೂರದೊಳೆ ಕಂಡು ವನಾಂತರದೊಳ್ ನಿಪಾನಪಂ ।
ಕಾವಿಳವಾರಿಯಂ ಹರಿಣಿಯೊಂದತಿತುಚ್ಛಮನಲ್ಲಿಗುಷ್ಣತೃ ॥
ಷ್ಣಾವಶಮಂದಮಂದಗತಿ ಬರ್ಪನಿತರ್ಕೆನತಾಪದಿಂದೆ ತ ।
ಜ್ಜೀವನಮುಂ ಮೃಗಾಂಗನೆಯ ಜೀವನಮುಂ ತವುತಂದುವೊರ್ಮೊದಲ್ ॥

ಬದವಿದ ಧೂಳಿಯಾವಗೆಯ ಧೂಳಿವೊಲಿರ್ದುಗು ಬೆಟ್ಟು ಸುಟ್ಟ ಸು ।
ಣ್ಣದ ಕಱಿಗಲ್ಗಳೊಟ್ಟಲೆನಿಸಿರ್ದುದು ನೀರಱಲಿಂ ಸರಸ್ತಟಾ ॥
ಕದ ಶಫರಾಳಿ ಕುತ್ತೆಸಱ ಮೀನವೊಲಿರ್ದುದು ತಾಱಿ ತಳ್ತು ಪ ।
ರ್ವಿದ ಪಱುವಗ್ನಿಯುಂಡುೞಿದ ಕಾಂಡವದಂತೆವೊಲಿರ್ದುದಾವಗಂ ॥ ೭೯

ಪೆಡೆಯ ಮೊದಲ್ಗೆ ತಂದಡರೆ ಮಂಡಳಿಸಿತ್ತಹಿ ಶೇಷಕಾಯಮಂ ।
ಕೊಡೆವಿಡಿದಂತಲರ್ಚಿದುದು ಸೋಗೆಯನೋವದೆ ಸೋಗೆ ಪೀರ್ದುದೋ ॥
ಗಡಿಸದೆ ಪೀರ್ವ ನಾಲಗೆಯ ಬಿಂದುವಿನಂದೆರ್ದೆ*ಯಾಱಿ ಸಿಂಗಮಿಂ ।
ತುಡುಗದದೇನಲಭ್ಯತರಮೋ ನೆೞಲುಂ ಜಳಮುಂ ನಿದಾಘದೊಳ್ ॥ ೮೦

ನೆತ್ತಿಯೊಳಾನಗಂ ತಳೆದ ಬಾಂದೊಱೆ ಮಾಣದೆ ಭಾಳಚೂಳದೊಳ್ ॥
ಪತ್ತಿಸಿದಾಹಿಮಾಂಶುಕಲೆಯುಷ್ಣದ ಹೈಮವತೀಲತಾಂಗಮೊ ॥
ಪ್ಪತ್ತಿರೆಯುಂ ಪೊದಱ್ದಿರಿವ ಬೇಸಗೆಯುಮ್ಮಗೆ ಬೆರ್ಚೆ ರೌಪ್ಯಭೂ ।
ಭೃತ್ತಟನಂದನಾವಳಿಯ ತಣ್ಬುೞಲಂ ಬಿಡನೊರ್ಮೆಯುಂ ಮೃಡಂ ॥ ೮೧

ತನುಪಂಕಾಗ್ರಮುಹುರ್ಲುಠಚ್ಛಫರಮಾಬದ್ಧಾಶ್ಮಸಂಧ್ಯಂತರಾ ।
ಳನಿವಿಷ್ಟೋರುಕುಳೀರಕಂ ತಳತಟೀನಿರ್ಮಗ್ನಕೂರ್ಮಂ ಚಿರಾ ॥
ಭ್ಯನುಸಂಧಾನವಿನಾಶದೀನಮುಖಹಂಸಂ ಮ್ಲಾನಕಲ್ಹಾರಕೋ ।
ಕನದಂ ಕಣ್ಗಿಱಿದಾಯ್ತು ತತ್ಸಮಯದೊಳ್ ಶುಷ್ಯತ್ಸರಸ್ಸಂಚಯಂ ॥

ಹಿಮತಾಂಬೂಲೋರುರಾಗಾಧರಮದೃಢನಿತಂಬಾಂಬರಂ ತಾಲವೃಂತೋ ।
ತ್ಥಮರುದ್ವ್ಯಸ್ತಾಲಕಂ ನಿಸ್ಸೃತಮಧುಲವಸಾದ್ರೋರ್ಗ್ಗಮಾಲಂಬಿಕೇಶಂ
ವಿಮಲೋದ್ಯದ್ಯಂತ್ರಧಾರಾಜಲಕಲುಷಿತನೇತ್ರಾಂಜನಂ ಚಂದನಾಪಾಂ ।
ಡಿಮಗಾತ್ರಂ ಗ್ರೀಷ್ಮಸಾಯಂಸಮಯದೊಳೆಸೆದತ್ತಂದು ಬಾಲಾಕಲಾಪಂ

ಅಂತು ಬಂದ ಘರ್ಮಸಮಯದೊಳ್ ಸಮಯೋಚಿತಹಿಮಕರಾಯ ಮಾನಕಾಯಮಾನದೊಳಗೆ ಕತಿಪಯಪರಿಜನಪರಿವೃತನೊಂದು ದಿವಸಂ ಪ್ರಥಮಯಾಮದೊಳ್ ಮಹೀಪಾಲಂ ಲೀಲೆಯಿಂದಿರ್ಪನ್ನೆಗಂ

ಮುರಿದ ಕೊರಲ್ಗಳಿಂ ದೆಸೆಯನಾಳಿಸೆ ದೀವದ ಹುಲ್ಲೆ ವಿಂಡು ಕ ।
ತ್ತರಿಸಿರೆ ಮೇಪುವಿಟ್ಟು ಕಿವಿಯಂ ಹಯಸಂತತಿ ಕರ್ಣತಾಳವಿ ॥
ಸ್ಫುರಿತಮನೊಕ್ಕು ಕೇಳೆ ಗಜರಾಜಿ ಲಯಾಂತಕಘೋಷಭೀಷಣಂ ॥
ಪುರದೊಳಗುಣ್ಮಿದತ್ತು ಭಯವಿಹ್ವಲಪೌರಕೃತಂ ಮಹಾರುತಂ ॥ ೮೪

ಪುಗು ಪುಗು ಪೋಗು ಪೋಗಡರಡರ್ ಗೃಹಕೂಟಮನೆಕ್ಕಟಕ್ಕಟಾ ।
ತೆಗೆ ತೆಗೆ ಮಕ್ಕಳಂ ಬಿಡದೆ ಕೂಗಿಡು ಕೂಗಿಡಡಂಗಡಂಗು ಮಂ ॥
ದಿಗೆ ಮುನಿದೆತ್ತಿತೆತ್ತಿತದೆ ಕೊಂದುದು ಕೊಂದುದು ಬಂದುದೆತ್ತಣ ।
ಜ್ಜಿಗಮೆಮಗೆಂದು ಬಾಯಬಿಡ ಭೀರುಗಳಬ್ಬರಮಾದುದುಬ್ಬರಂ ॥ ೮೫

ಆಗಳರಸನಿದೇನೆಂಬುದುಂ ಪ್ರತೀಹಾರನೊರ್ವನತಿತ್ವರಿತಗತಿಯಿಂ ಪೋಗಿ ಬಂದು,

ದೇವ ಮದೇಭದಾಕೃತಿಯನಾಂತು ಕೃತಾಂತನೆ ಬಂದನೆಂಬ ರೌ ।
ದ್ರಾವಹಮಪ್ಪದೊಂದು ಗಜಮೆತ್ತಣಿನಕ್ಕೆ ಪುರಕ್ಕೆ ಬಂದು ಪೊ ॥
ಕ್ಕೋವದೆ ಮರ್ತ್ಯಸಪ್ತಿಕರಭದ್ವಿಪಸೈರಿಭರಾಸಭಾದಿಜೀ ।
ವಾವಳಿಯಂ ಕೊಲುತ್ತೆ ಬರುತಿರ್ಪುದಂತಱಿನಾಯ್ತು ಸಂಭ್ರಮಂ ॥

ಎನಲೊಡಂ ಮುನಿವಚನದವೋಘತೆಗೆ ಮನದೊಳ್ ಮುದಮನಪ್ಪುಕೆಯ್ದು ಅದಂ ನೋಲ್ಪೆನೆಂದರಮನೆಯ ಪೊಱಮಟ್ಟು ಪಟ್ಟಮಾರ್ಗದಿಂ ಬರ್ಪನ್ನೆಗಂ ತೊಟ್ಟನೆ ಇದಿರೊಳ್ ಕಂಡು

ಪಸರಿಪ ಸಂಜೆಯೋ ಕಿವಿಯ ಕೆಂಬೆಳಗೋ ತಮವೋ ಮದಾಂಬುವೋ ।
ಮಿಸುಗುವ ತಾರೆಯೋ ಪೊಳೆವ ದಿಟ್ಟಿಯೊ ರಾಹುವೊ ಕೈಯೊ ಮೇಣಿದಾ ॥
ಗಸಮೊ ಗಜೇಂದ್ರಮೋ ಕೊಱೆಯೊ ಕೋಡೊ ವಿಚಾರಿಸೆ ವಿಸ್ಮಯಂ
ಮನಕ್ಕಸದಳಮೆಂದು ನೀಡುಮವನೀಪತಿ ನಾಡೆ ಮರಳ್ದು ನೋಡಿದಂ ॥

ಅಂತು ನೋಲ್ಪಾಗಳ್

ಘನಕುಂಭಕೂಟಸಂಘ |
ಟ್ಟನದಿಂದಲ್ಲೊಕ್ಕ ತಾರಕಾವಳಿ ಪೊಗದೊ ||
ಡ್ಡಿನೊಳಲ್ಲಲ್ಲಿಗೆ ನೆಲಸಿ |
ತ್ತೆನೆ ಸುಂದರಮಾಯ್ತು ಬಿಂದುಜಾಲಕಮಗಜಱೊ || ೮೮

ಎರಡುಂ ಕಟದಿಂದೊಗೆದನ |
ವರತಂ ದಾನಾಂಬುಧಾರೆ ಮುಸಲಸ್ಥೂಲಂ ||
ಸುರಿತರುತಿರೆ ಕರಿ ಕಟ್ಟಾ |
ಸುರಮಾದುದು ಕಣ್ಗೆ ಮೂಱುಕೈಯಾನೆಯವೋಲ್ || ೮೯

ಅತಿತರಳಕರ್ಣತಾಳಾ |
ಹತಿಗಳ್ಕೆ ಕಪೋಲಯುಗಳದಿಂದೊಗೆವ ಮಧು ||
ವ್ರತನಿಚಯದ ನಿನದಮದೇಂ |
ರುತಿಯಂ ನೆನೆಯಿಸಿತೊ ಮೇಗೆ ಮದಡಿಂಡಿಮದಾ || ೯೦

ವಸುಧೇಶನ ಕಣ್ಗೆ ನಸುಂ |
ಮಿಸುಗುವ ಪೊಸಮುಸೆಯ ಪೊನ್ನ ಕೂರಂಕುಸವಾ ||
ಳಸಿ ಬರಿಯು ಬೀರಗಚ್ಚೆಯೊ |
ಳೆಸೆದುದು ಕಾರ್ಮುಗಿಲ ಕೆಲದ ಕುಡುಮಿಂಚಿನವೋಲ್ || ೯೧

ಬಟ್ಟಿದ ಬೆನ್ನ ಮಣ್ಣೊಳೊಗೆದತ್ತೆನೆ ಪೆದೊರ್ಡೆ ಮುಟ್ಟೆ ತೀವಿ ಕ |
ಣ್ಗೆಟ್ಟಳವಾದುವಂದು ಸಿರಿಯಂತಿರೆ ತೋಲೊಳಗರ್ದಾವಗಂ ||
ಕಟ್ಟಿದ ಮುಟ್ಟು ಬಾಹಿರಿಗೆ ಕಿಚ್ಚೊತ್ತಿಡನಂದುದು ನೆಟ್ಟನೊರ್ಮೆಯುಂ |
ಬಿಟ್ಟಿರದಾಗಿಯುಂ ಮದದೊಳೀಕರಿ ತಪ್ಪದು ಸಾರ್ವಕಾಲಿಕಂ || ೯೨

ಅದಲ್ಲದೆಯುಂ

ಬೀಜಳವಟ್ಟು ಬೆಳ್ಪೆಸೆವ ಕೊಂಬು ನಖಾಗ್ರದಿನತ್ತ ಮತ್ತೆ ಕೈ |
ಮೀಱಿದ ಕೈ ಕನಲ್ವ ಕಿಡಿವಣ್ಣದ ಕಣ್ ಬೆಳಗೆಂ*ಪನಾವಗಂ ||
ಬೀಱುವ ಕರ್ಣವೊಡ್ಡಿ ಕಡೆದಂದದೊಳೊಂದಿದ ಕುಂಭಕೂಟದು |
ತ್ತಾಱಿಲನೇಕಮುನ್ನತಿಯಿದಾನಱಿವಾನೆಯೊಳಲ್ಲಮೆಲ್ಲಿಯುಂ || ೯೩

ಎಂದು ವಿಚಾರಿಸುವ್ರೇಡವಿಃ ।
ಯೆಂದದಿಭಂ ಬನದೊಳಿಲ್ಲ ಸಾಹಣದೊಳವಿ ॥
ಲ್ಲೆಂದರಸನಾನೆಯಂ ತಾಂ ।
ನಿಂದೆನಸುಂ ನೋಡಿ ನೋಡಿ ವಿಸ್ಮಯಮುತ್ತಂ ॥ ೯೪

ಅಂತು ಮದೋಗ್ರಮುಂ ಅಖಿಲಲಕ್ಷಣಸಮಗ್ರಮುಮಾದ ಗಜಪತಿಯೊಳುಪಲಾಲನೋಕ್ತಿಗಳಂ ಪ್ರಯೋಗಿಸ್ರದುಂ ಮಂತ್ರವಾದಿಯಂ ಕಂಡ ಮಹಾಗ್ರಹದಂತೆ ಮದಾಟೋಪಮಂ ಬಿಸುಟ್ಟು ಕರ್ಣಜಾಹಮನೆಲಿಲೆ ವಿಟ್ಟಾಲಿಸುವುದುಂ ಬೆಸನಿತ್ತು ಮಱಿದು ಪತ್ತೆಸಾರ್ದು ಸೂಸಕಂಬಿಡಿದೊಂದು ಮುಟ್ಟಿಯೊಳಗೆ ಬೆಂಗೆವಾಯ್ದು

ವಿಸಟಂಬರ್ಪಾನೆಯಂ ವಾಕ್ಪ್ರಣಿಧಿಯೊಳೆ ಬೆಸಂಬೆತ್ತು ಕಾಲ್ಗೋದು ಕೂರಂ । ಕುಸದಿಂದಂಗುಷ್ಠದಿಂ ಪಾರ್ಷ್ಣಿಯುನಳವಡಿಸುತ್ತುಂ ನಿಷಾದಿವ್ರಜಂ ಬೆ ॥ ಕ್ಕಸಮುತ್ತಿರ್ಪಂತು ಬಂಬಲ್ವರಿಯಿಸಿ ದೆಸೆಗೆಲ್ಲಂ ಬಱಿಕ್ಕುಯ್ದು ನೀರೂ । ಡಿಸಿದಂ ಕಂಭಕ್ಕೆ ತಂದಂ ಮಗುೞೆ ಗಜಕಳಾಖಂಡಲಂ ಪದ್ಮನಾಭಂ ॥ ೯೫

ಆರಯೆ ಬೇರ ಬೆಂಜನದ ಧೂಪದ ಮರ್ಮದ ಮಂತ್ರದಾಸೆಯಂ ॥
ಪಾರದೆ ಪಿಂದೆ ಕೊಟ್ಟು ಪಿಡಿಯಂ ಕೆಲದೊಳ್ ಬಿದಿಯಂ ಮೊಗಕ್ಕೆ ಮು ॥
ತ್ತಾರಯಲೆಯ್ದೆ ಪೇೞದೆ ನೃಪಾಲಕನೀತೆಱಿದೊಂದೆ ಮೆಯ್ಯೊಳಾ ।
ಘೋರಣವೃತ್ತಿಯಂ ಮೆಱೆದನಾವನೊ ದೇವ ಮಹೀವಿಭಾಗದೊಳ್ ॥ ೯೬

ಎಂದಾನೆವಾಂಗಿನವರೆಲ್ಲಮೊಲ್ಲನುಲಿದು ಕೊಂಡುಕೊನೆವಿನೆಗೆವಾರೋಹಕೌಶಲಮುಂ ವಿಧಾನಕೌಶಲಮುಂ ಮೆಱೆದುಮುಪೂರ್ವಭದ್ರಗಜಸಮಾಸಾಧನಾಹ್ಲಾದಹೃದಯನಾಗಿ ದರ್ಶನದಿನದಂದು ಪದ್ಮನಾಭಮಹಾರಾಜಂ ಸುವರ್ಣನಾಭಯುವರಾಜಂ ಬೆರಸು ಆಸ್ಥಾನಮಂಡಲಮಧ್ಯಸ್ಥಿತನಾಗಿರ್ಪುದುಮೊರ್ವಂ ದೌವಾರಿಕನಿವೇದಿತಾಗಮದರ್ಶನಾಗ್ರಹನುಂ ಲಬ್ಧಭೂಪಾಲಕಾನುಗ್ರಹನುಂ ಪರಿಗೃಹೀತಪ್ರಧಾನೋಚಿತವೇಷವಿಗ್ರಹನುಮಾತ್ಮಾಯತ್ತಸಂಧಿವಿಗ್ರಹನುಮಪ್ಪ ದೂತಮುಖ್ಯಂ ಬಂದು ವಿನಯವಿನಮಿತೋತ್ತ

ಮಾಂಗನುಚಿತಾಸನದೊಳಿರ್ಪುದುಮಿನಿತಾನುಂ ಬೇಗದಿಂ ಯುವರಾಜಭ್ರೂ
ಪಲ್ಲವಪ್ರೇರಿತಂ ಪ್ರರುಭೂತಿಯೆಂಬ ಮಂತ್ರಿವರನಾತನಂ ನೋಡಿ

ಎಲ್ಲಿಂದೇಂ ಕಾರಣದಿಂ ।
ದಿಲ್ಲಿಗದಾರ್ ಕಳುಪೆ ಬಂದೆಯೆಂಬುದನವನೀ ॥
ವಲ್ಲಭನಱಿವಂದದಿನಱಿ ।
ಪೆಲ್ಲಮನೆನೆ ದೂತಮುಖ್ಯನಂದಿಂತೆಂದಂ ॥ ೯೭

ಪೃಥುಸತ್ವಂ ಸಫಲೀಕೃತಾಖಿಲಕಳಾವಿನ್ಮರ್ತ್ಯವರ್ಗಾಲಾಮನೋ ।
ರಥನುನ್ಮೂಲಿತಶತ್ರುವರ್ಗನನುರಕ್ತಾಶೇಷತಂತ್ರಂ ಜಗ ॥
ತ್ಪ್ರಥಿತಕ್ಷಾತ್ರಗುಣಂ ಭವತ್ಪದಪಯೋಜಾತಾಂತಿಕಕ್ಕಟ್ಟಿದಂ ।
ಪೃಥಿವೀಪಾಲನೃಪಾಲನುಜ್ಜ್ವಲಯಶಂ ಮತ್ಸ್ವಾಮಿ ಸತ್ಪ್ರೇಮದಿಂ ॥

ಅದಕ್ಕೆ ಕಾರಣನಾವುದೆಂದೊಡೆ

ಹರಿನೀಲಚ್ಛವಿ ರೋಚನಾರುಚಿರನೇತ್ರಂ ವೃತ್ತಗಾತ್ರಂ ಪರಂ ।
ಗುರುಕುಂಭಂ ಪುರುವಂಶನಾಯತಕರಂ ಬದ್ಧೋದರಂ ದಕ್ಷಿಣೋ ॥
ಚ್ಚರದಂ ಕ್ರೋಡನಿತಂಬನಂಬುದರವಂ ವ್ಯಾಲಂಬಿವಾಲಂ ಕ್ಷರ ।
ತ್ಕರಟಂ ಪ್ರಾಂಶುಮುಖಂ ದಶದ್ವಯನಖಂ ಕ್ರೋಧೋದ್ಧುರಂ ಸಿಂಧುರಂ॥

ಅದು ಬೀರಸಿರಿಯ ಕರುಮಾ ।
ಡವ ತೆಱದಿಂ ಭದ್ರಲಕ್ಷಣೋಪೇತಂ ಮ ॥
ತ್ತದು ಮಂದರಭೂಧರದಂ ।
ದದಿನುಪಗತನಿತ್ಯದೇವಸತ್ವಸಮಗ್ರಂ ॥ ೧೦೦

ಬದವಿದ ಮದದಿಂ ತೀರ್ಥ ಮನ ।
ಗಿದ ಗಂಡಮನುರುತರುಪ್ರಕಾಂಡದೊಳೊರಸಲ್ ॥
ಪದೆದೆಂದುಂ ಬನಮನೆ ಪುಗು ।
ವುದಱಿಂ ವನಕೇಳಿಯೆಂದು ಪೆಸರಾಗಿರ್ಕುಂ ॥ ೧೦೧

ಆಮಹಾಮದೇಭಂ ಪೃಥ್ವೀಪಾಲದೇವನ ಪಟ್ಟವರ್ಧನನಾಗಿರ್ಪುದುಂ
ಮತ್ತೊಂದು ಮದಗಜದ ಸೊವಡು ತೀಡದಂತು ಬೀಡಿಂಗೊರ್ಗಾವುದದಱ

ಬಾಳ್ಗಂಬದೊಳ್ ಸೆಱೆಗೆಯ್ದು ಮಿದೊರ್ಂದುದಿನಸಂ ಕ್ರೋಧಿನಿಯೆಂಬ ಸಪ್ತಮದಾವಸ್ಥೆಯಿಂದಾದ ಮನದ ಮಸಕದಿನಸವಸದೆ ನೆಲದ ನಾಲಗೆಯುಂ ಕೀಲ್ವಂತೆ ಬಾಳ್ಗಂಬಮಂ ಕಿೞ್ತು ಅಗ್ಗರಣೆಯುಂ ನುಗ್ಗುಮಾಡಿ ಮಂಕಡ ದಂದದಿಂ ಕಟ್ಟಿದ ಲೋಹಚರ್ಮಜಮಪ್ಪ ಮುಟ್ಟುಗಳನಿತುಮಂ ತಕ್ಕೈಸಿ ಬೆಂಗಯಿಸಿ ಬಿಸತಂತುಮಂ ಪಱಿವಂತೆ ಪಱಿದು ಬೆಳ್ಳಾಳನಾಗೆ ಪೋಗಲೀಯದೆ ತೆಗೆದಾಱೆಕಾಱರ ಗಳೆಯ ಪುದುವಿನೊಳದಿರ ಪೊದಱೊಳಗಣ ಬೆನಕನ ಜೋಹದಂತೆ ಕಿಱಿದು ಬೇಗಮಿರ್ದುಮ್ಮಳಿಸಿ ಮುಳಿದು ಸುತ್ತಿದಾನೆವಾಂಗಿನ ವೀರರೆಲ್ಲರುಮಂ ಪನ್ನೆರಡುಂ ಹಸ್ತಪ್ರಹಾರದೊಳಂ ಪದಿನೆಂಟುಂ ಕೋಡೇಱಿನೊಳಂ ಏಱುಂತೆಱದ ಕಾಳವಟ್ಟದ ಪೊಯ್ಲೊಳಂ ನಾಲ್ವತ್ತು ನಾಲ್ಕು ಗಾತ್ರಪರಪಾತದೊಳಂ ದೆಸೆವಲಿಗೆಯ್ದು ಪೂರ್ವಾಸನದೊಳಿರ್ದ ಮಹಾಮಾತ್ಯನನಡ್ಡಂಬರಿದ ಪೆರ್ಮರದ ತೋಱಗೊಂಬಿನೊಳ್ ಪೊಂಗಿ ಪರಿದರೆದು ಕೊಂದು ಮಹಾವನಮಂ ವನಕೇಳಿಗಜಂ ಪೊಕ್ಕುದಂ ಕೇಳ್ದು

॥ ಹರಿಣೀವೃತ್ತಂ ॥

ತಿನಳಿವಿಡಿದುಗ್ರೇಭಂ ಪೋದತ್ತು ಮಾಣದೆ ಪೋಗಿ ಮೆ ।
ಲ್ಲಿವರಮದು ಪೋಯ್ತೆಲ್ಲಿರ್ದತ್ತೆಂಬ ವಾರ್ತೆಯನೊಂದಿರ ॥
ಲ್ದಿವಸದೊಳೆ ತನ್ನಿಂ ನೀಮೆಂದಟ್ಟಿದಂ ಸಮಕಟ್ಟಿಕ ।
ಟ್ಟವಧಿಗವನೀನಾಥಂ ಜಂಘಾಳಮಂ ಚರಜಾಳಮಂ ॥ ೧೦೭

ಅನಂತರಂ ತದ್ವಿಜ್ಞಾಪನದಿನನೇಕಪಂ ಭವದೀಯನಗರಿಯಂ ಪುಗುತಂ ದುದುಮಂ ದೇವರಾರೂಢವಿದ್ಯಾಪ್ರಭಾವದಿಂ ಕಂಭಕ್ಕೆ ತಂದುದುಮನಱಿದೆನದುಕಾರಣದಿಂ

ಇಭಪತಿಯದು ಮದವೆನಿಪ ।
ಲ್ಲಭಂಗೆ ವಲ್ಲಭಗಜೇಂದ್ರನನನಟ್ಟ ಭವ ॥
ತ್ಪ್ರಭುತೆಯುಮಂ ಬಂಧುಪ್ರೀ ।
ತಿಭಾವಮುಮನೆಯ್ದೆ ನೆಱಪಿ ಮೆಱೆವುದು ಜಸಮಂ ॥ ೧೦೩

ಮತ್ತಂ

ಪರಿಕಿಸೆ ಕಲ್ವ ಬಲ್ಲ ಸಮಯುಕ್ತಿಯಿನೆಟ್ಟಿರೆ ಬೇಗಮಂತದಂ ।
ಕರೆದಿರದೀವ್ರದುತ್ತಮತೆ ಬೇಡಿದೊಡೀವ್ರದು ಮಧ್ಯಮತ್ವಮೆ ॥
ಯ್ತರೆ ತದಧೀಶ್ವರಂ ಬಟಿಕಮಂತದನೀವ್ರದು ನೀಚವೃತ್ತಿ ದೇ ।
ವರ ಬಗೆಯೊಳ್ ವಿಚಾರಿಸುವ್ರದೆನ್ನಯ ಬಿನ್ನಪದೊಂದುಯುಕ್ತಿಯಂ ॥

ಪ್ರೊಕ್ಕೈಡೆಯನಾರಯಲ್ಕೆಂ ।
ದುಕ್ಕೆವಿಸಿದನಲ್ಲದಿನಿತುದಿನಮಿಭಪತಿ ಕೈ ॥
ಮಿಕ್ಕಿರೆ ತಡೆವನೆ ಕಡಲಂ ।
ಪೊಕ್ಕು ಕಲಂಕದೆ ಕುಳಾದ್ರಿಯಂ ಕಿಬಿದೆ ನೃಪಂ ॥ ೧೦೫

ಪೋರಿಪ ಬಿನದದಿನದಟೊಡ ।
ನೈರಾತಮುಂ ಕೊಳಕ್ಕೆ ಪರಿಯಿಡಲಾಶಾ ॥
ತೀರಕ್ಕೊಡರಿಪನೆನೆ ಕೈ ।
ಸಾರೆಯೊಳಿರೆ ಕರಿ ಬಟಿಕ್ಕೆ ಕೈದೆಗೆದಪನೇ ॥ ೧೦೬

ಆನೆಂದೆನೆನ್ನಿಮಿಂ ನೀ ।
ಮಾನೆಯನೀಯದೊಡೆ ಕದಡುಗುಂ ಕೊಳನಂ ಕಾ ॥
ಡಾನೆ ಪುಗುತಂದುದೆನೆ ನಿ ।
ಮ್ಮೀನಗರಿಯನೆಯ್ದೆ ಕನಸಿನಾನೆಯ ತೆಜದಿಂ ॥ ೧೦೭

ಎಂದು ತನ್ನಾಳ್ದನ ಬಲ್ಮೆಯನೆ ನಚ್ಚಿ ಬಿಚ್ಚತಂ ನುಡಿದ ದೂತನ ದುರಭಿಹಿತಂಗಳಂ ಭೂಪಾಲನೇಟಿಲಂಗೇಳ್ದು ಮಂದಸ್ಮಿತಮುಖಸರೋಜಂ ಯುವರಾಜನಂ ನಿರೀಕ್ಷಿಪ್ರುದುಮಾತನಾಕ್ಷಣದೊಳೊಗೆದ ರೂಕ್ಷಭಾವಮಂ ಸಹಜಗಾಂಭೀರ್ಯದಿನಳವಡಿಸಿ ಬಟಿಯುಮಿಂತೆಂದಂ:—

ಚಾರಣರುಂ ಚಾರರುಮಿ ।
ನ್ನಾರೇಗೆಯ್ದಪರೊ ನಮ್ಮನೆಂದುಸಿರ್ವ*ರಹಂ ॥
ಕಾರದಿನಾನುಡಿಗೆ ಮಹೋ ।
ದಾರಂ ಮತ್ಸ್ವಾಮಿಯಿನಿತು ಮುನಿಗುಮೆ ಮುನಿಯಂ ॥ ೧೦೮

ಬಗೆದೊಡೆ ಕೆಚ್ಚೆನಿಪ್ಪೊಲ್ ನಾ ।
ಲಗೆಯುತಿಪಟುವೆನಿಪ ನಿಮ್ಮ ದೊರೆಯರ್ ಸಚಿವರ್
ಮಿಗೆ ಪೊರ್ದಿರೆ ನಿಮ್ಮಯ ರಾ ।
ಜಗೃಹಂ ಪಿರಿದುಂ ವಿಭೂತಿಮಯಮಿನ್ನಕ್ಕುಂ ॥ ೧೦೯

ಗಜತುರಗರತ್ನಮಿಂತು ಭೂ ।
ಭುಜನಾಪ್ಪೊಂ ಪ್ರಬಲಪುಣ್ಯನವನನೆ ಸಾರ್ಗುಂ ॥
ನಿಜದಿಂದಮೆಂದು ಮಾಣ್ಬುದು ।
ಸುಜನತೆ ಪುಣ್ಯಕ್ಕೆ ಪುರುಡಿಪುದು ಗಾಂಪಲ್ತೇ ॥ ೧೧೦

ಅದಲ್ಲದೆಯುಂ,

ಕರಿಪತಿಯೆಮ್ಮ ಪುಣ್ಯಮೆ ನಿಷಾದಿಯುಪ್ಪೋಲ್ ತರೆ ಬಂದುದಾದೊಡಂ ।
ಪರಧನವೆಂತು ಬಂದೊಡಮಶೌರ್ಯಸಮಾರ್ಜಿತಮೇವುದೆಂಬ ಕೊ ॥
ಕ್ಕರಿಕೆಯಿನೀವ್ಪೊಡಂ ಜರಿವು ಬಂದಪೆನೆಂದೊಡೆ ಕೊಟ್ಟರೆಂಗುಮಾ ।
ಧರೆಯದಱಿಂದೆ ನಿಮ್ಮರಸರಿಂ ಬಿಡುಗಾನೆಯೊಳಾದ ಪಂಬಲಂ ॥ ೧೧೧

ಪಿರಿದುಂ ದಂಡೋಕ್ತಿಗಳನೆ ।
ಪರಿವಿಡಿಗೆಯ್ದು ತ್ವದೀಯಪತಿ ಕಲಿಸಿದುವಂ ॥
ಬರವೇೞಾತನನಿಂ ಜ ।
ಜ್ಜರಮೀನಯಸಿದ್ಧಿಯಲ್ತು ಸಚಿವಾಱುತ್ತಂ ॥ ೧೧೨

ಎನಗಂ ದೋರ್ದಂಡಕಂಡೂಹೃತಿ ಸಮನಿಸುಗುಂ ತನ್ನಪಂನಂ ಕಲಿ
ಲ್ಗುಂ । ಮನದೊಳ್ ತೊಟ್ಟಾಗ್ರಹಂ ಮದ್ವಿಭುಗಮಿಭುವರಂ ಶೌರ್ಯಸಂಲ
ಬ್ಧಮಕ್ಕುಂ ॥ ನಿನಗಂ ಚಿತ್ತಭ್ರಮಂ ಪಿಂಗುಗುಮಮರಗಣಕಂ ಮಹಾ
ಸಂಗರಾಲೋ । ಕನಸೌಖ್ಯಂ ಸಾರ್ಗುಮೀಧಾತ್ರಿಗಮೊದವಿಸುಗುಂ ವೀರ
ಭಾರಾವತಾರಂ ॥ ೧೧೩

ಅದುಕಾರಣದಿಂ ಪೃಥ್ವೀಪಾಳಯಾನಮನೆ ಮುಂದಿಟ್ಟು ನುಡಿದ ನಿನ್ನ ನುಡಿಯುಂ ನನ್ನಿಮಾಡೆಂದು ಮತಿಪ್ರಗಲ್ಭಂಗಳುಂ ಪ್ರತಾಪಗರ್ಭಂಗಳುಮಪ್ಪುತ್ತರಂಗಳಿಂ ದೂತಮುಖಮುದ್ರೆಯಂ ಪಡೆದಾತನಂ ಕಳಿಪೆ ಪದ್ಮನಾಭ

ಮಹೀಭುಜಂ ತತ್ಸಮಯೋಚಿತಕಾರ್ಯಪರ್ಯಾಲೋಚನಾಭಿರುಚ್ಯೆಮಾನಮಾನಸನಾಸ್ಥಾನಮಂ ವಿಸರ್ಜಿಸೆ ಸುವರ್ಣನಾಭಕುಮಾರನುಂ ಪುರಭೂತಿಮಂತ್ರಿಯುಮಲ್ಲಿಂ ತಳರ್ದು

ವಿರಹಿತಗವಾಕ್ಷಮಪ್ರತಿ ।
ವಿರಾವಮುಮಪಕೀರಶಾರಿಕಂಮೆನಿಸಿದುಪ ॥
ಹ್ವರಮಂ ಪೊಕ್ಕಂ ಕಂಚುಕಿ ।
ಪರಿಕ್ಷಿತಾಂತರ್ಬಹಿಃಪ್ರದೇಶೋಚಿತಮಂ ॥ ೧೧೪

ಅನಂತರಮಾಬದ್ಧಮಂಡಲಾಸೀನನಾಗಿರ್ದು ಸಚಿವಮುಖಮನತಿಪ್ರಸನ್ನದೃಷ್ಟಿಪಾತದಿನಭಿಮುಖಂಮಾಡಿ

ಅವಿರುದ್ಧಂ ನೃಪನೀತಿಗೆಂತುಮುಚಿತಂ ತಾನೀಪದಕ್ಕಾದಮು ।
ವ್ಯವಜೈತ್ರಪ್ರತಿಪಾದಕಂ ನಮಗೆನುದ್ವ್ಯಂಜ್ಯಂ ಜನಕ್ಕೆಂಬುದಂ ॥
ಯುವರಾಜಂಗೆನಗಂ ಪ್ರಿಯಾಪ್ರಿಯಮಿದೆಂದೇವೈಸದಿಚ್ಛೈಸದಾ ।
ಡುವುದುಳ್ಳಂತುಟನೆಂದು ಬೋಧಿಸಿದನೀಶಂ ಕಾರ್ಯತಾತ್ಪರ್ಯಮಂ ॥ ೧೧೫

ಆಗಳತಿಚತುರವಚನಂ ಸಚಿವನಿಂತೆಂದಂ:—

ವಿದಿತಂ ಪಂಚಾಂಗಮಂತ್ರಸ್ಥಿತಿ ಚತುರುಪಧಾಶುದ್ಧಿ ಸಿದ್ಧಿತ್ರಯಿಾಸಂ ।
ಪದಮಾಷಾಡ್ಗುಣ್ಯವೃತ್ತಂ ಚತುರಚತುರುಪಾಯಪ್ರಯೋಗಂ ತ್ರಿಶಕ್ತ್ಯಾತ್ತದೃಢತ್ವಂ ದೇವ ಮುನ್ನಂ ನಿಮಗದನನುವಾದಕ್ಕೆ ತರ್ಪೆನ್ನೊಳೊಂದಲ್ತೆ ದಿಟಕ್ಕಕ್ಕುಂ ವಿಶೇಷಂ ನಿಜನಿಪುಣಮನಃಕಾರ್ಯಸಂಸ್ಕಾರಕತ್ವಂ॥ ೧೧೬

ಮತ್ತಂ

ಅಱಿಯದುದನಱಿದುದುಮನೀ ।
ತೆಱದಿಂ ಶಿಕ್ಷಿಪ ಪರೀಕ್ಷಿಪುಜ್ಜುಗದೆನ್ನೊಳ್ ॥
ಕಿಱಿದಂ ಬೆಸಗೊಂಡಿರ್ ನೀ ।
ಮಱಿಯದುದೇನಂತುಮುಸಿರ್ವೆ*ನೆನ್ನಱಿವನಿತಂ॥ ೧೧೭

ಅದೆಂತೆಂದೊಡೆ— ಪೃಥ್ವೀಪಾಲಭೂಪಾಲಂ ಭವದೀಯದೇಶಾಸನ್ನಸ್ಥಿತಂಗೆಳಪ್ಪ ಪನ್ನೆರಡುಂ ಮಂಡಲಂಗಳೊಳಂತರ್ಧಿಯುಂ ಮಿತ್ರದ್ವಿತಯ-

ದೊಳ್ ಕೃತ್ರಿಮಮಿತ್ರನುಂ ಮತ್ತಂ ಷಡ್ಬಲಬಲಿಷ್ಠನುಂ ದುರ್ಗಪಂಚಕಸಮಗ್ರನುಂ ಅನುರಕ್ತೋಭಯಪ್ರಕೃತಿಯುಂ ಯಮಪಟಿಕಾದಿಗೂಢಪ್ರಣಿಧಿಪ್ರತ್ಯಕ್ಷೀಕೃತಕ್ಷಯವೃದ್ಧಿವಿಧಿತ್ರಯನುಮಾಗಿರ್ಪಂ. ಆತಂಗಂ ನಮಗಮೈದುಂ ತೆಱದ ವೈರದೊಳರ್ಥಸಂಭವಂ ವೈರಮಾಗಿಯುಂ ಅನ್ವರ್ಥಮಾತ್ರಮಲ್ತು. ಅವಂಗೆ ವಲ್ಲಭಗಜೇಂದ್ರಮಿರ್ಪುದು. ಆತನುಂ ತನ್ಮದೇಭಭ್ರಂಶದೊಳನುದಿನಾನ್ವೇಷಣಚಿಂತಾಪರತಂತ್ರತೆಯಿಂ ಮೂರ್ಖಭಾವಮನೆಮನದೊಳವಲಂಬಿಸಿರ್ಪಂ.ಅದುಕಾರಣದಿಂ ಮಂತ್ರೋಪಧಾಸಿದ್ಧಿಗುಣಶಕ್ತಿಗಳ್ಗೆ ಸಂಧೇಯನುಮಸಾಧ್ಯನುಮಾಗಂ. ಅವನೊಳನ್ನುಮುಪಾಯಂಗಳಂ ಪ್ರಯೋಗಿಸುವಿರಪ್ಪೊಡೆ

ಕಿಡುಗುಮುಪಪ್ರದಾನದೆ ಧನಂ ನಿಜಸೈನಿಕಹಾನಿ ದಂಡದಿಂ ।
ದೊಡರಿಕುಮೆಯ್ದೆ ಪೋರ್ದುಗುಮುಪಾಂಶತೆ ಭೇದದಿನಂತಱಿಂದಮಾ ॥
ಗಡಿನ ಪದಕ್ಕೆ ಸಾಮಮೆ ಸುಸಾಮ್ಯಮಣಂ ಪ್ರಿಯವಾಕ್ಯಮಂತ್ರದಿಂ ।
ಬಿಡುಗುಮದಲ್ಲದೇಂ ಬಿಡುಗುಮೇ ಮನಮಂ ಪಿಡಿದಾಗ್ರಹಗ್ರಹಂ॥ ೧೧೮

ಮತ್ತಂ

ಪೆರ್ಚೆ ಮನದಭಿನಿವೇಶಮೊ ।
ಡರ್ಚಿದ ದಂಡಮನೆ ಪೂಣ್ದು ಬರೆ ರಿಪು ನಾಮುಂ ॥
ಚರ್ಚಿಸೆ ದಂಡಮನದು ತನಿ ।
ಗಿರ್ಚಂ ಕಿರ್ಚಿಂದೆ ನದಿಪ್ರವಂತೆವೊಲಕ್ಕುಂ ॥ ೧೧೯

ಅರಯೆ ವಿಜಾತಿ ಮಲಿನಾ ।
ಕಾರಂ ಪರಪುಷ್ಟನಂತುಮದು ನಿಜಮಧುರೋ ॥
ದೀರಣದಿಂದಾಯ್ತು ಮನೋ ।
ಹಾರಿ ವಿರುದ್ಧನೆ ದಿಟಂ ಪ್ರಿಯಂವದನಾಗಂ ॥ ೧೨೦

ಅದಱಿನೀಸಾಹಸೋದ್ದಿಷ್ಟವಿದ್ವಿಷ್ಟನೊಳ್ ಸಾಮಜೋಪಾಯಮೆ ಪುರುಭೂತಿಕಾರಣಮೆಂದು ನುಡಿದ ಪುರುಭೂತಿಯ ನುಡಿಗೆ ಯುವರಾಜಂ ಸಾಜದೊಳೆ ಪೌರುಷಪ್ರಾಯನಪ್ಪುದಱಿನೊಡಂಬಡದೆ ಇದು ನಯಾಭಾಸಮುಮನುಚಿತೋಪನ್ಯಾಸಮುಮಾದುದೆಂದಿಂತೆಂದಂ:—

ಆನೆಯೊಳೞಿಪಂ ಬಿಸುಟ್ಟು ।
ಮೀನನುಣ್ಣುಡಿಗಳ್ಗೆ ಸಿಲ್ಕಿ ನಿಲೆ ಪ್ರಸಿಯುಕ್ಕುಂ ॥
ಕೋನಾವಮಾರ್ಥಾರ್ಥೀರ್ನ ನಮ ।
ನೇನ ತು ಪರಿತುಷ್ಟ್ಯವೆಂಬ ಮನುಮುನಿವಚನಂ ॥ ೧೨೧

ಅದಲ್ಲದೆಯುಂ

ಬಡವೆ ಪಡೆ ರೂಢಿಯೆಂಬಿವು ।
ಕಿಡುಗುಂ ತಾಮುಂಬಿದುಪಾಯದಿಂ ಸಾವುವುನಿಂ ॥
ನುಡಿವೆಯೊಡಂಬಡದಂದವ ।
ರೊಡವೆಯನವಗಿರ್ನ*ವುದೆಂಬ ತೆಱನಿದು ಪೆಱದೇಂ ॥ ೧೨೨

ಎಂದು ವರ್ಣದೆ ಪೂರ್ವಪಕ್ಷಾನಂತರಂ ಮುದ್ರಿಸಿದ ನೀತಿಸರ್ವಸ್ವ ಕೋಶದಂತೆ ಮಂತ್ರಿಹೃದಯಪರೀಕ್ಷಾನಿಮಿತ್ತಮುಸಿರದಿರ್ದ ಜನಕನ ವದನಮಂ ನೋಡಿ

ಸಮನಿಸಿದತ್ತ ಪ್ರತಿಷಿ ।
ದ್ಧಮನುಮತಂ ಭವತಿಯೆಂಬ ನುಡಿಯಿಂದೀಕಾ ॥
ರ್ಯಮೆ ದೇವರ ಮನದೊಂದು ।
ದ್ಯಮಮೆಂಬಱಿವಾಯ್ತು ಸುಕ್ತ ಸಿದ್ಧಮದೆನಗಂ ॥ ೧೨೩

ಮತ್ತಮೆತ್ತಾನುಂ

ಪರಕರಿ ನಷ್ಟವಸ್ತುವಪರಾಕ್ರಮಲಬ್ಧಮಿದೇವುದೆಂಬನಾ ।
ದರದೆ ತದರ್ಪಣಕ್ಕೆ ಬಗೆದಂದಪಿರಪ್ಪೊಡೆ ನೀಮೆ ಬಂದು ಪಿಂ ॥
ತಿರೆಯಿರೆ ನಾಳೆ ಕಾಳೆಗದೊಳಾಂತನನಂತಕದಂತಕೋಟಿಕೋ ।
ಟರದೊಳೆ ತೂಂತಿ ದಂತಿಗೆ ಭುಜಾರ್ಜಿತಮೆಂಬುದನುಂಟುಮಾಡುವೆಂ ॥

ಎಂದು ಮತ್ತಮಾಶಂಕೋತ್ತರಮನಿಂತೆಂದಂ:— ಇದುಪ್ರಮಂ ಪ್ರಷ್ಪೆಲ ರಪಿನಯೋದ್ಧವ್ಯಮೆಂಬ ನುಡಿವಿಡಿದತಿಕ್ರಮಿಸಿ ವನಕೇಳಿಯಂ

ಬಪ್ಪಿಸುವೆನೆಂಬೊಡಾನಿರ ।
ದೊಪ್ಪಿಸುವೆಂ ಪರಮದೀಕ್ಷೆಗೆನ್ನಯ ತನುವಂ ॥

ತಪ್ಪೆತ್ತಲಾನುಮಿಾನುಡಿ ।
ಗಪ್ಪೊಡೆ ನಿಮ್ಮಾಣೆಯಿಟ್ಟ ನುಡಿಗೊಡನಕ್ಕುಂ ॥ ೧೨೫

ಅಂತು ಪರಾಕ್ರಮಾದಿಯುಂ ಪ್ರತಿಜ್ಞಾಂತಮುಮಾಗೆ ಯುವರಾಜಮೃಗರಾಜಂ ಗರ್ಜಿಸಿ ನಿಲಲೊಡಂ,

ವ್ಯಕ್ತಂ ಸಾನುಮಯುಮಮಾ ।
ತ್ಯೋಕ್ತಿ ಸಮುಚ್ಚಂಡದಂಡಮಯಮಿತ್ತಲಪೆ ॥
ತ್ಯೋಕ್ತಿಯಿವೆರಡುಮನನುಸರಿ ।
ಪುಕ್ತಿಯೆ ವಕ್ತವ್ಯಮೆನಗೆ ಸುಘಟಿತಭಾವ್ಯಂ ॥ ೧೨೬

ಎಂದು ಬಗೆಯೊಳ್ ಬಗೆದು ಪದ್ಮನಾಭನುಹೀಭುಜಂ ಜಿನಮತದಂತುಭಯನಯಾವಿರುದ್ಧಮಂ ವೃಜಿನವಿಘಟನಕ್ಷಮುಮಂ ಪರಿಣಾಮಪಥ್ಯಮುಮಪ್ಪ ಕೃತ್ಯಮಂ ನಿಜಮನಶ್ಚತುರಸಚಿವಸಹಸಮಾಲೋಚದಿಂ ಕಂಡು

ರಿಪುಗಪಜಯಮಂ ಮನ್ಮಂ ।
ತ್ರಿಪುತ್ರರಿರ್ವರ ಮನಕ್ಕಮನುನಯಮಂ ಭಾ ॥
ವಿಪುದರ್ಕಾತಿಶಯಮಂ ಮಾ ।
ಟ್ಪುಪಾಯಮಿನ್ನೆನಗೆ ತಾನೆ ದಲ್ ಪ್ರತಿಯಾನಂ ॥ ೧೨೭

ಎಂದು ನಿಶ್ಚೈಸಿ ಬಚಿಯಂ ಸಕಲಪ್ರಯೋಜನಕಂ ಕಾರ್ಯಸಮವಾಯಿಗಳೊಳೈಕಮತ್ಯಮೆ ಮೊದಲೊಳ್ ಕೃತ್ಯಮಪ್ಪುದಱಿನವರಿರ್ವರುಮನೊಡಂಬಡಿಸಲೆಂದಿಂತೆಂದಂ:—

ಹಿಮಜಲಲವನುಂ ಸೂಸು ।
ತ್ತುಮಂಬುದಂ ಸಿಡಿಲನುಗುಟ್ವಿವ್ರೆಲ್ ಸಾಮಮುಮಂ ॥
ಕ್ರಮದಿಂ ದಂಡಮುಮಂ ನಾ ।
ಮುಮೊಡರ್ಚುವಮುಱಿದು ದೇಶಕಾಲೋಚಿತಮಂ ॥ ೧೨೮

ಎಂದು ಲಬ್ಧಾನುಮತನನಂತರಮಾತ್ಮೀಯಪ್ರತಿಭಾಪ್ರಸನ್ನದರ್ಪಣಪ್ರತಿಫಲಿತಕಾರ್ಯಸ್ವರೂಪಮನಿಂತೆಂದಂ:—

ಆತನ ಯಾನವಿಗ್ರಹದ ಮಾತನೆ ಪ್ರಣಿಧಿಮಾಡದಾಡಿದಂ ।
ದೂತನದರ್ಕೆ ತಕ್ಕುದಭಿಷೇಣನಮೊಂದೆ ನಯಂ ಮನಕ್ಕಭಿ ॥
ದ್ಯೋತಿಸುತಿರ್ದುದಂತದನೆ ಮುನ್ನೆಗಳ್ವಿಂ ನೆಗಳ್ದಿಂಬಳಿಕ್ಕಮಿ ।
ನ್ನೇತೆಱದಿಂದಮಾಗ್ರಹಮಡಂಗುಗುಮಂತುಟನಂದೆ ಚಿಂತಿಪಂ ॥ ೧೨೯

ಅಂತೈಕಮತ್ಯಮಪ್ಪ ಕೃತ್ಯಮಂ ನಿಶ್ಚೈಸಿ ಕುಮಾರನಂ ಮಂತ್ರಿವರರನುಮಂ ವಿಸರ್ಜಿಸಿ,

ಇದಮೋಘಂ ಕಾರ್ಯಸಿದ್ಧಿಪ್ರಮದೆಗೆ ಕುಲಗೇಹಂ ಮತಿಶ್ರೀಗೆ ನೃ
ತ್ಯಾಸ್ಪದಮನ್ಯಕ್ಷ್ಮಾಪಲಕ್ಷ್ಮೀಲಲನೆಗೆ ಕೃತಸಂಕೇತಸದ್ಮಂ ದಲೆಂಬಂ ॥
ದದ ಮಂತ್ರಾಗಾರದಿಂದಂ ಕ್ಷಿತಿಪತಿ ಪೊಱಮಟ್ಟಂ ವಿಶಿಷ್ಟಾರ್ಥಶಾಸ್ತ್ರೀ ।
ಷ್ಟದೃಢೀಭೂತಾತ್ಮಕೃತ್ಯಂ ಕವಿಕುಲಕಲಭವ್ರಾತಯೂಥಾಧಿನಾಥಂ ॥ ೧೩೦

॥ ಗದ್ಯಂ ॥

ಇದು ಪರಮಪುರುನಾಥಕುಲಭೃತ್ಸಮುದ್ಭೂತಪ್ರವಚನಸರಿತ್ಸರಿನ್ನಾಥ
ಶ್ರುತಕೀರ್ತಿತ್ರೈವಿದ್ಯಚಕ್ರವರ್ತಿ ಪದಪದ್ಮನಿಧಾನದೀಪವರ್ತಿ

ಶ್ರೀಮದಗ್ಗಳದೇವ

ವಿರಚಿತಮಪ್ಪ

ಚಂದ್ರಪ್ರಭಪುರಾಣದೊಳ್

ಪದ್ಮನಾಭಮಹೀಶಮಂತ್ರಾಲೋಚನಂ

ನವಮಾಶ್ವಾಸಂ.

ಶ್ರೀಗಂ ವಿದ್ವಿಡ್ವಿಜಯ |
ಶ್ರೀಗಮಿದಾಕೃಷ್ಟಮಂತ್ರಮೆನಿಸಿದ ಮಂತ್ರೋ ||
ದ್ಯೋಗದಿನಿರ್ದಂ ನೃಪಸುಪ |
ಯೋಗಪರಂ ಜೈನಜನಮನೋಹರಚರಿತಂ || ೧

ಅನಂತರಂ ತಂತ್ರಾಧ್ಯಕ್ಷನಂ ಬರಿಸಿ ಬೆಸಸುವುದುಮಾತಂ ವಿಜಯಪ್ರಯಾಣಭೇರಿಯಂ ಪೊಯ್ಸಿದಾಗಳ್

ದಿಕ್ಕರಿಕರ್ಣಕೋಟರದೊಳುಳ್ಕಿ ಕುಲಾಚಲಸುಪ್ತಸಿಂಹಸಂ |
ಘಕ್ಕಿರದೆಚ್ಚಱುಂ ಪಡೆದು ಸೂರ್ಯಹಯಂ ಭಯಮುತ್ತು ಕುಂಬಿ ಧೀಂ ||
ಕಿಕ್ಕುವಿನಂ ನಭಕ್ಕಡರ್ದು ಮಾಣ್ದದೆ ಮಿಕ್ಕ ಜಗತ್ಪ್ರದೇಶಮಂ |
ಮುಕ್ಕಳಿಸಿತ್ತು ಮತ್ತೆ ಜಯಭೇರಿಯ ಭೂರಿಗಭೀರನಿಸ್ವನಂ || ೨

ಆಗಳ್ ಭೇರೀರವಸಮಾಕರ್ಣನಸಸಂಭ್ರಮಪ್ರಾಪ್ತಕತಿಪಯಾಪ್ತಪರಿವಾರಪರಿಕ್ಷಿಪ್ತನುಂ ಪ್ರರೂಢಪಟ್ಟವರ್ಧನಗಂಧಸಿಂಧುರಾರೂಢನುಂ ಪ್ರಸಾದಿತವಿಲಾಸಿನೀಜನಸಮೇತನುಂ ನವೀನನೇಪಥ್ಯರಚನಾದ್ವಿಗುಣಿತಾತ್ಮೀಯಮನೋಹರಾಕಾರಸೌಂದರ್ಯನುಂ ಆತ್ಮೀಯಪುರೋಹಿತೋಪದಿಷ್ಟಮುಹೂರ್ತದೊಳ್ ಪದ್ಮನಾಭಮಹಾರಾಜಂ ಯುವರಾಜಂಬೆರಸು ರಾಜಮಾರ್ಗದಿಂ ಪ್ರಸ್ಥಾನಶಿಬಿರಕ್ಕೆ ನಡೆವಾಗಳಾಲೋಕನಕುತೂಹಲಿತಮಾಗಿ

ನಾರೀಲೋಕಮಿದೆಂಬಿನಂ ನೆರೆದು ಬಂದತ್ತತ್ತಮುತ್ತಂ ಸಮಾ |
ನೋರೋಜದ್ವಯಸನ್ನತಾರಮಣಿಹಾರಂ ಸ್ಮೇರಸಾರೋದ್ಗಮೋ ||
ದ್ಗಾರಿಸ್ರಸ್ತಕಚಂ ಕನನ್ಮಣಿನತಂಸಾಸ್ಫಾಲಿತಾಂಸಂ ಲಸ |
ದ್ದೋರಾಂದೋಳನಜಾತಕಂಕಣರಝಣತ್ಕಾರಂ ಪುರಸ್ತ್ರೀಜನಂ || ೩

ಅಂತು ಬಂದು

ಲೋಲತೆಯಿಂದೀಕ್ಷಿಪ ಗಣಿ |
ಶಾಲಿಯಪಾಂಗತ್ರಿವರ್ಣರುಚಿಗಳ್ ನೀಳ್ದೀಂ ||

ಲೀಲೆಯನಾಂತು ಪೊ ಮುತ್ತಿನ ।
ನೀಲದ ಮಾಣಿಕದ ತೋರಣಂಗಳ ತೆಱದಿಂ ॥ ೪

ಆಗಳೊರ್ವಳ್ ಪೂರ್ವವಿಲಾಸವತಿ,

ಪಿಳಿಸೆ ಪುರ್ವುದೂರ್ವೆಯನುರೋರುಹವುಜ್ಜ್ವಲಕುಂಭಶೋಭೆಯಂ।
ಪೊಳಿಸೆ ಲೋಚನಾಂಶು ಮಿಗೆ ಲಾಜೆಯನಾಜಯಕೇತುಲೀಲೆಯಂ ॥
ಪಿಳಿಸೆ ಮೇಲುದಂದುಗೆಯ ನುಣ್ದನಿ ದುಂದುಭಿರಾವಗಂದಮಂ ।
ಚಾಳಿಸೆ ಬಂದು ತದ್ಗಮನಮಂಗಳಲಕ್ಷ್ಮಿವೊಲಂದು ನೋಡಿದಳ್ ॥ ೫

ಮತ್ತೊರ್ವಳ್

ಪದನಖಕಾಂತಿ ಪುಷ್ಪರಥದಂತಿರೆ ನೂಪುರದಿಂಚರಕ್ಕೆ ಸೋ ।
ಲದಿನೊಡವರ್ಪ ಹಂಸೆಗಳೆ ಪೂಡಿದ ಹಂಸೆಗಳಂತೆ ತೋಱೆ ಮೇ ॥
ಲುದು ಝಷಕೇತುವಂ ಮಿಗೆ ಮನೋಜವನೋಹರಿಯೇಱೆಬರ್ಪವೊಲ್।
ಸುದತಿ ವಿಲಾಸದಿಂದೆ ನಡೆತಂದು ನಿರೀಕ್ಷಿಸಿದಳ್ ನೃಪಾಲನಂ ॥ ೬

ನೋಡುವ ಲಂಪಿನಿಂ ನೆಱೆಯೆ ಕೈಗೆಯಲುಂ ಮಱೆದೊಂದೆ ಕಣ್ಣ ನು ।
ಣ್ಗಾಡಿಗೆಯೊಂದೆ ಕರ್ಣದ ಕನನ್ಮಣಿಕುಂಡಲವೊಂದೆ ಕೆಯ್ಯ ಪೊಂ ॥
ಜಾಡಗವೊಂದೆ ಕಾಲ ಮಿಸುಪಂದುಗೆಯೊಪ್ಪಿರೆ ಬಂದೊಡಂದು ಱೋ ।
ಡಾಡಿದುದರ್ಧನಾರಿಯಿವಳೆಂದು ಸಖೀಜನವೆಯ್ದೆ ನಾರಿಯಂ ॥ ೭

ಅದಲ್ಲದೆಯುಮೊಂದುರಾಜವೀಧೀಸವಿಧಸೌಧದೂರ್ಧ್ವದೊಳಿರ್ದು

ಸಕಲೋರ್ವೀಪತಿಗೊರ್ವಳೆಂದು ಮೆಱೆದಳ್ ಯಾನಶ್ರಮಶ್ವಾಸವಂ ।
ಶುಕಮಂ ತೂಳ್ದೆ ಘನಸ್ತನದ್ವಿತಯಮಂ ಗೋಯರ್ಗ್ಮದಿಂ ಮುಚ್ಚು ವು ॥
ತ್ಸುಕತಾವ್ಯಾಜದಿನಪ್ಪಿನೊಂದು ಚದುರಂ ಬೇಱೊರ್ಮೆ ತಾಂಬೂಲವೀ ।
ಟಿಕೆಯಂ ಮೆಲ್ಲನೆ ಖಂಡಿಪೊಂದು ನೆವದಿಂದಂ ಚುಂಬನಪ್ರಾರ್ಥಿಯಂ ॥ ೮

ಆಮನೋಜವಿಜಯಲಕ್ಷ್ಮಿಯಲ್ಲದೆಯುಂ ಗಭೀರಶ್ವರಿ ಮತ್ತೊರ್ವಳ್ ಯ್ದೆವರ್ಪಾಗಳ್

ಶ್ವಸಿತಕೃತೋಪಕಾರಭರದಿಂದಳಿಮಾಳಿಕೆ ಕಾಂತೆ ಕೇದುಗೆಂ ।
ಭಿಸಿಲೊಳೆನುತ್ತು ಮೆಯ್ದೆ ಮಱೆಯಾಯ್ತೆನೆ ಕುಂತಳಸೌರಭಕ್ಕೆ ಪೇ॥

ಪ್ಪಿಸಿದುದು ಯಾನಸೌವ್ಯದೊಲವಿಂ ನೆಲನುಪ್ಪಡಿಪಂತೆ ಮುಂದೆ ಸಂ।
ಧಿಸಿದುದು ನೂಪುರಸ್ವನಸಮಾಹೃತಗೇಹವ-ರಾಳಮಂಡಲಂ ॥ ೯

ಮತ್ತೊಂದೆಡೆಯೊಳೊರ್ವಳ್

ನಡೆ ಮದನೇಭದೊಂದು ನಡೆಯಂ ನಗೆ ಚಿತ್ತಜವಾಜಿವಾಲಮಂ।
ಮುಡಿ ಬಿಡುತಂದು ಪೋಲೆ ವೊಲೆ ಮನ್ಮಥಕೇಳಿರಥಾಂಗಲೀಲೆಯಂ॥
ಗೆಡೆಗೊಳೆ ಕಂತುಷಟ್ಪದಪದಾತಿಯನಾಕುರುಳೋಳಿ ಪೋಲ್ತು ನೇ।
ರ್ಪಡೆ ಪಡೆದಳ್ ನಿಜಾಂಗದೊಳೆ ಚೆಲ್ವನನಂಗನ ಚಾತುರಂಗದಾ॥ ೧೦

ಅದಲ್ಲದೆಯುಂ

ಇವಳವಲೋಕನಾಕುಳತೆಯಿಂದಱಿಯಳ್ ಪರಿವಾಗಳಂತು ಬ।
ಳ್ಕುವ ನಡು ಮಧ್ಯದಿಂದುಡಿಗುಮೆಂದು ಘನಸ್ತನಯುಗ್ಮಮಂಜಿದಂ॥
ತೆಪ್ಪೊಲೆನಸುಂ ಕದಕ್ಕದಿಸೆ ಸೋರ್ಮುಡಿಯುಂ ಭರಭೀತಿಯಿಂದೆ ಸೂ।
ಸುವ ತೆಱದಿಂದೆ ಮಾಲೆಯನುಗುಟ್ಟಿರೆ ಬಂದಳದೊಂದು ಲೀಲೆಯಿಂ॥ ೧೧

ಮುಂದೊಂದೆಡೆಯೊಳೊರ್ವಳವನಿಪಾಲರೂಪವಿಲಾಸದರ್ಶನೈಕಲಾಲಸೆ

ಪಗಲನಿರುಳ್ಗೆ ಮಾಱೆ ನಯನಾಂಚಲಚಂದ್ರಿಕೆ ಯಾನಲೀಲೆ ಹಂ।
ಸೆಗೆ ಗುರುವಾಗೆ ಸುಯ್ಯು ನಱುಗಂಪಳಿಯಂ ಸೆಱೆಗೆಯ್ಯೆ ಕೊರ್ಬಿ ಮೇ॥
ಗೊಗೆದ ಕುಚಂ ನಿಜಾಂಶುಕಮನೀಡಿಱಿದಾಡೆ ವಿಭೂಷಣಾಂಶು ದಿ।
ಟ್ಟಿಗೆ ಸುರಚಾಪಮಂ ಕೆದಱೆ ಬಂದಳನಂಗನ ಲಕ್ಷ್ಮಿಯಂದದಿಂ॥ ೧೨

ಆಸಮಯದೊಳ್

ಬಂದೆ ಶಶಿಬಿಂಬಮೀಜಗ।
ದಿಂದೀವರಚಯಮನೈದೆ ತಣಿಸುವ ತೆಱದಿಂ॥
ದೊಂದೆ ನೃಪಾಸ್ಯಂ ತಣಿಸಿದು।
ದಂದಖಿಳಪುರಾಂಗನಾವಿಲೋಚನಚಯಮಂ॥ ೧೩

ಅಂತು ಸಕಲನಗರನಾರೀಜನಮನಃಕಟಾಕ್ಷೈಕಲಕ್ಷ್ಯನಾಗಿ ನಡೆವಲ್ಲಿ

ಏಱಿದ ಸಂತವಿಟ್ಟ ಗಜಮಭ್ರಗಜಕ್ಕೆಣೆಯಾಗೆ ವಜ್ರಮಂ ।
ಮೀಱಿ ಕರಾಗ್ರದೊಳ್ ಪಳಕಿನಂಕುಶವಿಟ್ಟ ನಿಜಪ್ರದೇಶದೊಳ್ ॥
ತೋಱುವ ಪೌರನಾರಿಯರ ಕಣ್ಬೊಳೆಪಕ್ಷಿಸಹಸ್ರಶೋಭೆಯಂ ।
ಬೀಱಿ ಸುರೇಂದ್ರನಂ ವಿಭವದಿಂ ಗೆಲೆವಂದು ನರೇಂದ್ರನೊಪ್ಪಿದಂ ॥ ೧೪

ಅದಲ್ಲದೆಯುಂ

ಗಡಣಿಸಿದತ್ತಿದೊಂದು ಶಶಿಬಿಂಬಮದೊಂದು ಸುಧಾಂಶುಲೇಖೆ ಚೆ ।
ಲ್ವಡರೆ ನವೇಂದುಕಾಂತಮಣಿದಂಡಯುಗಾಗ್ರದೊಳೆಂದು ವಿಸ್ಮಯಂ ॥
ಬಡೆ ನಡೆ ನೋಡಿ ಪೌರನಿಕರಂ ಕರವೊಪ್ಪಿದುದೆತ್ತಿ ನಿಂದ ಬೆ ।
ಳ್ಗೊಡೆ ಪಿಡಿದಿರ್ದುದ ಪಜ್ಜಳಿಸುನುಂಕುಶವಂದು ಧರಾಧಿನಾಥನಾ ॥ ೧೫

ತೋರಣದರ್ಪಣದೊಳ್ ಚಮ ।
ರೀರುಹಮಂ ನೃಪತಿಗಿಕ್ಕುವಬಲೆಯರ ನೆಟಿಲ್ ॥
ರಾರಾಜಿಸಿದುವು ರಿಪುರಾ ।
ಜೇರಾಜ್ಯಶ್ರೀಸಮೂಹಮಿದಿರ್*ಗೊಂಡಿರವಂ ॥ ೧೬

ಮತ್ತಂ

ಮಿಳಿರೆ ಸೆಱಂಗು ವಾಯುವಶದಿಂ ಪಟದಂತೆ ಮುಖಪ್ರದೇಶದೊಳ್ ।
ಪೊಳೆಯೆ ವಿಲೋಚನಂ ಝಷನಿಕಾಶತೆಯಿಂ ತನು ಹೇಮದಂಡದಂ ॥
ತಳವಡೆ ಶಂಬುಕಂಬೊಲಿರೆ ರಾಜ್ಞಿ ವಿರಾಜಿಸಿದಳ್ ನೃಪಾಂತದೊಳ್ ।
ಲಳನೆ ಬರುತ್ತೆ ಚಿತ್ತಜನ ಪಕ್ಕದೊಳೆತ್ತಿದ ವೈಜಯಂತಿವೊಲ್ ॥ ೧೭

ಅಂತು ಸಕಲಮಂಗಳಸಂಚಯಮಪ್ಪ ರತ್ನಸಂಚಯಪುರವಂ ಪೊಱಮಟ್ಟು ನಡೆದು ಬಱಿಯಂ ಕ್ರೋಶದ್ವಿತಯಮಾತ್ರದೊಳ್ ಪ್ರಸಿದ್ಧದೂಷ್ಯಮಾಗಿಯುಮದೂಷ್ಯಮುಂ, ನಿಶಾಂತಸ್ಫಾರಚಾರುತ್ವಮಾಗಿಯುಂ ಅನಿಶಾಂತಸ್ಫಾರಚಾರುತ್ವಮುಂ, ಬಲವೀರಜನೋಪೇತಮಾಗಿಯುಂ ಅಬಲವೀರಜನೋಪೇತಮುಂ, ವಿಶಾಲಪರಿಧಿಯಾಗಿಯುಂ ಅವಿಶಾಲಪರಿಧಿಯೆನಿಸಿ ಗೃಹಮುಹತ್ತರಂ ಮುನ್ನಮೆ ಸಮೆದುದಂ ಪ್ರಸ್ಥಾನಶಿಬಿರಮಂ ಪೊಕ್ಕು ಯಥೋಚಿತಪ್ರಸಂಗದಿನಂದಿನ ದಿನಸಮಂ ಕಳಪಿ ಮಱುದೆವಸಂ ಮಿಳಿತಮಹೀಭೃತಕಶ್ರೇಣಿಮಿತ್ರಾಮಿತ್ರಾಟವಿಕಪಹಳಬಲಸಮೇತಂ ನಡೆವಾಗಳ್

ಸುವಿವೇಕಾಕೃತಿ ಮಂಗಳಾವಸರಯೋಗ್ಯತ್ವಂ ಲಸದ್ರಾಜಚಿ ।
ಹ್ನವಿಶೇಷೋನ್ನತಿ ನಿರ್ಮಳಂ ಸಮನಿಕುಂ ಬನ್ನಿಂ ಜಡವ್ಯಾಪ್ತಿ ಪಿಂ ॥
ಗುವುದರ್ಕೆಂದು ಸಮುದ್ರಶಂಖನಿಕರಂಗಳ್ಗೆಂದು ಪೇೞ್ವಂದದಿಂ ।
ಶಿವಿರಾಭ್ಯುತ್ಥಿತಕಾಹಳಾಘನರವಂ ಮುಟ್ಟಿತ್ತು ದಿಕ್ಪಾರಮಂ ॥ ೧೮

ಎನ್ನಂದದೆ ತನಗೆರಸ ।
ತ್ವನ್ನಿತ್ಯವೆನುತ್ತೆ ಬೆಸೆವ ಪೃಥ್ವೀಪಾಲಂ ॥
ಗಿನ್ನರಿದಾಯ್ತೆಂದಾಕಾ ।
ಶನ್ನಗುವಂತಾಯ್ತು ನೂನಭೇರೀಧ್ವಾನಂ ॥ ೧೯

ನೆರೆದೇೞ್ತೆಂದತ್ತು ಕಲ್ಲೋಲರವಮಯಮುಸನ್ಮುಹೋದ್ಭಟಂ ಭರ್ಮ ವರ್ಮೋರ್ ।
ತ್ಕರದೀಪ್ತಿವ್ಯಾಪ್ತಮುದ್ಯದ್ಭಿರುದನಿಗಡರ್ಝುಂಕಾರಘೋರಂ ಮಹಾಸಂ ॥
ಗರಕೇಳೀಲಾಲಸಂ ಭಾಸುರಬಹುವಿಧಮುಕ್ತಾಮಮುಕ್ತಾವಿಮುಕ್ತೋ ।
ದ್ಧರದೋರ್ಯಂತ್ರಪ್ರಮುಕ್ತಾಯುಧನಿಧಿಗಣನಾಶೂನ್ಯಪಾದಾತಸೈನ್ಯಂ ॥ ೨೦

ರಥಕಲ್ಪಾನ್ವಿತಶೂರಸಾರಥಿಸನಾಥಂ ವಿಭ್ರಮನ್ನೇಮಿನಿ ।
ರ್ಮಥಿತಾನೇಕಶಿಲಾತಳಂ ಚಪಲಯುಗ್ಯಾಶ್ವಪ್ರತಾವೇಗವೇ ॥
ಪಥುಮತ್ಕೇತುಪಟಂ ತನುತ್ರಶಿತಶಸ್ತ್ರಾಸ್ತ್ರಾದಿತಂತ್ರೋತ್ಕರ ।
ಗ್ರಥಿತಂ ಬಂದುದು ರಥ್ಯಮಾತ್ಮರಥಿನೀಸೈಪಥ್ಯಶೋಭಾವಹಂ ॥ ೨೧

ಘನಘೋಷಾತ್ಯಂತಭೀಷ್ಮಂ ವಿಧೃತವಿಲಸದಾವರ್ತಜಾಲಂ ಸ್ಫುರತ್ಫೇ ।
ನನಿಕಾಯೋದಾರಮುದ್ಯತ್ಕಿರಣಮಣಿಗಣಾಯೋಗರಮ್ಯಂ ಬೃಹತ್ಸ ॥
ತ್ವನಿಯುಕ್ತಂ ವ್ಯಕ್ತಮತ್ಸ್ಯಪ್ಲುತಗತಿ ವಿಚರದ್ವಾಡವಂ ಚಾರುವಾರಾ ।
ಶಿನಿಕಾಶಂ ತನ್ಮಯಾಶಂ ನಡೆದುದು ವಿತತಾಶ್ವೀಯಮುರ್ವೀಶ್ವರೀಯಂ ॥

ಬಲವಚ್ಚಾಪಧರಂ ಸಭದ್ರಮೃಗಸಂದೋಹಂ ಗಳದ್ಗಂಡಮಂ ।
ಡಲವಿಭ್ರಾಜಿ ಸಮುಚ್ಚಲತ್ಕದಳಿಕಂ ಪ್ರೋದ್ವಂಶಮುಕ್ತಾಸಮು ॥
ಜ್ಜ್ವಲದಂತಂ ದೆಸೆಯಂ ಮುಸುಂಕಿ ನಡೆದತ್ತೆಂತೆಂದು ತದ್ಭೂರಿಭೂ ।
ತಲಪಾಲೋದ್ಧುರಸಿಂಧುರೋತ್ಕರಚರದ್ವ್ಯಾನೀಲಭೂಭೃತ್ಕುಲಂ ॥ ೨೩

ಧರೆ ಕರಿಕುಳವಂಶೋತ್ಕರ ।
ಮರದವಚಯಮಂ ಬಿಳ್ದಸಮುದಯಮಂ ನೆಡೆವೆಡೆಯೊಳ್ ॥
ಕರಿಮಯಮಶ್ವಮಯಂ ಮ ।
ತ್ತುರದಮುಸುಂ ಬಿಳ್ದಮಯಮಂದೆನಿಸಿದುದನಿಶಂ ॥ ೨೪

ಜವದಿಂದಾಗಸದೊಳ್ ಪಾ ।
ಱುವ ಪಕ್ಕಿಯುಮಂತುಗಾಣಲಣಮಾಱದೆ ತೇಂ ॥
ಗುಮ್ರದು ಪತಾಕಾಗ್ರದೊಳೆನೆ ।
ಪವಣಿಸಲಾನಱಿಯೆನತುಳಮಂ ತದ್ಬಲಮಂ ॥ ೨೫

ಅದಲ್ಲದೆಯುಂ

ಪಟಿಯಿಗೆ ಮಿಂಚನೇಳಿಸೆ ವಿಭೂಷಣಕಾಂತಿ ಸುರೇಂದ್ರಚಾಪಮಂ ।
ಪಱೆಯೆ ಗಭೀರದುಂದುಭಿರವಂ ಮೊಳಗಂ ಮಿಗೆ ಮೇಘಡಂಬರಂ ॥
ಘಟಿಯಿಸೆ ಮೇಘಡಂಬರಮನೇಂ ಕಱೆದತ್ತೊ ವಿಭೀತಿಯೆಂಬ ಪೆ ।
ರ್ಮಳೆಯನರಾತಿಗಾಗಮನಮಂಬುಧರಾಗಮನಂದಮೆಂಬಿನಂ ॥

ಅಮಿತಚತುರಂಗಸೇನಾ ।
ಗಮನದೊಳುತ್ತುಂಗಜಂಗಮಪ್ರಾಕಾರ ॥
ಭ್ರಮಮಂ ಪಡೆದುದು ತತ್ಪದ ।
ಸಮುತ್ಥಿತಂ ಬಳಸಿ ಬಹಳಧೂಳೀಪಟಲಂ ॥ ೨೬

ಮತ್ತಂ

ಇದಘರ್ಮತೂರ್ಜಿತಂ ಭೂಗೃಹಮಿದನನುರಾಗಾಂಧಪಾತಾಳಮಂತ ।
ಲ್ತಿದನಗ್ನಿಪ್ರೋತ್ಥಧೂಮಾವಳಿಯಿದಜಲನಿಷ್ಯಂದಿಮೇಘೌಗಮಂ ತಾ ॥
ನಿದನುದ್ವೃತ್ತಾರಕೌಘಂ ಬಹಳನಿಶೆಯೆನಿಪ್ಪಂತು ಪರ್ವಿತ್ತು ಸೇನಾ ।
ಪದಪಾತೋದ್ಧೂತಮುತ್ಪಾದಿತದಿನಕೃದಪೂರ್ವೋಪರಾಗಂ ಪರಾಗಂ ॥ ೨೭

ಆತತಸೈನ್ಯರಜಸ್ಸಂ ।
ಜಾತತಮೋವಿಕೃತಿ ತೊಳ್ದುದುದು ಸತ್ವಮುಮಂ ॥
ಖ್ಯಾತರಿಪುಭೂಮಿಪಾಲ ।
ವ್ರಾತಕ್ಕಾಶ್ರಯವಿಶೇಷಮೇಂ ಕೇವಲಮೇ ॥ ೨೮

ಆಗಳ್

ಬಿಸಿಲಂ ನಾನಾತಪತ್ರಂ ಮಸುಳಿಸೆ ಸಿತಖಡ್ಗಪ್ರಭಾಮಂಡಲಂ ಕೊ।
ರ್ವಿಸೆ ರೋದೋವಾತಮಂ ಕೇತುತತಿ ತೆಗೆಯೆ ತಚ್ಛಾವರೋತ್ಥಾನಿಲಂ ಪ।
ರ್ವಿಸೆ ಮಾರ್ಗಾನೇಕತೋಯಾಶಯಮನುರುರಜಂ ಪೀಱೆ ದಾನಪ್ಲವಂ ಪೂ।
ರಿಸೆ ತೋಱಿತ್ತೆತ್ತಮಾದಂ ಹರಣಭರಣಚಾತುರ್ಯಮಂ ಚಾತುರಂಗಂ॥

ಅದಲ್ಲದೆಯುಮಾವಾಹಿನೀವ್ಯೂಹಂ ವಾಹಿನೀಪ್ರವಾಹದಂತೆಸ್ಸ್ರಿತರಾಜ ಹಂಸಸನಾಥಮುಂ, ವಜ್ರಾಕರದಂತನೇಕಪವಿತತಿವಿಳಸಿತಮುಂ, ಲಂಕಾಧಿಪ ತಿಯಂತತಿಪ್ರಬಲಬಾಹಾವಳೀವಳಯಿತಮುಂ, ಶಿಶುಮುಖದಂತರದಪಙ್ಕ್ತಿಪ ರಿಕಲಿತಮುಂ, ವರ್ಷಾಗಮಸಮಯದಂತೆ ಬಹಳತರವಾರಿಧರಪರೀತಮುಂ, ಶರತ್ಕಾಲದಂತುಗ್ರಚಂಡಕರಭೋತ್ಕರಮುಂ, ಪುಂಡರೀಕಷಂಡದಂತೆ ಮು ಕ್ತಾವದಾತಪತ್ರವಿಸ್ತೃತಮುಂ, ವಿದ್ಯಾಧರಾನ್ವಯದಂತೆ ಪರಿಪ್ರಾಪ್ತಜೀ ಮೂತಕೇತುಸಮುದಯಮುಂ, ವಸುದೇವನಂತೆ ಸುಪ್ರಸಿದ್ಧಾನಕದುಂದುಭಿ ಧ್ವನಿಯುಂ, ನಿಶಾಸರೋವರದಂತುಜ್ಜೃಂಭಿತಕುವಲಯರಜಃಪಿಹಿತಪುಷ್ಕರ ಮುಂ, ದಿನಕರೋದಯದಂತೆ ಮಂಡಲಾಗ್ರರುಚಿನಿಚಿತದಿಙ್ಮುಖಮುಂ, ಕಾಳ ಯಸರ್ಪನಂತೆ ದಾನವಾರಿವಿಹಿತಪದ್ಧತಿಯುಮೆನಿಸಿ ಚತುರಂಗಬಲಮನೆಳೆ ಬಳೆದಂತೆಯುಂ, ಆಗಸಂ ಕಱೆದಂತೆಯುಂ, ದೆಸೆ ಬೆಸಲಾದಂತೆಯುಂ, ಕತಿಪಯಪ್ರಯಾಣಂಗಳಂ ನಡೆಯೆನಡೆಯೆ

ಮಣಿಕೂಟಕೋಟಿಯೊಳ್ ದಿನ।
ಮಣಿ ಕೂಟಂಬೆತ್ತನೆನಿಸಿ ಬಳೆದುನ್ನತಿಯಿಂ॥
ಮಣಿಕೂಟಮೆಂಬ ಶೈಲಾ।
ಗ್ರಣಿ ಕಣ್ಬೊಲನಾಯ್ತು ಚತುರಚೂಡಾಮಣಿಯಾ॥ ೩೧

ಅನಗೆಚಳದೊಳ್ ಶಬರಬಾಲಕಿಯರ್ ವಿಧುಬಿಂಬದಲ್ಲಿ ತ।
ಮ್ಮಾನನಮಂ ನಿರೀಕ್ಷಿಸಿ ಮದಾಂಬುಲಲಾಮಮನುಯ್ದು ಬಿಂಬಮ॥
ಧ್ಯಾನನದಲ್ಲಿ ಬಿತ್ತರಿಸೆ ಮೌಗ್ಧ್ಯದೊಳಾಯ್ತು ತದಂಕಮೆಂಬೆನಿ।
ನ್ನಾನಱಿಯೆಂ ಮಲಂ ನೆರೆಯೆ ಬಿಚ್ಚಳಸಲ್ಕದಱುಚ್ಚವೃತ್ತಿಯಂ॥ ೩೨

ಸುರದಂಪತಿತತಿ ಸಗ್ಗದೊ ।
ೞರಲೊಲ್ಲದೆ ಬಂದು ತನ್ನ ಬಹುರತ್ನಗೃಹೋ ॥
ದರದೊಳ್ ಕ್ರೀಡಿಪ್ಪುದು ನಿರಂ ।
ತರಮೆನೆ ಗಿರಿ ತವದ ಸುಖದ ತಾಯ್ವನೆಯಾಯ್ತೋ ॥ ೩೩

॥ ಮಾಲಿನಿ ॥

ಪುದಿದ ಮಣಿಗಣಾಂಶುಶ್ರೇಣಿ ಸಂವ್ಯಾನಮೆಂಬಂ ।
ದದಿನೆಸೆಯೆ ನಿಜಾಗ್ರೋದ್ದೇಶದಿಂ ನಿರ್ಝರಂ ಹಾ ॥
ರದವೊಲಿೞಿದು ಚೆಲ್ವಂ ಬೀಱೆ ತೋಱಿತ್ತು ಪೃಥ್ವೀ ।
ಸುದತಿಯ ಪೃಥುವಕ್ಷೋಜಾತ್ತಮೆಂಬಂತಗೇಂದ್ರಂ ॥ ೩೪

ಸಾನುವಿನೊಳೆಱಗಿ ಘನಸಂ ।
ತಾನಂ ಕಾರ್ಗಾಲದಲ್ಲಿ ಕಱೆವುದು ಮೇಗಿ ॥
ದಾರ್ನಗದ ಸಿದ್ಧಕಿನ್ನರ ।
ಮಾನಿನಿಯರ್ ಮೞೆಯ ಮಾತನಱಿಯರ್ ಮಱೆದುಂ ॥ ೩೫

ಮುಡಿದವರ ಕುಸುಮವಿಸರದ ।
ಕಡುಗಂಪಿಂಗೆಳಸುವಳಿಗಳಾಣತಿಯಂ ಮಾ ॥
ಱ್ಪೆಡೆಯೊಳ್ ಕಿನ್ನರ ಕನ್ನೆಯ ।
ರೊಡನೆಯೆ ತಾರೈಸಿ ಜಿಹಣತನಮಂ ಸಲಿಕುಂ ॥ ೩೬

ತರಣಿಕಿರಣಕ್ಕೆ ಭುಗಿಲೆಂ ।
ದುರಿವಿನಮಣಿಸಾನುವಿಂದವೋಸಱಿಪೆಡೆಯೊಳ್ ॥
ಗುರುಕುಚಭರಕ್ಕೆ ಮನದೊಳ್ ।
ಕರಮೆ ಕನಲ್ವರ್ ತುರಂಗವದನೆಯರದಱೊಳ್ ॥ ೩೭

ಪ್ರಭವಮಹೌಷಧಿಗಂಧ ।
ಪ್ರಭಾವಪರಿಹೃತವಿಷಾಸ್ಯವಿಷಧರಮಾಲಾ ॥
ನಿಭೃತಮಲಯರುಹವೀಥಿಯೊ ।
ಳಭೀತಮನಮಲ್ಲಿ ವಿಹರಿಕುಂ ಖಚರಯುಗಂ ॥ ೩೮

ಅಂತುಮಲ್ಲದೆಯುಂ

ಕೃತವಮರುದವಮಂದರಾಗಂ ।
ವಿತತವಿಭವವಿಜಿತಮಂದರಾಗಂ ಕೇಳೀ ॥
ಕೃತಕಾಪ್ಸರೋಗಣಂ ವಿ ।
ಶ್ರುತವಿಮಲತರಾಪ್ಸರೋಗಣಂ ಮಣಿಕೂಟಂ ॥ ೩೯

ಮತ್ತಮದು ವಿಚಿತ್ರರತ್ನಶೃಂಗಶಬಲಪ್ರಭಾಸುರಚಾಪಕೋಟಿಚುಂಬಿತಾಂಬರಮುಂ, ಭಾಸುರಚಾಪಕೋಟಿಚುಂಬಿತಾಂಬರಮುಂ, ವಿಗಳದವಿರಳನಿರ್ಝರತುಷಾರಕದಂಬಧವಳತಾಭಿರಾಮಮುಂ, ಕದಂಬಧವಳತಾಭಿರಾಮಮುಂ, ಮಧುರಗೀತಲೀಲಾನುಬದ್ಧಗಂಧರ್ವರಕ್ತಕಂಠೀರವಾಹತಿಪ್ರಭವಮೂರ್ಛಾವೇಗಮೃಗನಿಕಾಯಮುಂ, ಕಂಠೀರವಾಹತಿಪ್ರಭವಮೂರ್ಛಾವೇಗಮೃಗನಿಕಾಯಮುಂ, ಕುಸುಮಸ್ತಬಕಯುವಿಚರದ್ವನೇಚರಪ್ರಮದೋತ್ಕಟಕುಂಜರಾರಾಜಿತಮುಂ, ಮದೋತ್ಕಟಕುಂಜರಾರಾಜಿತಮುಮೆನಿಸಿದುದು. ಅದಲ್ಲದೆಯುಂ,

ಬಿಸಿಲುಂ ಬೆಳ್ದಿಂಗಳುಂ ಕಟ್ಟಲೆಯುಮಿವು ಮಿಥಸ್ಸ್ಪರ್ಧೆಯಂ ಮಾಣ್ದು ಪೂಣ್ದೊಂ। ದು ಸಖಿತ್ವಂ ಪೆರ್ಚೆ ನಿಚ್ಚಂ ನೆಲಸಿದುವು ಘನೀಭಾವಮಂ ತಾಳ್ದಿ ತಾಮಿ ॥ ಲ್ಲಿ ಸಮಂತೆಂಬನ್ನೆಗಂ ತದ್ಗಿರಿಪರಿಸರದೊಳ್ ರಾಗಮಂ ಚಿತ್ತದೊಳ್ ಪೆ । ರ್ಚಿಸುತಿರ್ಕುಂ ಪದ್ಮರಾಗಂ ಶಶಿಮಣಿ ಹರಿನೀಲಂ ವಿಲೋಲಾಂಶುಜಾಲಂ ॥ ೪೦

ಮಣಿಯಲ್ಲದ ಕಲ್ ಜ್ಯೋತಿ ।
ಸ್ತೃಣಮಲ್ಲದ ಪುಲ್ ರಸಾಯನಮಲ್ಲದ ಮಡು ಕಾ ॥
ರಣಮಲ್ಲದ ಲತೆ ಮುತ್ತಿನ ।
ಮಣಲಲ್ಲದ ಪುಳಿಲುಮಿಲ್ಲ ತತ್ಪರಿಸರದೊಳ್ ॥ ೪೧

ರತಖಿನ್ನಕಿನ್ನರೀಸ ।
ನ್ನತೆಯಂ ತಣ್ಮಲೆದು ಕಳೆದು ಸುಯ್ಯಿಂ ಸುರಭೀ ॥
ಕೃತಮಾಗುತ್ತುಂ ಪ್ರತ್ಯುಪ ।
ಕೃತಿವಡೆವುದು ತದುಪವನದ ಪಾವನಪವನಂ ॥ ೪೨

ಕರಿಣೀಶೃಂಗಾರಮುಗ್ರೋರಗಭಯಮಗದೈಶ್ವರ್ಯದ್ಭುತಂ ದಸ್ಯುವೀರಂ ।
ಶರಭಾಕಾರೋರುರೌದ್ರಂ ಪ್ಲವಗವಿಕೃತಿಹಾಸ್ಯಂ ಚಮೂರುಪ್ರಣಶ್ಯ ॥
ದ್ರುರುಬೀಭತ್ಸಂ ದವವ್ಯಾಕುಲಖಗಕರುಣಂ ಯೋಗಿರಾಟ್ಕ್ರಾಂತಶಾಂತಂ ।
ದೊರೆವೆತ್ತಾಶ್ಚರ್ಯಭೂತಂ ನವರಸಮಯಮಾಯ್ತಾನಗೇಂದ್ರೋಪಕಂಠಂ॥

ಅಲ್ಲಿ

ಅಮಳಶಶಿಕಾಂತಶಶಿಬಿಂ ।
ಬಮಧ್ಯದೊಳ್ ಪೊಳೆವ ತಮ್ಮ ನೆೞಲಿಂ ಮಾಡು ॥
ತ್ತುಮೆ ಲಕ್ಷ್ಮಲಕ್ಷ್ಮಿಯುಂ ವಿ ।
ಭ್ರಮದಿಂ ಭ್ರಮಿಯಿಪುದು ವನಚರೀನಿಕುರಂಬಂ ॥　　೪೪

ತುಱುಗಿರೆ ತಮ್ಮ ಮುಡಿಯು ಕಾಂತಿ ಕಮಲ್ತೆನಿಪ್ಪ ಸೀರೆಯೊ ।
ಳ್ಳುಱಿ ನವವಿದ್ರುಮಾಧರದ ಸೂಸಿದ ಕಾಂತಿಕಣಂಗಳೆಂಬಿನಂ ॥
ಮಿಱುಗುವ ಗುಂಜೆಯಾಭರಣಮುಣ್ಮುವಪಾಂಗಮರೀಚಿಮಾಲೆ ಸು ।
ತ್ತಿಱಿದುದೆನಿಪ್ಪ ಕೇದಗೆಯ ಬೆಳ್ಸುೞಿಯೋಲೆ ಬೆಡಂಗವಳ್ದಿರಾ ॥　　೪೫

ಅದಲ್ಲದೆಯುಂ

ಪ್ರಚುರತರಖಡ್ಗಿನಿಚಯಂ ।
ವಿಚಳಚ್ಚಾಮರಮನೂನಪತ್ರರಥಂ ದಂ ॥
ತಿಚಮೂರುಚಿರಸ್ಥಿತಿಸಮು ।
ಪಚಿತಂ ಕಟಕಂಬೊಲಿರ್ದುದಾನಗಕಟಕಂ ॥　　೪೬

ಆಗಳದಱ ಸಿರಿಯನರಸಂ ಭೀಮರಥನೊಳ್ ನುಡಿಯುತ್ತುಂ ಹಾಸ್ತಿಕ ಪ್ರಾಯಬಲಂ ಬರುತುಮಿರೆ ತತ್ಪಾರ್ಶ್ವದೊಳ್

ಅನಿಯತವಾರಿಸ್ಥಿತಿ ಘೇ ।
ನನಿಕರಸಿತಗಂತಮುದಿತಬಿಂದುಚಯಂ ವಾ ॥
ಹಿನಿಯೆಂಬುದು ನದಿ ಗಜವಾ ।
ಹಿನಿಯುಂದದಿನೆಸೆದುದೀಕ್ಷಣಕ್ಕವನಿಪನಾ ॥　　೪೭

ಮತ್ತಂ

ತೆರೆವೊಯ್ಲಿಂದೆ ತೆರಳ್ದಿರಟ್ಟಿಡಿಯೊಳಂ ಚೆಲ್ವಂ ವಿಲಾಸಂಬೊಲಾಂ ।
ತಿರೆ ಪೌಷ್ಪಂ ರಜವಲ್ಲಿಗಲ್ಲಿಗೆ ತರಂಗಂಗಳ್ ತರಂಗಂಗಳಂ ॥
ತಿರೆ ನಾನಾವಿಧವರ್ಣದಿಂದೆಸೆವ ನಿರ್ವೂವೆಯ್ದೆ ಚೆಂಬೂವಿನಂ ।
ತಿರೆ ಚಿತ್ರಾಂಬರವಾದುದಾನದಿ ತದುರ್ವೀರ್ಭೃನ್ನಿತಂಬಾವೃತಂ ॥ ೪೮

ಪ್ರವಳಕರಿಮಕರಪ್ರೋತ್ಕಾ ।
ರವಾತದಿಂದುದ್ಭವೊಗೆವ ಜಲಬಿಂದುಗಳಿಂ ॥
ದಿವದೊಳ್ ತಾರಕಿತಂಮಾ ।
ಡುವುದು ನಭೋಭಾಗವಂ ತದಂಭಃಪೂರಂ ॥ ೪೯

ಸರದದ ಮುಗಿಲ್ಗಳೆಱಗಿದ ।
ತರಳಸ್ಫಟಿಕಾದ್ರಿನಿಕರಮೆನೆ ಕೊನೆಯೊಳ್ ಬೆ ॥
ಳ್ನೊರೆವಿಂಡಂ ತಾಳ್ದದ ಪೆ ।
ರ್ದೆರೆವಿಂಡುಗಳೆಸೆವುವಾಮಹಾವಾಹಿನಿಯೊಳ್ ॥ ೫೦

ಕಾರ ಮುಗಿಲ್ ನೀರ್ವೊರ್ಗೆಯಲ್ ।
ವಾರಿಧಿಯೆಂದೆಱಗಿ ಸುರಿವ ಕರಕಂಗಳವೋಲ್ ॥
ತೀರದೊಳಡಿದೆಱಗಿದ ಧರ ।
ಣೀರುಹದುಗುವಲ*ರ್ಗಳೆಸೆವುವಸದಳಮದಱೊಳ್ ॥ ೫೧

ಸರಸಬಿಸವಿಸರವಾಂಛೆಯಿ ।
ನುರಂಬರಂ ಪೊಕ್ಕ ವನಚರೀಪಿನಪಯೋ ॥
ಧರವೊಡನಜ್ಜಿಕೊಳುತ್ತಿ ।
ರ್ದರಣ್ಯಕರಿಕುಂಭದಲ್ಲಿ ಸರಿವರುತಿರ್ಕುಂ ॥ ೫೨

ತಾನುಪಶೋಭಿತಚಲದಳ ।
ಕಾನನೆ ಪೃಥುತರಲಸತ್ಪಯೋಧರೆ ವಿಚಲ ॥
ನ್ಮೀನಾಲೋಕವಿರಾಜಿತೆ ।
ಯಾನದಿ ವನರಾಶಿವನಿತೆಯೆನಿಸುವುದುಚಿತಂ ॥ ೫೩

ಅದಲ್ಲದೆಯುಂ

ಎಳನೀರಂ ಗೆಲೆವಂದ ತನ್ನ ತಿಳಿನೀರೊಳ್ ಬಂದು ಪೀಯೂಷಸಂ ।
ಕುಳದೊಳ್ ಸಿದ್ಧರಸಪ್ಲವಂ ಬೆರಸಿದತ್ತೆಂಬನ್ನೆಗಂ ತನ್ನಗಾ।
ಮಳಚಂದ್ರೋಪಳಸಾರವಾರಿಚಯಪೂರಂ ಕೂಡೆ ತಾಂ ಕೂಡೆ ಕ।
ಣ್ಗೊಳಿಸಿತ್ತಾ ವರವಾಹಿನೀವಿಸರದೋಘಂ ಶಾಂತಸೈನ್ಯೌಘಮಂ ॥ ೫೪

ಅಂತತಿಮನೋಹರಮಾದ ವಾಹಿನೀನಿಕಟದೊಳ್ ವಿಶ್ರಾಂತಕಟಕನಾಗಿ ಪೂರ್ವಮುಮತ್ತ ದೂತಂಗಿತ್ತ ಮಱುಮಾತುಮನವಧಾರಿಸಿ

ಆಂ ಬಂದು ಕೊಳ್ವ ಗಜಮಂ ।
ತಾಂ ಬಂದಿತ್ತಪನೆಈವನಕ್ಕೆಮ ಸುತನಿಂ ॥
ದಂ ಬೇಳಾದಂ ನೆರೆ ಪಾ ।
ಱಂಬಟ್ಟಪನಟ್ಟಿ ತಿಂಬ ಪೈವಕ್ಕೀಗಳ್ ॥ ೫೫

ಎಂದು ಬರ್ಕರಕರ್ಕಸಂಗಳಂ ನುಡಿದು ಮಾಣದೆ ಅಭ್ಯಮಿತ್ರೀಣವೃತ್ತಿಯನೆ ಪೂಣ್ದು ಪೊಱಮಡುವಾಗಳ್

ಹಯನಯನಾಂಬುಗಳ್ ಸುರಿಯೆ ಹರ್ಷದಿನುಣ್ಮಿದುವೆಂದು ನಚ್ಚಿ ನಾ ।
ನೆಯು ಮದವೆತ್ತಿ ಕಟ್ಟೆ ವಿಕಳತ್ವಮನೊಕ್ಕುವಿವೆಂದಕಾರಣಂ ॥
ಜಯರಥಮೊರ್ಮೊದಲ್ ಮುಱಿಯೆ ಶತ್ರುಬಲಂ ಮುಱಿದಪ್ಪುದೆಂದು ದು।
ರ್ನಯಮನೆ ದರ್ಪದಿಂ ಸುನಯಮಾಗೊಣರ್ದಂ* ಧೃತವಿಗ್ರಹಾಗ್ರಹಂ ॥

ಆನೆಯುನಿರುಳುಂ ಪಗಲುಂ ।
ಜಾನಿಸಿ ತನು ಮೂರ್ಖವೃತ್ತಿ ಪೊರ್ದಿದವೋಲ ॥
ಜ್ಞಾನಿ ನಯಾನಯಚಿಂತೆಯ ।
ನೇನುಮನಱಿಯನೆ ಮುಮೂರ್ಷು ತೆಱನಱಿದಪನೇ ॥ ೫೬

ಅಂತತಿಕ್ರಮಿಸಿ

ದೆಸೆಯುಂ ಖಡ್ಗಾಂಶುಜಾಲಂ ಬೆಳಗೆ ಧರಣಿಯುಂ ದಾನಧಾರಾಂಬು ಜೌಗೇ।
ಳಿಸೆ ರೋದೋಭಾಗಮಂ ಕೇತುತತಿ ಪುದಿಯೆ ಮೇಘಾಳಿಯುಂ ಧೂಳಿಮೊಯ್ವ
ರ್ಚಿಸೆ ದಿಗ್ವೇತಂಡಮುಂ ಡಿಂಡಿಮರುತಿ ಚಕಿತಂಮಾಡೆ ದೃಪ್ಯದ್ಬಳಂ ಮಾ।
ಮಸಕಂಗೊಂಡೆತ್ತಿ ಬಂದಂ ಬಗೆಯದೆ ಪೃಥಿವೀಪಾಲನುಗ್ರಾಜಿಲೋಲಂ ॥

ಬಂದು ಸಾರ್ಚಿರ್ ಬಿಟ್ಟಿರೆ

ಜಳರುಹಮಿತ್ರನಸ್ತಮಯಕಾಲಮದೊಂದು ವಸಂತಕಾಲದಂ ।
ತಳಸಿ ಕರಂ ವಿರಾಜಿಸಿದುದಂದಿನ ರಂಜಿಪ ಸಂಜೆಗೆಂಪು ತ ॥
ಳ್ತಿಳಿದಳಿರ್ಗೆಂಪು ತಾರಕವುದಂಚಿತಕೋರಕಮುದ್ಗತೇಂದುವುಂ ।
ಡಳಮಲಗೊಂಚಲೆಂಬಿನೆಗಮಂಬರಮಾತ್ತಮಹೀಜಡಂಬರಂ ॥ ೪೯

ಅಂತು ನೇಸರ್ಪಡಲೊಡಮಿತ್ತ ಪದ್ಮನಾಭಮಹೀಭುಜನುಮತ್ತ ಪೃಥ್ವೀಪಾಲಭೂಪಾಲನುಮಾಸ್ಥಾನಮಂಡಪಿಕಾಮಧ್ಯದೊಳ್ ಭಾವಿಸಂಗ್ರಾಮಚರ್ಚಾವಚನಂಗಳನನ್ವಯಾಗತರುಂ ರಣದೀಕ್ಷಿತರುಮಪ್ಪ ವೀರಸಾಮಂತರೊಳ್ ಪಿರಿದು ಬೇಗಂ ನುಡಿಯುತ್ತುಮಿರ್ದು ಬೞಿಯಂ ರಾಮಣೀಯಕಾದಿಸಕಲಗುಣನಿಳಯಮಪ್ಪ ಶಯ್ಯಾನಿಳಯದೊಳ್ ನಿದ್ರಾಂಗನಾದತ್ತಾವಸರರಾಗಿ ಬೆಳಗಪ್ಪುದುಂ ಬೆಸಸೆ ತತ್ತನ್ನಿಯಾಮದಿನುಭಯಶಿಬಿರದೊಳಂ ಸೇನಾನಾಯಕರ್ ಸನ್ನಾಹಭೇರಿಯಂ ಪೊಯ್ಸಿದಾಗಳ್

ಪುದಿದೆಂಟುಂ ದಿಕ್ತಟಕ್ಕಾಧ್ವನಿ ಪಸರಿಸೆ ಕೋರ್ವಿಸಿತ್ತೈರಾವತಂ ಕುಂ ।
ಬಿದುದೆತ್ತಂ ಪುಂಡರೀಕಂ ಸುಗಿದುದು ಕುಮುದಂ ಕಂದಿದತ್ತಂಜನಂ ಕುಂ ॥
ದಿದುದಾದಂ ವಾಮನಂ ಕಟ್ಟಿದುದತಿಮದನುಂ ಪುಷ್ಪದಂತಂ ಸಮಂತೊ ।
ಕ್ಕುದಗುರ್ವಂ ಸಾರ್ವಭೌಮಂನಡುಗಿದುದುಭಯೋದ್ರೇಕದಿಂಸುಪ್ರತೀಕಂ

ಆರಣದುಂದುಭಿರಸಿತಂ ।
ವೀರರ್ಗುತ್ಸವಮನಿತ್ತುದರ್ಥಿಜನಸ್ವ ॥
ಸ್ತ್ಯೈರವಮಿವಂತೆ ಮಹೋ ।
ದಾರಚರಿತ್ರರ್ಗೆ ಹೃತ್ಪ್ರಮೋದೋದಯಮಂ ॥ ೫೧

ಪಲದಿವಸಕ್ಕೆಮಗೀಗಳ್ ।
ಕಲಹಂ ದೊರೆಕೊಂಡುದಿಲ್ಲಿ ಮೆಱೆದಪಮಿಂ ದೋ ॥
ರ್ವಲದಳವನೆಂದು ಪಬಿಪು ।
ಣ್ಗಲೆಯೊಡೆವಿನಮುರ್ವಿ ಕೊರ್ವಿದರ್ ಕಡುಗಲಿಗಳ್ ॥ ೫೨

ಕದನಪ್ರಮೋದರೋಮಾಂ ।
ಚದೆ ಕವಚಿತಮಾದುವಿವರ ತನು ತಾನೆಂದೊ ॥

ಲ್ಲದ ತೆಱದೆ ನಲಿದು ತನಿಗೊ ।
ರ್ವಿದ ವೀರರ ಮೆಯ್ಗೆ ಪುಗವೆ ಸನ್ನಾಹಂಗಳ್ ॥ ೬೩

ಸಂಗರಲಾಭೋತ್ಸವಪ್ರ ।
ಷ್ಟಾಂಗತೆಯಿಂ ಕಿಱಿಯವಾದೊಡೞ್ತಿ ಜನಕ್ಕಾ ॥
ಪ್ಪೊಂಗವಚಂಗಳನಿತ್ತರ್ ।
ಪೊಂಗವಚಂಬಡುವಿನಂ ಮಹಾವೀರಭಟರ್ ॥ ೬೪

ಅದಲ್ಲದೆಯುಂ

ಕರಿಸೇನಾಸಾರಿಭಾರಗ್ರಥನಮುರುತುರಂಗೌಘಪಲ್ಯಾಣಸಜ್ಜೀ ।
ಕರಣಂ ನಾನಾವರೂಥಪ್ರಕರಸಮುಚಿತಾಯೋಗಸಂಯೋಜನಂ ಕಿಂ ॥
ಕರಸಂಬೋಹಾಂಗರಕ್ಷಾವರಣಮವನಿಪಾಲಾಹವೋತ್ಸಾಹದೀನೋ ।
ದ್ಧರಣಂ ತತ್ಕಾಲಜಾತಂ ಬಲಯುಗಳದೊಳ್ ಕಣ್ಗೆಗುವಾರ್ದುವಾದಂ॥೬೫

ಅಂತು ಸಮರಸನ್ನದ್ಧಮಾದ ನಿಜಬಲಂಬೆರಸು ಸುವರ್ಣಮಾಲಂ ವನಕೇಳೀಸಮಾರೂಢಂ ಯುವರಾಜಪುರಸ್ಸರಂ ನಡೆಯೆ ಪೃಥ್ವೀಪಾಲಪಾಲನುಮಾತ್ಮಸಕಲಸಾಮಗ್ರಿವೆರಸದಿರದಿದಿರೆತ್ತಿ ಬರ್ಪಾಗಳ್

ಸುರಶೈಲಂ ಪೂಣ್ದು ಪೊಂಗಟ್ಟೆವೊಲಿರೆ ಸಕಲೋಗನ್ವದಂತಸ್ಥಕೂವೆರ್ । ತ್ಕರವುರ್ವೀಚಕ್ರಮುಂ ತಾಳ್ದಿದ ಕಮಠನವೋಲೊಪ್ಪೆ ಸಾರಂ ರಥಂ ವ್ಯ ॥ ದ್ಧುರಯುಗ್ಯಬ್ಜಾಕಟಾಕಾರದಿನೆಸೆಯೆ ಜಗದ್ವ್ಯಾಪಿಯೊದತ್ತು ಯುದ್ಧೋ । ದ್ಧುರತತ್ಸೇನಾದ್ವಯಾಭ್ಯುಚ್ಚಲನದಳದಿಳೋತ್ಸಾತಪಾಂಸುಪ್ರತಾನಂ ॥ ೬೬

ಅದಲ್ಲದೆಯುಂ

ದ್ವಿಪಶುಂಡಾದಂಡಸೀತ್ಕಾರದಿನರದಚಲಚ್ಚಕ್ರಚೀತ್ಕಾರದಿಂ ಧ ।
ನ್ವಿಪದಾತಿವ್ರಾತಟಂಕಾರದಿನುರುಕಹಳಾಜಾಲಫೂತ್ಕಾರದಿಂ ವಾ ॥
ಜಿಪದಪ್ರೋದ್ಯಚ್ಛಟತ್ಕಾರದಿನನುಗತನಿಸ್ಸಾಣಭಾಂಕಾರದಿಂ ವಿ ।
ಷ್ಟಪಮುಂ ಶಬ್ದಾತ್ಮಕಂಮಾಡಿದುದುಭಯಮಹೀಭೃಚ್ಚಮೂಚಕ್ರವಾಳಂ

ಅಂತುಭಯಸೇನೆಯುಂ ಪೃಷತ್ಕಪಾತಮಾತ್ರತೃತಯಾಂತರಧರಿತ್ರೀ ಭಾಗದೊಳ್ ವಿಚಿತ್ರವ್ಯೂಹಮಾಗಲೊಡಮೆರಡುಂ ಪಡೆಯ ಸೇನಾನಾಯ ಕರ್ ಕೈವೀಸಿದಾಗಳ್

ಇದು ನೆಲನಾಗಸಂ ದೆಸೆಯಿರುಳ್ಪಗಲೆಂಬ ವಿಕಲ್ಪಮಾರ ಚಿ ।
ತ್ತದೊಳಮಳಂಕೆಗೊಳ್ಳವಿಷುಜಾಲಮುಮುಂ ಬಗೆವಂದು ವಿಶ್ವಮೆಂ ॥
ಬಿದೆ ದೊರೆಕೊಳ್ಗುಮೆಂಬಿನೆಗಮುಚ್ಚ ರಿಮೆತ್ತಿರೆ ಬಿದ್ದಮೆಚ್ಚು ಕಾ ।
ದಿದುದು ತಗುಳ್ದು ಬಿಲ್ಪಡೆ ಪಡಲ್ವಡೆ ಮಾಣದೆ ನಿಂದು ಪೂಣಿಗರ್ ॥ ೬೮

ಆಲೋಹನಿಮಗ್ನೇಷುಕ ।
ಜಾಲಂ ಪುದಿದಿರೆ ಶರೀರಮುಂ ಬೀಟಿಲ್ತು ।
ಳ್ತಾಲದ ಪಣೆಯವ್ರೊಲೆಂತುಂ ।
ಚಾಲಿಸಲರಿದೆನಿಸಿ ನಿಂದರಲೆಬರ್ ವೀರರ್ ॥ ೬೯

ತಿರು ಪಱಿದೊಡೆ ದಂಡಾದಂ ।
ಡಿರಣಂ ಬಿಲ್ಲಿಂಗಮಾಯ್ತು ಬಿಲ್ಮುಱಿದೊಡೆ ಗೋ ॥
ಣ್ಮುರಿಗೆ ತಲೆಯೊತ್ತು ತಿರ್ಪೊಂ ।
ದುರವಣೆಯಿಂದಾದುದಾಕಚಾಕಚಿಯುದ್ಧಂ ॥ ೭೦

ಪಱಿಯೆ ತಿರು ಮುಱಿಯೆ ಬಿಲ್ ತವೆ ।
ನೆಱೆಯೆ ಸರಲ್ ಬಿಲ್ಲ ಬಿತ್ತಿಗರ್ ಕಡುಪ್ರೊತ್ತುಂ ॥
ಬಱಿಯುದೆ ತಮ್ಮೊಳ್ ಸಲೆ ಸುರಿ ।
ಗಿಱಿದಱಿದರಮಂಧ್ಯಮಲ್ತೆ ವೀರೋದ್ರೇಕಂ ॥ ೭೧

ಇವು ಸಮರಾಬ್ಧಿಯೊಳ್ ನೆಗದಗುರ್ವಿಸೆ ಘೂರ್ಮಿಪ ಕೂರ್ಮಕೋಟಿಯೆಂ
ಬವ್ರೊಲದಟಿಂದಮೆಯ್ದೆ ಪರಿತಂದು ಪಳಂಚಿದ ಬಾಳ್ಗಳಿಂದೆ ಸೂ ।
ಸುವ ಕಿಡಿಗಳ್ ರಣಾಂಧಕೃತಿಯುಂ ಕ್ರಮದಿಂದೆ ಕಳಲ್ಚೆ ಕಾದೆ ನೋ ।
ಷುವ ದಿವಿಜರ್ಗೆ ಕೌತುಕಮನಡ್ಡಣದೊಡ್ಡಣಮಿತ್ತುದೆತ್ತಲುಂ ॥ ೭೨

ಆಗಳ್

ಕರವಾಳಧೌತದಿಂ ಪರಿ ।
ದುರುಳ್ವ ತಲೆಗಳನವುಂಕಿ ಪಿಡಿದರೆಬರ್ಟೆ ॥
ಬ್ಬರಿಸಿ ಮಗುಳ್ದಿಟ್ಟಿಯೊಳ್ ಬಿ ।
ತ್ತರದಿಂ ಬೀರಕ್ಕೆ ಕಳಶಮಿಡುವಂತಿಟ್ಟರ್ ॥ ೭೩

ಮೊಕ್ಕಳಮೆನೆ ಬಸಿಱೀಱುಂ ।
ದೊಕ್ಕ ಕರುಳ್ ತೊಡೆಯೊಳಾವಗಂ ತೊಡರ್ದೆಸಸುಂ ॥
ಮಿಕ್ಕುವು ಬಿರುದರ ಬಿರುದಿಂ ।
ಗಿಕ್ಕಿದ ನುಣ್ಬೆಸದ ಮಿಸುಪ ತೊಡೆಸಂಕಲೆಯಂ ॥ ೭೪

ಅಂತು ಪಾಯದಟಿಮೆಲ್ಲಮೊಕ್ಕು ಮುಱಿದುಂ ಕುಱಿದಱಿಯಾಗೆ ತಿಱಪುವ ಜೆದಿದಿರೊಡ್ಡಿನ ತೇರೊಡ್ಡುಗಳ್ ಶೂರಸಾರಥಿಪ್ರೇರಣದಿನೋರೊಂದಂ ಪತ್ತಿ ಸಾರ್ಚಿದಾಗಳ್

ಶಾತಶರಪ್ರಕಾರದೆ ರಥಾಂಗವಿದಾರಣಮಕ್ಷಖಂಡನಂ ।
ಸೂತನಿಷೂದನಂ ಯುಗಸಮುದ್ದಳನಂ ಧ್ವಜಭಂಜನಂ ಹಯ ॥
ವ್ರಾತನಿಶುಂಭನಂ ಸಮನಿಸುತ್ತಿರೆ ತನ್ಮಯ ಚಾಪಚಾಪಲಂ ।
ಕೌತುಕಮಪ್ಪಿನಂ ಸಮರಥಾರ್ಧರಥಾತಿರಥರ್ ಪಳಂಚಿದರ್ ॥ ೭೫

ಎಚ್ಚಂಬಂ ಬೇಗದೆ ಪೆಱ ।
ಗೆಚ್ಚ ಸರಲ್ ತಾಗಿ ಪಿಳ್ಕನಿಂ ಮೊನೆವರೆಗಂ ॥
ಪೆಚ್ಚಂತೆ ಸೀೞ್ದು ನಟ್ಟುವು ।
ಬಿಚ್ಚತಮೀರ್ಮುಡಿಸಿ ತೊಡರ್ದುದ್ ರಥಿಗಳನಾಗಳ್ ॥ ೭೬

ಬಿಡದೆಚ್ಚು ಸರಲ್ ತವೆ ಮನ ।
ದಡರ್ಪುರ್ ತವದುರ್ವಿ ಮೈಯೊಳರ್ದಂಬಂ ಕೈ ॥
ಯುಡಗಟೆ ಕಿಟ್ಟೆಚ್ಚರ್ ಪಡ ।
ಲಿಡೆ ತೊಡರ್ದರ್ ಕದನಲಂಪಟರ್ ವೀರಭಟರ್ ॥ ೭೭

ಅಂತು ರಥಾರೂಢರೆಲ್ಲಂ ಪರಿಪೂರ್ಣಕದನಮನೋರಥರಾಗಲೊಡಂ

ಪರಿದುವು ಬಡಬಾಗ್ನಿಯ ಕೇ |
ಸುರಿ ಬಳಸಿದ ತೆರೆಗಳೆಂಬಿನಂ ಘೋೞಾಯ್ಲರ್ ||
ಪರಿಯಿಸೆ ತರದಿಂ ಫೊಂಬ |
ಕ್ಕರಗೆಯು ತುರಗಂಗಳಾಹವಾಂಭೋನಿಧಿಯೊಳ್ || ೭೮

ಎಚ್ಚಡ್ತಾಯುಧವಂ ಕಿ |
ಟ್ತಿರಿಸೆನೆ ನೂಂಕೆ ತುರಗವುಂ ತುಕ್ಕಿಡಿಗಳ್ ||
ಪಚ್ಚವಳದೆಡೆಗಳಂ ಮು |
ನ್ನಿಚ್ಚ ಸರಕ್ ತಾಗೆ ಪಱಿದುವುರೆ ಚೆಚ್ಚಱದಿಂ || ೭೯

ಅದಲ್ಲದೆಯುಂ

ಪವಣಿಲ್ಲುಚ್ಚರ್ಣವ ಕೋಲ್ಗೆ ತಾಗುವ ಚಲಚ್ಚತ್ರಕ್ಕಸುಂಗೊಳ್ವಖಿಂ |
ಡಿವಳಕ್ಕಿವೊರ್ನೆಗಾಣ್ಬ ಕಕ್ಕಡೆಗೆ ಬಿದ್ದಂ ಬೀಬ್ವಿ ಕೊಂತಕ್ಕೆ ಸು |
ತ್ತುವ ಪಾಶಕ್ಕೆ ತಗುಳ್ದು ಪ್ರೊಯ್ವ ಗಚೆಗಾದಂ ನೇರ್ವರ್ ಕೂರ್ವಾರ್ಳ್ಗೆ ನಾಂ|
ಟುವ ಗೇಣ್ಗೆಂಬಿನಮಾದುದದ್ಭುತಮುದಶ್ವವ್ಯೂಹಮುಗ್ರಾಹವಂ || ೮೦

ಪಸುವೆಂಬೀವದೆ ಕುದುರೆಯ |
ಮುಸಿಯುಂ ಕಾದೊರ್ವರೊರ್ವರಂ ಪ್ರೊಯ್ದರ್ ಮಾ ||
ಮುಸಕದೆ ಪಣಿದಂಬೊಯ್ವಂ |
ತಸಿಯಿಂ ಪಿಂಗದೆ ತುರಂಗಿಗಳ್ ಸಂಗರದೊಳ್ || ೮೧

ಆತುರಂಗಸಂಗ್ರಾಮಾನಂತರದೊಳಾಧೋರಣರ್ ವಾರಣಮಂ ನೂಂಕೆ,

ಗುಱಿವಂ ಪಕ್ಕಂ ನಿಜಕರ |
ಮೆಱಿಲ್ವ ಪೆವಾರ್ವು ಕೋಡೆ ಕೋಡುಂಗಲ್ ಮು ||
ತ್ತಿಱಿವ ಮದಮುರ್ಬಿಯೆನೆ ಕ |
ಣ್ಡೊಱಲಿಗೆ ನೆಲೆಯಾದುವೆಱಕೆವೆಟ್ಟೆನೆ ಕರಿಗಳ್ || ೮೨

ಅಂತು ಕವಿದು,

ದಿಗಿಭಂಗಳ್ ದಿಗಿಭಂಗಳೊಳ್ ಮಿಗೆ ಮೊಗಂಬೊಕ್ಕಂತಿರಾದೊರ್ದ್ವಿನಾ|
ನೆಗಳೋರೊಂದಱೊಳೊಂದು ತಾಗಿ ತಲೆಮುಟ್ಟಿರ್ಪಲ್ಲಿ ಬಿಲ್ಲಂ ನಿಷಾ ||

ದಿಗಳಂದೊಲ್ಲದೆ ಕಿೞ್ತು ಗೇಣೊಳೆ ತಡಂಬಾಯ್ದುಯ್ದು ತದ್ವೈರಿಯೋ ।
ಧಿಗಳಂ ತಾನನೆ ತಕ್ಕಿನೆಕ್ಕತುಳದಿಂ ಕೈಯಾರ್ವಿನಂ ಕಾದಿದರ್ ॥ ೮೩

ಅದಲ್ಲದೆಯುಂ

ಬತ್ತುವ ಕಾಯ್ಪು ಪೊಯ್ವಡಟು ಬಂಚಿಪ ಬಿನ್ನಣವೊಂದನೊಂದು ಬೆಂ।
ಬತ್ತುವ ಬೇಗಮೆಯ್ದೆ ತೆಗೆವುರ್ಕು ತೆಱಂದಿರಿದಾಂತ ಮೆಯ್ವಸಂ ॥
ಸುತ್ತುವ ಬಲ್ಪು ಪುಣ್ಗಳವುಗುಂದದ ಸೊರ್ಕಿನವು ತಮ್ಮೊಳೆಯ್ದೆ ಮೆ ।
ಯ್ವೆತ್ತಿರೆ ಬಿಚ್ಚತಂ ಪೊಣ*ರ್ದುವಂದೆರಡುಂ ಬಲದಂಕದಾನೆಗಳ್ ॥ ೮೪

ರದಸಂಘಟ್ಟದಿನೆತ್ತಂ ।
ಕೆದಱುತ್ತುಂ ತೋರಗಿಡಿಗಳಂ ಕಾದುವ ತ ॥
ನ್ಮದಗಜಘಟೆ ಪೋಲ್ತುದು ಕೆಂ ।
ಡದ ಮಱೆಯುಂ ಕಱೆವ ವಿಲಯಜಲಧರಘಟೆಯಂ ॥ ೮೫

ಆಗಳ್ ಕಾಲಾಗ್ಪಿನ ಕಟ್ಟಾಳ್ಗಳ್ ಕಡುಕೆಯ್ದು

ಮೋದೆ ಸಿತಾಸಿಯಿಂ ಪಱಿಯೆ ಕೈ ಕೆಲವಂದು ಮಹಾವರಾಹನಂ ।
ತಾದುವು ಕೂಡೆ ಕುಕ್ಕುಱಿಸೆ ಪಿಂದೊಡೆಗಳ್ ಕೇಲವೇಕದಂತನಂ ॥
ತಾದುವು ಬೀೞೆ ದಂತಯುಗಳಂ ಕೆಲವಾಕರಿಣೀಕದಂಬದಂ ।
ತಾದುವಗುರ್ವಿನಾನೆಗಳದೇನತಿಕೌತುಕವಾಯ್ತೊ ಕಾಳೆಗಂ ॥ ೮೬

ಅಂತಡುತುರ್ ಕಾದಿ ತಮ್ಮ ಪಡೆಯ ಪದಾತಂಗಳುರಿಯೊಳೆಱಗಿದ ಪತಂಗಂಗಳಂತೆ ವಿನಾಶಮನೆಯ್ದಿಯುಂ, ಅರದಂಗಳ್ ವಯೋಧಿಕನ ರದಂಗಳಂತೆ ಕಳಲ್ಗಳಲೆಯುಂ, ವಾಹಂಗಳ್ ಮರುಮರೀಚಿಕಾವಾಹಂಗಳಂತೆ ಮಾಯುವಾಗಿಯುಂ, ಗಜಂಗಳ್ ನಿಧಾಘಸಮಯದ ಗಜಂಗಳಂತೆ ಪಡಲಿಸೆಯುಂ, ಅದಂ ಕಂಡು ಪೃಥ್ವೀಪಾಲತಂತ್ರಪಾಲಂ ಚಂದ್ರಶೇಖರಂ ಮೊದಲಾಗೆ ಕೇತುಮಹಾಕೇತು ವಿರೋಚನಂ ಮಹಾರಥಂ ಸೂರ್ಯರಥಂ ತಪದ್ವಕ್ತ್ರಂ ಸಿಂಹವಿಕ್ರಮಂ ವರುಣಂ ಚಂಡಕೀರ್ತಿಯೆಂಬ ಸಾಮಂತಕರಾತ್ಮಪಕ್ಷಕ್ಷಯದಿನಾದಾಕ್ಷೇಪದಿಂ ರೂಕ್ಷಭಾವಮನೊಳಕೆಯ್ದು ಪದ್ಮನಾಭಸೇನಾನಿಭೀಮಂ ಮೊದಲಾಗೆ ಬಡ್ತಿ ಸಿಂಪ ಸುಭೀಮಂ ಮಹಾಸೇನಂ

ಚಿತ್ರಾಂಗಂ ಚರಂತಪಂ ಕಂಬಂ ಸುಕುಂಡಲಂ ಭೀಮರಥ ಮಹೀರಥರೆಂಬ ಸಾಮಂತರೊಳಿದಿರ್ಚಿ ರಥಿಗಳ್ ರಥಿಗಳೊಳ್ ತುರಂಗಿಗಳ್ ತುರಂಗಿಗಳೊಳ್ ನಿಷಾದಿಗಳ್ ನಿಷಾದಿಗಳೊಳ್ ಪೂದಳಿಸಿ ತಾಗಿದಾಗಳ್

ಬಗೆವಂದೀದೊರೆತಾದುದದ್ಭುತತರಂ ಯುದ್ಧಂ ಮರುದ್ಯಾನವ್ರೀ |
ರಗವಿದ್ಯಾಧರರಲ್ಲಿ ಮುಂ ಸಮನಿಸಿತ್ತಿಲ್ಲೆಂದುಮೆಂಬಂತುಟಾ ॥
ಯುತ್ತಗಳೞ್ತೋಣಿತಮುತ್ಪತತ್ಪಲಲಪಿಂಡಂ ಸಂಚರಚ್ಚಂಡಗೃ |
ಧ್ರಗಣಂ ಸ್ವೈರನಟತ್ಕಬಂಧತತಿ ಕೇಳಾಕೇಳಿ ರೌದ್ರಾವಹಂ ॥ ೮೭

ಅಂತು ಕಾದಿ ಕಡೆಗಾಲದ ಬಿಜಸಿಡಿಲ ಬಳಗದೊಳ್ ತೊಡರ್ದ ಪಕ್ಕವಿಟ್ಟಿಗಳ ತಳ್ಕೆಯಂತೆಯುಂ, ಸಿಂಗದ ಜಂಗುೞಿಯೊಳಾಂತ ಮಾತಂಗಸಂಘಾತದಂತೆಯುಂ, ಭೇರುಂಡನ ಪಿಂಡಿನೊಳ್ ತಾಗಿದ ಶರಭದ ನೆರವಿಯಂತೆಯುಂ, ಪ್ರಳಯಪ್ರಭಂಜನಪ್ರತಾನದೊಳಿದಿರ್ಚಿದ ಮುಗಿಲ ಮೊಗ್ಗರದಂತೆಯುಂ, ಓಡಿಯುಮುೞ್ಕಾಡಿಯುಂ ಪೋೞನ ನಿಜಸಾಮಂತಸಂದೋಹಮಂ ಪೃಥ್ವೀಪಾಲತನೂಭವಂ ಧರ್ಮಪಾಲಂ ಕಂಡು ತಂಬೆಯ ಮುಂದಣ್ಗೆ ವಂದು

ಇನ್ನೆನ್ನ ಪದಂ ಬೞಿಕಂ |
ನಿನ್ನ ಪದಂ ದೇವ ಬೆಸಸು ತೊಡರ್ದರಿ*ಸೈನ್ಯಂ ॥
ಬೆನ್ನಿತ್ತೊಡಱಿಯೆನಾಂತೊಡ |
ದನ್ನೞಿ ಪರ್ದಿಂಗೆ ಬಿರ್ದನಿಕ್ಕುವೆನೀಗಳ್ ॥ ೮೮

ಬೆಸಸೆನ್ನಂ ನೃಪ ನಿನ್ನಯ |
ನೊಸಲೊಳ್ ತ್ರಿಪತಾಕೆಯೆತ್ತಿ ತೋಱದ ಮುನ್ನೆ ॥
ತ್ತಿಸಿ ತೋರ್ಪೆಂ ರಿಪುಬಳಮಂ |
ದೆಸೆಬಿದ್ದಂ ತೊಟ್ದು ಜಯಪತಾಕಮನೀಗಳ್ ॥ ೮೯

ಎಂದು ಧಾತ್ರನೊಳ್ ಬೆಸಂಬೆತ್ತು ಧರ್ಮನಂತೆ ಧರ್ಮಪಾಲಂ ಬಿಪ್ರರ್ದಂ ಪದ್ಮನಾಭಭೂಭುಜನ ಮುಂತಿರ್ದ ಸುವರ್ಣನಾಭಂ ಕಂಡು ಪಾಳಿಕೇತನಂಗಳನಿವಂ ಪೃಥ್ವೀಪಾಲಯುವರಾಜನೆಂದಱಿದು ಸುಟ್ಟಿ ತೋಱಿ,

ಪೇೞ್ದೀವೆನ್ನಂ ನಿಂದೊಡೆ ।
ತೊೞ್ದೀನಂ ಕಳೆದು ತಂದಪೆಂ ಪಂದಲೆಯಂ ॥
ತೂೞ್ದು ಪೆಱಿಮೆಟ್ಟಿ ಕೊಲ್ಲದೆ ।
ಬಾೞ್ದಲೆದಂಡಪ್ಪೆನವನನವಧರಿಪ್ಪುದಿದಂ ॥ ೯೦

ಅಂತತಿಪ್ರತಿಜ್ಞಾರೂಢನುಂ ರಥಾರೂಢನುಮಾಗಿ,

ರವಿಯು ರಥಕ್ಕಡ್ಡಂ ರಾ ।
ಹುವೆ ಬರ್ಪಂತೆಯ್ದೆ ವಂದನತ್ತತ್ತನುತಾ ॥
ಕುವರನ ರಥಕ್ಕೆ ತೂರ್ಣಂ ।
ಸುವರ್ಣನಾಭಂ ವಿರೋಧಿಜನಶಮನಾಭಂ ॥ ೯೧

ಅಂದುಭಯಸ್ಯಂದನಾಶ್ವಂಗಳುಂ ವಿಳಿತಾಸ್ಯಂಗಳಾಗೆ,

ಇಸಲೆಡೆವಡೆಯದೆ ಶಕ್ತಿಯಿ ।
ನಸನುಭುಜಾಬಲನಳುರ್ಕೆಯಿಂದಿಡೆ ಬಿೞ್ದಂ ॥
ವಸುಧೆಗೆ ರಥದಿಂ ಮೂರ್ಛಾ ।
ವಸಕ್ತಮತಿ ಧರ್ಮಪಾಲನಭಿಹತನುಮರ್ಗಂ ॥ ೯೨

ಆಗಳವನನೆಯ್ದೆ ವಂದು

ಅಭಯವಚೋಮಂತ್ರದಿನೆ ।
ತ್ತಿ ಭಯಂಕರಶಕ್ತಿಸರ್ಪದಷ್ಟನನುಯ್ದಂ ॥
ಪ್ರಭುಪಾರ್ಶ್ವಕ್ಕಾಸೋಮ ।
ಪ್ರಭಾಸುತಂ ಕೃತವಿರೋಧಿಜೀವಗ್ರಾಹಂ ॥ ೯೩

ಅದಂ ಕಂಡತಿಪ್ರವೃದ್ಧಕೋಪಾವಲೇಪಂ ಪೃಥ್ವೀಪಾಲಭೂಪಾಲನಾತ್ಮಗತದೊಳಿಂತೆಂದಂ:—

ಈರಣದೊಳ್ ಧಾರಿಣಿಯುಂ ।
ವಾರಣಮುಮುಮೆನ್ನ ಸುತನುಮಂ ಪಿಡಿದ ದುರಾ ॥
ಚಾರಮನಿದಂ ಸ್ವಹಸ್ತಾಂ ।
ಗಾರಾಕರ್ಷಣಸನಾಸಮಾದುದೆನಿಪ್ಪಿಂ ॥ ೯೪

ಅನಂತರಂ ನಿಜಾರೂಢವ್ಯಾಳಶುಂಡಾಲಮಂ ಬಳಸಿ ನಿಂದ ಮೌಳಬಲಮನರನೆಲೆಗೆ ನೂಂಕಲ್ವೇೞ್ದು ತದ್ಬಲದಿನರಾತಿಯುಳವೞಿದು ಬೞಿಯುಮೆನ್ನ ಕೂಪರ್ಂ ತೋಱ್ಪೆನೆಂದಿರ್ಪನಂ ಪದ್ಮನಾಭನರನಾಥನಾತನ ಮನಮುಮಂ ಪತ್ತೆಸಾರ್ವ ತಳವರ್ಗದ ನಿಗ್ರಹವೃತ್ತಿಯುಮಂ ಕಂಡಿದು ಮದೀಯವಿಕ್ರಾಂತದರ್ಶನಾರ್ಥಮೆಂದು ಮುಂದಣ ತನ್ನ ತಳತಂತ್ರಮಂ ಕೆಲಕ್ಕೆ ತೊಲಗವೇೞ್ದು ಸಿಂಗದಣ್ಮುಮನೈರಾವತದಳವುಮಂ ಪವನಜವಮುಮನೊಳಕೆಯ್ದು ಗುಳುಗುಳಿಸುತಿರ್ಪ ವನಕೇಳೀವಾರಣಮನಣೆದು ನೂಂಕಿ,

ವಿಸಟಂಬರಿಯಿಸಿದೊಡದಿ |
ಶ್ದೆಸೆಗಂ ತನ್ಮಯದೆ ಪರಿದು ಕಲ್ಪಕ್ಷಯದೊಳ್ ||
ಮಸಗಿದ ದೆಸೆಯಾನೆಯಿದೆಂ |
ಬೆಸಕದೆ ತೋಱಿತ್ತು ಚಿತ್ರವಿಧಮಂ ವಧಮಂ || ೯೫

ಚರಣತಳಪ್ರಘಾತದೆ ಪದಾತಿಗಳಂ ನಖರಪ್ರಹಾರದಿಂ |
ತುರಗದಟಿಂಗಳಂ ಕರಸಮಾಹತಿಯಿಂ ರಥಸಂಕುಳಂಗಳಂ ||
ಕರರದಘಾತದಿಂ ದ್ವಿರದಸೇನೆಗಳಂ ತವೆ ನುಗ್ಗುಮಾಡಿ ಭೀ |
ಕರತರಮಾಯ್ತಿಭಂ ವಿಲಯಕಾಲಕರಾಳಲುಲಾಯಸನ್ನಿಭಂ || ೯೬

ತುೞಿದು ಕೆಲಂಬರಂ ಕೆಲಬರಂ ನಖದಿಂದಿೞಿದೆಯ್ದೆ ಹಸ್ತದಿಂ |
ಪಿೞಿದು ಕೆಲಂಬರಂ ಕೆಲಬರಂ ತೆಱವಿಂದಣೆಚೆತ್ತಿ ಕೋಡೊಳ ||
ಪ್ಪಳಿಸಿ ಕೆಲಂಬರಂ ಕೆಲಬರಂ ಕಡೆವಾಯೊಳವುಂಕಿ ಕೊಂದುದು |
ಳ್ಳುೞಿಯದೆ ನಿಂದರಂ ತುೞಿಲಸುಂದರನಾವನಕೇಳಿವಾರಣಂ || ೯೭

ಆಗಳ್,

ಪುದಿದಿದಾರ್ಚತುರಂಗಸೇನೆ ಕಿಱಿದಾಂತಟ್ಟಾಡೆಯುಂ ಬಲ್ಪಡಂ |
ಗಿದುದಿಲ್ಲೊಲ್ಲಬೆ ಭೀತಿಯಿಂ ಕಿಱಿದು ಬೆನ್ನಿತ್ತೋಡೆಯುಂ ಕಾಯ್ಪುಗುಂ ||
ದಿದುದಿಲ್ಲೀತನೆ ಗಂಡನೆಂದೆನಿಸಿದಂ ಮಾರ್ಪಡಿಯಿಂ ಬೂದಿ ಪಾ |
ಱಿದ ಕೆಂಡಕ್ಕಣೆಯಾಗಿ ನಿಂದು ಪೃಥಿವೀಪಾಲಾವನೀಪಾಲಕಂ || ೯೮

ಅಂತವಲಂಬಿತಧೈರ್ಯನುಂ ದ್ವಿಗುಣಿತಶೌರ್ಯನುಮಾಗಿ ತನ್ನೊಳಿಂತೆಂದಂ:—

ಎನಿತಂ ಬೆಳ್ಮಿಗವುಂ ಗೆ ।
ಲ್ದನಿತಱೊಳಾಂತಪುದೆ ಶರಭಮಂ ಕೇಸರಿ ಮು ॥
ತ್ತೆನಿತಂ ಬೆಳ್ಳಾಳಂ ಗೆ ।
ಲ್ದನಿತಱೊಳಂ ಪದ್ಮನಾಭನೆನೆಗಾಂತಪನೇ ॥ ೯೯

ಎಂದು ಮಾಣದೊಂದೆ ಮೆಯ್ಯೊಳ್ ಸಾವಂಗೆ ಸಂಗಡವೇಕೆಂಬಂತೆ ದಂತಿಯುಮಂ ಕೀೞಿ ಬಿಟ್ಟು ಸೈತೆಯುತ್ತುರ್ಪುದುಂ ಸೋಮಪ್ರಭಾಪ್ರಿಯನ ಪಕ್ಕದ ಪಿಡಿಗಳೊಳಿರ್ದ ಮಂತ್ರಿಮಂಡಳಿ ಕಂಡು ಪತ್ತೆಸಾರ್ದು

ಸಾಹಸಮಂ ಪೂಣ್ದಂ ರಿಪು ।
ಸಾಹಸಮುಂ ನಾಹಮಸ್ಮಿಯೆಂಬಿನಿತದಱಿಂ ॥
ಸಾಹಸಿಕನೆ ಕಡುಗಲಿ ವಿಷ ।
ಮಾಹವಮಿಾನಿಮಗಮಪ್ರಮತ್ತತೆ ಕೃತ್ಯಂ ॥ ೧೦೦

ಎಂದಂತು ಬಿನ್ನವಿಸಿದ ಮಂತ್ರಿಗಳ ವಚನಕ್ಕನುಮತಿವಚನದಿಮುಮ ನಾಹವಕ್ಕವಗಾಹನವೃತ್ತಿಯುಮಂ ದರಸ್ಮಿತದಿನಱಿಪುತ್ತುಮವರನಿರಿಸಿಮೊಂದು ತಾನುಮೇಕಾಂಗದಿಂ ಮತ್ತಮತಂಗಜಮನಣಿಮ ನೂಂಕಿ ನಿಶ್ಶಂಕವೃತ್ತಿಯಿಂ ನಡೆವಾಗಳ್

ದೂತಂಗೋಲಗದೊಳ್ ಪೆ ।
ರ್ಮಾತಂ ಮಗನಿಂದೆ ನುಡಿಯಿಪೆಡೆಯಲ್ತಿದು ಸಂ ॥
ಜಾತಸಮರಾವಸರಮಿ ।
ನ್ನೀತೆಱದೊಳಮಱಿಯಲಕ್ಕುಮೆನಗಂ ನಿನಗಂ ॥ ೧೦೧

ಅಂತು

ಗಜರಿಪುನಾದದಿಂ ಗಜಱಿ ಗರ್ಜಿಸಿ ತತ್ತಳನಿಟ್ಟ ಶಕ್ತಿಯಂ ।
ನಿಜಕರಶಕ್ತಿಯಿಂ ಪ್ರಬಳಶಂಕುವನುದ್ಧರಶಂಕುವಿಂ ಸಮಂ ॥
ತಜನಿಪ ಕುಂತಮಂ ನಿಶಿತಕುಂತದಿನೋವದೆ ನುರ್ಗುಮಾಡಿದಂ ।
ಗುಜುಗುಜುಗೊಳ್ವ ಮಂತ್ರಿಗಳ ಚಿತ್ತದ ಸಂದೆಗವೋಡೆ ನಾಡೆಯುಂ ॥

ಅನಂತರಮಿಮಂ ವ್ಯರ್ಥಾಯಾಸನುಂ ಮುಕ್ತಮರಣತ್ರಾಸನುಮಪ್ಪದ

ಱಿಂ ಮೇಲ್ವಾಯ್ದುರವರಿಸಿದನೆಂದಱಿದು ಮುನ್ನಮೆ ಕರಮುಕ್ತಶಸ್ತ್ರ
ಪಾತಪ್ರಮಾಣಭೂಮ್ಯಂತರದೊಳ್

ಪೂಣಿಸಿ ಕಂಠಮಂ ತಿರಿಪಿ ಚಕ್ರದೊಳಟ್ಟೊತೆ ನೀಳಶೈಳದಿಂ ।
ಕ್ಷೋಣಿಗುರುಳ್ವ ಗುಂಡೆನೆ ಶಿರಂ ಕರಿಯಿಂದೆ ನೆಲಕ್ಕೆ ಬೀೞೆ ಮುಂ ॥
ಕಾಣದ ಬೆನ್ನನಿಂ ಪಗೆಗೆ ತೋಱೆನೆನುತ್ತೆ ಮರಲ್ವಮೆಯ್ಯೊಳಿಲ್ ಗತ ।
ಪ್ರಾಣಮದೇಂ ಮಲಂಗಿದುದೊ ಸಾರಿಯುನೆಂದು ಕಬಂಧಮಾತನಾ ॥ ೧೦೩

ಆಸಮಯದೊಳ್

ತೀವಿದುದು ನಭಮನಮರರ ।
ಹೋವೀರನಿನಾದದೊಡನೆ ತತ್ಕರತಳಲೀ ॥
ಲಾವಿಗಳದಮರತರುನಿಕ ।
ರಾವಿರಳದಳತ್ಪ್ರಸೂನವಿಸರಾಸಾರಂ ॥ ೧೦೪

ಘನಸಂಗ್ರಾಮಾಂಧಕಾರಂ ಪರೆಯೆ ರಿಪುಕಬಂಧೋಚ್ಚಲದ್ರಕ್ತಸಂಧ್ಯಾ।
ಜನಿತಂ ರಾಗಂ ತೆರಳ್ದೋಸರಿಸೆ ನಿಜಚಮೂಚಕ್ರಚಕ್ರೋತ್ಸವಂ ಪೆ ॥
ರ್ಚೆ ನಮದ್ಭೂಪಾನನಾಂಭೋರುಹಮಲರೆ ನವೀನೋದಯಾರ್ಕಂಬೊ
ಲಾಗಳ್ । ವನಕೇಳೀಪೂರ್ವಶೈಲಾಗ್ರದೊಳೆಸೆದನೂನಪ್ರಭಂಪದ್ಮನಾಭಂ ॥

ತೃತೀಯದ್ವೀಪದಂತೆ ನಿವಿಷ್ಟೇಷ್ವಾಕಾರನಾನುಷೋತ್ಕರಮುಂ, ಕುರುಧರೆಗಳಂತೆ ಪರಿಚ್ಛಿನ್ನಗಜದಂತಸಿರತ್ನಮುಂ, ಐರಾವತಕ್ಷೇತ್ರದಂತೆ ರಕ್ತಾಪಗಾಪ್ರವಾಹಪರಿಚಿತಮುಂ, ನಿರಯನಿಳಯದಂತೆ ಪತಿತಾಸಿಪತ್ರ ಭೀಷಣಪ್ರದೇಶಮುಂ, ಕಾಲೋದಕವಾರ್ಧಿಯಂತೆ ಪರಿನಿಷ್ಕ್ರಾಂತಪ್ರಷ್ಕ ರಾರ್ಧಮುಮಪ್ಪ ಸಂಗ್ರಾಮಭೂಮಿಯುಂ ಪೊಜಮಟ್ಟು ತನ್ನಿಕಟದೊಳ್ ನಿಂದು ನಿರ್ನೀತಮೇತನಮುಣರುಂ ಶಸ್ತ್ರಘಾತಮರಣರುಮಪ್ಪ

ಬಂಧುನೃಪಾಲರ ನಿಜಸಂ ।
ಬಂಧಿಗಳ ಶರೀರದಹನಲೌಕಿಕಮಂ ನಿ ॥
ರ್ಬಂಧದೆ ಮಾಡಿಸಿದಂ ದಯೆ ।
ಯಿಂ ಧರಣಿಪನಿಂಧನೀಕೃತೇಷುಪ್ರಸರಂ ॥ ೧೦೬

ಅಂತು ಮಾಡಿಸಿ ಬೞಿಯಂ ದುಸ್ಸಹರಣವ್ರಣಿತಮಾದ ಸೇನೆಯಂ ಸನ್ಮಾನವಾಹನಪುರಸ್ಸರಂ ಬೀಡಿಂಗೆ ಕಳಿಸುತ್ತಿರ್ಪನ್ನೆಗಂ

ಮಾಂದದೆ ಕುಂದದೆ ಬಣ್ಣಂ ।
ಬಂದಂ ತದ್ದ್ರಪ್ರವೆನುತ್ತೆ ಭೀಭತ್ಸಲತಾ ॥
ಕಂದಮನೆ ತರ್ಪತೆಱದಿಂ ।
ತಂದಿಱಿಪಿದನಿದಿರೊಳೊರ್ವನಾಪಂದಲೆಯಂ ॥ ೧೦೭

ಅದಂ ಮದಗಜೋತ್ತುಂಗಮಸ್ತಕನ್ಯಸ್ತಸ್ವಸ್ತಿಕಂ ನೋೞ್ಪಾಗಳ್

ಅಱೆಮುಗಿರ್ದ ದಿಟ್ಟಿ ನಸುಗರ್ಚಿದ ನಾಲಗೆ ಬಿರ್ಚಿ ನೆತ್ತರೊಳ್ ।
ಪೊರೆದ ಶಿರೋರುಹಂ ಪುಡಿ ಪಗಿಲ್ತಿಧೂಸರಮಾದ ಮೀಸೆ ಭೋ ॥
ರ್ಗರೆದೆಱಗುತ್ತುಮಿರ್ಪ ನೊಣಿಮುಣ್ಮುವ ಪುಣ್ಬೊಲಸೆಂಬಿವೆಯ್ದೆ ಕೊ ।
ಕ್ಕರಿಕೆಯನೀಯೆ ಭೂಮಿಪಸುತಂ...ತನುವೆಂದು ಪೇಸಿದಂ ॥ ೧೦೮

ಅಂತನುಪ್ರೇಕ್ಷಾವಿಚಕ್ಷಣಮತಿಯಪ್ಪುದಱಿಂ ಶರೀರಾಶುಚಿತ್ವಾಧ್ರುವತ್ವಂಗಳ್ ಮನದೊಳ್ ನೆಲಸೆ ಕೆಲದೊಳಿರ್ದ ಪುರುಭೂತಿಪ್ರಭೃತಿಮಂತ್ರಿವರ್ಗಕ್ಕಿಂತೆಂದಂ:—

ಸಲೆ ಶುಚಿಯೊಡಲೆಂದೆಗ್ಗರ ।
ತಲೆನಾಯಕನೆಂಗೆ ಬಲ್ಲನಂಗಾವೊಲಗ ॥
ಒಲೆಯಂತೆ ನೀಳ್ದ ತಲೆ ಮೂ ।
ದಲಿಸುತ್ತಿರ್ದಪ್ಪದನುಕ್ತಸಿದ್ಧಮದೀಗಳ್ । ೧೦೯

ಮಾತೇಂ ರೇತಶ್ಶೋಣಿತ ।
ಜಾತಕ್ಕೆತ್ತಣದೊ ಶುಚಿತೆ ಪರಿಭಾವಿಪ್ಪೊಡಂ ॥
ತೀತನುಗೆ ರುಗ್ಜರಾಪರಿ ।
ಭೂತಕ್ಕೆತ್ತಣದೊ ಚಿರತೆ ನಚ್ಚುವನೆಗ್ಗಂ ॥ ೧೧೦

ತಾಂ ಜರೆಯ ಗೊತ್ತು ಕುತ್ತದ ।
ಪುಂಜಂ ಪಂದೊವಲ ಪಂಜರಂ ಪಾಪದ ಬೀ ॥
ಜಂ ಜೀವದ ಸೆಱೆವನೆ ಜವ ।
ನೆಂಜಲಿಸಿದ ಬುತ್ತಿ ತನುವೆನಿಪ್ಪುದು ಪುಸಿಯೇ ॥ ೧೧೧

ಅಂಬಿಗನೆ ವಶದೆ ಪಱುಗೋಲ್ ।
ತುಂಬಿದ ತೊಱೆಯೊಳಗೆ ಸುೞಿನ ತೆಱದಿಂ ಸಂಸಾ ॥
ರಾಂಬುಧಿಯೊಳ್ ಸುೞಿವುದು ಜೀ ।
ವಂಬಿಡಿದೊಡಲಲ್ಲದಂದು ಚೇತನಮುಂಟೇ ॥ ೧೧೨

ಅಂತುಮಲ್ಲದೆಯುಂ

ಅಱುದ್ದಂ ವಿಷಯಸುಖಂಗಳ್ ।
ನೆಯ್ದಿಪವಿೂತನುಗೆನುತ್ತೆ ಸಿಂಗದ ತಳೆಗಂ ॥
ಪಾಯ್ದು ವಿವೋಹದಿನಕ್ಕಟ ।
ಮಾಯ್ದು ಜನಂ ಬರ್ದುರ್ತಿರ್ಪುದು ಸಂಸೃತಿಯೊಳ್ ॥ ೧೧೩

ಎಂಗುಂ ಧರಣಿಯನುಱ್ದಾ ।
ಟಂದಂಡಲೆಯುತ್ತು ಮಿಸ್ರ್ದಾಗ್ರಹದಿಂ ತ ॥
ನ್ಮೊಂದಱಿಯೊಡಲಂ ರಕ್ಷಿಸ ।
ಲೆಂಬೆನಲವಿವೇಕಮಂರಸುಗಳ್ಗೊಚ್ಚತವೋ ॥ ೧೧೪

ಕಾವರಿವರೆಂದು ಕರಮಂ ।
ಜೀವಿತಮೆಂಬಂದದೀಯೆ ಷಡ್ಭಾಗಮನಿಂ ॥
ತೀವಸುಧಾಜನಮುದಱಿಂ ।
ದಾವೆನಿಸುವರರಸರೆಂದು ಬಗೆದತಿವಿರಸಂ ॥

ಮತ್ತಂ

ನವರಾಜ್ಯಾಭಿಷವಾರಿಶೀತಜಲದಿಂದಂ ಸನ್ನಿಪಾತಂ ತಗು ।
ಳ್ದವೊಲಂತಿನ್ನುಡಿಯರ್ ತದುತ್ಸವಸಮುದ್ಯದ್ದುಂದುಭಿಧ್ವಾನದಿಂ ।
ಕಿವಿಗೆಟ್ಟಂತಿರೆ ಕೇಳರಾನೊಸಲ ಪಟ್ಟಂ ಜೋಲ್ದು ಕಣ್ಣಾವಗಂ ।
ಕವಿದಿರ್ಪಂದದೆ ಕಾಣರಿನ್ನುಮರಸರ್ ಸಂಪನ್ನದೈ(?)ಕಾಲಸರ್ ॥ ೧೧೫

ತೊದಳಂ ನುಡಿವರ್ ನಡೆಯರ್ ।
ಪದುಳಂ ಕಿಸುಗಣ್ಣಿ ನೋಡುವರ್ ತಮ್ಮುಮನಿಂ ॥
ತಿದಿರುಮನೇನೆಂದಱಿಯರ್ ।
ಮಿದಿರೋನ್ಮತ್ತರವೊಲವನಿಪಾಲರ್ ಪಲರುಂ ॥ ೧೧೬

ಭಕ್ತಿದ್ವೇಷಂ ಜಡಸಂ ।
ಸಕ್ತಿ ಸದಾಚರಿತಲಂಘನಂ ವಿಕಲವಚೋ ॥
ಯುಕ್ತಿ ಕಟುವುಖತೆ ಕುಂದದ ।
ಮುಕ್ತಜ್ವರನಂದದಿಂದಮರಸರೊಳೆಂದುಂ ॥ ೧೧೮

ಕುಂದದು ಬೆಳ್ಗೊಡೆಯು ನೆಲಿ ।
ಲೊಂದಿನಿತುಂ ತೃಷ್ಣೆ ನೃಪರ ದುರ್ಗುಣದೊಳ್ ಮು ॥
ತ್ತೊಂದಿನಿತು ಪೊಱದಿದು ಬಿಸ ।
ವಂಡಂ ಚಮರರುಹಪವನಪಾತದಿನೆಂದುಂ ॥ ೧೧೯

ಮಱೆದುಂ ಕಾಣರ್ ಕಂಡೊಡ ।
ಮಱಿಯರ್ ಮಾನ್ಯರಿವರೆಂದು ಮತ್ತಱದೊಡ ಮೇಂ ॥
ತೊಱೆವರ್ ದಾಕ್ಷಿಣ್ಯಮುಮಂ ।
ತೆಱನಿಂತುಟು ನೋಡೆ ಸಿರಿಗರಂ ಪೊಡೆದವರಾ ॥ ೧೨೦

ಕನಕಾಭಿಧಾನಸಾಮ್ಯದಿ ।
ಜನಿಯಿಸುದುನ್ಮತ್ತವೃತ್ತಿಯಂ ಧುತ್ತೂರಂ ॥
ಕನಕಮೆ ತಾಂ ತತ್ಕ್ಷಣದೊಳ್ ।
ಜನಿಯಿಸುದಚ್ಚರಿಯೆ ಜನದ ಮನದೊಳ್ ಮದಮಂ ॥ ೧೨೧

ಸಿರಿಯೆಂಬ ಪೊಣ್ಬೆಯಾಗಳೆ ।
ಸರಕ್ತೆಯಾಗಳೆ ವಿರಕ್ತೆಯುವಳೊಲವನದಂ ॥
ಚಿರಮೆಂದು ನಚ್ಚುವಂಗಂ ।
ಚಿರಮುಕ್ಕುಮೆ ಬಗೆವೊಡಱಿವುಮಱವುಂ ನೆರವುಂ ॥ ೧೨೨

ಮಿಥ್ಯಾಜ್ಞಾನತೆಯಿನಸ ।
ನ್ಮಿಥ್ಯಾಚರಣಕ್ಕೆ ಸಂದು ಸಲೆ ಸತ್ಪಥಮಂ ॥
ತಥ್ಯಮನೊಲ್ಲದೆ ರೋಗಿಗ ।
ಪಥ್ಯಕ್ರಿಯೆಯಾದ ತೆಱದೆ ಕಿಡುವರ್ ಪಲರುಂ ॥ ೧೨೩

ಎಂದು ನುಡಿದು ಮತ್ತಂ ತನ್ನೊಳಿಂತೆಂದಂ:—

ಬಡಲಧ್ರುವಶುಚಿಯಿದಂ ।
ಬಿಡುವುದು ಧರ್ಮವನೆ ಪಿಡಿವುದೆಂದಾತೆಱದಿಂ ॥ ೧೨೪
ನಡೆಯುವೆ ಮಱೆದಾನಿಂತಿ ।
ದೊರ್ದೆ ಕಮ್ಮರಿಯೋಜನೆಂಬ ನುಡಿಗೆಡೆಯುಪ್ಪಿಂ ॥

ಕರಣಗ್ರಾಮಂಗಳ್ ಮಾಂ ।
ಕರಿಸಿದುವಿನ್ನೆ ಪರಮರಸುತನದೊಳಮೆನ್ನಂ ॥
ಪರಮತಪೋಗ್ನಿಯಿನಿನ್ನವ ।
ನುರಿಸುವೆನಲ್ಲದೊಡೆ ಬಲ್ಪು ಕಡೆಯ್ಯೆದುಗುಮೇ ॥ ೧೨೫

ಅಂತು ಸಂಸಾರಶರೀರಭೋಗನಿರ್ವೇಗಪರತಂತ್ರನಾತ್ಮತಂತ್ರಮಂ ವಿಷತಂತ್ರಮೆಂದುಂ, ಮಂತ್ರಿಯನಾಭಿಚಾರಿಕಮಂತ್ರಿಯೆಂದುಂ, ಕೋಶಮಂ ಮಧುಕೋಶಮೆಂದುಂ, ದೇಶಮನಹಿತೋಪದೇಶಮೆಂದುಂ, ಸಹಜಸಖನಂ ವಾಯುಸಖನೆಂದುಂ, ದುರ್ಗಮಂ ವೃಜಿನದುರ್ಗಮೆಂದುಮಿಂತು ಸಪ್ತಾಂಗಮುಮಂ ದೀರ್ಘಸಪ್ತಾಂಗಮಾಗೆ ಬಗೆದಿಱಿಕೆಯ್ದು

ಬಳವದ್ರಿಪುವಂ ಚಕ್ರದ ।
ಬಳದಿಂ ಗೆಲ್ದಿರ್ದ ಕಳದೊಳಘರಿಪುವುಮನಾ ॥
ಗಳೆ ಧರ್ಮಚಕ್ರಬಲದಿಂ ।
ದಿಳಾಧಿಪತಿ ಗೆಲಲೊಡರ್ಚಿದಂ ವಿಜಯಪರಂ ॥ ೧೨೬

ಅಂತೊಡರ್ಚಿ ಬೞಿಯಂ ನಿಜತನೂಭವಂ ಸುವರ್ಣನಾಭನುಮಂ ಪೃಥ್ವೀಪಾಲನಂದನಂ ಧರ್ಮಪಾಲನುಮಂ ಕುಲವೃತ್ತಿಯೊಳ್ ನಿಲಿಪುದೆಂದು ಸಾಮಂತಸಂದೋಹಕ್ಕೆ ಮಂತ್ರಿಮಂಡಳಿಗಮುಪ್ಪಯಿಸಿ

ಪೞಿದಾತ್ಮಪ್ರಿಯದಾರದಾರಕಸುಹೃತ್ಸಂಬಂಧಬಂಧಂಗಳಂ ।
ಮುಱಿದುರ್ವೀವಲಯಾಧಿರಾಜ್ಯಸುಖಸೇವಾರಂಭಣಸ್ತಂಭಮಂ ॥
ಮೆಱೆದುದ್ವೃತ್ತವಿರಕ್ತವೃತ್ತಮದಲೀಲಾವೇಗಸಂಯೋಗದಿಂ ।
ಪೊಱಮಟ್ಟತ್ತು ತಪೋವನಕ್ಕೆ ತದಿಳಾಪಾಲೋದ್ಧುರಂ ಸಿಂಧುರಂ ॥ ೧೨೭

ಸಿರಿವೆಣ್ಣಂ ದೂವೆದೊೞ್ತಿಂಗೆಣೆಯೆನೆ ಬಗೆದಂ ಮತ್ತಮಾವಿಶ್ವವಿಶ್ವಂ।
ಧರೆಯುಂ ಮೃತ್ಪಿಂಡಮಾತ್ರಾಕೃತಿಯೆನೆ ಬಗೆದಂ ಜೈನದೀಕ್ಷಾವ್ಯಪೇಕ್ಷಾ ॥
ತುರನಾತ್ಮೀಯಾಂಗಮುಂ ಕಲ್ಮರನೆನೆ ಬಗೆದಂ ಲಬ್ಧಲಬ್ಧಿಪ್ರವೇಶಂ ।
ಧರಣೀಶಂ ವರ್ಜಿತಾಶಂ ಪರಮಸುಖವಶಂ ಕಾವ್ಯನೌಕರ್ಣಧಾರಂ ॥

॥ ಗದ್ಯಂ ॥

ಇದು ಪರಮಪುರುನ್ನಾಥಕುಲಕುಭೃತ್ಸಮುದ್ಭೂತಪ್ರವಚನಸರಿತ್ಸರಿನ್ನಾಥ
ಶ್ರುತಕೀರ್ತಿತ್ರೈವಿದ್ಯಚಕ್ರವರ್ತಿ ಪದಪದ್ಮನಿಧಾನದೀಪವರ್ತಿ

ಶ್ರೀಮದಗ್ಗಳದೇವ

ವಿರಚಿತಮಪ್ಪ

ಚಂ ದ್ರ ಪ್ರ ಭ ಪು ರಾ ಣ ದೊ ಳ್

ವಿಜಯಜನಿತವೈರಾಗ್ಯವರ್ಣನಂ

ದಶಮಾಶ್ವಾಸಂ

ಏಕಾದಶಾಶ್ವಾಸಂ

ಶ್ರೀಧರವಮುನಿಸನ್ನಿಧಿಗೆ ವಿ ।
ಶೋಧಿಯುತಂ ಪದ್ಮನಾಭವಿಭು ಪೋಗಿ ತಪ ॥
ಶ್ರೀಧರನಾದಂ ಧೈರ್ಯ್ಯಧ ।
ರಾಧರಪತಿ ಜೈನಜನಮನೋಹರಚರಿತಂ ॥ ೧

ಧೃತಪಂಚರತ್ನಮಂ ರಾ ।
ಗಿತೆಯೊಳ್ ಭೂಷಣಮನಾಂಪ ತೆಱದಿಂದೆ ವಿರಾ ॥
ಗಿತೆಯೊಳ್ ಪಂಚಮಹಾವ್ರತ ।
ಯುತನಂ ನಿರುಪಮಮನಾಂತನಾವಿಭು ತಪಮಂ ॥ ೨

ಅಂತು ವಿಶ್ರುತಶ್ರಮಣಶ್ರೀಸಮಾಶ್ರಯಣನಾಗಿ ಸಮನಂತರಂ,

ಪೀನತರಾಂಗತರಂಗವಿ ।
ತಾನಮನಖಿಳಾಂಗಬಾಹ್ಯಖಳವಿಭ್ರಮನಂ ॥
ಜ್ಞಾನಾಭ್ಯಾಸಭುಜಂಗಳ ।
ನೇನೀಸಿದನೋ ಶ್ರುತಾಬ್ಧಿಯಂ ತನ್ಮುನಿಪಂ ॥ ೩

ಅಯ್ದುಂ ಸಮಿತಿಗಳೊಳ್ ಕಡೆ ।
ಯೆಯ್ದುವಿನಂ ತತ್ತದುದ್ಯಮಂ ಬಗೆಯೊಳ್ ತ ॥
ಳ್ವೊಯ್ದಪ್ರಮತ್ತತೆಯಿನೇ ।
ನಯ್ದನೊ ಸುಚರಿತದೊಳನಿಸಿದಂ ಮುನಿಮುಖ್ಯಂ ॥ ೪

ಅಪಗತಬಹ್ವಾರಂಭ ।
ಪ್ರಪಂಚನಾಗಿರ್ದ್ದುಮುಪಚಿತೋರುವೃಷಂ ಗು ॥
ಪ್ತ್ರ್ಯಪಯುಕ್ತನಾಗಿಯುಂ ಪ್ರಕ ।
ಟಪವಿತ್ರಚರಿತ್ರನಾದನಾಮುನಿ ಚಿತ್ರಂ ॥ ೫

ಮತ್ತಮುೞಿದ ಮೂಲಗುಣಂಗಳಿರ್ಪತ್ತೆಂಟಱೊಳಂ ನೆಱೆದು

ವ್ರತಿಪತಿ ವಿಶುದ್ಧಚರಿತಂ ।
ವಿತತಾಷ್ಟಾದಶಸಹಸ್ರಶೀಲಸಮೇತಂ ॥
ನುತಚತುರಶೀತಿಲಕ್ಷ ।
ಪ್ರತೀತಗುಣಮಣಿವಿಭೂಷಣಂ ತಾನಾದಂ ॥ ೬

ವ್ರತಿನಾಥಂ ಕ್ಷಮೆ ಮಾರ್ದವಂ ಋಜುತೆ ಸತ್ಯಂ ಶೌಚಮಾಸಂಯಮಂ ।
ನುತಸಂ ತ್ಯಾಗಮಕಿಂಚನತ್ವಮಪಜಿಹ್ಮಂ ಬ್ರಹ್ಮಚರ್ಯಂ ದಲೆಂ ॥
ಬಿತುಳಂಗಳ್ ಕುಶಲಂಗಳಿಂತು ದಶಧರ್ಮಂಗಳ್ ನಿಜಾಚಾರದೊಳ್ ।
ಸತತಂ ಸಂದಿರೆ ನಾಡೆ ರೂಢಿವಡೆದಂ ಯೋಗೀಂದ್ರಸಂದೋಹದೊಳ್ ॥ ೭

ಅಂತು ಬಾಹ್ಯಾಭ್ಯಂತರಭೇದಭಿನ್ನಮಪ್ಪ ಪನ್ನೆರಡು ತಪಂಗಳೊಳಾಚರಣಪರಿಣತೆಯನೆತ್ತಿಕೊಂಡು

ಆರಯೆ ಸಾಕಾರನಿರಾ ।
ಕಾರಮೆನಿಪ್ಪೆರಡು ಭೇದದನಶನಮಂ ಸಾ ॥
ಕಾರನಿರಾಕಾರಸ್ವೀ ।
ಕಾರಾತ್ಮಂ ಮೊದಲ ತಪಮನಾಂತಂ ಮುನಿಸಂ ॥ ೮

ಬಂದೊಂದು ತುತ್ತನುಣಿಸಿನೊ ।
ಳೊಂದವುಬಿಪ್ಪಿನೆಗಮಿೞಿಪಿ ಮತ್ತೀಱುಸಿಪ್ಪುದೆಂ ॥
ಬಂದದೆರಡನೆಯ ತಪಮೇಂ ।
ಸಂದುದೊ ಮುನಿಪತಿಗೆ ವರ್ಯಮವಮೋದರ್ಯಂ ॥ ೯

ಶಾಂತಾತ್ಮಂಗೆಸೆಗುದು ತಪ ।
ಮಿಂತಪ್ಪವರಿಂತು ನಿಱಿಸಿವಲ್ಲದೆ ನಿಲವಿ ॥
ಲ್ಲುಂತೆಮಗೆಂಬೀ ಪ್ರಾಕ್ಸಿಯ ।
ನಾಂತುದು ಮಯೂಖನೆಯ ವೃತ್ತಿಪರಿಸಂಖ್ಯಾನಂ ॥ ೧೦

ಕರಮೆ ಮುನಿ ದುಗ್ಧದಧ್ಯಾ ।
ದಿರಸಂಗಳನೆಯ್ದೆ ತೊಱೆದು ವೃಷ್ಯಂಗಳನ ॥
ಚ್ಚರಿ ಚರಿತಮೆನಿಸಿ ನಾಲ್ಕನೆ ।
ಯ ರಸಪರಿತ್ಯಾಗವೆಂಬ ತಪಮಂ ತಳೆದಂ ॥ ೧೧

ವಿಗೆತನಪುಂಸಕಯೋಷಿ ।
ನ್ಮೃಗಪಶುವೆನಿಪೆಡೆಯೊಳಲ್ಲದಿರಲಾಗೆಂಬು ॥
ಜ್ಞಗದಯ್ದನೆಯ ತಪಂ ಸಾ ।
ಧುಗುಣಾಗ್ರಣಿಗೆಸೆದುದಾವಿವಿಕ್ತಾವಾಸಂ ॥ ೧೨

ಅಂತನಂತರಂ ಕಾಯಕ್ಲೇಶಮೆಂಬಾಱನೆಯ ಬಾಹ್ಯತಪೋನುಷ್ಠಾನದೊಳ್ ನಿಷ್ಠಿತನಾಗಿ ಕಾಲತ್ರಯದೊಳಂ ಯಥಾಕ್ರಮದಿಂ

ಬಿಸಿಲೆಸೆವ ಜೊನ್ನಮರ್ಕನೆ ।
ಸಸಿ ದಿವಸಮೆ ರಾತ್ರಿಯಾದುದೆನೆ ಕಲ್ನೆಲೆಯೊಳ್ ॥
ಮಿಸುಕದೆ ಶಾಂತರಸಂ ಮೂ ।
ನಸದೊಳ್ ತಣ್ಮಲೆಯೆ ನೆಲಸಿದಂ ಯೋಗೀಂದ್ರಂ ॥ ೧೩

ಧಾರಾಭಿಷೇಕಮಿದುವೆ ತ ।
ಪೋರಾಜ್ಯಕ್ಕೆನಿಸೆ ಸುರಿವ ಮೞೆ ಘನರುತಿ ತೂ ॥
ರ್ಯಾರವಮಾಗೆ ಮುನೀಂದ್ರಂ ।
ಬೇರೂಱಿದ ಬೀೞಲಂತೆ ಮರಮೊದಲಿರ್ದಂ ॥ ೧೪

ಅಮಿತಹಿಮಕಣಗಣಂ ದೇ ।
ಹಮನಾದಂ ಪುದಿಯೆ ಧೀರನಂಗಜಸಮರೋ ॥
ದ್ಯಮದಿಂ ತೊಟ್ಟಂ ಪವಿಕವ ।
ಚಮನಾವಗಮೆನಿಸಿ ಬೆಳ್ಳವಾಸದೊಳಿರ್ದಂ ॥ ೧೫

ಮತ್ತಂ ಪ್ರಾಯಶ್ಚಿತ್ತವಿನಯವೈಯ್ಯಾವೃತ್ಯಸ್ವಾಧ್ಯಾಯಧ್ಯಾನವ್ಯುತ್ಸರ್ಗಮೆಂಬಾಱುಮಾಭ್ಯಂತರತಪದೊಳಂ ನೆಱೆದು

ಆದ್ವಾದಶತಪಮಂ ತಳೆ ।
ದಾದ್ವಾವಿಂಶತಿಪರೀಷಹಂಗಳುಮಂ ಗೆ ॥
ಲ್ದದ್ವೈತಂ ಮುನಿಮುಖ್ಯಂ ।
ಸ್ಯಾದ್ವಾದಮತಾದ್ವಿತೀಯನೆನೆ ಪೆಸರ್ವೆತ್ತಂ ॥ ೧೬

ಗಿಡಿಗಿಡಿಜಂತ್ರವಾಯ್ತೊಡಲೊಡಲ್ವಿಡಿದಿರ್ದಖಿಳೇಂದ್ರಿಯಂಗಳುಂ ।
ಮಿಡುಕದೆ ಪೋಮುವಂತವಱ ಪೋಗಿನೊಳಾಯ್ತು ಮನಕ್ಕೆ ಸೌಸ್ಥ್ಯಮಾ ॥
ಗೆಡಣಿಪ ಸೌಸ್ಥ್ಯದಿಂದೆ ನೆಲಸಿತ್ತು ಶುಭಾನ್ವಿತಮಪ್ಪ ಬೋಧಮುಂ ।
ತೊಡರಿಪ ಬೋಧದೊಂದೆಸಕದಿಂ ಪಱಿಪಟ್ಟುವು ಪಾಪಪಾಂಸುಗಳ್ ॥ ೧೭

ಅನಂತರಮೇಕವಿಹಾರಿಯಾಗಿ ಮತ್ತಂ ಮೂಳೋತ್ತರಗುಣಂಗಳೊಳು ತ್ತರೋತ್ತರಂ ನೆಗೆಱೆ

ಆಮುನಿಪನೆಂಬ ರೋಹಣ ।
ಭೂಮಿಧ್ರದೊಳಿಯ್ದೆ ಸಪ್ತವಿಧಸಾಮರ್ಥ್ಯೋ ॥
ದ್ದಾಮಪ್ರಸಿದ್ಧಋದ್ಧಿ ।
ಸ್ತೋಮಂ ಪುಟ್ಟಿದುದನರ್ಘ್ಯಮಣಿನಿಕರದವೋಲ್ ॥ ೧೮

ಬಿಟ್ಟು ಕಳೆದೆಳೆಯನಿನ್ನಾಂ ।
ಮುಟ್ಟುವುದನುಚಿತಮಿದೆಂಬ ತೆಱದಿಂದೆ ಮುಗಿ ॥
ಲ್ವಟ್ಟೆಯೊಳ್ ಚೈತ್ಯಯಾತ್ರೆಗೆ ।
ಪುಟ್ಟಿದ ಚಾರಣಗುಣಪ್ರಭಾವದೆ ನಡೆದಂ ॥ ೧೯

ಅದಲ್ಲದೆಯುಂ

ಬಱಲೆ ತಗುಳ್ದು ಪುತ್ತಿಡುವುದೆಯ್ದೆ ಮೃಗಾವಳಿ ಕೋಡ ತೀಂತೆಗೀ ।
ಡಿಱಿವುದು ಪಕ್ಕಿ ಗೂಡಿಡುವುದಾವರಿಸಿರ್ದಲತೋತ್ಕರಂ ಪಗಂ ॥
ಡಿಱಿವುದು ನಿಂದು ಪಾವನತಪೋವನದೊಳ್ ಪ್ರತಿಮಾನಿಯೋಗದೊಳ್ ।
ನೆಱೆದಮಳಾಂತರಂಗನೆನಿಸಿರ್ದ ಮುನೀಶನ ನಿಶ್ಚಳಾಂಗದೊಳ್ ॥ ೨೦

ಸುತ್ತುವರಿವಹಿಯನಳ್ವುದು ।
ಸುತ್ತೀಡಿಱಿವೆರಲೆಗೋಡಿನಿಂ ಬಿಡುವುದು ಮೆ ॥
ಯ್ಯೆತ್ತಿದ ಲತಾಳಿ ಮುನಿಪನ ।
ಚಿತ್ತದೊಳಲ್ಲದ ತೊಡರ್ಪು ಮೆಯ್ಯೊಗಪ್ಪುದೇ ॥ ೨೧

ಅನಂತರಂ ಕೇವಳಜ್ಞಾನೋಪಲಕ್ಷಿತಜೀವದ್ರವ್ಯಸಹಕಾರಿಕಾರಣಬನ್ಧಪ್ರಾರಂಭಮುಂ ಪಾಕಶಾಸನಾಸನಕಂಪಸಂಪಾದಕಮುಂ ತ್ರಿಭುವನಕ್ಷೋಭಕರಣಸಮರ್ಥಮುಂ ತೀರ್ಥಕರನಾಮಕರ್ಮಕರಣಕಾರಣಮುಮಪ್ಪ

ಪದಿನಾಱುಂ ಭಾವನೆಯುಂ ।
ಸದಮಳಭಾವಂ ಸಮಂತು ಭಾವಿಸಲಾದಂ ॥
ಪದೆದಂ ಪುಣ್ಯಮಗಣ್ಯಮ ।
ದಿದಿರ್ವ*ರಲಿರ್ದುದು ಮನಕ್ಕೆ ಮಾಡದೆ ಪದೆಪಂ ॥ ೨೭

ಅದೆಂತೆಂದೊಡೆ–ಶಂಕಾದಿಮಳವಿಹೀನಮಪ್ಪ ಸಮ್ಯಗ್ದರ್ಶನಸಂಶುದ್ಧಿಯುಂ, ಗುರುಸದ್ಧರ್ಮವೃದ್ಧಸಾಧುಶ್ರುತಪ್ರೀತಿಸ್ವಭಾವಮಪ್ಪ ವಿನಯಮುಂ, ಅಹಿಂಸಾದಿವ್ರತಂಗಳೊಳಂ ತದಂಗಶೀಲಂಗಳೊಳಂ ಕ್ರೋಧಸಂಜ್ವಲನಾದ್ಯತಿಚಾರವಿರಹಿತಮಪ್ಪ ಶೀಲವ್ರತಾನತಿಚಾರಮುಂ, ನಯಪ್ರಮಾಣನಿಕ್ಷೇಪಲಕ್ಷಿತಶಾಸ್ತ್ರಾಧ್ಯಯನಲಕ್ಷಣಮಪ್ಪ ಜ್ಞಾನೋಪಯೋಗಮುಂ, ಘೋರಸಂಸಾರದುಃಖಭೀರುತ್ವಪ್ರಕೃತಿಯಪ್ಪ ಸಂವೇಗಮುಂ, ಅಭಯದಾನಾದಿಗಳೊಳ್ ಶಕ್ತ್ಯನುರೂಪತ್ಯಾಗಮುಮನಗೂಢಸಾಮರ್ಥ್ಯಶರೀರಕ್ಲೇಶಲಕ್ಷಣಮುಮಪ್ಪ ಶಕ್ತ್ಯನುರೂಪತಪಮುಂ, ಸಮುಪಾತ್ತಸತ್ತಪೋವಿಘ್ನಸಂರೋಧಿಯಪ್ಪ ಸಮಾಧಿಯುಂ, ಭವ್ಯಜೀವದುಃಖಸಂಯೋಗಸಂಶೋಧನಾವ್ಯಾಪೃತಿಯಪ್ಪ ವಯ್ಯಾವೃತ್ಯಮುಂ, ಅರ್ಹದ್ಭಕ್ತ್ಯಾಚಾರ್ಯಭಕ್ತಿಬಹುಶ್ರುತಭಕ್ತಿಶ್ರುತಭಕ್ತಿಯೆಂಬ ಚತುರ್ಭಕ್ತಿಯುಂ, ಷಡ್ವಿಧಾವಶ್ಯಕಕ್ರಿಯಾಪರಿಪಾಳಮಪ್ಪಾವಶ್ಯಮುಂ, ತಪೋಧನಗೃಹಸ್ಥರತ್ನತ್ರಯಂಗಳಂ ಪ್ರಕಾಶಂಮಾಳ್ಪ ರತ್ನತ್ರಯಂಗಳುಂ, ಸದ್ಧರ್ಮ ಪ್ರಸಿದ್ಧಪ್ರಭಾವಕಮಪ್ಪ ಮಾರ್ಗಪ್ರಭಾವನೆಯುಂ, ಸದ್ಧರ್ಮಸ್ನೇಹಲಕ್ಷಣೋಪೇತಮುಮಪ್ಪ ದರ್ಶನವತ್ಸಳತ್ವಮುಮೆಂಬೀಷೋಡಶಭಾವನೆಗಳಂ ಸಮುತ್ತುಂಗತೀರ್ಥಕೃತ್ಸುಕೃತಪ್ರಾಸಾದರೋಹಣಸೋಪಾನಸಮಾನಂಗಳನುಕ್ರಮದಿಂ ಭಾವಿಸುತ್ತುಮಿರ್ದು

ಉಗ್ರತಪಸ್ಸಂಶೋಷಿತ ।
ವಿಗ್ರಹನುಜ್ಝಿತಮದಗ್ರಹಂ ನಿಜಸತ್ವೈಕ ॥
ಕಾಗ್ರಮನಂ ಮಣಿಕೂಟನ ।
ಗಾಗ್ರಮನವ್ಯಗ್ರಜೀವಿತಾಂತಂ ಸಾರ್ದಂ ॥ ೨೮

ಅಂತು ಸಾರ್ದು ತದತಿವಿಸ್ತೀರ್ಣಪ್ರಾಂಶುಕಪ್ರಸ್ತರೈಕದೇಶದೊಳ್ ಚತುರ್ವಿಧಾರಾಧನಾಪೂರ್ವಕಂ ವಿಹಿತಪ್ರಾಯೋಪಗಮನವಿಧಾನನಾಗಿ

ಯತಿಪಂ ಪರ್ಯಾಯದಿಂದಧ್ರುವಮಶರಣಮೇಕತ್ವವನ್ಯತ್ವಮಾಸಂ ।
ಸೃತಿಲೋಕಂ ಮತ್ತಮಾಱಂದದಿನಶುಚಿತೆ ಸಂದಾಸ್ರವಂ ಸಂವರಾಖ್ಯಾ ॥
ಸ್ರಿತಮಂತಾನಿರ್ಜರಾಂಕಂ ಪ್ರವಿಮಳತರಧರ್ಮಂ ಲಸದ್ಬೋಧಿಯೆಂಬೀ
ಱುತಿವೆತ್ತೀರಾಱುಮಂ ಭಾವಿಸಿದನೆಸೆವನುಪ್ರೇಕ್ಷೆಯಂ ಶಿಕ್ಷಿತಾಕ್ಷಂ ॥ ೨೪

ಅಂತು ಭಾವಿಸಿ,

ಸರ್ವಾರ್ಥಸಿದ್ಧಿಗಿದು ದಲ ।
ಗುರ್ವಿನ ನಿಶ್ರೇಣಿಯೆಂಬ ತೆಱದೇಱಿದನಂ ॥
ದುರ್ವುಗಿಡೆ ಮೋಹನೀಯಂ ।
ನಿರ್ವಂದದೆ ಬೞಿಯಮುಪಶಮಶ್ರೇಣಿಯುಮಂ ॥ ೨೫

ಮತ್ತಂ,

ತಾನೆಯ್ದೆ ಮೊದಲ ಶುಕ್ಲ ।
ಧ್ಯಾನಮನೊಳಕೆಯ್ದು ಬೞಿಯಮುಪಶಾಂತಗುಣ ॥
ಸ್ಥಾನದೊಳೆ ನಿಂದು ಸುಕೃತನಿ ।
ಧಾನಮನಾಯೋಗಿನಾಯಕಂ ಸಾಧಿಸಿದಂ ॥ ೨೬

ಅಂತು ಪದ್ಮನಾಭಯತಿ ಅವತೀರ್ಣಶರೀರಭಾರನಾಗಿ

ಅಱುವತ್ತುಮೂಱುಪಟಳಂ ।
ನೆಱೆದೆಡೆಯಿಂದತ್ತ ಲೋಕಚೂಳಿಕೆಯಿಂದಂ ॥
ಪೆಱದೇಂ ಯೋಜನಮೀರಾ ।
ಱಱಿನೆತ್ತಿರ್ಪುದು ನಿರಾಕುಳಂ ವಿಗತಮಳಂ ॥ ೨೭

ಪೆಸರಿಂದಂತದು ಸರ್ವಾ ।
ರ್ಥಸಿದ್ಧಿ ಪರಿಣಾಹದಿಂದೆ ಜಂಬೂದ್ವೀಪ ॥
ಕ್ಕೆ ಸಮಂ ಸುಖದಧಿಕಂ ಭಾ ।
ವಿಸಿ ತಳೆದುದು ಮತ್ತಮುತ್ತರಾಭ್ಯಂತರಮಂ ॥ ೨೮

ಅದು ಮುಕ್ತಿಪುರಕೆ ಗೋಪುರ ।
ಮದು ನಾಕಾನೋಕಹಕ್ಕೆ ಫಳಮಂಜರಿ ಮ ॥
ತ್ತದು ಲೋಕಾಕೃತಿಲಕ್ಷ್ಮಿಗೆ ।
ವದನಮದಹಮಿಂದ್ರರತ್ನನಿಕರಕರಂಡಂ ॥ ೨೯

ಮತ್ತಮದಱ ನಾಲ್ಕುಂ ದೆಸೆಯೊಳಂ ಪೂರ್ವಾದಿಪರ್ಯಾಯದಿಂದಂ

ಅವಿರತಮೆನೆ ವಿಜಯಂ ಮ ।
ತ್ತೆ ವೈಜಯಂತಂ ಜಯಂತನುಪರಾಜಿತಮೆಂ ॥
ಬಿವು ನಾಲ್ಕು ವಿಮಾನಂಗಳ್ ।
ಪ್ರವಿರಾಜಿಸುವಿಂದ್ರನೀಳಧರಣಿತಳಂಗಳ್ ॥ ೩೦

ಅವು ಮಣಿತೋರಣಸ್ಫುರಣಿಪ ।
ಲ್ಲವಿತಂಗಳವಿಂದ್ರರತ್ನಕೂಟವಿಟಂಕೋ ॥
ದ್ಭವರುಚಿರೇಂದ್ರಧನುಸ್ಸಂಗತ ।
ಮವಿರಳಕುಸುಮೋಪಹಾರತಾರಕಿತಂಗಳ್ ॥ ೩೧

ನಸುಗಿಱಿದಯ್ದುಮನುತ್ತರೆ ।
ಯ ಸುಖಂ ಮೋಕ್ಷದ ಸುಖಕ್ಕೆ ಪರಿಕಿಪೊಡಮರೇಂ ॥
ದ್ರಸುಖಾದಿಗಳಂ ಲೋಕದೊ ।
ಳಸದಳಮಧಿಕಂ ಗಡಿನ್ನದೇವಣ್ಣಿಪುದೋ ॥ ೩೨

ಮತ್ತಮದಱೊಳ್

ಮಹಿಮೆ ಕಿಱಿದಕ್ಕೆ ಪಿರಿದ ।
ಕ್ಕಹಮಿಂದ್ರರ್ ಸಲೆ ಜಿನೇಂದ್ರಕಲ್ಯಾಣಮಹಾ ।
ಮಹಯಾತ್ರೆಗೆ ಪೋಗರ್ ವಿನ ।
ತಹಟನ್ಮಣಿಮುಕುಟರಪ್ಪರಿರ್ದೆಡೆಯೊಳ್ ॥ ೩೩

ಎನಿಪನುತ್ತರೆಗಳೊಳ್ ವೈಜಯಂತವಿಮಾನದುಪಪಾತನಿಕೇತನದಮ ಳ್ವಾಸಿನೆಡೆಯೆನಿಂಗಡಲ ತೆರೆವೊರೆಯಿನೊಗೆವೆಳದಿಂಗಳಂತೆ ತಳತಳಸಿ ಪು ಟ್ಟಿ ಸಮಚತುರಪ್ರಸ್ಥಾನನುಂ, ಪರಿಪೂರ್ಣಯೌವನವಿಳಾಸನುಂ, ಶುಕ್ಲ ಲೇಶ್ಯಾಪರಿಣಾಮನುಂ, ಅಣಿಮಾದ್ಯಷ್ಟಗುಣಮಣಿನಿಧಾನನುಂ, ಲೋ ಕನಾಡಿಕಾಭ್ಯಂತರಗತಾವಧಿಜ್ಞಾನಭಾನೂದಯೂಚಳನುಮಾತ್ಮಾವಧಿಜ್ಞಾನವ ರ್ತನಾಕ್ಷೇತ್ರಪೂರಣಸಮರ್ಥಮೂಳಶರೀರವಿಕ್ರಿಯಾಸಮಗ್ರನುಮಾಗಿ

ಕಡೆದು ಕಳಂಕಮಿಲ್ಲದ ಸುಧಾಕರಮಂಡಳದಿಂದೆ ಮಾಡಿದಂ ।
ತೊಡಲತಿನಿರ್ಮಳಂ ಪವನನೊಳೊವೊರ್ಬನೊರ್ಬಯುಮಂತೆ ಸಾಜದೊ ॥

ಳ್ದೊಡವಿನ ಮಾಸಮಂಬರದ ಕಂದದ ಮಾಲೆಯ ಲೀಲೆ ಚೆಲ್ವನಿ ।
ರ್ಮಡಿಸೆ ಬೆಡಂಗನಾಳ್ದಗಪರೋ ಮನಭಾಮೆಯ ಧಾತುಮಾತನಾ ॥ ೩೪

ಮೂವತ್ತು ಮೂಱು ಶರನಿಧಿ ।
ಜೀವನ ಪರಿಸಂಖ್ಯೆ ತತ್ಪ್ರಮಾಣ ಸಹಸ್ರಾ ॥
ಬ್ದಾವಧಿ ಸುಧಾಶನಸ್ಮರ ।
ಣಾವಸರಮನಿತ್ತೆ ಪಕ್ಷಮಾಗುಸಿ*ರ್ವ ಪದಂ ॥ ೩೫

ಮಱುಮೆಯೊಳತೀಂದ್ರಿಯಸುಖ ।
ದೆಱೆವಟ್ಟ್ಯಾದಪ್ಪನೆಂಬುದರ್ಕಿದುವೆ ವಲಂ ॥
ಕುಱುಪೆಂಬ ತೆಱದಿನೆಸೆದುದು ।
ನೆಱೆದಹಮಿಂದ್ರಂಗೆ ನಿಷ್ಪ್ರವೀಭಾಗಸುಖಂ ॥ ೩೬

ರೂಪಾದಿಪಂಚವಿಷಯ ।
ಪ್ರಾಪಣದಿಂದಲ್ಲದಾಗದಖಿಳೇಂದ್ರಿಯಸೌ ॥
ಖ್ಯೋಪಚಯಮೆನೆ ಮನುಷ್ಯರೊ ।
ಳಾಪಂಚೇಂದ್ರಿಯಸುಖಂ ಪರಾಧೀನಮೆ ದಲ್ ॥ ೩೭

ಕುದಿದು ತನುಕ್ಲೇಶದಿನ ।
ಲ್ಲದೆ ಮನುಜರ್ಗಾಗದತನುಸೌಖ್ಯಂ ಮತ್ತಂ ॥
ತುದಿಯೊಳಗದಱಿಂ ರಸಸೌ ।
ಜದಿನಾಗದುದೆಲ್ಲಮಸುಖಮಲ್ಲದೆ ಪೆಱದೇಂ ॥ ೩೮

ಪೊಱಮಡಬೆ ಗಜೇಂದ್ರಂ ನೀ ।
ರ್ಸಱೆಗೊಂಡಿರ್ಪಂತೆ ನಿಷ್ಪ್ರವೀಚಾರತೆಯಿಂ ॥
ನೆಱೆದ ಸುಖಾಂಬೋಧಿಯೊಳವ ।
ಚಱನುಱಿದವಗಾಹಮಿರ್ದನಿಂತಹಮಿಂದ್ರಂ ॥ ೩೯

ಅಂತನುತ್ತರಮುಮುತ್ತರೋತ್ತರಮುಮಾಗನುತ್ತರೆಯೊಳಾತ್ಮಕೃತಸುಕೃತಕಲ್ಪಪಾದಪಫಲೋಪಮಾನಮುಂ ನಿಷ್ಪ್ರವೀಚಾರಸುಖಮುಂ ಪದ್ಮನಾಭಚರಾಹಮಿಂದ್ರನನುಭವಿಸುತ್ತುಮಿರ್ಪನಿತ್ತ ಜಂಬೂದ್ವೀಪದ ಭರತಕ್ಷೇತ್ರದೊಳ್

ಅವನೀವನಿತೆಗೆ ಪೊಗೆವೆಂ ।
ಬವ್ರೇಲುದ್ಯದಸೂನರಾಗಲೀಲಾಧರಮಾ ॥
ತ್ತವಿಳೋಚನವಿಳಸನವೊ ।
ಪ್ಪುವುದಾದಂ ಪೂರ್ವವಿಷಯವೆಂಬುದು ವಿಷಯಂ ॥ ೪೦

ಅದಱೊಳುದಾತ್ತರತ್ನತತಿ ಪುಟ್ಟದ ಬೆಟ್ಟು ಮದೇಭಮಾಳಿ ಪು ।
ಟ್ಟದ ಪೞು ಮುತ್ತು ಪುಟ್ಟದ ತರಂಗಿಣಿ ಚಂದನಭೂಜರಾಜಿ ಪು ॥
ಟ್ಟದ ಬನಮುತ್ಪಳಪ್ರತತಿ ಪುಟ್ಟದ ದೀರ್ಘಿಕೆ ಪದ್ಮಪಾಳಿ ಪು ।
ಟ್ಟದ ಬಯಲೆಯ್ದೆ ನುಣ್ಬಸಲೆ ಪುಟ್ಟದ ತಣ್ಬುೞಲಿಲ್ಲದೆಲ್ಲಿಯುಂ ॥ ೪೧

ಮತ್ತಂ

ಕಳಮಯವಾದಿಧಾನ್ಯಕುಳಮಂ ಹಳಿಕಾವಳಿಗಾವ ಕಾಲಮುಂ।
ಬೆಳೆವುದು ಪಾಂಥಸಂತತಿಗೆ ಸಂತಸಮಂ ಪ್ರಳಿನಪ್ರತಾನದಿಂ ॥
ಬಳೆವುದಧೀಶ್ವರಂಗೆ ಜರಗೆಂಬ ನೆವಂಬಿಡಿದೆಯ್ದೆ ಪೊನ್ನುಮಂ ।
ಬಳೆವುದು ತನ್ಮಹೀತಳಮಪಾರಸುಖಾವಹಭೋಗಭೂತಳಂ ॥ ೪೨

ಅದಲ್ಲದೆಯುಂ

ಬಿಸಘಾಸಾಸಕ್ತಹಂಸೀಕುಳವಳಯಿತತೀರಂ ಸರಂ ಬೀಜರಾಜೀ ।
ರಸಪಾನಾಧೀನಕೀರಾವಳಿಮಿಳಿತಫಲಂ ದಾಡಿಮಂ ಕೋರಕಾಗ್ರ ॥
ಗ್ರಸನೋತ್ಕಂಠಾನ್ಯಪುಷ್ಟೋತ್ಕರವೃತವಿಟಪಂ ಚೂತಮಾಮೋದಸೇವಾ।
ವ್ಯಸನಾಳಿವ್ಯೂಹಪಾತ್ತಪುಷ್ಪಂ ಲತೆ ಜನಪದದುದ್ಯಾನದೊಳ್ ಕುಂದಮೆಂದಂ ॥

ಮತ್ತಮಲ್ಲಿ

ಪೆರ್ವಣ್ಣೊತ್ತಿಂದೆ ಪುತ್ತಿಂಗಿಳಿಗಿದ ನೆಲದಿಂದುಣ್ಮಿ ತಣ್ಗಂಪಿನುರ್ವಿಂ ।
ನೇರ್ಪಟ್ಟೊಳ್ವಕ್ಕೆ ಪುತ್ತೆರ್ದೊಗೆದು ಮುಸುಱೆ ಮೆಯ್ನಂಟು ಕಾಯ್ಮಾ
ಯ್ತು ದೆಂಬೆಂ ॥ ದೊರ್ವನ್ನಂ ಪಾಂಥರೆತ್ತಂ ಬಳಸಿದ ರಸವನ್ಮಾತುಳಂ
ಗಂ ಪೊದಲ್ । ಸೀಪ್ರೊಣ್ಣಂ ಜೌಗುವೀಱುತ್ತಿರೆ ಸುರಿವೆಳೆದೆಂಗಲ್ಲಿ ಚೆ
ಲ್ವಾದುವಾದಂ ॥ (?) ೪೪

ವಿಧುಸ್ಯಂದುಕಳೆಗಳ ಪರಪರಿ ।
ಸುಧಾರಸಪ್ರಸವಭೂಮಿ ಕುಸುಮಾಸ್ತ್ರದ ಸ ॥
ನ್ನಿಧಿಯೆನೆ ಸೊಗಯಿಸುವ್ರದು ಸು ।
ತ್ತಿ ಧನಳಲಲಿತೇಕ್ಷುವಾಟಮುಮಾಊರೂರಂ ॥ ೪೫

ಅಲ್ಲಿ

ಗಿಳಿಗಳ ಪಿಂಡು ತುಂಬಿಗಳ ಗೊಂದಣಮಂಚೆಗಳೊಡ್ಡುರಲ್ದರ ।
ಲ್ಗಳ ರಜಗುಪ್ಪುರ್ ಬಂದೆಳಸಿ ಸಂದಣಿಸುತ್ತಿರೆ ಸುತ್ತಿ ಮುತ್ತಿ ಸಂ ॥
ಗಳಿಸಿ ಪಸುರ್ತ ಕರ್ಗಿದ ಬೆಳ್ತ ಕವಿಲ್ತ ಸುಗಂಧಶಾಳಿಸಂ ।
ಕುಳಮಲ*ದೋರ್ಂಟಮಬ್ಜವನಮೂದುವ ತಣ್ಣೆಲರಾದಮೊಪ್ಪುಗುಂ ॥ ೪೬

ಅಂತು ಸಕಳಸಂಪದಕ್ಕಾಸ್ಪದಮಾದಾಜನಪದದೊಳ್

ಉಡಿದಿಡೆ ಪಥಿಕರ್ ಕರ್ಬಿನ ।
ಬಡಿಗೊಂಡೊದವಿರ್ದ ಬಟ್ಟೆಯಿಂ ಮಾವಿನ ಪ ॥
ಣ್ಣೆಡಿದಡರೆ ಕೊಂಡ ಗೊಂಚಲ್ ।
ಮಡಲಿಱಿದುದು ಕೆಬಿಗೆ ಬೆಳೆದ ಕಳಮೆಯ ಕೆಯ್ಯಂ ॥ ೪೭

ರಾಜಕರಪಾತಭೀತಿ ಸ ।
ರೋಜದೊಳತಿವರ್ಣವೃತ್ತಿ ಲಿಪಿಯೊಳ್ ಖಲಸಂ ॥
ಯೋಜನೆ ಕೆಯ್ಯೊಳ್ ಸಮನಿಕು ।
ಮಾಜನಪದಜನದೊಳೆಂತುಮೇಂ ಸಮನಿಕುಮೇ ॥ ೪೮

ಮೃದುಕರಮೊಂದು ಚಂಡಕರಮೊಂದನವಗ್ರಹಮೊಂದನಗ್ರಹಾ ।
ಸ್ಪದಮೆ ದಲೊಂದು ನಿಶ್ಚಲಿತಸಮ್ಮದಸಂಯುತಮೊಂದು ನಿತ್ಯಮ ॥
ಮರ್ದಸಮುಪೇತಮೊಂದು ಪರಿಭಾವಿಸೆ ತಾನೆನೆ ಪೋಲಿಪಂದು ಪೇೞ್ ।
ಸದೃಶಮೆ ಪೂರ್ವದೇಶಮುಮನಂಗಮತಂಗಜಪೂರ್ವದೇಶಮುಂ ॥ ೪೯

ಅಂತತ್ಯಂತಶೋಭೆವೆತ್ತು ವಿವಿಧಪುರನಿಕರತಾರಕಪ್ರಕರಪರಿಕಲಿತಮಾದ
ಪೂರ್ವಮಂಡಲಮೆಂಬ ಪೂರ್ವಗಗನಮಂಡಳಕ್ಕೆ ಮಂಡನಮಾಗಿ,

ಪ್ರಚುರಸುಧಾನಿಳಯಂ ಸವು ।
ಪಚಿತಮನೋಹಾರಿಗೋಕುಳಂ ವಿಮಳಕಳಾ ॥
ಪ್ರಚಯನಿಧಾನಂ ತಾನೆನಿ ।
ಸಿ ಚಂದ್ರಬಿಂಬಂಬೊಲೊಪ್ಪುಗುಂ ಚಂದ್ರಪುರಂ ॥ ೫೦

ಅದನೆ ಪರಿವೇಷವೆಂಬಂ ।
ದದಿನೆತ್ತಂ ಬಳಸಿ ವಿವಿಧವರ್ಣವಿಶೇಷ ॥
ಚ್ಛದಕುಸುಮಫಳಕುಳಂ ತೋ ।
ರ್ಪುದು ಶಬಳಮರೀಚಿಸೃದ್ಯಮುದ್ಯಾನವನಂ ॥ ೫೧

ಇಂದು ದಿಟಂ ವಟಚ್ಛದಿನಾತ್ಮಕಳಾಮೃತಸೇಕದಿಂದಮೊಂ ।
ದೊಂದನೆ ಮಂಡಳೈಕತಳದೊಳ್ ಸಸಿ ಪೆಚ್ಚಿಸಿ ತಂದು ತಿಂಬಿದಂ ॥
ನಂದನದೊಳ್ ಕುಜಂಗಳನದಲ್ಲದೊಡೀನಯಮಾಪ್ರೊದಚ್ಯೆಯೀ ।
ಯಂದದ ಶೋಭೆಯೀರಸಸಮೃದ್ಧಿಯದೇಂ ಪೆಱವರ್ಕೆ ತೋರ್ಕುಮೇ॥
ಎನಿಸಿ ನೆಗಚ್ತೆಗಂ ಪೊಗೆಚ್ತೆಗಂ ನೆಲೆಯಾದುದು. ಅಲ್ಲಿ

ಸ್ತ್ರೀಪುಂಸೋಚಿತವೃತ್ತಿಯಿಂದಿರದೊಡೆಮ್ಮಾಳ್ದಪರ್ಕಂತೋರ್ಪನಿಂ
ಚಾಪಾಟೋಪವನೆಂಬೆ ತಳ್ತಗಲವೆಂದುಂ ರಾಗದಿಂ ನಾಗನ ॥
ಲ್ಲೀಪೂಗದ್ವಿತಯಂ ಲತಾಕುರವಕದ್ವಂದ್ವಂ ಸಮುತ್ಫುಲ್ಲಮ ।
ಲ್ಲೀಪುನ್ನಾಗಯುಗಂ ವಿಲೋಲಲವಲೀಲೀಲಾಲವಂಗದ್ವಯಂ ॥ ೫೨
ಅದಲ್ಲದೆಯುಂ

ಪದವೆತ್ತಿಂಬಣ್ಣ ಬಿಣ್ಗೊಂಚಲನಲಸದೆ ಪೊತ್ತಿರ್ದ ಪೊಂಬಾಳೆ ಕೀಟ್ಕೋ
ಟ್ಕೊದಲಿಂ ತೂಱಲ್ವರಂ ಪಣ್ತೊಳ್ ಪೊದಿಸಿದವ್ರೋಲುಬ್ಬರಂ ಪಣ್ತು ಕಿತ್ತೀ
ಟೆ ದಳಂಬೆತ್ತೊತ್ತಿ ಬಿಬ್ಬಿರಿಸಿ ಬಿರಿದು ಕಣ್ಬೆಚ್ಚವಾದಚ್ಚವಣ್ಬೀ ।ಱಿದ
ದಾಳಂಬಂ ತಮುದ್ಯಾನದೊಳೊದವಿಸುಗುಂ ಬಾಯ್ಗೆ ತೀರಯ್ಕೆಯುರ್ವಂ॥

ಪರಿಪಕ್ವಸರಸಫಳಮಂ।
ಜರಿಗಳ್ ನಿಜಭಾರದಿಂದಧೋಯನತೆಯಂ॥
ದೊರೆಕೊಳಸೆಯುಮುದ್ಯಾನಕೆ ।
ದೊರೆವೆತ್ತುದು ನಗರನಂದನಕ್ಕಿದು ಚಿತ್ರಂ ॥ ೫೫

ಕಳಶುಕನಾದದಿಂ ಪದೆಪನಾಡಿ ಕರಂ ಸುಮನೋನುವೃತ್ತಿಯಂ ।
ಬಳೆಯಿಸಿ ಸಾಲ್ವಿನಂ ಸಲೆ ಸುವರ್ಣಸಮೇತಲಸಚ್ಛದೋತ್ಕರಂ ॥
ಗಳನಿರದಿತ್ತು ಮತ್ತೆ ಬಿಡೆ ಕಾಲ್ವಿಡಿದಾಸಕಳರ್ತುಕದ್ರುಮಂ ।
ಗಳ ನೆವದಿರ್ಪನೆಯ್ದೆ ವನಲಕ್ಷ್ಮಿಯೊಳಂತು ವಸಂತವಲ್ಲಭಂ ॥ ೫೬

ರತಿಯಿಲ್ಲದೆ ಪುಗಲಣ್ಮಂ ।
ರತಿಪತಿಯುಂ ಬನಮನೆಂದು ಖೇಚರಸುರದಂ ॥
ಪತಿಗಳಿ ಬಂದದಱೊಪ್ಪುವ ।
ಲತೆಮನೆಯೊಳ್ ಕೃತಕಶೈಳದೊಳ್ ಕ್ರೀಡಿಸುಗುಂ ॥ ೫೭

ಬಿಸರಸಪಾನದಿಂದಮೆ*ರ್ದೆಯಾಱಿ ಮದಾಲಸಯಾನಲೀಲೆಯಂ ।
ಪೊಸೆಯಿಸುವಂಚೆ ಪದ್ಮಮಧುಸೇವನೆಯಿಂ ನಸುಸೊರ್ಕಿ ಗೇಯಮಂ ॥
ಪಸರಿಪ ತುಂಬಿ ತಾವರೆಯ ತಣ್ಣೆಲರೋವರಿಯಲ್ಲಿ ತಳ್ತು ಮೇ ।
ೞಸುವ ರಥಾಂಗಮಿಲ್ಲದೆಡೆಯಿಲ್ಲ ದಲಲ್ಲಿಯ ಪೂಗೊಳಂಗಳೊಳ್ ॥ ೫೮

ಧನಕೋಶಂ ನವಹೇಮತಾಮರಸಕೋಶಂ ದೇಶಮಾಸ್ಮೈಕತಾ ।
ವನಿದೇಶಂ ಸಹಕಾರಿ ಸಾರಸಹಕಾರಂ ಮಂತ್ರಿ ಮಂದಾನಿಳಂ ॥
ಘನದುರ್ಗಂ ಕೃತಕಾದ್ರಿ ಸೇನೆ ಪಿಕಸಂತಾನಾದಿ ತಾನಾಗೆ ತ ।
ದ್ವನದೊಳ್ ದರ್ಪಕಚಕ್ರವರ್ತಿ ಮೆಱೆವಂ ಸಪ್ತಾಂಗಸಾಮ್ರಾಜ್ಯಮಂ ॥

ಎಳನೀರಿಂ ಕದಳಾಳಿ ಚೂತಫಳಸಾರಾಸಾರದಿಂ ದಾಡಿಮೀ ।
ಕುಳಮುದ್ಯದ್ವಳೀಕ್ಷುಜಾಳರಸದಿಂ ನಾರಂಗಸಂಘಾತಮು ॥
ಚ್ಚಳಿತೇಂದೂಪಳವಾರಿಯಿಂ ಕಳಮಕೇದಾರಂ ನಿರಾಯಾಸದಿಂ ।
ಬೆಳೆದೊಪ್ಪಂಬಡೆದಿರ್ಪುವಾಪುರವನಪ್ರಾಂತಪ್ರದೇಶಂಗಳೊಳ್ ॥ ೬೦

ಅದೆ ವಿಸರತ್ಸಭಾಕಳಕಳಂ ಪ್ರತಿಹಾರಕತರ್ಜನೋಕ್ತಿ ತಾ ।
ನದೆ ಕಳಗೀತನಾದಮಿದೆ ಮನ್ಮಥನಾಥನ ಬೀಡುದಾಣಮಿಂ ॥
ತಿದು ದಿಟಮೆಂದು ತದ್ವನಮನಧ್ವಗರಾಲಿಸಿ ಪೊರ್ದಲಣ್ಮರು ।
ಣ್ಮಿದ ಮದಕೀರಕೋಕಿಳಮಧುವ್ರತಮಂಜುಳಶಿಂಜಿತಂಗಳಿಂ ॥ ೬೧

ಅಂತುಮಲ್ಲದೆಯುಂ

ತೀವಿದ ಕೊಳದೊಳ್ ಲತೆವನೆ ।
ಯೋವರಿಯೊಳ್ ತಳ್ತ ತಳಿರ ಕಾವಣದೊಳ್ ಬಂ ॥
ದಾವಿರಹಿಗೆ ಭಾವಭವಂ ।
ತಾವಡಿವೇೞ್ವಂತೆ ಸುೞಿವುದುಪವನಪವನಂ ॥ ೬೦

ಅಂತು ಜನಮನೋನಯನವಿಶ್ರಮಣಭೂಮಿಯಾದುದ್ಯಾನಮಾಳಾವಳಿಯದಿಂದಮೊಳಗೆ,

ಬಳಸಿರೆ ಜಳಖಾತಿಕೆ ತಳ ।
ತಳಿಸುವ ಪೊಸವಳಿಕಿನೆಸವ ಕೋಂಟೆ ಕರಂ ಕ ॥
ಣ್ಗೊಳಿಪುದು ನೋಟಕರಂ ತಿಳಿ ।
ಗೊಳದೊಳಗುಳ್ಳಲರ್ದ* ಧವಳಕಮಳಾಕೃತಿಯಿಂ ॥ ೬೭

॥ ಶಿಖರಿಣಿ ॥

ಪರೀತೋದ್ಯಾನೋದ್ಯದ್ದ್ರುಮಕೃತಕರತ್ನಾದ್ರಿಸಿಚಯ ।
ಸ್ವರೂಪಂಗಳ್ ತನ್ನೊಳ್ ಪೊಳೆಯೆ ವಿಮಳಸ್ಫಾಟಿಕಮಯಂ ॥
ಪುರಸ್ತ್ರೀನೈಪಥ್ಯಸ್ಥಳಪರಿವೃತಂ ಚಿತ್ರರುಚಿರಂ ।
ತಿರೋಧಾನೋತ್ತಾನಾಂಬರಮನೆನೆ ತದ್ವಪ್ರಮೆಸೆಗುಂ ॥ ೬೪

ಮತ್ತಂ

ಅಂತಃಕೃತದೃಢಗುಣಮಾ ।
ಕ್ರಾಂತಪಯೋಧರಮುದಗ್ರಕಾಂತಿ ಪುರಶ್ರೀ ॥
ಕಾಂತೆಯುಪಕಂಠದೊಳ್ ಹಾ ।
ರಂ ತಾನೆನೆ ಸೊಗಯಿಕುಂ ಕರಂ ಪ್ರಾಕಾರಂ ॥ ೬೫

ಆಕಾಶಸ್ಫಟಿಕಮುಪ ।
ಪ್ರಾಕಾರಾಗ್ರದ ಸುವರ್ಣರಚಿತಾಟ್ಟಾಳಾ ॥
ನೀಕಂ ಬಯಲೊಳ್ ನೆಲಸಿದ ।
ನೇಕವಿಯಚ್ಚರವಿಮಾನಮೆಂಬಂತಿರ್ಕುಂ ॥ ೬೬

ಅಂತುಮಲ್ಲದೆಯುಂ

ವಿಮಳತರಗಗನಮಂಡಳ ।
ದ ಮಧ್ಯದೊಳ್ ನೆಗೆದ ಶಬಳಮೇಘೋತ್ಕರದೊ ॥
ಪ್ಪಮನಪ್ಪುಕೆಯ್ದುದಾಸ್ಫಟಿ ।
ಕಮಯಪ್ರಾಕಾರದೊಳಗೆ ಮಣಿಗೃಹನಿವಹಂ ॥ ೬೭

ಗಣಿಕಾವಾಟಿಯನೆಸೆವಾ ।
ಪಣಕೋಟಿಯನಟ್ಟಿಯಿಂದೆ ಪುರದೊಳ್ ಕಡೆಯು ॥
ಟ್ಟೆಣಿಸುವ್ರೊಡಂ ನೋಡುವ್ರೊಡಂ ।
ಫಣಿಪತಿಯುಂ ದಿವಿಜಪತಿಯುಮಾಗಲೆವೇೞ್ಕುಂ ॥ ೬೮

ಅಗಲದಿರೆ ವಿಬುಧರುಂ ಭೋ ।
ಗಿಗಳುಂ ಮನುಜಾಗ್ರಗಣ್ಯರುಂ ತನ್ನೊಳ್ ತ ॥
ನ್ನಗರಂ ಸೊಗಯಿಸಿದುದು ಮೂ ।
ಜಗಮುಂ ಬಂದಿರ್ದುದಿಲ್ಲಿ ನೆರೆದೆಂಬಿನೆಗಂ ॥ ೬೯

ಮತ್ತಮದು ಸಂಯತಹಸ್ತದಂತೆ ವಿಸ್ತೃತಸ್ವಸ್ತಿಕೋಪೇತಮುಂ, ಶು ದ್ಧಪ್ರಸಿದ್ಧಪ್ರಬಂಧದಂತೆ ವರ್ಧಮಾನಮಾನಿತಮುಂ, ಪ್ರಮದವನದಂತಾತ್ತ ನಂದ್ಯಾವರ್ತಮುಂ, ಅನಶನತಪದಂತೆ ಸರ್ವತೋಭದ್ರಭಾಸುರಮುಮೆನಿ ಪ್ಪುದು. ಅಂತುಮಲ್ಲದೆಯುಂ,

ಸುರತಪಪ್ರಾರ್ಥಂ ವರಸ್ತ್ರೀತತಿ ಬಹುಪಯಸಂ ಧೇನುಸಂತಾನಮಾಶಾಂ
ತರನಾನಾವಸ್ತುಪೂರ್ಣಂ ವಿಪಣಿವಿತತಿ ಕೇಳೀವನಪ್ರಾವೃತಂ ಮಂ ॥
ದಿರಸಂದೋಹಂ ದಲೆಂದಂದಕೃತಸುಕೃತನಪ್ಪಂಗೆ ಕೈಸಾರ್ಗುಮೇ ತ ।
ತ್ಪುರಸಂವಾಸಂ ಸಮಾಸಾಧಿತಸಕಳವಿಳಾಸಂ ಸುಚೇತೋವಿಕಾಸಂ ॥ ೭೦

ಮತ್ತಂ

ನಗರವಿಳಾಸಿನೀಜನದ ರೂಪವಿಳಾಸಮನಿಂತುಟೆಂದು ನಾ ।
ಲಗೆಗೆ ತರಲ್ಕೆ ಬಲ್ಲ ಚದುರೆಲ್ಲಿಯದಲ್ಲಿಯ ಮಾಲೆಗಾರ್ತಿಯರ್ ॥
ಮಿಗುವರಹೀಂದ್ರಲೋಕದೆಳವೆಂಡಿರನಲ್ಲಿಯ ಘಟ್ಟವಳ್ತಿಯರ್ ।
ಮಿಗುವರಮರ್ತ್ಯಲೋಕದಬಳಾಳಿಯನೆನ್ನರುಮೊಲ್ವ ಚೆಲ್ವಿನಿಂ ॥ ೭೧

ಬಳಸಿ ತೊಳಪ್ಪ ಕೋಂಟೆಯೆ ಕರಂ ಗಜದಂತಮಹೀಧ್ರದಂತೆ ಕಂ।
ಗೊಳಿಸೆ ಗೃಹೋಪಕಂಠವನಭೂಜಮೆ ಕಲ್ಪಮಹೀಜದೊಪ್ಪಮಂ॥
ತಳೆಯೆ ಧನಾಢ್ಯದಂಪತಿಯೆ ತದ್ಭವದಂಪತಿಯಂದಮಂ ಪ್ರದಂ।
ಗೊಳಿಸೆ ಪುರಂ ವಿರಾಜಿಪುದು ದೇವಕುರುಪ್ರತಿಮಾನಮೆಂಬಿನಂ॥ ೭೦

ಜಿನಬಿಂಬಸ್ನಪನಾರ್ಚನೋತ್ಸವಸಮುದ್ಭೂತಾನಕಧ್ವಾನದಿಂ।
ಮುನಿಬೃಂದಾಧ್ಯಯನೋಚಿತಪ್ರವಚನೋಪನ್ಯಾಸನಿರ್ಘೋಷದಿಂ॥
ವಿನಮದ್ಭವ್ಯಜನಾಪ್ತರೂಪಗುಣವಸ್ತುಸ್ತೋತ್ರಯುಕ್ತ್ಯುಕ್ತಿಯಿಂ।
ದನಿಶಂ ಪೊಂಪುಳಿವೋಪ್ಪದಾಪುರದ ಚಂಚಚ್ಚೈತ್ಯಗೇಹೋತ್ಕರಂ॥ ೭೩

ಅದಲ್ಲದೆಯುಂ

ಅಯಸಂಯುಕ್ತಮಿದೆಂದು ತನ್ನ ಸುಖಮಂ ಕೈಕೊಳ್ಳದೇಟ್ಟಿಂದಪಂ।
ಪ್ರಿಯದಿಂದಷ್ಟಮತೀರ್ಥನಾಥನಿರದಿಂದೆನ್ನಲ್ಲಿಗೇಮಾತೊ ನಿ॥
ರ್ನಯಸಂಶ್ಲೇಷ್ಮುಖನೆಂದು ತನ್ನಗರಿ ತಾಂ ಮೆಯ್ವೆರ್ಚಿಸರ್ವಾರ್ಥಸಿ
ದ್ಧಿಯುಮಂ ಮೂದಲಿಪಂತುಟಾಯ್ತನುದಿನಂ ಸಂಗೀತಕಧ್ವಾನದಿಂ॥ ೭೪

ಅಂತಪಯರ್ಯಂತಸಂಪದಪ್ರಹಸಿತಪುರುಹೂತಪುರಮಪ್ಪ ಚಂದ್ರಪುರದ ಮಧ್ಯದೊಳ್ ತತ್ಪುರಶ್ರೀಯ ನಾಭೀವಳಯದಂತೆ ವಿಳಸಿತಮಾದ ರಾಜನಿಳಯದೊಳಗೆ

ಇದು ದಲ ಪೂರ್ವಪೂರ್ವಕುಧರಂ ದಿನದಿಂ ಜಿನಚಂದ್ರನಿಲ್ಲಿ ಬಂ।
ದುದಯಿಕುಮೆಂದು ಮುನ್ನಮೆ ಬಿಡಾಜನೆ ನಿರ್ಮಿಸುವೋಜೆಗೋಜನಾ॥
ದುದನಱಿಪುತ್ತುಮಿರ್ಪುದನಿಶಂ ಕರುಮಾಡಮಮಾನುಷಕ್ರಿಯಾ।
ಸ್ಪದನವರತ್ನಕೂಟವಿಘಟದ್ರುಸಚಿತ್ರವಿಚಿತ್ರಲೇಖೆಯಿಂ॥ ೭೫

ಅದಂ ಬಳಸಿ

ತೀರ್ಥಕರಜನ್ಮಕಲ್ಯಾ।
ಣಾರ್ಥಂ ಬಂದಿಂತೆ ನೆಲಸಿದಪ್ಪವಿಲ್ಲಿ ಮರು॥
ತ್ಸಾರ್ಥವಿಮಾನೋತ್ಕರಮೆಂ।
ಬರ್ಥಮನನುಕರಿಪುವರಸಿಯರ ಮಾಡಂಗಳ್॥ ೭೬

ಲಲಿತಹರಿನೀಲಹರ್ಮ್ಯಾ ।
ವಲಿಶಿಖರೋಚ್ಚಳಿತರುಚಿಗಳಿರುಳೊದವಿ ನಭ ॥
ಸ್ಥಳದೊಳೊಡರ್ಚುವುದಿಂದುವ ।
ನೊಳಕ್ಕೆ ಕಟ್ಟಲೆಯಿದೆನಿಪ ನೊಳಗಟ್ಟಲೆಯುಂ ॥ ೭೭

ಮತ್ತಮಲ್ಲಿ

ಮರಕತವೇಶ್ಮರಶ್ಮಿಯರುಣಾಶ್ಮಗೃಹದ್ಯುತಿಯಿಂದ್ರನೀಳಜಂ ।
ದಿರರುಚಿ ಹೇಮಧಾಮಘೃಣಿ ಮೌಕ್ತಿಕಮಂಡಪಕಾಂತಿಯೆತ್ತಲುಂ ॥
ಪರಿಕಲಿಪನ್ನೆಗಂ ದಿಸೆಯುಮಂಬರಮುಂ ನವಚಿತ್ರಚಿತ್ರಿತಾಂ ।
ಬರಪಿಹಿತಂಗಳಾದ ತೆಱದಿಂ ಸೆಱೆಯಿಟ್ಟುವು ನೋೞ್ಪ ದಿಟ್ಟಿಯುಂ ॥ ೭೮

ಮತ್ತಮಾರಾಜಭವನಂ ಪದ್ಮರಾಗಮಾಣಿಕ್ಯಕಳಶಪಙ್ಕ್ತಿಗಳಿಂ ರಾಜಹಂಸ ವನದಂತೆಯುಂ, ನವರತ್ನರಚಿತತೋರಣಂಗಳಿಂ ಸಶಕ್ರಚಾಪಶತದಂತೆಯುಂ, ಚಂಚಳಧವಳಕೇತನಪ್ರತಾನದಿಂ ಸಸುರಾಪಗಾಫೇನಸಂತಾನದಂತೆಯುಂ, ಸಂತತೋಚ್ಚಳಿತಕಾಳಾಗರುಧೂಪಧೂಮದಿಂ ಸಜಳಕಾದಂಬಿನೀಕದಂಬದಂತೆಯುಂ, ಸಮುತ್ತಂಭಿತಶಾತಕುಂಭಮಯಾರವಾಸಯಷ್ಟಿಗಳಿಂ ಸತಟಿಲ್ಲತಾವಿತಾನದಂತೆಯುಂ, ನಿರಂತರಚಂದ್ರಕಾಂತವಳಭೀವಳಯದಿಂ ಸಶಾರದಾಭ್ರಸಮುದಯದಂತೆಯುಂ, ಪ್ರಾಸಾದಾಂತರೋಡ್ಡೀನಪಾರಾವತಪಙ್ಕ್ತಿಯಿಂ ಸನೀಳೇಂದೀವರನಂದನಮಾಲಾವಳಿಯಂತೆಯುಂ, ಅನಿಯಂತ್ರಯಂತ್ರಧಾರಾಗೃಹಂಗಳಿಂ ಸವರ್ಷಾಸಮಯದಂತೆಯುಂ, ಲಂಬಮಾನಮುಕ್ತಾದಾಮನಿಕರದಿಂ ಸತಾರಕಪ್ರಕರದಂತೆಯುಂ, ಅನವರತಸಂಗೀತನಿನದಪರವಶಾಸ್ಪಂದಯಾಮಸಿಂಧುರಂಗಳಿಂ ಸನೀಳಾಚಳಕುಳದಂತೆಯುಂ, ಪ್ರಮದವನಬಾಳಕದಳೀದಳಪ್ರಭಾಪ್ರಸರದಿಂ ಸಶಾದ್ವಲವಿಸರದಂತೆಯುಮೆಸೆದುದು. ಅಂತುಮಲ್ಲದೆಯುಂ

ಸೂಕ್ಷ್ಮತರಚಿತ್ರನಿಧಿ ಮೇ ।
ರುಕ್ಷ್ಮಾಧರತುಂಗಹರ್ಮ್ಯಮೆನಿಪರಮನೆಯುಂ ॥
ಲಕ್ಷ್ಮೀನಿಳಯಮನೀಕ್ಷಿಸಿ ।
ಪಕ್ಷ್ಮಸ್ಪಂದನಮನಾರೊ ಮಱೆಯದರದಱೊಳ್ ॥ ೮೦

ಆರಾಜಕುಳದೊಳಖಿಳಜಿ ।
ನಾರಾಧ್ಯಂ ಸುಖದಿನಿರ್ಪನುನ್ಮಥಿತಸಮ ॥
ಸ್ತಾರಿ ಮಹಾಸೇನಂ ವೃಜಿ ।
ನಾರಿ ಮಹಾಸೇನನೆಂಬನವನೀನಾಥಂ ॥ ೮೧

ಸರಳಕರಪಾತನುಂ ಬಿ ।
ತ್ತರಿಸಿಯುಮಾಟವಿಕಜನಿತಬಾಧೆಗಳಂ ಸಂ ॥
ಹರಿಸಿಯುಮನುವಶೆಯುಂ ಮಾ ।
ಡಿರಿಸಿದನಾರಾಜಕುಂಜರಂ ಕುಂಭಿನಿಯಂ ॥ ೮೨

ಮತಿಯೊಳಕೆಯ್ದುದು ನಾಲ್ಕುಂ ।
ಕ್ಷಿತಿಪತಿವಿದ್ಯೆಗಳನಿಂದುನಿರ್ಮಳಕೀರ್ತಿ ॥
ದ್ಯುತಿಯೊಳಕೆಯ್ದುದು ನಾಲ್ಕುಂ ।
ವಿತತದಿಶಾಸೀಮೆಗಳನಿಳಾವಲ್ಲಭನಾ ॥ ೮೩

ಬಂದಸಿಯ ಧಾರೆಯೊಳ್ ಸಮ ।
ಸಂದೀಪಜ್ಜ್ವಳದಿನಳವಿಗಳಿದರಿಭೂಭೃ ॥
ತ್ಸಂದೋಹದ ಕಾಯ್ಪುಂ ಸಲೆ ।
ಮಾಂದಿಸುವಂ ನೃಪನ ಚರಿತಮೇನಚ್ಚರಿಯೋ ॥ ೮೪

ಕರಕಮಳಂ ಮುಖಕಮಳಂ ।
ಚರಣಕಮಳಮಮಳನಯನಕಮಳಂ ತನ್ನೊಳ್ ॥
ಕರಮೊಪ್ಪೆ ನೃಪಂ ಕಮಳಾ ।
ಕರದಂದದಿನೆಯ್ದೆ ಕಮಳೆಗಾಲಯಮಾದಂ ॥ ೮೫

ಸುರಭಿಯ ತಾಯ್ವನೆಯಾಸಿ ।
ದ್ಧರಸದ ಬಗರಗೆ ಸುರಾವನೀಜದ ಬೀಜಂ ॥
ಪರುಸದ ಕಣಿ ಚಿಂತಾಮಣಿ ।
ಯ ಕೋಪಣಂ ರಾಜನರ್ಥಿನೆಸೆವಾದಾರ್ಯಂ ॥ ೮೬

ಈಂದನಿಮಿಂದೆ ದೇವಗಣಿಕಾತತಿಯಾತನ ಗೀತಮಂ ಪಿಡಾ।
ನಂದದೆ ಪಾಡೆ ಕೇಳಲೆರಡುಂ ಕಿವಿಯೆಯ್ದದೆ ತನ್ನ ದೃಕ್ಸಪ ॥
ಸ್ರಂ ದಿಟದಿಂದೆ ಕರ್ಣಚಯಮಾಗದೆ ನಿಷ್ಫಲಮಾದುದೆಂದು ಸಂ ।
ಕ್ರಂದನನೆಯ್ದೆ ಕಣ್ಗೆ ಕಿಸುಗಣ್ಣವನಾತ್ಮಸಭಾಂತರಾಳದೊಳ್ ॥ ೮೭

ಅದಲ್ಲದೆಯುಂ

ಇರದೆ ನಿಜಪಕ್ಷಪಾತದೆ ।
ನೆರೆದಂತಾರಾಜಹಂಸನೊಳ್ ಸುಚರಿತನೊಳ್ ॥
ಚಿರಮಿರ್ಪಳ್ ರಾಜ್ಯಶ್ರೀ ।
ಕರದೆಸೆವುದ್ದಂಡಪುಂಡರೀಕದ ನೆಲೆಯೊಳ್ ॥ ೮೮

ಸ್ಥಿರೆಯಾದಳ್ ಧರೆಯಾಗಳೆಂಬ ಘನದೋರ್ವಿಕ್ರಾಂತಮಿಕ್ಷ್ವಾಕುಜಂ ।
ಧುರವಂಶಂ ದೊರೆವೆತ್ತುದೆಂಬ ವಿಮಳಾಚಾರಪ್ರಭಾವಂ ಜಗ ॥
ದ್ಗುರುಗಂ ತಾಂ ಗುರುವೆಂಬನೂನತರಪುಣ್ಯಂ ಸಾರ್ವ ಸೈಪಿಂಗೆ ಭೂ ।
ಪರೊಳಾರ್ ನೋಂತರೊ ಮುನ್ನೆ ಭಾವಿಸೆ ಮಹಾಸೇನಾಧಿಪಂ ನೋಂತುದಂ॥

ಅಂತೆನಿಸಿ ನೆಗೞ್ದ ಜಗತೀ ।
ಕಾಂತನ ಮಾದೇವಿ ಲಕ್ಷ್ಮಣಾದೇವಿ ಸನು ॥
ಸ್ವಾಂತಃಪುರಪರಮೇಶ್ವರಿ ।
ಮಂತಣದೆಱೆವೆಟ್ಟು ಚದುರ ಘಟ್ಟಜವೆನಿಪಳ್ ॥ ೯೦

ಕನಕಾಂಭೋಜರಜಂ ವಸಂತಪವನಂ ಚಾಂದ್ರೀಕಳಾಮಾಳೆ ಮೋ।
ಹನಯಂತ್ರಸ್ತನಭಂ ಸುಧಾರಸಮಿವುರ್ವೀವಾಯುತೇಜೋಂಬರಾಂ ॥
ಬುನಿಕಾಯಪ್ರತಿರೂಪಭೂತನಿಜಯಂ ತಾವಾಗೆ ಕಾಮಾಂಬುಜಾ ।
ಸನನಾಕಾಂತೆಯ ಕಾಯದೊಳ್ ನೆರೆಪಿದಂ ರೂಪಕ್ರಿಯಾಪ್ರಾಧಿಯುಂ ॥ ೯೧

ಮತ್ತಂ

ಸ್ಮರಮದಶಕ್ತಿ ಚಿತ್ತಭವಮೋಹನವಿದ್ಯೆ ರತೀಶಕೀರ್ತಿ ಸುಂ ।
ದರಹೃದಯಪ್ರಭೂತಕುಲದೇವತೆ ಮನ್ಮಥರಾಜ್ಯಲಕ್ಷ್ಮಿ ಶಂ ॥

ಬರಹರಶೌರ್ಯಸಿದ್ಧಿಯೆನಿಪ್ಪೊಂದು ವಿಳಾಸದಿನಾಕೆ ತಾನಧಃ ।
ಕರಿಸುವಳಿದ್ಧಸಿದ್ಧಖಚರಾಸುರನಾಗವಧೂಕದಂಬಮಂ ॥ ೯೨

ಸ್ಮಿತಮಧುರಂ ಮುಖಂ ವಿಮುಖವೃತ್ತಿಯನಾರ್ಗೆ ಕಡಲ್ಚುದುತ್ಕುಚ ।
ದ್ವಿತಯಭರಾವಳಂಬಿಯೆದೆ*ಯಾರೆದೆ*ಗೀಯದು ಚೋದ್ಯಮಂ ಸಿತಾ ॥
ಯತನಯನಂಗಳಾರ ನಯನಂಗಳನಾಱಿಸನ್ಸ್ಮರಾಳಸಂ ।
ಗತಿ ಗತಿಭಂಗಮಂ ಪಡೆಯದಾರ್ಗೆ ತದಂಗಜರಾಜ್ಯಲಕ್ಷ್ಮಿಯಾ ॥ ೯೩

ಪಡೆದು ಸರೋಜಜಂ ಸುದತಿಯಾನನಮಂ ಸಮೆಯಲ್ಕೆ ಚಂದ್ರಬಿಂ ।
ಬದ ನಡುವಿರ್ದ ಕೋಮಳಕಳಾವಳಿಯಂ ನೆಱೆ ತೋಡಿ ಕೊಂಡೊಡಂ ॥
ತದು ಬಯಲಾಗೆ ತದ್ಗಗನಕಾರ್ಷ್ಣ್ಯಮನಾಲಮಿದೆಂದು ಪೃತ್ತಿದೆಂ ।
ದಿದು ಮೃಗಮೆಂದು ಕಲ್ಪಿಸುತುಮಿರ್ಪ್ಪುದು ಸಂಶಯಭಾಜನಂ ಜನಂ ॥ ೯೪

ವದನಂ ಶಶಾಂಕಶಂಕೆಯ ।
ನೊದವಿಸುತಿರೆ ಸತತಮಾಲತಾಂಗಿಯ ಮೆಯ್ಯೊಳ್ ॥
ಸವರಸ್ಮಿತಫೇನಂ ಪೆ ।
ರ್ಚಿದತ್ತಗಣ್ಯಂ ಪಯೋಧಿಯೆನೆ ಲಾವಣ್ಯಂ ॥ ೯೫

ಅದಲ್ಲದೆಯುಂ

ಪೊಳೆವ ದಶನಾಳಿ ಮುಕ್ತಾ ।
ವಳಿ ಮಧ್ಯದ ತರಳಮಣಿಯಿದೆಂದೆನೆ ತತ್ಕ್ರೋ ॥
ಮಳಿಯಧರಮಣಿಯನವಯವ ।
ಕುಳಚೂಡಾಮಣಿಯನತನುಚಿಂತಾಮಣಿಯಂ ॥ ೯೬

ಮೊರೆಯದಳಿ ಮುಗಿಯದಬ್ಜಂ ।
ಕೊರಗದ ನನೆಯಂಬು ಸೀರ್ಕೊಳಲ್ದದ ಮೀನಂ ॥
ಚಿರಮೆನೆ ಮಿಸುಗದ ಮಿಂಚಂ ।
ಬರಚರಮಲ್ಲದ ಚಕೋರಮಂಲರ್ಗೆ*ಣೆ ಸತಿಯಾ ॥ ೯೭

ಮುಱುಱಾದುವು ಕರ್ವಿನ ಬಿಲ್ ।
ನೀಱೆಯೆರಬ್ಬುರ್ ಬೆರಸು ತಾಮೆನಗಿನ್ನೀ ॥
ಮೂಱುಂ ಜಗಮುಂ ಗೆಲಲೇ ।
ನಾಱವೆ ಪೇೞೆಂದು ಕಂತು ಮುಯ್ವಾಂತಿರ್ಪಂ ॥ ೯೮

ನುಂಗಿ ಮುಗುಳ್ದುಗು*ಳ್ಗುವುದು ನೆಱೆ ।
ದಿಂಗಳನಾರಾಹುವೆಂಬ ತೆಱದಿಂ ಕುರುಳೊಳ್ ॥
ಸಂಗಳಿಸಿ ಕಣ್ಗೆ ನಾಡೆ ಬೆ ।
ಡಂಗಂ ಬೀಱಿದುದು ಮಿಸುಪ ನೊಸಲಂಗನೆಯಾ ॥ ೯೯

ಅಳಿವಡೆ ಪರಭಾಗಂಬಡೆ ।
ದೆಳೆಯಳ ಪರಭಾಗವಲ್ಲಿ ಸೋರ್ಮುಡಿ ಸೊಬಗಂ ॥
ತಳೆದೆಸೆದುದು ಕನಕಶಿಳಾ ।
ತಳಾಗ್ರದೊಳ್ ಮುರಿದು ಪರಿದ ಜಗುನೆಯ ಪ್ರೊನಲಂ ॥ ೧೦೦

ತನುಲತೆಗೆ ಶಾಖೆ ಕರತಳೆ ।
ವನಜಕ್ಕೆ ಮೃಣಾಳನಾಳಮಕ್ಷಿಭ್ರಮರ ॥
ಕ್ಕೆ ನವೀನಶಿರೀಷಸ್ರಜ ।
ಮೆನೆ ವನಿತೆಯ ದೋರ್ಯುಗಕ್ಕೆ ಪರ್ಯಾಯಂಗಳ್ ॥ ೧೦೧

ತರದಿಂದೆ ಮೂಱು ಸೂಳ್ವರ ।
ಮರಲಂಬಂ ತದಧಿಪತಿಯ ಕಣ್ಗಂ ಮನಕಂ ॥
ಗೆರೆಯಾಣೆಯಿಟ್ಟ ರೇಖೆಗ ।
ಳರವಂ ವಳಿರೇಖೆ ತಳೆದುವಳಿಕುಂತಳೆಯಾ ॥ ೧೦೨

ಅಂಗಭವಂ ರೂಢಿಯ ರೂ ।
ಪಿಂಗಂ ಸೊಬಗಿಂಗಮಿಟ್ಟನನುಳ್*ಗಳಸಮನು ॥
ತ್ತುಂಗಮನೆನಿಪ್ಪುದು ಲಲಿತಲ ।
ತಾಂಗಿಯ ನೀರಂಧ್ರಬಂಧುರಸ್ತನಯುಗಳಂ ॥ ೧೦೩

ಕೋಮಳೆಯ ಕನಕಕಾಂಚೀ ।
ದಾಮದ ಕೆಂಬರಲ ನುಣ್ಗದಿರ್ ತಿಂಬಿರೆ ನಾ ॥
ಭೀಮಂಡಳಮಿಱಿಸಿದುದಭಿ ।
ರಾಮತೆಯಿಂದುಳ್ಳರಲ್ದ ಬಂದುಗೆಯುರಲಂ ॥ ೧೦೫

ಒದೆದಸುಕೆಗಮಿನಿಯಂಗಂ ।
ಮೃದುಪಲ್ಲವಂ ಸರಾಗಭಾವಮನೀವೀ ॥
ಸುದತಿಯ ಚರಣತಳಕ್ಕತಿ ।
ಮೃದುತ್ವರಕ್ತತ್ವಮುಚಿತಮೆನೆ ಸೊಗಯಿಸುಗುಂ ॥ ೧೦೬

ಭ್ರೂಚಾಪಕೇಶಪಾಶವಿ ।
ಳೋಚನಶರದಶನಕುಟ್ಮಳಕುಚಚಕ್ರವಿಳಾ ॥
ಸೋಚಿತೆ ಮಾದೇವಿ ಮನೋ ।
ಭೂಚಕ್ರಿಯ ಜಯನಶಾಲೆಯಂದದಿನಿರ್ಪಳ್ ॥ ೧೦೭

ಅದಲ್ಲದೆಯುಂ,

ಕಂಪನೆ ಪೂಗಳೊಳ್ ತೆಗೆದಗುರ್ವಿಸೆ ಸೂಡುವಲತ್ತಕಂಗಳೊಳ್ ।
ಕೆಂಪನೆ ಕೊಂಡು ಕೇಸಡಿಯನೂಡುವ ರತ್ನವಿಭೂಷಣಂಗಳೊಳ್ ॥
ಸೊಂಪನೆ ತಾನಗಲ್ಚಿ ತೊಡವಾಗಿರೆ ಮಾಡುವಲಂಪು ಚಿತ್ತದೊಳ್ ।
ಪೊಂಪುಳಿಯಿಂದೊಡೇಂ ಪೊಗಳ್ವೆನಾ* ಲಲಿತಾಂಗಿಯ ಸೌಕುಮಾರ್ಯಮಂ ॥

ಲೋಕಾಲೋಕನಪುಣ್ಯಪುಂಜಮಿದು ವೇಧೋರೂಪನಿರ್ಮಾಣವಿ ।
ದ್ಯಾಕೀರ್ತಿಪ್ರಭವನ್ನಿಧಾನಮಿದು ಕಾಮೋದ್ದಾಮಸಾಮ್ರಾಜ್ಯಲ ॥
ಕ್ಷ್ಮೀಕಾಂತಾನನನಾಟ್ಯರಂಗಮಿದು ಸತ್ಸೌಭಾಗ್ಯಮಾಣಿಕ್ಯಮಾ ।
ಳಾಕೋಶಂ ದಲಿದೆಂಬ ಪೆಂಪುವಡೆದತ್ತಾಕಾರಮಾಕಾಂತೆಯಾ ॥ ೧೦೮

ವಚನದೊಳಿಲ್ಲ ಪೆರ್ಮೊಲೆಯೊಳಲ್ಲದೆ ಕರ್ಕಶವೃತ್ತಿ ವಕ್ರಮಂ ।
ಸುಚರಿತದೊಳ್ ವಿಚಾರಿಸುವೊಡಿಲ್ಲಳಕಾಳಿಯೊಳಲ್ಲದೆಲ್ಲಿಯುಂ ॥
ವಿಚಳತೆಯಿಲ್ಲ ಚಿತ್ತದೊಳಪಾಂಗದೊಳಲ್ಲದೆ ಸಾರಸನ್ಮುಖೀ ।
ಪಚಯದೊಳಿಲ್ಲ ಮಾಂದ್ಯಮದು ಯಾನದೊಳಲ್ಲದೆ ತಲ್ಲತಾಂಗಿಯಾ ॥ ೧೦೯

ಅಱಿವಿಂಗೆ ಜವ್ವನಂ ಕ ।
ಣ್ದೆಱೆದುದು ಜವ್ವನಕೆ ಪ್ರೌಢತ್ವಪೊಸಸಿರಿಯೊಸಕಂ ‖
ನೆಱೆದುದು ಸಿರಿಗಂ ಪಿರಿದುಂ ।
ಮುಱುಕಂ ದೊರೆಕೊಂಡುದಾಕೆಯಂ ಪ್ರೌಢರ್ಲೊಡಂ ‖ ೧೧೦

ಮತ್ತಮಾಜಗತ್ತ್ರಯಸವಿತ್ರಿ ಸವಿತೃಕಾಂತೆಯಂತೆ ಕಮಳೋತ್ಸವಕಾರಿಣಿಯುಂ, ವಸಂತಲಕ್ಷ್ಮಿಯಂತೆವಿಶಿಷ್ಟಪಾರ್ಥಿವಕುಳೋದ್ಭವೆಯುಂ, ಸಿದ್ಧಮಾತೃಕೆಯಂತೆ ಸಂತತೋಪಚಿತಕಳಾಕಳಾಪೆಯುಂ, ನಕ್ಷತ್ರಪಙ್ಕ್ತಿಯಂತೆ ವಿವಿಧಪ್ರದೇಶೋದ್ಭವವ್ಯಂಜನೋಪರಂಜಿತೆಯುಂ, ಸಮುದ್ರಲಹರಿಯಂತೆ ಅಗಣ್ಯಲಾವಣ್ಯಲಲಿತೆಯುಂ, ಪ್ರತಿಪಚ್ಚಂದ್ರಲೇಖೆಯಂತೆ ಸನ್ಮಾರ್ಗಪ್ರವರ್ತನೆಯುಂ, ದಿಗ್ಗಜಕಪೋಳಪಾಳಿಯಂತನೂನದಾನಾಧೀನೆಯುಂ, ಚಾಪಲತೆಯಂತೆ ದೃಢಗುಣಸಂಧಾನೆಯುಂ, ಮಹೇಂದ್ರಲೀಲೆಯಂತೆ ಸುಧರ್ಮಾನುವರ್ತಿನಿಯುಮೆನಿಪಳ್. ಅಂತುಮಲ್ಲದೆಯುಂ,

ಅಕಳಂಕಾಖಿಳಶೀಳಪಾಳಿಕೆ ಜಗದ್ದೃಗ್ಭೃಂಗಮಂದಾರಮಾ ।
ಳಿಕೆ ಶೃಂಗಾರಸರೋಮರಾಳಿಕೆ ಕಳಾವಿದ್ಯಾನಟೀನೃತ್ಯಶಾ ‖
ಳಿಕೆ ಚಿತ್ತೋದ್ಭವವಶ್ಯಮೂಳಿಕೆ ಜಿನೇಶೇಂದೂದಯಾದ್ರೀಂದ್ರಚೂ ।
ಳಿಕೆಯೆಂಬೆಂ ಪೊಗಳಲ್ಕೆ ಮತ್ತಱಿಯೆನಾನಾಲಕ್ಷ್ಮಣಾದೇವಿಯಂ ‖ ೧೧೧

ಆಕಾಂತೆ ಮಹಾಸೇನಮ ।
ಹೀಕಾಂತನೊಳೊಂದಿ ಕಲ್ಪತರುವಂ ತಳ್ತ ‖
ಪಾರ್ಕಲ್ಪಲತೆಯ ತೆಱದಿನ ।
ನಾಕುಳಸುಖಸಂಕಥಾವಿನೋದದಿನಿರ್ಪಳ್ ‖ ೧೧೨

ಚುಂಬನದಿಂಪು ಸುಯ್ಯ ನಱುಗಂಪು ಮರುಳ್ವ ಸೋಂಕು ಮಾತಿನೊಳ್ ।
ತಿಂಬಿದ ಕೊಂಕು ವಿಭ್ರಮದಗುರ್ವು ನಿಜೇಂದ್ರಿಯನರ್ಗದುರ್ವು ತಾ ‖
ನೆಂಬಿನಮಾಕೆಯೊಳ್ ನೆರೆದು ಸೌಖ್ಯಪರಂಪರೆಗಾತ್ಮಚಿತ್ತಮಾ ।
ಳಂಬನಮಾಗೆ ನಾಡೆ ತಣಿವೆಯ್ದುವನಾವಸುಧಾಧಿನಾಯಕಂ ‖ ೧೧೩

ನಳಿನಾಕರವುಂ ರವಿಯುಂ ।
ಜಳನಿಧಿಯುಂ ನಿರ್ಮಳೋರ್ಮಿಯುಂ ಚಂದ್ರಮನುಂ ॥
ಕಳೆಯುಮೆಸೆವಂತೆ ಸಸುಸಂ ।
ಧಿಳೇಶನುಂ ಕಾಂತೆಯುಂ ಕರಂ ಸೊಗಯಿಸುವರ್ ॥ ೧೧೪

ಪಾಪರಹಿತಂಗಳುರುಸುಖ ॥
ರೂಪಂಗಳ್ ನಿಪ್ಪನೇಕವಿಧಕೇಳಿಗಳಿಂ ॥
ದಾಪುಣ್ಯದಂಪತಿಗೆ ನಿಮಿ ।
ಷೋಪಮಮೆನೆ ಪೋಯ್ತನೇಕವತ್ಸರನಿಕರಂ ॥ ೧೧೫

ಅನ್ನೆಗಮಿತ್ತಂ

ದೇವರ ದೇವನುರ್ವರೆಗನುತ್ತರೆಯಿಂದಿಳಿದಾಮಹಾದಿಸೇ ।
ನಾವನಿಪಾಳನಗ್ರಮಹಿಷೀಪದಸಂಸ್ಥಿತೆಯಪ್ಪ ಲಕ್ಷ್ಮಣಾ ॥
ದೇವಿಯ ಗರ್ಭದೊಳ್ ನೆಲಸುತಿರ್ದಪನೆಂದು ಪುರಂದರಂ ಸ್ವಕೀ ।
ಯಾವಧಿಬೋಧದಿಂ ತಿಳಿದು ತನ್ನೊಳೆ ಸಂತಸದಂತನೆಯ್ದಿದಂ ॥ ೧೧೬

ಅಂತು ತಿಳಿದಱಿಂದಿಂಗಳುಂಟೆನೆ ಮುನ್ನಮೆ,

॥ ಮಾಲಿನಿ ॥

ಸುರಪತಿ ಜಿನಗರ್ಭಾದಾನಕಲ್ಯಾಣಲೀಲಾ ।
ಪರಿಕರವನೊಡರ್ಚಲ್ವೇಳ್ವುದುಂ ಭಕ್ತಿಭಾವಂ ॥
ಬೆರಸು ತಲೆಯೊಳಾಂತಂ ಪಾಲೆ ಮಂದಾರದುಬೆಂಬಂ ।
ತಿರೆ ನಲಿದು ತದೀಯಾದೇಶಮಂ ಕಿನ್ನರೇಶಂ ॥ ೧೧೭

ಅನಂತರಂ ಚಂದ್ರಪುರಿಗೆ ವಂದು ರಾಜಮಂದಿರದೊಳ್,

ಪಿರಿದುಂ ಪಂಚಾಶ್ಚರ್ಯಂ ।
ಬೆರಸು ಸಹಾರ್ಧತ್ರಿಕೋಟಿರತ್ನದ ಮಳೆಯಂ ॥
ಸುರಿಯಲ್ತೊಡಗಿದನನುದಿನ ।
ಮುರುಮುದದಿಂ ಮೂಱುಪೊೞ್ತು ಬೊಳನ್ಮೈಳಬಿಳಂ ॥ ೧೧೮

ಬಗೆವುದು ಗಗನದೊಳೆನಲ ।
ಲ್ಲುಗುವುದೆ ನಿಮಿರ್ದೆಳಗೆ ಶಕ್ರಚಾಪೋತ್ಕರಮಾ ॥

ವಗಮೆನೆ ಕುಬೇರಮೇಘದಿ ।
ನುಗುತಂದುದು ಪಂಚರತ್ನಧಾರಾಸಾರಂ ॥ ೧೧೯

ರನ್ನದ ಮೞೆಯಿಂದಿಳಿಯೆ ವಿ ।
ಪನ್ನತೆ ಗರ್ಭಾವತಾರದಿಂದಱುದಿಂಗಳ್ ॥
ಮುನ್ನಮೆನೆ ಪೊಯ್ತು ಜಿನರಾ ।
ಜಂ ನೆರಪಿದ ಪುಣ್ಯದಳವದಿನ್ನೆವಿರಿದೋ ॥ ೧೨೦

ಧರೆಗಂದಿಂ ಕೊಟ್ಟ ವಸುಂ ।
ಧರೆ ಮತ್ತಂ ರತ್ನಗರ್ಭೆಯೆಂಬೀಪೆಸರ್*ಗಳ್ ॥
ದೊರೆವೆತ್ತುವೆಂದೊಡೇನ ।
ಚ್ಚರಿಯಾದುದೊ ಧನದಜನಿತಮಣಿಗಣವರ್ಷಂ ॥ ೧೨೧

ಓರಂತೆ ಸುರಿದೊಡಂ ಮನ ।
ವಾರದು ರತ್ನತತಿ ತೀರದೆಂದೊಡೆ ತವಿಲಂ ॥
ಸಾರದು ತಾನೆನಿಸಿದ ಭಂ ।
ಡಾರಕ್ಕಂ ಭಕ್ತಿಗಂ ಕುಬೇರನೆ ನೋಂತಂ ॥ ೧೨೨

ಮತ್ತಮಾಮನುಷ್ಯಧರ್ಮನ ಬೞಿಯನೆ ಸೌಧರ್ಮೇಂದ್ರಂ ಧರ್ಮಾನುರಾಗದಿನರ್ಹದಂಬಿಕೆಯನನುದಿನಂ ಕೈಗೈಸಿಮೆಂದು ಹಿಮವದಾದಿವರ್ಷಧರ ಮಹೀಧರಾಧಿತ್ಯಕಾಳಂಕಾರಂಗಳಪ್ಪ ಪದ್ಮಾದಿಸರಂಗಳೊಳಿರ್ಪರಂ ಶ್ರೀ ಹ್ರೀ ಧೃತಿ ಕೀರ್ತಿ ಬುದ್ಧಿ ಲಕ್ಷ್ಮಿಗಳೆಂಬಱುವರಂ ದೇವಿಯರುಮಂ, ಮತ್ತಂ ಜಿನೇಂದ್ರಜನ್ಮಕಲ್ಯಾಣದೊಳ್ ಭೃಂಗಾರುಧಾರಿಣಿಯರಾಗಿಮೆಂದು ಮಣಿಮಯಾಕೃತ್ರಿಮಚೈತ್ಯಗೃಹರುಚಿರಮೆನಿಪ ರುಚಕಾಚಳದ ಮೂಡಣ ದೆಸೆಯ ಕೂಟಂಗಳೊಳಿರ್ಪ ವೈಡೂರ್ಯದ ವಿಜಯೆಯುಮಂ ಕಾಂಚನದ ವೈಜಯಂತಿಯುಂ ಕನಕದ ಜಯಂತಿಯುಮರಿಷ್ಟದಪರಾಜಿತೆಯುಂ ದಿಕ್ಸ್ವಸ್ತಿಕದ ನಂದೆಯುಂ ನಂದನದ ನಂದೋತ್ತರೆಯುಮಂಜನಮೂಳಕದ ನಂದಿವರ್ಧೆಯುಮೆಂಬ ದಿಗ್ದೇವಿಯರೆಣ್ಬರುಮಂ, ಮತ್ತಂ ಮಹಾಸೇನಮಹೀವರನರಸಿಗಾದರ್ಶನಮಂ ಪಿಡಿಯಿಮೆಂದು ತನ್ಮಹೀಧರದ

ತೆಂಕಣ ದೆಸೆಯ ಕೂಟಂಗಳಪ್ಪ ಮೇಘದ ಸುಪ್ರತಿಷ್ಠೆಯುಂ ಸುಪ್ರಬುದ್ಧದ ಸುಪ್ರಣಿಧಿಯುಂ ಐಂದ್ರದ ಸುಪ್ರಬುದ್ಧೆಯುಂ ವಿಮಳದ ಯಶೋಧರೆಯುಂ ರುಚಕದ ಲಕ್ಷ್ಮೀಮತಿಯುಂ ರುಚಕೋತ್ತರದ ಕೀರ್ತಿಮತಿಯುಂ ಚಂದ್ರದ ವಸುಂಧರೆಯುಂ ಸುಪ್ರತಿಷ್ಠದ ಚಿತ್ರೆಯುಮೆಂಬೀದೆಸೆವೆಣ್ಗಳೆಣ್ಬರುಮಂ, ಮತ್ತಂ ಲಕ್ಷ್ಮಣಮಹಾದೇವಿಗೆ ಗಾಯಕಿಯರಾಗಿಮೆಂದು ತತ್ಪರ್ವತದ ಪಡುವಣದೆಸೆಯ ಕೂಟಂಗಳಪ್ಪ ಲೋಹಿತಾಕ್ಷದಿಳಾದೇವಿಯುಂ ಜಗತ್ಕುಸುಮದ ಸುರಾದೇವಿಯುಂ ಪದ್ಮದ ಪೃಥ್ವಿಯುಂ ನಳಿನದ ಪದ್ಮಾವತಿಯುಂ ಕುಮುದದ ಕಾಂಚನೆಯುಂ ಸೌಮನಸದ ನವಮಿಕೆಯುಂ ಯಶೋಭದ್ರದ ಸೀತೆಯುಂ ಸರ್ವತೋಭದ್ರಭದ್ರೆಯುಮೆಂಬ ಹರಿತ್ಕುಮಾರಿಕೆಯರೆಣ್ಬರುಮಂ, ಮತ್ತಮಾವಿನಯಕಾಮಧೇನುಗೆ ಚಾಮರಮನಿಕ್ಕಿಮೆಂದು ತದವನೀಧರದ ಬಡಗಣ ದೆಸೆಯ ಕೂಟಂಗಳಪ್ಪ ಸ್ಫಟಿಕದಂಬುದೆಯುಂ ಅರ್ಕದ ಮಿತ್ರಕೇಶಿಯುಂ ಅಂಜನದ ಪುಂಡರೀಕಿಣಿಯುಂ ಕಾಂಚನದ ವಾರುಣಿಯುಂ ರಜತದಾಸ್ಯೆಯುಂ ಕುಂಡದ ಧಾತ್ರಿಯುಂ ರುಚಿರದ ಹ್ರೀಯುಂ ಸುದರ್ಶನದಾಕೃತಿಯುಮೆಂಬ ಕಕುತ್ಕಾಂತೆಯರೆಣ್ಬರುಮಂ, ಮತ್ತಂ ಜಗತ್ತ್ರಿತಯದೀಪಿಕೆಗೆ ನೀರಾಜನದೀಪಧಾರಿಣಿಯರಾಗಿಮೆಂದು ತದ್ಗಿರೀಂದ್ರದ ಐಂದ್ರೀದೆಸೆಯ ವಿಶೇಷಕೂಟಂಗಳಪ್ಪ ವಿಮಳದ ಚಿತ್ರೆಯುಂ ನಿತ್ಯಾಲೋಕದ ಕನಕಚಿತ್ರೆಯುಂ ಸ್ವಯಂಪ್ರಭದ ತ್ರಿಸರೆಯುಂ ನಿತ್ಯೋದ್ಯೋತಕದ ಸುತ್ರಾಮಣಿಯುಮೆಂಬ ವಿದ್ಯುತ್ಕುಮಾರಿಯರ್ ನಾಲ್ವರುಮಂ, ಮತ್ತಮುತ್ತಮಶೀಲವತಿಗೆ ಮುಪತ್ತರೆಯರಾಗಿಮೆಂದು ತನ್ನ ಗವಿದಿಕ್ಕೂಟಂಗಳಪ್ಪ ವೈಡೂರ್ಯದ ರುಚಕೆಯುಂ ರುಚಕದ ರುಚಕಕಾಂತಿಯುಂ ಮಣಿಪ್ರಭದ ರುಚಕಪ್ರಭೆಯುಂ ರುಚಕೋತ್ತರದ ಚಕ್ರಪ್ರಭೆಯುಮೆಂಬ ವಿದಿಕ್ಕನ್ಯೆಯರ್ ನಾಲ್ವರುಮಂ, ಮತ್ತಮಖಿಳವಿದ್ಯಾಪ್ರಗಲ್ಭೆಗೆ ಗರ್ಭಶೋಧನಾದಿರಮಣೀರಹಸ್ಯವ್ಯಾಪಾರದೊಳ್ ನೆಗಳೆಮೆಂದು ತಚ್ಛೈಳೋಚ್ಚ್ರಯಕೃತಕಕೂಟಂಗಳಪ್ಪ ರತ್ನಕೂಟದ ವಿಜಯೆಯುಂ ರತ್ನಪ್ರಭದ ವೈಜಯಂತಿಯುಂ ಸರ್ವರತ್ನದ ಜಯಂತಿಯುಂ ರತ್ನೋಚ್ಚ್ರಯದಪರಾಜಿತೆಯುಮೆಂಬೀವಿದ್ಯುದ್ದ್ಯುತಿಯರ್ ನಾಲ್ವರುಮಂ, ಮ

ತ್ತಮನೇಕಾಂತವಿದ್ಯಾವಿನೋದಿಗನೇಕವಿನೋದಂಗಳಂ ಸಲಿಸಿಮೆಂದು ವ
ಕ್ಷಾರೇಷ್ಟಾಕಾರಕುಂಡಳಾದ್ಯನ್ಯನಗನಿವಾಸಿನಿಯರಪ್ಪ ಮಾಳಿಕೆ ಮಾಳಿ
ನಿ ಕನಕದೇವಿ ಕನಕವೃದ್ಧಿ ಪುಷ್ಪಮಾಳೆ ಮಾಳಾವತಿ ಸುರಾದೇವಿ ತ್ರಿಸರೆ
ಮೊದಲಾಗೆ ಪಲರುಮಮರಕಾಂತೆಯರಂ ಕಳಿಪುವುದುಮಾಕೆಯರ್ ನೂತನ
ರತ್ನವೃಷ್ಟಿಯೊಡನೆ ಕಾಂತಾರತ್ನವೃಷ್ಟಿಯುಮನಾದಂದದಿಂ ಸಂದಣಿಸಿ ಗಗನ
ಮಾರ್ಗದಿನವನಿಗವತರಿಸಿ,

ಪವನಚಳಕಾಂತಿಯಿಂ ತಳಿದ ಪೂವಲಿಯುಂ ನಯನಾಂಶುವಿಂದೆ ಕ ।
ಟ್ಟಿದ ಪೊಸಮುತ್ತಿನಚ್ಚ ಮಣಿತೋರಣಮುಂ ಕಚಶೋಭೆಯಿಂದೆ ದೀ ॥
ಪದ ನವಿಲಂ ಕಳಕ್ವಣಿತದಿಂ ಗೃಹಕೋಕಿಳನಾದಮುಂ ಮರು ।
ತ್ಸುದತಿಯರೆಯ್ದೆ ನೂರ್ಮಡಿಸುತುಂ ಪುಗುತಂದರಿಳೇಶಗೇಹಮಂ ॥ ೧೦೭

ಅಂತು ಪೊಕ್ಕು ಮಣಿಮಯವಿಳಾಸಭವನಕ್ಕೆ ವಂದು

ಹಿಮಕರಸಂಗದೆ ಮುಗಿವುದು ।
ಕಮಳಕ್ಕುಚಿತಮೆನೆ ಮುಗಿದ ಕೈ ನೊಸಲೊಳ್ ಚೆ ॥
ಲ್ವಮರ್ದಿರೆ ತನುತನುಗೆಱಗಿದ ।
ರಮರಿಯರೆಲ್ಲಂ ಜಿನಾಂಬಿಕಾಪದಯುಗದೊಳ್ ॥ ೧೦೮

ಅಂತು ನಿಜಮುಖಪ್ರತಿಬಿಂಬಕದಂಬದಿಂ ಮರಕತಪ್ರಘಣದೊಳ್ ಪದ್ಮ
ಪುಷ್ಪೋಪಹಾರಮಂ ವಿರಚಿಸಿ ಬೞಯಂ ತಂತಮ್ಮ ನಿಯೋಗದಿಸುವೆಸ
ಕ್ಕೆ ಪೊಕ್ಕೋಲಗಿಸುವಲ್ಲಿ,

ಸಿರಿಯು ಕರತಳದ ಸಿತಸರ ।
ಸಿರುಹದ ವೈಯ್ಸಿರಿಯಿದರ್ಕಿದೇಕಚ್ಛತ್ರಂ ॥
ಪಿರಿದುಮೆನಿಸಿಸುಮ ಸುರಸಂ ।
ದರಿದೇವಿಗೆ ಪಿಡಿದ ಮುತ್ತಿನೇಕಚ್ಛತ್ರಂ ॥ ೧೦೯

ಬೀಸುವ ಚಾಮರದೆಲರಿಂ ।
ಸೂಸುವ ಕುರುಳೊಳ್ ತೆರೆಯ ನೊರೆಗೆಂಬುಜದಿಂ ॥

ಜೋಸರಿಪ ತುಂಬಿವಿಂಡಿನ ।
ದೇಸೆಯನೊಳಕೆಯ್ದುದಾಸ್ಯದೊಳ್ ನೃಪಸತಿಯಾ ॥ ೧೨೬

ಸೊಗಯಿಪ ಪೂರ್ವದಿಗಂಗನೆ ।
ಗಗನಶ್ರೀಗಿಂದುಕಳೆಯನೀವಂದದೆ ದೇ ॥
ವಿಗೆ ಪೊಳೆವ ಬಿಳಿಯೆಲೆಯ ವೀ ।
ಳಗೆಯಂ ಸುರಕನ್ನೆ ನೀಡಿದಳ್ ಪೆಱಳೊರ್ವಳ್ ॥ ೧೨೭

ರಮಣಿಯ ಮುಖಕ್ಕೆ ವೇಳೆತ ।
ನಮನಾಂತ ಸರೋಜದಂತೆ ತತ್ತಾಂಬೂಳ ॥
ಕ್ಕಮರವಧುವಾಂಪ ಕಾಂಚನ ।
ಕಮಳಾಕೃತಿಯೆನಿಪ ಡವಕೆ ಪಡೆದುದು ಚೆಲ್ವಂ ॥ ೧೨೮

ಒರ್ವಳ್ ಜಿನಜನನಿಯ ನಿಡು ।
ಪುರ್ವಂ ಸಮೆಯಲ್ಕೆ ನೀಡಿದಳ್ ಕುಡಿವೆರಲಂ ॥
ಗೀರ್ವಾಣಕಾಂತೆ ಕಾಮನ ।
ಕರ್ವಿನ ಬಿಲ್ಗರಲ ಸರಲನೋಲಗಿಸುವವೋಲ್ ॥ ೧೨೯

ಕಾಡಿಗೆಯನೆಚ್ಚು ಮೆಲ್ಲನೆ ।
ಗಾಡಿಗೆ ಸುರವನಿತೆ ತೆಗೆದ ಸೋಗೆ ಬೆಡಂಗಂ ॥
ಮಾಡಿದುದಾಕಾಂತೆಯ ಚೆ ।
ಲ್ವೋಡೆದೆಸೆವ ನೇತ್ರಪತ್ರಿಕೆಯ ಸೋರ್ಮುಡಿವೊಲ್ ॥ ೧೩೦

ಸ್ಮರಮಂಗಳದರ್ಪಣದೊಳ್ ।
ವಿರಚಿಪವೊಲ್ ಸ್ವಸ್ತಿಕಾಂಕಮಂ ಚಂದನದಿಂ ॥
ಬರೆದಳ್ ಕಪೋಲದೊಳ್ ಬಿ ।
ತ್ತರದಿಂದಂ ಪತ್ರಭಂಗಮಂ ಮತ್ತೊರ್ವಳ್ ॥ ೧೩೧

ಸಸಿಯೊಕೆಯ ವದನಕ್ಕಂ ।
ತು ಸಮಂ ಬೇಡೆಂದು ತಂದು ಪಡಿದೋಱುವವೊಲ್ ॥

ಪೊಸಮುತ್ತಿನ ಪುಂಜದಿ ರಂ ।
ಜಿಸುವೋಲೆಯನಮರಿ ಪಾಲೆಯೊಳ್ ನಿಯಮಿಸಿದಳ್ ॥ ೧೩೨

ಸರಸಬಿಸವಲ್ಲಿಯಂ ಸ್ಮರ ।
ಕರಿಕುಂಭದೊಳೊಟ್ಟುತಿರ್ಪ ಕರಿಣಿಯ ತೆಱನಂ ॥
ಸುರತರುಣಿ ಪೋಲ್ತೆಳರಸಿಯ ।
ಗುರುಕುಚದೊಳ್ ಹಾರಲತೆಯನಳವಡಿಸುತ್ತುಂ ॥ ೧೩೩

ರಮಣಿಯ ಮುಖಕ್ಕೆ ಮಣಿಮುಕು ।
ರಮನೊಪ್ಪಿರೆ ತೋರ್ಪ ದಿವಿಜವಧು ಸಮ್ಮುಖಮಂ ॥
ಹಿಮಕಿರಣಂಗಂ ರವಿಗಂ ।
ಸಮನಿಪ ಪುಣ್ಣಮೆಯ ಸಂಜೆವೆಣ್ಣಂ ಪೋಲ್ತಳ್ ॥ ೧೩೪

ಅಳಿಮಾಲೆ ನೆಲಸಿದೆಳಲತೆ ।
ಬಳಸಿದ ವನಲಕ್ಷ್ಮಿಯಂದದಿಂ ಕೂರ್ಪಾಳಂ ॥
ತಳೆದಂಗರಕ್ಕೆಗಮರೀ ।
ಕುಳವಿರೆ ಕೆಲಗೆಲದೊಳೆಸೆವಳಂಬಿಕೆ ಜಿನನಾ ॥ ೧೩೫

ಅಡಿಯೂಡುವ ಮುಡಿವಿಕ್ಕುವ ।
ಪಡಿಯಱವೆಸಗೆಯ್ವ ಪಡಿಗಮಂ ಸಾರ್ಚುವ ಮ ॥
ತ್ತಡಿಗುಟ್ಟುವ ಪೊಂಬ್ರಗೆಯಂ ।
ಪಿಡಿದರ್ಪಿಪ ಬೆಸನೆ ದಿವಿಜಕಾಂತೆಯರ್ಗೆ* ಬೆಸಂ ॥ ೧೩೬

ಅನಂತಸಿರಿನಿಧಿವಾಸದೊ ।
ಳನಂತಜೋದಾದಿರಾಜನೊಪ್ಪುವ ಗುಣದ ॥
ಲ್ಲನಂಗಜಯುಕಳಸವೆನ ।
ಲ್ವನಮಾತೆಯು ಗಂಧವಿಬುಧಭೂಷಣವೆಸಗುಂ (?) ॥ ೧೩೨
(ನಾಸಿಕಾಭರಣಶ್ಲೇಷಾರ್ಥಂ)

ಎಂದು ೧೩೩ ನೆಯ ಪದ್ಯವಾಗಿ ಬಂದು ಪ್ರತಿಯುಲ್ಲಿದೆ. ಇದು ಗ್ರಂಥಕರ್ತನ ಪದ್ಯದಂತೆ ತೋರಿಬರುವುದಿಲ್ಲ.

ನಡೆಯಿಪರನುಲೇಪನಮಂ ।
ಮುಡಿಯುಂ ಮಾಲೆಯುಮಮರ್ತ್ಯಲೋಕದವಂ ತಂ ॥
ದೆಡೆವಿಡದೆ ಫಟ್ಟವಳ್ತಿಯು ।
ಮುಡಿವಳ್ತಿಯು ಮಾಲೆಗಾರ್ತಿಯುಂದದಿನಿರೆಬರ್ ॥ ೧೩೭

ಮತ್ತಂ

ದೇಸೆಯುನಾಂತರೆಯ್ದೆ ಭುವನತ್ರಿತಯಾಂಬಿಕೆಗಂಗರಾಗಮಂ ।
ಪೂಸುವ ಮಜ್ಜನಂಬುಗಿಸುವಾರತಿಯೆತ್ತುವ ಪೀಲಿಗುಂಚಮಂ ॥
ಬೀಸುವ ಬೋನಮಂ ಸಮೆವ ಶಂಕಮನೊತ್ತುವ ಹಂಸತಳ್ಪಮಂ ।
ಪಾಸುವ ಬಾಸಿಗಂಗುಡುವ ಗದ್ದುಗೆಯಿಕ್ಕುವ ದೇವಕಾಂತೆಯರ್ ॥ ೧೩೮

ಮತ್ತಂ ಸಂಗೀತಕಪ್ರಸಂಗಮಂ ಪದವಡಿಸುವೆಡೆಯೊಳ್

ಸಾರಣೆಯು ಸಕಳನಿಃಕಳ ।
ಚಾರಣೆಯು ಬೆಡಂಗು ಸರದ ರಾಗದ ಸವಿಯಂ ॥
ಪೂರಿಸೆ ಕಿವಿಯೊಳ್ ದಿವಿಜ ।
ಸ್ತ್ರೀರಮಣಿಯು ಮುಂದೆ ವೀಣೆಯಂ ಬಾಜಿಸಿದಳ್ ॥ ೧೩೯

ಮತ್ತಂ ಶಾರೀರವೀಣೆಯೊಳ್ ಪಾಡುವಲ್ಲಿ

ಸ್ವರದೊಳ್ ಪದದೊಳ್ ತಾಳದೊ ।
ಳಿರದವಧಾನದೊಳಳಂಕೆಗೊಂಡಿರೆ ರಾಗೋ ॥
ಚ್ಚರಣಲಯಗೀತಮಾಯ್ತು ।
ಚ್ಚರಿ ತದ್ಗಂಧರ್ವವಿದ್ಯೆ ಸುರಸುಂದರಿಯಾ ॥ ೧೪೦

ಮತ್ತಮೊರ್ವಳ್

ಅಮರ್ದಿನ ಕೊಳಲಲಳನಿಯದೆನೆ ।
ಸಮಂತು ಸಪ್ತಸ್ವರಂಗಳುಂ ರಂಜಿಪ ರಾ ॥
ಗಮನುಗುಚೆ ಕೊಳಲ ನುಡಿಸಿದ ।
ಳಮರಾಂಗನೆ ಬಿಲ್ಲನತನು ಗೊಲೆಗೊತ್ತುವಿನಂ ॥ ೧೪೧

ಕುಱುವಿನ ಸಂಚದ ಕೂಟಂ ।
ತೊಡರದೆ ಪಾಟಪ್ರಹಾರದೊಳ್ ನಾಡೆ ನಯಂ ॥
ಒಡೆದಿರೆ ಬಾಜಿಸಿದಳ್ ಮುಖಿ ।
ಬೆಡೆದೊಡೆಯೊಳ್ ತಳೆದು ಡಕ್ಕೆಯುಂ ಪೆಱತೊರ್ವಳ್ ॥ ೧೪೨

ಎಡಗೆಯ್ ಬಲಗೆಯ್ ತೋಱಂ ।
ಕಡುಸಣ್ಣಂ ಕದಳ ಕನ್ನವಟ್ಟಂ ತಾನೆಂ ॥
ಬೆಡೆಯೊಳ್ ಪ್ರಹರಣವಿಂಪಂ ।
ಪಡೆದಿರೆ ಸುರವಧು ಮೃದಂಗಮಂ ಬಾಜಿಸಿದಳ್ ॥ ೧೪೩

ತಾಳದ ಗೀತದ ವಾದ್ಯದ ।
ಮೇಳನದಿಂದಭಿನಯಂಗಳಭಿನವಭಾವ ॥
ಕ್ಕಾಳಂಬನಾಗೆ ರಸದೊಳ ।
ಗೋಲಾಡುವ ತೆಱದಿನಾಡಿದಳ್ ಮತ್ತೊರ್ವಳ್ ॥ ೧೪೪

ಅದಲ್ಲದೆಯುಂ

ಸರಸಕವಿಕಾವ್ಯಮಧುಮ ।
ತ್ತ್ರಿರಾಗದೊಳ್ ಪೊರೆದು ಪೊಂಗೆ ತನಿಗಂಪೊಗೆದಂ ॥
ತಿರೆ ನುಣ್ದನಿಯಿಂದೋದುವ ।
ಸುರವಾಚಿಕೆ ಸತಿಗೆ ಪುಳಕಮಂ ಪುಟ್ಟಿಸಿದಳ್ ॥ ೧೪೫

ಅದಲ್ಲದೆಯುಂ ಅಚ್ಚರಸಿಯರೊಳಗಣ ಮೃಣಾಳಿಕೆಯೆಂಬಳ್ ನಿಜಪದತಳದ ನುಣ್ಬೆಳಗಿನೊಡನೆ ಕುಂಕುಮರಸದ ಚಳಯಮಂ ಪಸರಿಸಿಯುಂ, ಲವಲಿಕೆಯೆಂಬಳಂಘ್ರಿನಖರುಚಿ ತಡಂಗಲಸೆ ಪೂವಲಿಗೆದಱಿಯುಂ, ಉತ್ಪಳಿಕೆಯೆಂಬಳವತಂಸೋತ್ಪಳಂಗಳ್ ಕದಪಿನೊಳ್ ತೆಱಂಬೊಳೆಯೆ ರಂಗವಲಿಯನಳವಡಿಸಿಯುಂ, ಮಂದಾರಿಕೆಯೆಂಬಳಂದ್ರನದರಲ್ಗಳಂ ತೊಡರ್ಚುವಲ್ಲಿ ಕಂಕಣದ ಮೆಲ್ಲುಲಿಯಿನೆಳಸುವಳಿಗಳನಿಯದನಿಯಂ ತನಿಗೊರ್ವಿಸಿಯುಂ, ಲವಂಗಿಕೆಯೆಂಬಳ್ ಲವಂಗಪಲ್ಲವದ ತೋರಣಗಣಮಂ ತೊಡರ್ಚುವೆಡೆಯೊಳ್ ತೆಱದ ತೋಳ ಮೊದಲ ನಱುಗಂಪಿನಿಂದದರ್ಕೆ ಪೊಸಗಂಪಿನಣ್ಪನಿಕ್ಕಿಯುಂ, ಅಮೃತಮತಿಯೆಂಬಳ್ ಅಮೃತಾಹಾರದ ಬೋನಮಂ ಬಿಸುಪಿಂಗೆ ಪೊಸದಳ

ರನಿಕ್ಕಿ ನೆಗಪಿದಂತೆ ಕೆಂಗಳದ ಕೆಂಪು ಬಳಸೆ ವಿಳಾಸದಿಂದನ್ನವಾಸಕ್ಕೆ ನಡೆಸಿಯುಂ, ಚಂದ್ರಿಕೆಯೆಂಬಳ್ ಚಂದ್ರಕಾಂತಕಲಶಂಗಳನಾತ್ಮೀಯಮುಖಚಂದ್ರಸ್ಮೇರಚಂದ್ರಿಕೆಯಿನೊಸರ್ಚಿ ಪೆರ್ಚಿ ಕರಕಾರದೊಳರೆಯಾಗದಿರಿಸಿಯುಂ, ಚಿತ್ರಲೇಖೆಯೆಂಬಳ್ ವಿಚಿತ್ರಶಾಲೆಯೊಳ್ ವಿವಿಧವಿದ್ಧಂಗಳಂ ಬರೆದು ಬಱಿಯುಮಂ ಪ್ರದೇಶಶುದ್ಧಿಯಿಂ ಪೆಱವೆಟ್ಟು ನೋಡುವಲ್ಲಿ ಪಸರಿಸುವ ಕಣ್ಬೆಳಗಿನಿಂದರ್ಘೋದಕದೊಳಂಕೆಗೆಯ್ದಂತೆಮಾಡಿಯುಂ, ಪ್ರಭಾವತಿಯೆಂಬಳ್ ಮದನಮಂದಿರದೋವರಿಯೊಳಂಗಪ್ರಭೆಯಿಂ ತೆರಳ್ದ ಕತ್ತಲೆಯುಮಂ ಮತ್ತೆ ಮಣಿದೀಪಂಗಳಿಂ ನಿರವಶೇಷಂಮಾಡಿಯುಂ, ಮಾಳತಿಕೆಯೆಂಬಳ್ ಅರಸಿಯ ಬೆನ್ನ ಚೆಲ್ವಿಂಗೆ ಸೋಲ್ತು ತನ್ನ ಜೆನ್ನಂ ಬೆನ್ನಿತ್ತು ದೆಸಿಸಿ ಬೆಂಗೊಟ್ಟು ಮಲಂಗಿಸಿಯುಂ, ನಿಪುಣಿಕೆಯೆಂಬಳ್ ಅರ್ಪದರ್ಶನೋಪಕರಣಂಗಳನಳವಡಿಸುವಲ್ಲಿ ಪುಣ್ಯದೇವತೆಯೆ ಸನ್ನಿದವಾದಳೆನಿಸಿಯುಂ, ಪದ್ಮಿಕೆಯೆಂಬಳುಪವನದ ಪದ್ಮಾಕರದಂಚೆವಿಂಡಂ ನಡೆಯಿಪೆಡೆಯೊಳವರ್ಗಲಸಗತಿವಿಳಾಸಮನುಪದೇಶಿಸಿಯುಂ, ಮಯೂರಿಕೆಯೆಂಬಳ್ ಗೃಹಮಯೂರಂಗಳಂ ಕೇಶಭಾರಕ್ಕೋರನ್ನವೆಂಬ ಭಾರದಿಂ ಕಾರಾಗೃಹಮಂ ಪುಗಿಸುವಂತೆ ಧಾರಾಗೃಹಮಂ ಪುಗಿಸಿಯುಮಿಂತು

ಮಱಸನಮಂ ಬಿಟ್ಟೊಳಗಣ ।
ಪೊಱಗಣ ಕೆಲಸಂಗಳೆಲ್ಲಮಂ ದೇವಿಯ ಕ ॥
ಣ್ಣಱಿದುಂ ಮನಮಱಿದುಂ ಬಿಡ ।
ದಱುದಿಂಗಳ್ ದೇವಕಾಂತೆಯರ್ ನಡೆಯಿಸಿದರ್ ॥ ೧೪೬

ಅಂತುಮಲ್ಲದೆಯುಂ

ವಿನುತಜಿನಾರ್ಭಕಾವತರಣಕ್ಕೆ ಸುಯೋಗ್ಯಮಿದಾದುದಾಗವೆಂ ।
ಬಿನಮಮರೀಚಯಂ ಪರಮಪಾವನವಸ್ತುಗಳಿಂದೆ ಗರ್ಭಶೋ ॥
ಧನಮನೊಡರ್ಚೆ ನಿರ್ಮಳತೆವೆತ್ತುದು ದೇವಿಯುದಾತ್ತಮೂರ್ತಿ ಚಂ ।
ದನಸಲಿಲಂಗಳಿಂ ತೊಳೆದ ಮುತ್ತಿನ ಪುತ್ತಳಿಯಿಂತಿದೆಂಬಿನಂ ॥ ೧೪೭

ಅತಿಶುದ್ಧಮಾಯ್ತು ಸತಿಯಾ ।
ಕೃತಿ ದಿವ್ಯದ್ರವ್ಯಗರ್ಭಶೋಧನದಿಂದು ॥

ಜ್ಝಿತಲಕ್ಷ್ಮವೆನಿಸಿ ಲೋಕ ।
ಸ್ತುತವಮೃತಾಂಶುಲೇಖೆ ತಾನೆಂಬಿನೆಗಂ ॥ ೧೪೭

ವೃತ್ತಂ

ಪಿರಿದುಂ ದೋಷಾನುಷಂಗಂ ಕಿಡೆ ತನುದಿನಗಲ್ತಂದ ಚಂದ್ರಾಂಶುವಂ ವೋಂ। ಕರಿಸುತ್ತುಂ ನಾಡೆ ತನ್ನುಜ್ಜ್ವಳಿಕೆಯಿನುಚಿತೋನ್ಮೇಷಮಂ ಬಂದು ಪೆರ್ಚ್ಚಿ॥ತ್ಕರದೊಳ್ ಮಾಡುತ್ತು ರಾಗಾಭ್ಯುದಯಮನೊಳಕೆಯ್ದೆಯ್ದೆ ಸಾಫಲ್ಯಮಂ ಕ । ಣ್ಗಿರದಿತ್ತಳ್ ಕಾಂತೆ ಕಾಲ್ಯಪ್ರಭವದಿನಕನತ್ಕಾಂತಿಯೆಂಬಂದದಿಂದಂ ॥ ೧೪೮

ಉಡುವುದು ದೇವಲೋಕದೊಳಮಿಂತಿದೆ ಸಾರಮೆನಿಪ್ಪ ಸೀರೆ ಮೇಣ್ ।
ತಡುವುದು ದಿವ್ಯಮಪ್ಪ ಹರಿಚಂದನದೊಂಗನುಲೇಪಮಾಗಳುಂ ॥
ಮುಡಿವುದು ಪಾರಿಜಾತದಲರ್ಪಸಿಗೆಮೆಂಬ ವಿಳಾಸದೇೞ್ಗೆಯುಂ ॥
ಪಡೆವರೆ ತೀರ್ಥಕೃಜ್ಜನನಿಯುಂಪಡೆ ಮತ್ತಿನ ಮರ್ತ್ಯಕಾಂತೆಯರ್ ॥ ೧೪೯

ಅಂತು ಸಂತತೋಲ್ಲಸಿತದೇವಕಾಂತಾಸಂತಾನಸಂಪಾದಿತೋತ್ಸವಪರಂಪರೆಗಳಿಂ ಪರಮನ ಚರಮಗರ್ಭಾವತರಣಮನಱಿದು,

ವರರತ್ನೋತ್ಪತ್ತಿ ಪೊರ್ದುತ್ತಿರೆ ಸಮನಿಸಿದತ್ತರ್ಣವಕ್ಕೆಯ್ದೆ ರತ್ನಾ ।
ಕರಮೆಂಬೀಮ್ಮೆಯೆಂಬಂತಿರೆ ಜಿನಸತಿ ಲೋಕೋತ್ತಮಂ ಪುತ್ರನಾಗು॥
ತ್ತಿರೆ ಸಾರ್ಥಕ್ಯಂ ತ್ರಿಲೋಕೀಜನಕೆ ಜನಕನಲ್ತೇ ಮಹಾಸೇನನೆಂಬೊ ।
ಳ್ಪಿರದೆನ್ನಂ ಕೆನ್ನಮೆಂದೇಂ ನಲಿದನೊ ಮನದೊಳ್ಭಾರತೀಭಾಳನೇತ್ರಂ ॥

॥ ಗದ್ಯಂ ॥

ಇದು ಪರಮಪುರುನ್ನಾಥಕುಲಭೃತ್ಸಮುದ್ಭೂತಪ್ರವಚನಸರಿತ್ಸರಿನ್ನಾಥ
ಶ್ರುತಕೀರ್ತಿತ್ರೈವಿದ್ಯಚಕ್ರವರ್ತಿ ಪದಪದ್ಮನಿಧಾನದೀಪವರ್ತಿ

ಶ್ರೀಮದಗ್ಗಳದೇವ

ವಿರಚಿತಮಪ್ಪ

ಚಂ ದ್ರ ಪ್ರ ಭ ಪು ರಾ ಣ ದೊ ಳ್

ಗರ್ಭಾವತರಣಕಲ್ಯಾಣವರ್ಣನಂ

ಏಕಾದಶಾಶ್ವಾಸಂ.

ಶ್ರೀಮಜ್ಜಿನಚಂದ್ರಂ ಮ |
ದ್ವಾಮಾಗರ್ಭಕ್ಕೆ ವಂದಪಂ ದಿನದಿಂದಂ ‖
ಬೀಮುದದೊಡವಂ ತಳೆದಂ |
ಭೂಮೀಶಂ ಜೈನಜನಮನೋಹರಚರಿತಂ ‖ ೧

ಅಂತು ಮಹಾಸೇನಮಂಡಳೇಶ್ವರನುತ್ಸವೋತ್ಸವಮನಪ್ಪಕೆಯ್ದಿರ್ಪಿನ ಮೊಂದುದಿವಸಂ

ನವಚೂತಲತೆಗೆ ಸುಫಳೋ |
ದ್ಭವಕಾರಣಮಪ್ಪ ಋತುವಸಂತಂ ಸಾರ್ವಂ ‖
ತೆವ್ರೋಲರಸಿಗೆ ಸಮನಿಸಿದುದು |
ದಿವಿಜಪ್ರಮದಾಪ್ರಮೋದಮಯಋತುಸಮಯಂ ‖ ೨

ಅನಂತರಂ ಚತುರ್ಥದಿನದೊಳ್ ಅನುದಿನಸವನಸಮಯಸಂಸಕ್ತದಿವ್ಯಾನುಲೇಪಸುರಭಿಪರಿಮಳೋದ್ಗಾರಿದ್ವಾರದೇಶಮುಮೇಕೈಕಸವ್ಯಾಪಸವ್ಯಪಾಣಿಪಲ್ಲವಗೃಹೀತವದನಮಳಯಜಜಳಗರ್ಘರೀಸಮಾನಯನಸಂಭ್ರಮಸ್ಫುರತ್ಪುರಂಧ್ರಿಕಾದ್ವಂದ್ವಬಂಧುರಮುಮೂಷ್ಮಾಯಮಾಣನಿರ್ಮಳಾರ್ಣಃಪೂರ್ಣತಪನೀಯಮಯಕಟಾಹನಿಹಿತಮುಂ ಉತ್ಕಟಾಮೋದಲಂಪಟಾಳಿಪಟಳಾಂಧಕಾರಿತಮುಖಕುಹರಗಂಧೋದಕಘಟಪ್ರಕರಸಂಕಟಮುಮತಿಮನೋಹರಾಂಗರಾಗಕಾಶ್ಮೀರಯಕ್ಷಕರ್ದಮೋದ್ವರ್ತನಾಮತ್ರಚಿತ್ರಿತೈಕದೇಶಮುಮನೇಕವರ್ಣಪೂರಪರಿಕಲಿತನೀರಾಜನದೀಪಲಾಲಿತಸ್ಥಾಳಾವಳೀವಿಳಸಿತಮುಂ ವಿಶಾಳವಾಳಜಪ್ರಣಾಳಕೀಳಿತಚತುಃಕೋಣಮರಕತಭಿತ್ತಿವಿಸ್ತೃತಸ್ನಾನಪ್ರದೇಶಪೇಶಲಮುಮಪ್ಪ ಮಜ್ಜನಮಂದಿರಮಂ ಸುರಪರಿಚಾರಿಕಾಸಮೇತನೊಳಗಂ ಪೊಕ್ಕು ಸುಗಂಧತೈಲಾಭ್ಯಂಗಾತಿಮಸೃಣಿತಾಂಗಲಾವಣ್ಯಲಕ್ಷ್ಮೀಲಕ್ಷ್ಮಣಾಮಹಾದೇವಿ ಮಣಿಮಯಮಜ್ಜನಪೀಠಿಕಾಗ್ರಮನಳಂಕರಿಸಿದಾಗಳ್

ಬಿಗಿದುಡೆನೂಲಿನೊಳ್ಬುಱಯನೊಯ್ಯನವುಂಕಿ ಕುರುಳ್ಗಳಂ ಕೊಡಂ ।
ಕೆಗೆ ತೆಗೆದೇಱ ನೂಂಕಿ ಮಣಿಕಂಕಣಮಂ ನವರತ್ನಹಾರಮಂ ॥
ನೆಗಪಿ ಪೆಗಲ್ಗೆ ತಂದು ಪೆಱದೊಂದುವಿಳಾಸಮನಾಂತು ಮಜ್ಜನಂ ।
ಬುಗಿಸಿದರಂದನುಶ್ಚೈರ್ಯುರೆ ಮಜ್ಜನಸಳ್ತಿಯರಾಗಿ ರಾಗದಿಂ ॥ ೩

ಪೆಱದೇನೊ ಪಲವು ರೂಪಿಂ ।
ನೆಱೆವಚ್ಚಿಯ ರತಿಯ ಕಾಮುಕಲ್ಪಲತೆಗೆ ನೀ ॥
ರೆಱೆವಂದದೆ ಸುರವನಿತೆಯ ।
ರೆಱೆವರ್ ಕೋಮಳೆಯ ಮಜ್ಜನಕ್ಕುಜ್ಜುಗದಿಂ ॥ ೪

ಕರಿಗಳ್ ಮಿಸಿಸುವ ತೆಱದಿಂ ।
ಸಿರಿಯಂ ಸ್ಮರಕರಿಗಳೆನಿಸಿವಮುರಿಯರಾಸುಂ ॥
ದರಿಯಂ ಮಿಸಿಸಿದರುಜ್ಜ್ವಳ ।
ತರಕಾಂಚನಕಳಶಕಳಿತಕರಪಲ್ಲವೆಯರ್ ॥ ೫

ಅಲಗೊರ್ಂಚಲ್ಗಳನುಣ್ಮುತಿರ್ಪ ಮಕರಂದಾಸಾರಮಂ ಸಾರವು ।
ಷ್ಪಲತಾಮಾಳೆ ವಸಂತಲಕ್ಷ್ಮಿಗಭಿಷೇಕಂಗೆಯ್ವವೋಲ್ ಸ್ಫಟಿಕೋ ॥
ಜ್ಜ್ವಳಕುಂಭೋದ್ಗತಗಂಧತೋಯದಿನಮರ್ತ್ಯಸ್ತ್ರೀಚಯಂ ಸ್ನಾನಮಂ
ಗಳಮಂ ದೇವಿಗೆ ಕೂಡೆ ಮಾಡಿದುದುದಂಚದ್ವಾಹುಶಾಖಾನ್ವಿತಂ ॥ ೬

ಆಗಳ್ ತತ್ಕಾಲಯೋಗ್ಯಾಂಬರಪರಿಧಾನೆಯಾಗಿ

ಮುರಿದೆಡಗೆಯ್ಯೊಳಾದ್ರ್ರಕಚಭಾರಮನೆತ್ತುತುಮಂಶುಕಾಂತದಿಂ ।
ಗುರುಕುಚಭಾರಮಂ ಮುಸುಕುತುಂ ಬಲಗೆಯ್ಯೊಳನಂಗಟಂಕೃತಿ ॥
ಸ್ವರಮೆನೆ ಪೊಣ್ಮೆ ಪಾವುಗೆಯ ಗೆಜ್ಜೆಯ ಮೆಲ್ಲುಲಿ ಬಂದಳಂದಳಂ ।
ಕರಣಗೃಹಕ್ಕೆ ಸುತ್ತಿ ದಿವಿಜಾಂಗನೆಯರ್ ಬರೆ ದೇವಿ ಲೀಲೆಯಿಂ ॥ ೭

ಆಗಳಮರನುಹತ್ತರಿಕೆಯರ್ ಕಲ್ಪಪಾದಪಪ್ರತಿಪಾದಿತಾನರ್ಘ್ಯಮೌಕ್ತಿ
ಕಾಭರಣ ಧವಳದುಕೂಲವಸನಸುರಭಿಕುಸುಮಚಂದನಾನುಲೇಪನಂಗಳಂ
ತಂದನಟಯಿಸುವುದುಮವಂ ನಿಜಾಂಗಸಂಗದಿಂದಳಂಕರಿಸಿದಾಗಳ್

ಅಲರ್*ನ್ನಂ ಸುರಹೃತ್ಕುಮುದ್ವತಿ ಸುರಸ್ತ್ರೀದೃಕ್ಚಕೋರೀಚಯಂ
ನಲಿವನ್ನಂ ನಿಜಕೋಮಳಾಂಗಲಲಿತಾಲಾವಣ್ಯವಾರಾಶಿಯು ॥
ಗ್ಗಲಿಪನ್ನಂ ಸಮಯೋಚಿತೋಪಚಿತಸೌಂದರ್ಯಂ ಬೆಡಂಗಾದುದಾ ।
ಲಲನಾರತ್ನದ ಕೊಂಡ ಬೆಳ್ಪಸದನಂ ಬೆಳ್ದಿಂಗಳಿಂಬಂದದಿಂ ॥ ೮

ಬರೆದರೊ ಚಂದನರಸದಿಂ ।
ಕರುವಿಟ್ಟರೊ ಕಣ್ಗಳೆಸೆ ಕರ್ಪ್ಪುರದಿಂ ಕಂ ॥
ಡರಿಸಿದರೊ ಪಳುಕಿನಿಂದೆನೆ ।
ಪರಿಜೆಸೆದುದು ಸುದತಿ ತಳೆದ ಬೆಳ್ಪಸದನದೊಳ್ ॥ ೯

ಪವನಖದುನ್ಮಯೂಖಾಂಶುತತಿ ಶಿಂಬಿ ಮಸಲ್ತುದು ನಾಡೆಯುಂ ದುಕೂ ।
ಲದ ನಿಱಿ ತಳ್ತು ಪೊಣ್ಮೆ ಸುಲಿಪಲ್ಗಳ ತಣ್ಗದಿರಾಸಗಂ ಕವ ॥
ಲ್ತುದು ಪೊಸಮುತ್ತಿನೆಕ್ಕಸರಮುಣ್ಮುವಪಾಂಗದ ಕಾಂತಿ ಪವಣ್ಕೊ ।
ರ್ವಿದುದವತಂಸಮಾದ ನವಕಲ್ಪಲತಾಸ್ತಬಕಂ ಲತಾಂಗಿಯಾ ॥ ೧೦

ಅಂತು ಕೈಗೆಯ್ದು

ಸೊಗಯಿಸುವಮರ್ದ*ನ ಕಡಲಿಂ ।
ಬೊಗೆದ ಲಸಲ್ಲಕ್ಷ್ಮಿ ಪದ್ಮಸದ್ಮಮನೊಲವಿಂ ॥
ಪುಗುತಂದಸಳೆನಿಪೆಸಕಂ ।
ಮಿಗೆ ಮೆಲ್ಲನೆ ಸಜ್ಜೆವನೆಗೆ ಬಿಜಯಂಗೆಯ್ದಳ್ ॥ ೧೧

ಅಂತು ಬಂದು, ಕನಕಪರ್ಯಂಕಕಳಿತಧವಳತಲ್ಪತಳವುಂ, ತಲ್ಪತಳ ಮೆಂಬ ಶಿಶಿರಕರಬಿಂಬಮುಂ ಬಳಸಿದ ತಾರಗೆಗಳೆನಿಸಿದುಪಹಾರಕುಸುಮಂಗಳುಂ, ಉಪಹಾರಕುಸುಮಂಗಳಂ ಮುಸುಱಿ ಮೊರೆವ ಮಱಿದುಂಬಿಗಳುಂ, ಮಱಿದುಂಬಿಗಳ ಗಾವರಕ್ಕೆ ಜತಿಯನುಗ್ಗಡಿಸುವಂತೆ ಕಳಲುಳಿಯಿನುಲಿವ ಪಾರಿವಂಗಳುಂ, ಪಾರಿವಂಗಳುಗ್ಗಡಣೆಗಾಡುವಂತೆ ಸುಱಿದು ಮೆಟ್ಟುವ ಕಳಹಂಸೆಗಳುಂ, ಕಳಹಂಸೆಗಳಲಸಗಮನಮಂ ನೋಡಲೆಂದು ಗೃಹದೇವತೆಯ ಕಣ್ದೆಱೆದಳೆನಿಸಿ ರಂಜಿಸ ಶುಕ್ತಿಗಳೊಳೆಸೆವ ಪಪಂಗೆಯ್ದ ಕತ್ತುರಿ

ಯುಂ, ಕತ್ತುರಿಯ ಕರ್ಪನೊತ್ತುಗೊಂಡುಚಿದ ಕಟ್ಟಿಲೆಯನಲೆಯಲೆಂದು ಬಂದ ಚಂದ್ರಸೂರ್ಯಕಳೆಗಳಂತೆ ಬಟ್ಟಲೊಳಿರ್ದ ಕಟ್ಟದೆಲೆಯ ವೀಳೆಯಂಗಳುಂ, ವೀಳೆಯಂಗಳ ಬೆಳ್ಪಿನೊಳ್ ಸೆಣಸಿ ಮೂವಲೆಗೆ ವಂದಂತೆ ಕೆಲದೊಳಿರ್ದ ಕಪ್ಪುರವಳಿಕುಗಳುಂ, ಕಪ್ಪುರವಳಿಕುಗಳ ಕಂಪಿನೊಳ್ ಕೆಳೆಗೊಂಡು ಕುಸುಮಸರನೆ ಬೀಸಿದ ಕರ್ಣಾಮೃಯಪಕುಂಚದಂತೆ ಪಸರಿಸುವಗರುವಿನ ಪೊಗೆಯುಂ ಅಗರುವಿನ ಪೊಗೆಯ ಪುದುವಿನೊಳ್ ಮುಗಿಲ ಮಱೆಯ ಕಿಱುಮಿಂಚಿನಂತೆ ಸೆನ ಲಂಬೂಷಮುಕ್ತಾವಳಿಗಳುಂ, ಮುಕ್ತಾವಳಿಗಳೆಂಬ ಬೆಳ್ನರಿಯುಂ ಸುರಿವ ಶರದದ ಮುಗಿಲ ತೆಗಳಿಗೆಯಿದೆನಿಪ ಮೇಲ್ಕಟ್ಟಿನ ಬೆಳ್ಳುಂಬಟ್ಟೆಯುಂ, ಬೆಳ್ಳುಂಬಟ್ಟೆಯೆಂಬರಲಂಬನ ಜಸದೊಡನೆ ಪಸರಿಸುವ ತೇಜಮೆನಿಸಿ ಬೆಳಪ ದೀಪಕಳಿಕೆಗಳುಂ, ದೀಪಕಳಿಕೆಗಳ್ ಮಾರ್ಪೊಳೆಯೆ ಸಂಪಗೆಯ ಮುಗುಳ್ ಕೇರ್ಗಟ್ಟನಂತಿರ್ದ ಮಣಿಭಿತ್ತಿಗಳುಮಳವಲ್ಲದೆಸೆವ ವಾಸಭವನಮಂ ಪೊಕ್ಕು ಹಂಸಾಂಸೋಪಧಾನಧವಳಶಯ್ಯೆಯೊಳ್ ಸುರತರಂಗಿಣಿಯ ದರಿಯೊಳೈರಾವತದೊಡನೆ ಸೆಜ್ಜರಂಬುಗುವಭ್ರಮೂವಿಭ್ರಮಮನಳವಡಿಸಿ ನಿಜಮನೋವಲ್ಲಭನೊಡನೆ ಪವಡಿಸಿರ್ದು

ಕೃಶಮಧ್ಯೆ ನಿಜಮತಿಗೆ ಪೊಂ ।
ಡಶಭೂಷಣಮಾದುವೆನಿಸಿ ಸೊಗಯಿಸುವಾಷೋ ॥
ಡಶಮಂ ಸ್ವಪ್ನಮನಂತಾ ।
ನಿಶಾಂತದೊಳ್ ಬರೆ ನಿಶಾಂತಯಾಮಂ ಕಂಡಳ್ ॥ ೧೭

ಆಗಳ್

ಅವಿರಳಪುಣ್ಯಪಾಠಕಪಟುಧ್ವನಿಯಿಂ ಸುರಗಾಯಿನೀಜನಾ ।
ರವದಿನಗಾರಕೀರಕಳಹಂಸನಿನಾದದಿನಬ್ಜನೇತ್ರೆಯು ॥
ಪ್ಪವಡಿಸಿದಳ್ ನಿಜೇಶನೊಡನೊಯ್ಯನರಲ್ವಲರ್ಗಣ್ಗಳಿಂದೆ ಪೊ* ॥
ಣ್ಮುವ ಬೆಳಗುಣ್ಮೆ ಸೆಜ್ಜೆವನೆಯಂ ನೆಱೆ ತೀವೆ ಗವಾಕ್ಷಜಾಳದಿಂ ॥ ೧೮

ಅನಂತರಂ ಕತಿಪಯಮುಹೂರ್ತಪರಿಕಲ್ಪಿತಸ್ನಾನದೇವತಾರ್ಚನಾದಿಕಲ್ಪರಚನಾವಿಧಾನೆಯುಂ ಕತಿಪಯೋಚಿತಾಸನೋಪವಿಷ್ಟವಿಶಿಷ್ಟಾರ್ಯಕಾನಿಕಾಯಸಹಸಂಭಾಷ್ಯಮಾಣಸನ್ಮಾನಸಂಭೃತಸ್ವರೂಪೆಯುಂ ಕತಿಪಯ

ಪುರೋಹಿತಸಮೂಹವಿಜ್ಞಾಪಿತಾನೇಕಧರ್ಮಕಾರ್ಯವಚನಸಂತವಿಳಸಿತೈಕಕರ್ಣೆಯುಂ ಕತಿಪಯಗಂಧರ್ವಗಾಯಿಕಾಗೀಯಮಾನಜಿನಾಂಕಮಾಲಿಕಾನುಬದ್ಧಗಾನಾನುರಕ್ತಾಂತರಂಗೆಯುಂ ಕತಿಪಯಾಸವ್ಯಪತಾಕಾಹಸ್ತಪಲ್ಲವನಿವಾರಿತೋತ್ತಾರರಣಿತಪಾರಿಹಾರ್ಯಪ್ರಕೋಷ್ಠಯಕ್ಷಕುಮಾರಿಕಾಚಮರರುಹವಿಕ್ಷೇಪಣೆಯುಂ ಕತಿಪಯಸ್ಫಟಿಕಭಿತ್ತಿಭಾಗಭಾಸುರಪ್ರತಿಕೃತಿಕದಂಬಸಂಪಾದಿತಾತ್ಮೀಯಲೀಲಾಕೇಕರಾಕಾರವಿಭ್ರಮಭ್ರಮೆಯುಮಾಗಿ ದೇವಪೂಜಾಮಂದಿರದ ಮುಂದಣ ಮೊಗಸಾಲೆಯೊಳಿರ್ಪನ್ನೆಗಂ

ಬಂದಂ ನೃಪತಿಳಕಂ ನಿಜ ।
ಸುಂದರಿಯೊಳ್ಗನಸಿನೊಸಗೆಯಂ ಪಱ್ಚಿಕೊಳಲ್ ॥
ಬಂದಱನೆನೆ ಲೀಲಾಗವ ।
ನಾಂದೋಳಿತಪಾರಿಜಾತಕರ್ಣಾವತಂಸಂ ॥ ೧೪

ಅಂತು ಬಂದಾಸನಾಥದೊಳ್ ಕುಳ್ಳಿರ್ದ ಹೃದ್ವಲ್ಲಭಂಗಾತ್ಮಾಂತರಂಗಭರಿತಾನನ್ದಾಮೃತಪ್ರಸರದಾದಾರ್ಕ್ಷರಂಗಳಿಂದಿಂತೆಂದಳ್:—

ದಿವಿಜೇಭಂ ವೃಷಭಂ ಮೃಗಾರಿ ಸಿರಿ ಚಂಚತ್ಸ್ರಗ್ದ್ವಯಂ ಚಂದ್ರಮಂ
ರವಿ ಮೀನದ್ವಿತಯಂ ಕನತ್ಕಳಶಯುಗ್ಮಂ ಪದ್ಮಸದ್ಮಂ ಮಹಾ ॥
ರ್ಣವಮುದ್ಯದ್ಧರಿಪೀಠಮಿಂದ್ರಸದನಂ ನಾಗಾಸ್ಪದಂ ರತ್ನರಾ ।
ಶಿ ವಿಧೂಮಾಗ್ನಿಯೆನಿಪ್ಪವಂ ತರದೆ ಕಂಡೆಂ ಸ್ವಪ್ನಮೀರೆಂಟುಮಂ ॥ ೧೫

ಎನಲೊಡಮೊಸೆದುವ್ರು ತನುಲ ।
ಕ್ಷ್ಮಿ ನಲಿದು ಗುಡಿಗಟ್ಟಿದಂದದಿಂ ಪೂಸಿದ ಚಂ ॥
ದನದ ಪುಳಿಂಚುಗಳಂ ಪೊ ।
ತ್ತು ನೆಗೆದ ಪುಳಕಾಂಕುರಂಗಳರಸನ ಮೆಯ್ಯೊಳ್ ॥ ೧೬

ಅನ್ತು ಸಂತಸದಂತಸೆಯ್ದಿ ತತ್ಫಳಪ್ರಕಟನದ ನೆವದೆ ನಲವನಿರ್ಮಡಿಸುವಂತಿಂತೆಂದಂ:—

ದಾನಗಜದಿಂದೆ ದಾನಿಯು ।
ನೂನವೃಷಂ ವೃಷಭನಿಂ ಮೃಗಾರಿಯಿನಸಸಂ ॥

ತಾನಾರಿ ಸಿರಿಯಿನುಭಯ |
ಶ್ರೀನಾಥಂ ಭುವನಶೇಖರಂ ಶೇಖರದಿಂ ॥ ೧೭

ಅಮೃತಾಂಶುವಿನಮೃತಪದೇ |
ಚ್ಛಿ ಮಿತ್ರನಿಂ ತ್ರಿಭುವನೈಕಮಿತ್ರಂ ರುಚಿರಾ ॥
ನಿಮಿಷದಿನನಿಮಿಷವಂದ್ಯಂ |
ವಿಮಳಾಂಭಃಪೂರ್ಣಕುಂಭದಿಂ ಗುಣಪೂರ್ಣಂ ॥ ೧೮

ಸರಸಿರುಹಾಕರದಿಂ ಸ |
ಚ್ಚರಿತಾಕರನಬ್ಧಿಯಿಂ ದಯಾಂಬುಧಿ ಹರಿವಿ ॥
ಷ್ಟರದಿಂ ಹರಿವಿಷ್ಟರಪತಿ |
ಸುರರಾಜವಿಮಾನದಿಂದಮಪ್ರತಿಮಾನಂ ॥ ೧೯

ಭೋಗಿನಿವಾಸದಿನತಿಶಯ |
ಭೋಗನಿವಾಸಂ ವಿಶಿಷ್ಟರತ್ನೋತ್ಕರಸಂ ॥
ಯೋಗದಿನತರ್ಕ್ಯಲಕ್ಷಣ |
ಯೋಗನುಷರ್ಬುಧನಿನಧಿಕಬೋಧನಿಧಾನಂ ॥ ೨೦

ನಂದನನಕ್ಕುಂ ನಮಗೆ |
ನ್ನೆಂದಧಿಪನಮೋಘವಚನದಿಂ ವನಿತೆ ಮಹಾ ॥
ನಂದಮನಾಂತಂಬುದರವ |
ದಿಂದಾನಂದಿಪ ಮಯೂರವನಿತೆವೊಲಾದಳ್ ॥ ೨೧

ಅನ್ನೆಗಮಿತ್ತಂ ಮುಂ ಪೇಳ್ದ ಪದ್ಮನಾಭಚರನಹಮಿಂದ್ರಂ ತ್ರಯತ್ರಿಂಶದಾಯುರಬ್ಧಿಗಳನುತ್ತರಿಸಿ ಪಂಚಾನುತ್ತರೆಗಳೊಳಗಣ ವೈಜಯಂತವಿಮಾನದಿಂ ಜ್ಞಾನತ್ರಯಮುಯುಂ ಬಂದು ಚೈತ್ರಬಹುಳಪಂಚಮಿಶ್ರವಣನಕ್ಷತ್ರಶುಭಯೋಗದೊಳ್ ಚಂದ್ರಮಂಡಳಾಕಾರದಿಂ ಲಕ್ಷ್ಮಣಾಮಹಾದೇವಿಯ ಮುಖಮುಕುರಮಂ ಪೊಕ್ಕು ವಿಮಳಗರ್ಭಕುಮುದಿನಿಯೊಳಮರಪತಿಕೃತಪ್ರಥಮಕಲ್ಯಾಣಪೂಜಾಪುರಸ್ಸರಮವತರಿಸಿದಾಗಳ್

ನೆಲಸಿರೆ ಮೇದುರೋದರದೊಳಂದು ಜಿನಾರ್ಭಕನಂತರಂಗದೊಳ್ ।
ನೆಲಸಿಪುದೆಯ್ದೆ ಸಂತಸವ ಸಂತತಿ ಪಿಂಗದೆ ಕೋಮಳಾಂಗದೊಳ್ ॥
ನೆಲಸಿದುದತ್ಯಪೂರ್ವಮೆನೆ ಕಾನ್ತಿಯು ತಿಂತ್ರಿಣಿ ಮತ್ತಮಾಂಗದೊಳ್ ।
ನೆಲಸಿದುದೆಂದುಮಿಲ್ಲವ ವಿಳಾಸದಳುರ್ಕೆ ಮರಾಳಯಾನೆಯಾ ॥ ೨೨

ತರುಣಿಯು ಬಸಿಱೊಳ್ ತ್ರಿಜಗ ।
ದ್ಗುರುವಿರ್ದುಂ ಭಾರಪೀಡೆಯಂ ಮಾಡನೆ ಭಾ ॥
ಸುರಮುಕುರದೊಳಿರ್ದುಂ ಭೂ ।
ಧರದ ನೆೞಲ್ ಭರಮನೇನವರ್ಕೊಡರಿಕುಮೋ ॥ ೨೩

ಗುರುಜಘನಭರದ ಗುರುಕುಚ ।
ಭರವೆರಡಱ ನಡುವೆ ಸತಿಯ ಲಘುಮಧ್ಯಂ ಬಂ ॥
ಧುರಮಾಯ್ತು ದುರಿತತರುಗಳ ।
ನುರಿಪುವ ಶಿಖಿಶಿಖೆಯು ತೆಱನನಿಂತಱಿಪುವವೋಲ್ ॥ ೨೪

ರಾಜ್ಞೀಗರ್ಭದೊಳಿರ್ದುಂ ।
ತ್ರಿಜ್ಞಾನಸಮೇತನೆಂದು ಪೇೞ್ವೆಡೆಗಿವೆ ದಲ ॥
ಭಿಜ್ಞಾರೇಖೆಗಳೆನಿಸಿ ಮ ।
ನೋಜ್ಞತೆಯಂ ತ್ರಿವಳಿರೇಖೆ ತಳೆದೆಸೆದಿರ್ಕುಂ ॥ ೨೫

ಈಹಾರಹಿತಂ ವ್ಯಪಗತ ।
ಮೋಹಂ ನಿಜಗರ್ಭದಲ್ಲಿ ನೆಲಸಿರೆ ಬಱಿಕಂ ॥
ದೋಹಳಮುಮಲಸಭಾವಕು ।
ತೂಹಳಮುಂ ಜಿನನ ಜನನಿಯಂ ಪೊರ್ದುಗುಮೋ ॥ ೨೬

ಸತಿಯುರ್ಗೆ ತೋರ್ಪ ಗರ್ಭೋ ।
ಚಿತಚಿಹ್ನಂ ತಳೆದುವಾಕೆಯೊಳ್ ಪೆಱದೊಂದಾ ॥
ಕೃತಿಯನದಂತುಟೆ ತೋಱುಗು ।
ಮತಿಶಯಮದು ಸುಗುಣರತ್ನನಿಧಿಯಿರ್ದೆಡೆಯೊಳ್ ॥ ೨೭

ಮತ್ತಂ

ತೊಳಗುವ ರತ್ನಮಂ ತಳೆದ ವಾರಿಧಿವೇಳೆ ನವೋರುಭೂಜಮಂ ।
ತಳೆದ ಸುಮೇರುಮೇಖಳೆ ಸುಧಾರಸಮಂ ತಳೆದೋಷಧೀಶನಿ ॥
ರ್ಮಳಕಳೆ ಶಾತಕುಂಭನಿಧಿಯಂ ತಳೆದಿರ್ದಿಳೆಯೆಂಬ ಲೀಲೆಯಿಂ ।
ತಳೆದಳಿಳಾಧಿರಾಣ್ಮಹಿಳೆಯಂದು ಜಿನಾರ್ಭಕನಂ ಸ್ವಗರ್ಭದೊಳ್ ॥ ೨೮

ಅದಲ್ಲದೆಯುಂ

ಸುರಕಾಂತಾಪರಿಚರ್ಯೆಯುಂ ಸುರಕುಜಾತಪ್ರೇಷಿತಾಲೇಪನಾಂ ।
ಬರಭೂಷಾಕುಸುಮೋತ್ಕರಾನುಭವಮುಂ ಚಿತ್ತೋತ್ಸವೋನ್ಮೇಷಮುಂ ॥
ಪುರುಷಂ ತನ್ನೊಳೊಡರ್ಚುತಿರ್ಪ ವಿಳಸದ್ರೂಪಪ್ರವೀಚಾರಮುಂ ।
ಸುರಲೋಕಸ್ಥಿತಿ ಬೇಱಿದೊಂದೆನಿಸಿದತ್ತಾಕಾಂತೆಗಾಗರ್ಭದೊಳ್ ॥ ೨೯

ನವಪುಷ್ಪಾಭರಣಂ ಪ್ರಿಯಾಭರಣಮಂಗಾಲೇಪನಂ ಚಂದನ ।
ದ್ರವಮಾವಾಸಮುದಗ್ರಯಂತ್ರಜಳಧಾರಾಮಂಡಪಂ ವಸ್ತ್ರಮೊ ॥
ಪ್ಪುವ ಚೀನಂ ಪೆಱತೊಂದು ಸಮ್ಮನಿಸಿದತ್ತಾಕಾಂತೆಗೆಂಬನ್ನಮೆ ।
ಯ್ದೆ ವಸಂತೋತ್ಸವದೊಳ್ ಸಮಾನಮೆನಿಸಲ್ ಸಾಲ್ದತ್ತು ಗರ್ಭೋತ್ಸವಂ

ಅಂತು ಗರ್ಭಾರ್ಭಕನ ಲೇಶ್ಯಾನುರೂಪಂಗಳಪ್ಪ ವಿಶುದ್ಧಭೋಗಪರಂಪರೆಗಳಿಂ ಕಾಲಂ ಸಲೆ ಪರಿಪೂರ್ಣಪ್ರಸವಸಮಯದೊಳ್

ದೊರೆವೆತ್ತಾ ಪುಷ್ಯಮಾಸಂ ವಿಳಸಿತಸಿತಪಕ್ಷಂ ತದೇಕಾದಶೀವಾ ।
ಸರಮಂತಾರೋಹಿಣೀತಾರಕೆಯತಿಶುಭದಂ ಶುಕ್ಲಯೋಗಂ ಸಮಂತೊಂ ॥
ದಿರೆ ಲೋಕಕ್ಕಗ್ಗಳಂ ಸಂತಸವೊಗೆವಿನೆಗಂ ಪುಟ್ಟಿದಂ ಸರ್ವಸೌಖ್ಯಾ ।
ಕರರೂಪಂ ಲಕ್ಷ್ಮಣಾದೇವಿಗೆ ತನಯನನೇಕಾಂತವಿದ್ಯಾವಿನೋದಂ ॥ ೩೧

ಅಂತರ್ವತ್ನಿತ್ವದೊಳಮ ।
ನಂತರಮಾಪ್ರಸವಸಮಯದೊಳಮಿನಿತಾಯಾ ॥
ಸಂ ತೋಱದೆ ಪಡೆದಳ್ ಮಗ ।
ನಂ ತಾಯಕ್ಲೇಶಸಾಧ್ಯನಿಧಿಯೆಂಬಿನೆಗಂ ॥ ೩೨

ಪಡೆದಳ್ ಪುಣ್ಯದ ಬಿತ್ತಿಂ ।
ಪಡೆವಂತಮರೇಂದ್ರಭಕ್ತಿಲತಿಕೆಗಡರ್ಪಂ ॥

ಪಡೆವಂತೆ ಜಗೆಕ್ಕಂಕ ।
ಣ್ಬಡೆವಂತಂಬಿಕೆ ವಿಶುದ್ಧಬೋಧಾಂಬಕನಂ ॥ ೩೩

ಆಗಳುದಯಿಸಿದಾವುಪಾತ್ಮನಪಗತರಜನೆಂಬುದಂ ಪೇಳ್ವಂತಿಳಾವಳಯ ಮುಪಗತರಜಮಾದುದು; ಅಕಲುಷಭಾವನೆಂಬುದಂ ಪೇಳ್ವಂತೆ ಸಲಿಲಾಶಯ ಮಕಲುಷಭಾವವಾದುದು; ಅವಾಮವೃತ್ತಿವರ್ತನನೆಂಬುದಂ ಪೇಳ್ವಂತೆ ಅಧ್ವರಾನಲನವಾಮವೃತ್ತಿವರ್ತನವಾದುದು; ಅಚಂಡಕೋಪಯುಕ್ತನೆಂ ಬುದಂ ಪೇಳ್ವಂತೆ ಮಾರುತನಚಂಡಕೋಪಯುಕ್ತಮಾದುದು; ಅತ್ಯಂತ ಪ್ರಸನ್ನನೆಂಬುದಂ ಪೇಳ್ವಂತೆ ಗಗನತಳಮತ್ಯಂತಪ್ರಸನ್ನಮಾದುದು.

ಅದಲ್ಲದೆಯುಂ

ಕಾಲಹರನುದಯುಮಿದಱೊಳ್ ।
ಕಾಲಂಬಾರುತ್ತಿರಲ್ಕದೇಕೆಂಬವೊಲಾ ॥
ಕಾಲದೊಳೆ ತರುಗಳೆಲ್ಲಂ ।
ಲೀಲೆಯನಾಂತುವು ತಳಿರ್ತು ಪೂತುಂ ಕಾಯ್ತುಂ ॥ ೩೪

ಇದು ಚಿತ್ರಮಲ್ತಣಂ ಪು ।
ಷ್ಪದಂತನೆಂದೆನಿಸಿ ಪುಟ್ಟಿದೀಜಿನಪತಿಯು ॥
ಭ್ಯುದಯದೊಳೆಂಬನ್ನೆಗಮೊ ।
ರ್ಮೊದಲಲರ್ದುವು ವಿಮಳಕನಳೆಕುಮುದವನಂಗಳ ॥ ೩೫

ಮತ್ತಮಾಕುವಳಯಬಾಂಧವನ ನವೋದಯದೊಳೊದವಿದ ಸಂಜೆಗೆಂ ಪಿನಂತೆ ಪಿಂಜರಿತಪಿಷ್ಟಾತಕಂ ಬಿಸಿದೆಸೆಗೆ ಪಸ ಸೆಯುಂ, ಗಗನಗಂಗಾತರಂ ಗಿಣಿಯ ತೆರೆದುಂಗಲಂತೆ ಅರೆತರದೆ ಕಟ್ಟಿದ ಮುತ್ತಿನ ತೋರಣಂಗಳ್ ತ ಳತಳಿಸೆಯುಂ ದ್ವಿತಿಯ ಕಲ್ಯಾಣಮಾಂಗಲ್ಯಮಂ ಮಾಡಲೆಂದು ಪುರಂದರ ನಂ ಕರೆವ ಪುರಲಕ್ಷ್ಮಿಯ ಕರ ಲ್ಲವಂಗಳಂತೆ ಕೆಂಗುಡಿಗಳ್ ಡಿಗಡಿಗೆ ಮಿಳಿ ರ್ದು ಮಿಳ್ಳಿಸೆಯುಂ, ಸಕಳಭುವನಸಂಭೇದಿಯಾದ ಸಂಮದದೊಳಾಶಾಗ ಜಂಗಳ್ ಮೊಳಗಿದಂತೆ ಪ್ರಯ್ಯ ಬದ್ದವಣದ ಸದ್ದದೆ ದೆಸೆಯೊಳಂ ಮಾರ್ದನಿಯಿಡೆಯುಂ, ಪುರದೊಳಗೆ ಪೂರಂಬರಿವ ರಾಗರಸದ ಪ್ರಸಲ ಪು

ದುವಿಟೆನಿಸಿ ಬೀದಿಬೀದಿಗಳೊಳೆಲ್ಲಂ ತಳಿವ ಕುಂಕುಮರಸದ ಚಳೆಯದಿಂ ಕೆಂಕವಾಗೆಯುಂ, ಅವನೀಶನಿತಿಯಾನಂದಬಾಷ್ಪಬಿಂದುಸಂದೋಹದಂತೆ ಬಟ್ಟೆಗಣ್ಗಳೊಳ್ ಕಡೆಯಿಕ್ಕಿದ ಬಿಡಮುತ್ತುಗಳ್ ಬೆಡಂಗುವಡೆಯೆಯುಂ, ಬಮೊರ್ದಲೊಳೆ ಮೆಯ್ದೋಱಿದಾಱುಂ ಋತುವಿನೆಸಕದಿಂ ನಲಿವ ದೀವದ ಚಾದಗೆಯು ಗಿಳಿಯು ಪುರುಳಿಯು ಕೋಗಿಲೆಯು ನವಿಲ ಕೊಂಚೆಯಂಚೆಯ ಕಾಕಳಿಯೊಡನೆ ಕಯ್ವೊಯ್ವಂತೆ ಮಂಗಳಗೀತಿಕಾರವಂಗಳಂಬರಂಬರಂ ಪರಿಯೆಯುಂ, ಅಳವಿಗೞಿದುತ್ಸವದೆ ಗೊಂದಣಂಗುಣಿವ ಗಣಿಕೆಯರ ಪದಪ್ರಚಾರಕ್ಕೆ ಬೆರ್ಚಿ ಪೂವಲಿಗಳಂ ಬಿಟ್ಟು ಪಾಪಹರನ ಪ್ರಟ್ಟೆದಿಳೆಯುಂ ಕಳಂಕಮೆ ಬಿಟ್ಟ ಪೋಪಂತೆ ನೆಗೆವ ತುಂಬಿಯ ಬಂಬಲ್ಗಳಂಬವಾಗೆಯುಂ, ತನ್ಮಹೋತ್ಸವಮನುಭೂತಪೂರ್ವಮುಮದೃಷ್ಟಪೂರ್ವಮುಮಶ್ರುತಪೂರ್ವಮುಮೆನಿಸೆ;

ತೋಱಿದುದೆಮ್ಮ ತೊಟ್ಟವೆಸಕಿಂದು ಕೃತಾರ್ಥತೆಯಿಂದುಸೀಮೆಯಂ ।
ಮೀಱಿದುದಿಂದ್ರರಾಗರಸವಾರಿಧಿ ಧರ್ಮನಮೇರುಮಿಂದು ಬೇ ॥
ರಾಱಿದುದಿ ಧರಾತಳಬೆಳಂದವನೀಶನ ದೇವಿಯೊಳ್ಪು ನೀ ।
ರೇಱಿದುದೆಂದದೇಂ ನಲಿಸು ನರ್ತಿಸುತಿರ್ದರೊ ದೇವಕಾಂತೆಯರ್ ॥ ೩೬

ಆಗಳ್

ಎಱಗದೆ ತಾಮೆ ದೇವಮಕುಟಂ ನತಮಾದುವು ಪಾದನಂಗಳಂ ।
ಪೆಱದೆ ಸುರಾನಕಂ ಮೊಳಗುತಿರ್ದುವು ಕಲ್ಪಲತಾವನಂಗಳಂ ॥
ತಿಱಿಯದೆ ಪೂಗಳೆಯ್ದೆ ಸುರಿತಂದುವು ಸಗ್ಗದೊಳಿಂದೊಡಿಂತುಟೆಂ ।
ದಱಿವವನಾವನಾನತಚರಾಚರನಭ್ಯುದಯಪ್ರಭಾವಮಂ ॥ ೩೭

ಧರಣೇಂದ್ರಾವಾಸದೊಳ್ ಶಂಖನಿನದಮಖಿಳವ್ಯಂತರಾವಾಸದೊಳ್ ಬಂ
ಧುರಭೇರೀನಿಸ್ವನಂ ಜ್ಯೋತಿರಮರನಿಕರಾವಾಸದೊಳ್ ಸಿಂಹನಾದಂ ॥
ಸುರರಾಜಾವಾಸದೊಳ್ ಘೋಂಕೆನೆ ಪಟುತರಘಂಟಾರವಂ ಪೊಣ್ಮೆ ತೀರ್ಥೇ
ಶ್ವರಜನ್ಮೋತ್ಸಾಹಮಂ ಸೂಚಿಸಿದುದಕೃತಸಂಜಾತಮಾಶ್ಚರ್ಯಭೂತಂ ॥

ಆ ಜನ್ಮೋತ್ಸವಮಂ ಗಡ ।
ಮೂಜಗಮುಮಿನಿತ್ತು ಬೇಗದಿಂ ನೆರೆದುದನೆಂ ॥

ಬೋಜೆಯೊಳ್ ಕೇಳ್ದು ಬೆನೆ ಜಿನ ।
ರಾಜನ ಸಾಮರ್ಥ್ಯಮೇನತಿವ್ಯಾಪಕವೋ ॥ ೩೮

ಜನಿಯಿಸಿದನಲ್ತೆ ಸಿಂಹಾ ।
ಸನಪತಿಯಿಂಬಿದೆಱಗಿಮೆಂದು ಸುರರ್ಗೆಂಬವ್ರೋಲಾ ॥
ಸನಕಂಪನಾದುದೊಡನ ।
ಪ್ಪಿನವೋಲಗಿಪಮರಿಯರ ಶಿರಃಕಂಪನಮುಂ ॥ ೩೯

ವಿಷ್ಟರಕಂಪದಿನವಧಿಸ ।
ದೃಷ್ಟಿಸಮಾಳೋಕನಪ್ರಯೋಗದಿನಱಿದಂ ॥
ಸ್ಪಷ್ಟತರಂ ತಾನೆಂಬಿನ ।
ಮಿಷ್ಟನುತೀರ್ಥೇಶನುದಯಮಂ ದಿವಿಜೇಶಂ ॥ ೪೦

ಅಱಿದಾಸನದಿಂದಿಳಿದಿರ ।
ದೆಱಗಿದನಾತ್ಮೋತ್ತಮಾಂಗದೊಳ್ ಕರಮುಕುಳಂ ॥
ಪೆಱತೊಂದು ರತ್ನಮುಕುಟದ ।
ಕೆಱನಂ ರುಚಿರಾಂಗುಳೀಯಕಂ ತಳೆವಿನೆಗಂ ॥ ೪೧

ಅನಂತರಂ ಭಗವದ್ದ್ವಿತೀಯಕಲ್ಯಾಣೋತ್ಸವೋತ್ಸುಕನಾಗಿರ್ಪನಂ

ಭುಜಗೇಂದ್ರರ್ ಭವನಪ್ರತಾನದಿನನೂನವ್ಯಂತರರ್ ತದ್ವನ ।
ವ್ರಜದಿಂ ಜ್ಯೋತಿರಮರ್ತ್ಯರಾಗಳ್ ನಿಜಜ್ಯೋತಿರ್ವಿಮಾನೌಘದಿಂ ॥
ದಜರರ್ ಕಲ್ಪಸಮೂಹದಿಂ ತಳ್ದರ್ ಬಂದೆತ್ತೆತ್ತಮಾಕಾಶದೊಳ್ ।
ಧ್ವಜಭೇರೀಯುತರಿರ್ದರೆಯ್ದೆ ಬರವಾಸುತ್ತುಂ ಶಚೀನಾಥನಂ ॥ ೪೨

ಆಗಳಖಿಳಮಂಗಳಸನಾಥಸಾಮಾನಿಕತ್ರಯತ್ರಿಂಶತ್ಪಾರಿಷದಾತ್ಮರಕ್ಷಕ ಲೋಕಪಾಳಕಾಭಿಯೋಗ್ಯಕಿಲ್ಬಿಷಿಕಪರಿಜನಪರೀತನುಂ, ಹಸ್ತ್ಯಶ್ವರಥಪ ದಾತಿವೃಷಭಗಂಧರ್ವನರ್ತಕೀಪ್ರಭೇದಸಪ್ತಾನೀಕಸಮೇತನುಮಾಗಿ

ಧರ್ಮೋದ್ಯೋಗಾನುರಾಗೋಲ್ಲಸಿತಹೃದಯನುದ್ಯದ್ವಿಭೂಷಾವಳೀರೋ
ಚಿರ್ಮಾಳಾಚಿತ್ರಿತಾಭ್ರಂ ಪಟುಪಟಹರವಾಘೂರ್ಣಿತಾಶಂ ವಿಯದ್ಗಂ ।

ಗೋಮಿರ್ಪ್ರಖ್ಯಾತಪತ್ರಧ್ವಜಚಮರಜಬೃಂಗಂ ಶಚೀಸಂಯುಕ್ತಂ ಸೌ ॥
ಧರ್ಮೇಂದ್ರಂ ಬಂದನೈರಾವತವಿಪುಳತರಸ್ಕಂಧಪೀಠೀನಿಷಣ್ಣಂ ॥ ೪೩

ಅಂತುಚತುರ್ನಿಕಾಯಪ್ರಾಯ ರೋದಸೀಮಂಡಳನಾಗಿ ನಡೆಯೆ
ಘನರತ್ನಾಳಂಕೃತಿಪ್ರಗ್ರಹವಿಸರಲಸತ್ಪಲ್ಲವಂ ಪೀವರೋರೋ ।
ಜನಿಕಾಯಾತುಚ್ಛಗುಚ್ಛಾವಳಿ ವಿಚಳದಪಾಂಗಪ್ರಭಾಭಾರಪ್ರಷ್ಪಾ ॥
ಭಿನುತಂ ಚೂರ್ಣಾಳಕಾಳಪ್ರಮದನಮಧುಕರೌಘಾಕರಂ ಕಲ್ಪವಲ್ಲೀ ।
ವನಮೆಂಬೊಂದಂದದಿಂ ಬಂದುದು ದಿವಿಜವಧೂಬೃಂದಮಾನಂದದಿಂದಂ ॥ ೪೪

ಅಹಮಹಮಿಕೆಯಿಂದಂತಾ ।
ಮಹೋತ್ಸವಕ್ಕೊರ್ವರಿರದೆ ಕಲ್ಪಜರೆಲ್ಲಂ ॥
ಗೃಹಸಮಿತಿಯ ಮೇಲ್ಕೋಟೆ ।
ಕ್ಕಹಮಿಂದ್ರರೆ ನಿಂದರೆನಿಸಿ ಬಂದರ್ ಮುದದಿಂ ॥ ೪೫

ಆಗಳ್

ಅನುರಾಗಭರಮನಾದೇ ।
ವನಿಕಾಯಂ ತಲೆಯೊಳೆಯ್ದೆ ತಳೆದೇಬ್ಬಿಂದ ॥
ತ್ತೆನಿಸಿದುವು ಮಣಿಮಯೋತ್ತಂ ।
ಸನಿರಂತರನಿರ್ಯದರುಣರುಚಿಮಂಜರಿಗಳ್ ॥ ೪೬

ಕಟ್ಟಿದ ಸೂರ್ಯಾಣದ ಮೇ ।
ಲ್ಗಟ್ಟೇ ನವಪದದ ಮಣಿವಿತಾನಮೊ ಪೆಜದ ॥
ಳ್ಲಿಟ್ಟವರೋಪಮೊ ದಿಟಕೆನೆ ।
ವಿಟ್ಟಗೆ ಚೆಲ್ವಾಯ್ತು ನಭದೊಳಮರಾಗಮನಂ ॥ ೪೭

ಆವ್ಯೋಮಂ ವಿಚಳದ್ವಿಮಾನಮಯಮಾಶಾಮಂಡಳಂ ಜೀವ ನಂ ।
ದವ್ಯಾಹಾರಮಯಂ ದಿನಂ ಮಣಿವಿಭೂಷಾರುಗ್ಮಯಂ ಮಾರುತಂ ॥
ದಿವ್ಯಾಮೋದಮಯಂ ಧರಾವಿಳಯಮುದ್ಯದ್ವರ್ಷವಿತ್ತೇಶವ ।
ರ್ಷವ್ಯಾಭಾಸುರರತ್ನರಾಶಿಮಯಮೇಂ ಚೆಲ್ವಾಯ್ತೊ ದೇವಾಗಮಂ ॥ ೪೮

ಅಂತು ಮಂಗಳೋಪಕರಣವ್ಯತಿಕರಿತಕರಚತುರ್ವಿಧಾಮರಪ್ರಕರಪು
ರಸ್ಸರಮಹಾವಿಭೂತಿಯಿಂ ಚಂದ್ರಪುರಕ್ಕೆ ವಂದು ತದ್ವಿಶಾಳಶಾಲಾಗ್ರದೇಶ

ದೊಳ್ ನಿಲ್ವುದುಂ ನಗರನಾರೀಜನಂಗಳುತ್ತುಂಗಪ್ರಾಸಾದಸೌಧಶಿಖರಂಗಳನೇಱಿ

ಇದು ದಲ್ ಮುಕ್ತನಿಮೇಷನೇತ್ರಮನಿಮೇಷಪಿಯುಸೀಸ್ತೋಮಮಿಂ।
ತಿದು ದಲ್ ಸ್ಫಾರಫಣಾತ್ತಮೌಳಿಫಣಭೃದ್ಧ್ವಾವಾಸಮೂಹಂ ಬಱಿ ॥
ಕ್ಕಿದು ದಲ್ ಜ್ಯೋತಿರುದಾತ್ತಮೂರ್ತಿರುಚಿರಂ ಜ್ಯೋತಿಷ್ಕಕಾಂತಾಳಿ ಮ
ತ್ತಿದು ದಲ್ ವನ್ಯಲತಾಂತಭೂಷಣಗಣಂ ವಾರಾಂಗನಾಸಂಕುಳಂ ॥ ೪೯

ಎಂದು ನೋೞ್ಪನ್ನೆಗಂ ಸೌಧರ್ಮೇಂದ್ರಂ ಪ್ರಥಮದ್ವಿತೀಯಕಲ್ಪಾಧಿಪರ್ ವೆರಸು ಗಗನಮಾರ್ಗದಿಂ ಬಂದವತರಿಸುವಾಗಳ್

ಪುಗೆ ಪಶ್ಚಾರ್ಧಂ ಪುರೋಭಾಗಮನೊಗೆದಿನಿತಂ ಬಿೞ್ದ ಪೂರ್ವಾಂಘ್ರಿ
ಹಸ್ತಂ। ತೆಗೆದಂಸಂಸ್ಥಾನದೊಳ್ ಮಂಡಳಿಸಿರೆ ಬಿಗಿಪಂ ತಾಳ್ದೆ ಕರ್ಣಂ
ಮನಂ ದಿ ॥ ಟ್ಟಗಳೊಳ್ ತಳ್ವೊಯ್ಯೆ ಭಾಳಸ್ಥಳವಿನಿಹಿತಸಂಧಾರ್ಯ
ಮಾಣಾಂಕುಶಾಗ್ರಂ । ಬಗೆಗತ್ಯಾಶ್ಚರ್ಯಮಾಯ್ತಾಗಸದಿನಿೞಿಯುತುಂ
ಭೂಮಿಗಿಂದ್ರದ್ವಿಪೇಂದ್ರಂ ॥ ೫೦

ಅಂತು ರಾಜಭವನಪ್ರಾಂಗಣದೊಳವತರಿತ್ತುದುಂ, ಶಚೀಮಹಾದೇವಿ ನಿಜಪತಿವಚನದಿಂ ಶಾಂತಪದಸಂಹಿತೆಯಂತೆ ತಿರೋಹಿತಾಕಾರೆಯಾಗಿ ಲಕ್ಷ್ಮಣಾಮಹಾದೇವಿಯ ಸೂತಿಕಾನಿವಾಸಮಂ ಪೊಕ್ಕು

ಉದಯಾದ್ರಿಚೂಳಿಕಾಪಾ ।
ಶ್ವದ ಬಾಳಸುಧಾಂಶುವೆನಿಸಿ ನಿಜಜನನಿಯ ಪ ॥
ಕ್ಕದೊಳಿರ್ದ ಬಾಲನಂ ಕಾ ।
ಣ್ಬುದುಮಲರ್ದುವು ಶಚಿಯ ನಯನಹೃತ್ಕುಮುದಂಗಳ್ ॥ ೫೧

ಹರಿಸತಿ ಜಿನನನುಮಂ ಜಾ ।
ತರೂಪವಿಳಸಿತನಿಧಾನಮಂ ಕಂಡೊಸೆದಳ್ ॥
ಹರಿಸದೊಳೊಂದುವವೋಲ್ ಜಾ ।
ತರೂಪವಿಳಸಿತನಿಧಾನಮಂ ಕಂಡಧನಂ ॥ ೫೨

ಅನಂತರಂ

ಅಱಸಿ ತೊೞಲ್ದುಂದಾನಿಧಿ ।
ಗೞಗುವವೊಲ್ ದೀಪವರ್ತಿ ಪೊಳೆವಿಯುವು ॥
ಲ್ಕೞೊಳಂದು ಮೂಮೆ ಬಲವಂ ।
ದೆೞಗಿದಳ್ ಬೋಧನಿಧಿಯ ಪದಸನ್ನಿಧಿಯೊಳ್ ॥ ೫೩

ಅಗಳ್

ಮಾಯಾಶಿಶುವನೊರ್ವೆಯೆ ।
ಮಾಯಾನಿದ್ರೆಯುಮನಿತ್ತಳಂಬಿಕೆಗೆ ಜಗ ॥
ಜ್ಜ್ಯಾಯನನುಯ್ವ ನಿಜಾಭಿ ।
ಪ್ರಾಯದ ಶಚಿ ಶುಚಿಗಳಾರೊ ಕಾಯೋತ್ಕಂಠರ್ ॥ ೫೪

ಶಿಶುಗೆ ನಯನಾಂಶುದುಗ್ಧ ।
ಪ್ರಸರದೆ ಜನ್ಮಾಭಿಷೇಕಮಂ ಮುನ್ನೊಂದಂ ॥
ಪೋಸೆಯಿಸಿ ಸರೋಜದಿಂದ ।
ರ್ಚಿಸುವಂತಿಂದ್ರಾಣಿ ನೆಗಪಿದಳ್ ಕೆಂದಳದಿಂ ॥ ೫೫

ಅಂತನರ್ಘ್ಯರತ್ನಮಂ ತಡಿಗೆ ತರ್ಪ ರತ್ನಾಕರೋರ್ಮಿಯಂತೆ ತರ್ಪಲ್ಲಿ,

ಜಂಗಮಲತೆಗಳವೊಲ್ ದಿವಿ ।
ಜಾಂಗನೆಯರ್ ಮುಂದೆ ನಡೆದರೆಸೆವಲಗ*ರ್ಣಿಗಳ್ ॥
ಭೃಂಗಾರಂಗಳ್ ಭೃಂಗರ ।
ವಂಗಳ್ ಗೀತಾರವಂಗಳೆಂಬಿನಮಾಗಳ್ ॥ ೫೬

ಅನಂತರಂ ನಿಜಪತಿಪ್ರಸಾರಿತದಿಕ್ಕರಿಕರಾನುಕಾರಿಕರಯುಗಳಕ್ಕೆ ನೀಡಲೊಡಂ

ಇಂತೆ ನೆಗಪುವುದು ನೀನೆ ।
ನ್ನಂ ತಡೆಯದೆ ತೀರ್ಥನಾಥ ನಿಶ್ರೇಯಸಪ ॥
ರ್ಯಂತಮೆನುತ್ತುಂ ಮೃದುತಳ ।
ದಿಂ ತಳೆದಸುರಪತಿ ನೆಗಪಿದಂ ಸಂತಸದಿಂ ॥ ೫೭

ಸೌಧರ್ಮೇಂದ್ರಂ ಮುಕ್ತಿ ।
ಶ್ರೀಧವನಂ ಬಾಹುಶಾಖೆಯೊಳ್ ತಳೆದೇನು ॥
ದ್ಬೋಧಿಸಿದನೊ ಫಳೆಕಳತ ।
ಶ್ರೀಧರ್ಮನಮೇರುಭೂರುಹಾಡಂಬರಮಂ ॥ ೫೮

ಪರಮನ ಪದಸರಸಿಜಮಂ ।
ಶಿರದೊಳ್ ರತ್ನಾವತಂಸಮಂ ನೊಸಲೊಳ್ ಭಾ ॥
ಸುರಪಟ್ಟಮನುರದೊಳ್ ಬಂ ।
ಧುರಪದಕಮನಾಂಪ ತೆಱದಿನಾಂತಂ ಶಕ್ರಂ ॥ ೫೯

ನೋಡಿದ ಕಣ್ಮಲರೊಳ್ ತು ।
ಳ್ಕಾಡಿದುದಾನಂದಬಾಷ್ಪಮಕರಂದಚಯಂ ॥
ಕೂಡೆ ಪುಳಕಾಂಕುರಾವಳಿ ।
ಮೂಡಿದುದಂದೆತ್ತಿಕೊಂಡ ದೋರ್ವಲ್ಲರಿಯೊಳ್ ॥ ೬೦

ಅಂತನೇಕಜನ್ಮದುರ್ಲಭಮಪ್ಪ ದೇವರ ವಲ್ಲಭನ ಪರಮೌದಾರಿಕಶರೀರ ದರ್ಶನಸ್ಪರ್ಶನಂಗಳನಾದ ಹರ್ಷೋತ್ಕರ್ಷಮನನುಭವಿಸಿಯುಂ ಅಭಿನಯಿಸಿಯುಂ ಬಱಿಯುಮತ್ಯಂತಮೃದುಳಕಲ್ಪದ್ರುಮದುಕೂಲವಸನಪ್ರಚ್ಛನ್ನಮುಂ ಸಾಂದ್ರಹರಿಚಂದನದ್ರವಾಭ್ಯುಕ್ಷಿತಮುಮಪ್ಪ ದಕ್ಷಿಣಾಂಕದೊಳ್ ಕುಳ್ಳಿರಿಸಲೊಡಂ

ಅನುರಾಗಂ ನಿಜಮಾಗಿ ತೋರ್ಪ ಶಚಿ ಸಂಧ್ಯಾಲಕ್ಷ್ಮಿಯಂ ಪೋಲೆ ಪೂ
ರ್ವನಗಾಕಾರದಿನಭ್ರಮೂಪತಿ ಬೆಡಂಗಂ ಬೀಱೆ ದೇವೇಂದ್ರನ ॥
ಗ್ರನಿಷಣ್ಣಂ ಸಮನಾಗೆ ರತ್ನಶಿಖರಕ್ಕಂತಾತನುತ್ಸಂಗದೊಳ್ ।
ಜಿನನೊಪ್ಪಂಬಡೆದಂ ಸಮುಧ್ಯುದಿತಚಾಂದ್ರಂ ಬಿಂಬಮೆಂಬನ್ನೆಗಂ ॥ ೬೧

ಆಸಮಯದೊಳರ್ಕಲದ ಪಕ್ಕದಾನೆಗಳೊಳರ್ದು
ಮನದೊಲವಿಂದೀಶಾನೇಂ ।
ದ್ರನೆತ್ತಿದಂ ಮುತ್ತಿನೆಸೆವ ಕೊಡೆಯಂ ಚೆಲ್ವ ॥
ಪ್ಪಿನಮೆನೆ ಚಾಮರಮಿಕ್ಕಿದ ।
ರನಘಂಗೆ ಸನತ್ಕುಮಾರಮಾಹೇಂದ್ರರ್ಕಳ್ ॥ ೬೨

ತದನಂತರಂ ನಭೋವಿಭಾಗಮನಲಂಕರಿಸಲೊಡಂ

ತನತನಗನಿತುಂ ಜಯ ಜೀ |
ವ ನಂದ ವರ್ಧಸ್ವಮುಖರವಾಯ್ತು ಚತುರ್ದೇ ||
ವನಿಕಾಯಂ ಘೂರ್ಣಿಸಿದಂ |
ತೆ ನಭೋಂಭೋನಿಧಿ ಜಿನೇಂದುದರ್ಶನದಿಂದಂ || ೬೩

ಪ್ರಕಟತರಂ ಜಿನತನುಚಕಂ |
ಧ್ರಿಕೆ ಪರ್ವೆ ನಭಸ್ಸರಸ್ಸರೋರುಹನಿಕರಂ ||
ಮುಕುಳಿತಮಾದವೊಲಾಯ್ತು |
ತ್ತಿ ಕೆಯ್ಗಳಂ ಮುಗಿದ ದೇವದೇವೀನಿಕರಂ || ೬೪

ಪರಮನ ಶಶಾಂಕಸಂಕಾ |
ಶರುಚಿಪ್ರಚಯಂ ಪೊದೞ್ದು ನಾಲ್ದೆಸೆಯುಮನಾ ||
ವರಿಸೆ ಸುರಸೇನೆ ಬಿಸಪಂ |
ಜರದೊಳಗಿರ್ದಂತಿರಿರ್ದುದಂತಾಕ್ಷಣದೊಳ್ || ೬೫

ಆಗಳ್

ಮುದದಿಂ ಕೆಯ್ಗಗ್ಗಳಂ ಮುನ್ನಮೆ ಜಿನಪತಿ ಮೇಗಿರ್ದನೀಗಳ್ ಮನಸ್ಸ |
ಮ್ಮದದಿಂ ಮತ್ತಗ್ಗಳಕ್ಕಗ್ಗಳಮಿದು ವಿಸಟಂಬರ್ಕುಮಸ್ಮದ್ಗಜಂ ನಿ ||
ಲ್ಲದೆ ಪೋಗಿಂ ಮಂದರಕ್ಕಂತೆವನಡರ್ದು ಬೞಿಕ್ಕಿಂತಿದಂ ನೋಡಿಮೆಂಬಂ |
ದದಿನೊಪ್ಪಂಬೆತ್ತುದಿಂದ್ರಂ ಸುರತತಿ ನಡೆಗೆಂದಂದು ಕಯ್ವೀಸಿದಂದಂ || ೬೬

ಶಾರದನೀರದಾಕೃತಿಯ ಮೆಯ್ ಮಧುಪಿಂಗಳಮಪ್ಪ ದಿಟ್ಟಿ ಶೇ |
ಷೋರಗನಿರ್ವಿಶೇಷಮೆನಿಸಿರ್ಪ ಕರಂ ದರಹಾಸಪುಷ್ಕರಾ ||
ಕಾರದ ಪುಷ್ಕರಂ ಮಿಳಿರ್ವ* ಪಲ್ಲವದಂದದ ಕರ್ಣಪಲ್ಲವಂ |
ವಾರಿದಘೋಷಮಂತೆಸೆವ ಬೃಂಹಿತಮೊಪ್ಪಿದುದಾಗಜೇಂದ್ರದಾ || ೬೭

ಅದಲ್ಲದೆಯುಮಾಪ್ರಸ್ತಾವದೊಳ್

ಸುರರಾಜಾನೇಕಪಕ್ಕಾನನಮೊಗೆದುವುಮೂವತ್ತೆರಡ್ವಕ್ತ್ರಮೊಂದ |
ಕ್ಕೆ ರದಂ ತಾನೆಂಟುಮೋರೊಂದಱೊಳಲರ್ಗೊಳನೊಂದಬ್ಜಮೊಂದಕ್ಕೆ

ಮೂವ ॥ ತ್ತೆರಡೊಂದಬ್ಜಕ್ಕೆ ಮೂವತ್ತೆರಡೆಸಳೆಸಳೊಂದೊಂದಱೊಳ್
ಬಿತ್ತರಂ ಬೆ। ತ್ತಿರೆ ಮೂತ್ತಿರ್ವರೇಂ ನರ್ತಿಸಿದರೊ ದಿವಿಜಸ್ತ್ರೀಯರಾ
ನಂದದಿಂದಂ ॥ ೬೮

ಭ್ರಮರಿಗಳೆಱಗದೆ ತರದಿಂ ।
ಭ್ರಮಿಯಿಪವೊಲ್ ಕಮಳದೆಸಳ್*ಗಳಂ ಮುಟ್ಟದಣಂ ॥
ಕ್ರಮತಳಮೆನೆ ತೊಟ್ಟರ್ ವಿ ।
ಭ್ರಮದಿಂ ನರ್ತನದೊಳಮರಿಯರ್ ಭ್ರಮರಿಗಳಂ ॥ ೬೯

ಪದತಳಮುಂ ದಳಮುಂ ನೋ ।
ಡೆದೆ ಕಂಡದೆ ನಲಿದು ನರ್ತಿಸುತ್ತಿರ್ಪ ಮರು ॥
ತ್ಸುದತಿಯ*ರ್ಗಿಂದ್ರನ ಹೃತ್ಪ ।
ದ್ಮದೊಳಾಡುವ ಭಕ್ತಿಲಕ್ಷ್ಮಿ ಲಾಸಿಕೆಯುಕ್ಕುಂ ॥ ೭೦

ಅಂತು ಭಗವದ್ಭಕ್ತಿಭಾರದಿಂ ಪೆರ್ಚಿದ ತನ್ನ ಬಗೆಯನೆ ಮೊಗದೊಳಭಿನಯಿಸುವಂತು ವಿಕ್ರಿಯೊಪಕ್ರಮಿತವೈಕುರ್ವಣದಿನಗುರ್ಬುವೆತ್ತೈರಾವತಂ ಮೊದಲಾದನೇಕದೇವವಾಹನಂಗಳ್ಗೆ ಸುಖಪ್ರಚಾರಯೋಗ್ಯಮಪ್ಪಂತು ಚಂದ್ರಪ್ರರದುಪರಿಮದೇಶದಿಂ ಮಂದರಕಂದರಂಬರಂ ಸೌಧರ್ಮೇಂದ್ರನಿಂದ್ರನೀಳಮಯವೀಧಿಯುಮಂ ನಿರ್ಮಿಸಿದಾಗಳ್

ಪೞಿಹದ ರುಚಿ ಮೊೞಗನಲ ।
ರ್ಮಱೆಯಾಲಿಯು ಸರಿಯನಿಱಿಸೆ ಹರಿನೀಳತಳಂ ॥
ಕೞಿಗಣ ಮನುಜರ ದಿಟ್ಟಿಗೆ ।
ಗೞಿಯಿಸಿದುದು ನೀಳಜಳದಮಾಳಾಭ್ರಮಮಂ ॥ ೭೧

ಅಂತು ನಡೆವೆಡೆಯೊಳ್ ಜಿನಶಿಶುವ ಶೈಶವಾತಿದುರ್ಲಭಮಪ್ಪ ಬಹಿರಂಗಾಂತರಂಗಸೌಷ್ಟವಮಂ ನೋಡಿ,

ಸ್ತನಪಾನಕಾಂಕ್ಷೆ ಗತತೃ ।
ಷ್ಣನೊಳಂಬಾಸ್ಮೃತಿ ವಿಮುಕ್ತಮೋಹನೊಳೆಂತುಂ ॥

ಜನಿಯಿಸುಗುಮೆ ತಾನೆಂದಭ ।
ವನ ಸಾಮರ್ಥ್ಯಮನಮರ್ತ್ಯರೊಳ್ ಹರಿ ನುಡಿದಂ ॥ ೨೨

ಅಂದು ಜಿನೇಂದುವ ಸನ್ನಿಧಿ ।
ಯಿಂದೊಸರಿಪಿಂದ್ರಹೃದಯಮೋಹತಿಮಿರಮಂ ॥
ಬಂದದಿನೊಗೆದತ್ತಿಂದ್ರ ।
ಚ್ಛಂದದಿನೆಸೆವಿಂದ್ರನೀಳಮಣಿರುಗ್ಜಾಳಂ ॥ ೨೩

ಜಡಧಿವೊಲಿರೆ ಸುರಸೈನ್ಯಂ ।
ಪಡಗುವೊಲಿರೆ ದಿವಿಜವಾರಣಂ ಜಿನಶಿಶು ಕೈ ॥
ಪಿಡಿವೊಲಿರೆ ಪುಣ್ಯಪಣ್ಯಗ ।
ಪಡಗಿನ ಸಾಂಯಾತ್ರಿಕಂಬೊಲಿರ್ದಂ ಶಕ್ರಂ ॥ ೨೪

ಗಣನಾತೀತಮಮರ್ತ್ಯಕೋಟಿಬಲದೊಳ್ ಜ್ಯೋತಿಷ್ಕದೇವಾಳಿ ಪಿಂ।
ತಣ ಮೆಯ್ಯೊಳ್ ಫಣಭೃತ್ಪದಾತಿಯೆಡದೊಳ್ ತದ್ವ್ಯಂತರಶ್ರೇಣಿ ಮುಂ ॥
ತಣ ಮೆಯ್ಯೊಳ್ ಬರೆ ಬರ್ಪವರ್ ಪೊಗೞೆ ಗಂಧರ್ವಾಮರರ್ ಪಾಡೆ ಪೆ ।
ರ್ಕ್ಕಣಮಂ ದೇವಿಸುರಾಶಿ ನಾಡೆ ಗಮನಂ ಕಣ್ಗೆಂ ಬೆಡಂಗಾದುದೋ ॥ ೨೫

ನಡೆದೊಡೆ ಭರದಿಂ ಧರೆ ಪೊಡೆ ।
ಗೆಡೆದಪ್ರದೆಂದಱಿಸು ವಿಬುಧಪತಿಯಾಗಸದೊಳ್ ॥
ನಡೆಯಿಸಿದಪನೆನೆ ದೇವರ ।
ಪಡೆ ಪಡೆದುದು ನರರ ಕಣ್ಗೆ ಕೌತುಕದೊದವಂ ॥ ೨೬

ಪಿರಿದುಂ ಮಾಡಿತ್ತಮರ್ತ್ಯಪ್ರಕರದ ನಯನಕ್ಕಂ ಮನಕ್ಕಂ ಸುರಸ್ತ್ರೀ
ಯರಪಾಂಗಾಕ್ಷಿಪ್ರಭಾಸಂಚಯದಿನುದಿತದೇಹಾಂಶುಸಂದೋಹದಿಂ ಮೇ ।
ದುರಧಮ್ಮಿಲ್ಲದ್ಯುತಿಸ್ತೋಮದಿನಧರಮಯೂಖಾಳಿಯಿಂದೆತ್ತಲುಂ ಪಾಂ ।
ಡುರಿತಂ ಪೈಶಂಗಿತಂ ಕರ್ಬುರಿತಮರುಣಿತಂ ವ್ಯೋಮರಂಗಂ ಬೆಡಂಗಂ ॥

ಚರದನಿಮಿಷೋತ್ಕರಂ ಪು ।
ಷ್ಕರಪೂರ್ಣಂ ತೀರ್ಥವಿಭುವಿಳಾಸೋಪೇತಂ ॥
ಹರಿಹರ್ಷಾಸ್ಪದಮಂತಾ ।
ಸುರವಾಹಿನಿ ಪೋಲ್ತುಬೆಯ್ದೆ ಸುರವಾಹಿನಿಯುಂ ॥ ೨೭

ಅಂತತಿಕ್ರಾಂತಜ್ಯೋತಿರ್ಲೋಕಮೆಸೆಸಿ ನಡೆವಾಗಳ್

ಕನಕಾದ್ರೀಂದ್ರನೃಪಾಲಯಂ ಕುಳನಗವ್ರಾತಾಶ್ರಯಶ್ರೇಣಿ ವಿ ।
ಶ್ವನದೀಸಂಕುಳವೀಥಿ ವಜ್ರಮಯವೇದೀತುಂಗಶಾಳಂ ಮಹಾಂ ॥
ಬುನಿಧಿಪ್ರಾವೃತಖಾತಿಕಾಪರಿಧಿ ಜಂಬೂದ್ವೀಪಮುಂದೊಂದೆ ಪ ।
ತ್ತನವಂತಿರ್ದುದು ಕಣ್ಗೆ ನಾಕಜನಿಕಾಯಕ್ಕಾನಭೋಯಾನದೊಳ್ ॥ ೭೮

ಪರಮಜಿನಪತಿಯುಮಂತಾ ।
ಸುರಪತಿಯುಂ ಮುಗರಂಬರಂ ನಡೆವೆಡೆಯೊಳ್ ॥
ದೊರೆವೆತ್ತುದು ಸತ್ಪಥಮುಂ ।
ಸುರಸರಣಿಯುಮೆಂಬ ನಾಮಮುಮಂದಂಬರದೊಳ್ ॥ ೭೯

ಸೊಗಯಿಪ ಪಾಳಿಕೇತನಕುಳಂಗಳ ರತ್ನವಿಮಾನಯಾನಪಂ ।
ಕ್ತಿಗಳ ಸಿತಾತಪತ್ರನಿಕರಂಗಳ ವಾಹನದೇವವಿಕ್ರಿಯಾ ॥
ಪ್ರಗುಣಿತಚಿತ್ರವಾಹನಚಯಂಗಳ ತಿಂತ್ರಿಣಿಯಿಂ ದಿಗಂತಮುಂ ।
ಗಗನಮುಮಾದುದಿಟ್ಟೆಡೆಯಿದೆಂತುಟೊ ಪೆರ್ಮೆ ಚತುರ್ನಿಕಾಯದಾ ॥ ೮೦

ಖಗಜಾತಿಯುಚತುರ್ನಿಕಾಯಮಿದು ಬೇರೊಂದಕ್ಕುಮೆಂಬೊಂದು ಸಂ
ಚಿಗಮಂ ತಂದುದು ದೇವವಾರವನಿತಾಸಂದೋಹಧಮ್ಮಿಲ್ಲಬ ।
ರ್ಹಿಗಣಂ ಕುಂತಳಷಟ್ಪದಾವಳಿ ಚಳೇಕ್ಷಕ್ಷಕೋರಾಳಿ ಚಾ ।
ರುಗುರೂರೋರುಹಚಕ್ರವಾಕಚಯಮುತ್ತೆತ್ತುಂ ನಭಶ್ಚಕ್ರದೊಳ್ ॥ ೮೧

ಉದಯಿಸಿತೊ ಭಕ್ತಿ ತಮಗೆನೆ ।
ಮೃದುಪವನಾಪಾತದಿಂದೆ ಗಾಂಧಾರಗ್ರಾ ॥
ಮದ ಮೂರ್ಛನೆಗಳನುಚ್ಚರಿ ।
ಸಿದುವಮರರ ಪೆಗಲ ಬೀಣೆಗಳ್ ಮಿಡಿಯದೆಯುಂ ॥ ೮೨

ಸಕಳಾಮರಗಾಯಕವಾ ।
ದಕನರ್ತಕರಭಕ್ತಿಯಿಂ ಪ್ರವರ್ತಿಸಿ ಸಂಗೀ ॥
ತಕಮಂ ತೂರ್ಯತ್ರಿತಯಾ ।
ತ್ಮಕಮೆಸೆಸಿಸಿದುದಾಗಳೆಯ್ದೆ ಗಗನಾಭೋಗಂ ॥ ೮೩

ಆಗಳ್ ವಿಚಿತ್ರವೇತ್ರದಂಡಮಂಡಿತಪಾಣಿಗಳ್ ಸಿಂಹಪ್ರತೀಹಾರರಭಿವನನುಪಮಾಕಾರಸೌಂದರ್ಯಮಂ ನೋಡಲೆಂದು ಪತ್ತೆಸಾರ್ಚುವಚ್ಚರಸಿಯರ ವಿಮಾನಂಗಳನಸುಬರ್ದಂತು ಬಿಚ್ಚಿ ನಡೆಯಿಸಿಯುಂ, ಇರ್ಕೆಲದ ಚಾಮರೇಂದ್ರರಂ ಚಮರರುಹಂಗಳಂ ಸೂಱುಱುದಿಕ್ಕುವಂತು ನಿಯಮಿಸಿಯುಂ, ಅಲ್ಲಲ್ಲಿಗೆ ತುಱುಂಬಿದ ದಿವಿಜವಂದಿಗಳ ಪೊಗೞ್ವ ಕಳಕಳಮನಡಂಗೆವೊಯ್ದು ಸಂಗೀತಕ್ಕವಸರಮನನುಸರಿಸಿಯುಂ, ಐರಾವತದ ಕಾಲಾಟಕ್ಕೆಡೆಯಪ್ಪಂತು ಕೋಲ್ಲಣಿಗೆಯೊಳ್ ಬರ್ಪನೇಕವ್ಯಂತರಾಮರವಾಹನಂಗಳಂ ತೆರಳೆತೊಳ್ದು ತೆಱಪಂ ಮಾಡಿಯುಂ, ಕೊಡೆಯ ಠಱಿಯ ಸೀಗುರಿಯ ಚೌಕಸತ್ತಿಗೆಯ ಮುತ್ತಿನ ಝಲ್ಲರಿಯ ಮೊತ್ತಮಂ ತುಱುಗಲಾಗಿ ಪಿಡಿಯಿಸಿಯುಂ, ಮುಂದೆ ಪರಿವ್ರಾಜ್ಞರಂಗಳನೋಳಿಗೊಳಿಸಿಯುಂ, ಪಾಳಿಕೇತನಂಗಳಂ ಪಂತಿಗೊಳಿಸಿಯುಂ, ಭೇರೀರಥಂಗಳಂ ಸಾರಿಗೊಳಿಸಿಯುಂ, ಅಡಿಗಡಿಗೆ ನೆಲನನುಗ್ಘಡಿಸಿಯುಂ, ಇಂತತಿವಿಚಿತ್ರಮಾಗೆ ಯಾತ್ರೆಯುಂ ನಡೆಯಿಪಲ್ಲಿ

ಬಂಬಲ್ವರಿಯುತ್ತುಂ ನೆಗೆ ।
ದಂಬುದಮಂ ತೇನಮಿಱಿಯುತುಂ ಘ್ರಾತ್ಕೃತಿಯಿಂ ॥
ದಂಬರಮಂ ತೀವುತ್ತುಮ ।
ದೇಂ ಬಿನದಮನಮರಪತಿಗೆ ತೋಱಿದುದೊ ಗಜಂ ॥ ೮೪

ಐರಾವತಕ್ಕೆ ಕಂಬಂ ।
ಮೇರುವೆ ಪೆಱವಾನೆಗೊಳ್ಳವೆಂಬಂದದೆ ನಿಃ ॥
ದಾರ್ಗರಿಯೊಳೆ ನೂಂಕಿ ಪೂಱ್ದಂ ।
ಘೋರೆನೆ ತದ್ಗಿರಿತಟಕ್ಕೆ ಸೌಧರ್ಮೇಂದ್ರಂ ॥ ೮೫

ಆಗಳ್

ಗಗನಮನೆಯ್ದೆ ತೀಂಬಿದ ಪತಾಕೆಗಳಿಟ್ಟೆಡೆಯೊಳ್ ತೊಡಂಕಿ ನಿಂ ।
ದೊಗೆವ ಜಿನಾಂಗಸೌರಭದೊಳಾದಮೆ ಸಂಗತಿವೆತ್ತು ತಳ್ತ ಸ ॥
ತ್ತಿಗೆಗಳ ತಣ್ಣೆೞಲ್ವಿಡಿದು ಕೂಡೆ ತೊಱಿಲ್ದು ಚತುರ್ನಿಕಾಯದೊಳ್ ।
ತ್ರಿಗುಣಿಸಿದತ್ತು ತನ್ನಯ ಗುಣತ್ರಯಮಂ ಕನಕಾಚಳಾನಿಳಂ ॥ ೮೬

ಪೊಗುಡಿಯಿಂದೆ ಕೂಡೆ ಗುಡಿಗಟ್ಟಿದವೊಲ್ ಕಳಕಂಠನಾದದಿಂ ।
ಸ್ವಾಗತಮಂ ಸಮಂತು ನುಡಿವಂತೆವೊಲಲ್ಲುಗುತಿರ್ಪರಲ್ಗಳಿಂ ॥
ರಾಗದಿನರ್ಘ್ಯಮೀವವೊಲದೇನೆಸೆದತ್ತೊ ಜಿನೇಂದು ಬಂದನೆಂ ।
ದಾಗಿರಿ ನಾಟಕಂನಲಿದವೊಲ್ ಮರುದಾಕುಳಶಾಖಿಶಾಖೆಯಿಂ ॥ ೮೭

ಪರಿವೃತಲವಣಾಬ್ಧಿಸರೋ ।
ವರಮಧ್ಯಸ್ಥಿತಮೆನಿಪ್ಪ ಜಂಬೂದ್ವೀಪಾಂ ॥
ಬುರುಹಕ್ಕೆ ತಾನೆ ಕರ್ಣಿಕೆ ।
ಯಿರವಂ ತಳೆದೇಂ ಸುಮೇರು ಸಿರಿಗೆಸೆಯಾಯ್ತೋ ॥ ೮೮

ಅವಯುವದಿನಾಂತುದೀಮೇ ।
ರುವೆ ಪೆರ್ಮೆಯನಾಸಹಸ್ರಯೋಜನಮೆನಿಸಿ ॥
ರ್ದವಗಾಹದಿಂದಮೂರಯೆ ।
ನವನವತಿಸಹಸ್ರಯೋಜನೋನ್ನತಿಯಿಂದಂ ॥ ೮೯

ಇದು ಸರ್ವರತ್ನಜಾಂಬೂ ।
ನದಮಯಮಿದು ಮೇಖಳಾಚತುಷ್ಟಯಯುತಮಿಂ ॥
ತಿದು ವನಚತುಷ್ಕರಾಜಿತ ।
ಮಿದಕೃತ್ರಿಮಚೈತ್ಯಗೇಹನಿವಹಪವಿತ್ರಂ ॥ ೯೦

ಈನಗದ ಸಾನು ನಾಲ್ಕುಂ ।
ತಾನೆಸೆಗುಂ ಭದ್ರಶಾಳದಿಂ ನಂದನದಿಂ ॥
ಪೀನಂ ಸೌಮನಸದಿನು ।
ದ್ಯಾನಿಯು ಪಾಂಡುಕದಿನನಿಶಮನುಗತಿಯಿಂದಂ ॥ ೯೧

ಎನೆ ಪೆಸರ್ವಡೆದೀನಾಲ್ಕುಂ ।
ಬನಂಗಳೊಂದೊಂದರಲ್ಲಿ ನಾಲ್ಕೆಸೆದಿರ್ಕುಂ ॥
ವಿನುತತರಂಗಳಕೃತ್ರಿಮ ।
ಜಿನಭವನಂಗಳ್ ಸಮಸ್ತರತ್ನಮಯಂಗಳ್ ॥ ೯೨

ಉದಯಿಸವಿಲ್ಲಿಯಲ್ಲದೆ ನವೋರುಮಹಾಮಹಿಜಂಗಳಲ್ಲಿಯು ।
ಲ್ಲದೆ ಬಲವಾರರಿಂದ್ವಿನರಕೃತ್ರಿಮಚೈತ್ಯಗೃಹಂಗಳಲ್ಲಿಯು ॥
ಲ್ಲದೆ ಸಲೆ ಚೆಲ್ವುವೆತ್ತಿರ್ಪ ತೀರ್ಥಕರಾಭಿಷವಕ್ಕಮಿಲ್ಲಿಯು ।
ಲ್ಲದೆ ಪರಿಶೋಭೆ ಪೆರ್ಚದೆನೆ ಮೊಯ್ಮೆಗೆ ಬಾಹ್ಯಮದಲಾಯ್ತು ಮಂದರಂ ॥

ಸುರನಿಕರವಿವಿಧವಿಹಗೋ ।
ತ್ಕರಪರಿವೃತಮಪ್ಪ ನಾಕಸಾರ್ವರ್ತುಕಭೂ ॥
ಮಿರುಹಕ್ಕೆ ತೋರ್ಪುದೀಗಿರಿ ।
ವರಮವಿರತಮುರುತರಪ್ರಕಾಂಡಾಕೃತಿಯಿಂ ॥ ೯೪

ಗಡಣದಿನಿಲ್ಲಿಯ ಸಗ್ಗದ ।
ಪಸೆಮಾತಂ ಮಱಿದು ನಾಲ್ಕುಮೇಖಳೆಗಳೊಳಂ ॥
ಬಿಡದೆ ಸುರಸಮಿತಿ ನೆಲಸಿರೆ ।
ಪಡೆದುದು ಸುರಗಿರಿಯೆನಿಪ್ಪ ಪೆಸರನಗೇಂದ್ರಂ ॥ ೯೫

ಜಿನಸವನಾಮೃತಜಳಸೇ ।
ಚನದಿಂ ಬಳೆದಾಮಹಾಮಹೇಂದ್ರದ ನಾಲ್ಕುಂ ॥
ಬನದ ಲತಾಗೃಹಸಂತತಿ ।
ಯನಿಮಿ*ಷರ್ಗಾದುದು ಮನೋಹರಂ ದುರಿತಹರಂ ॥ ೯೬

ಒಡವೆಳೆದು ಸುರರೊಳವಱೊಳ್ ।
ನುಡಿವುದು ಶುಕಸಮಿತಿ ದೇವಭಾಷೆಯನೆ ತೊದ ॥
ಳ್ಗೆಡೆಗುಡದೆ ಪಾಡುವುದು ಸಲೆ ।
ಷಡಯುನತತಿ ದೇವಗಾನಮನೆ ಸುಧ್ವನಿಯಿಂ ॥ ೯೭

ಮತ್ತೀವೇಲ್ದುಪ್ರದೀಮಹಿ ।
ಭೃತ್ತಟಮಂ ಪ್ರೊರ್ದಿ ವರ್ತಿಪನಿತಜಿನಾದೀ ॥
ಪ್ರೋತ್ತರಕುರುಗಳ್ಗಾದ ।
ತ್ತುತ್ತಮಭೋಗಾವನಿತ್ವಮೆಂಬ ಮಹತ್ತ್ವಂ ॥ ೯೮

ಬಂಧುರತರಜಿನಸವನಸು ।
ಗಂಧೋದಕದಿಂದೆ ನಾಂದು ತದ್ಗುಣದೊಳ್ ಸಂ ॥
ಬಂಧಿಸಿ ಕಿಸವೇಡೆದುವು ಸೌ ।
ಗಂಧಿಕವೆಂಬಂತು ತಾಣಲೊಳ್ ಕಿಸುಗಲ್ಗಳ್ ॥ ೯೯

ಬಗೆದ ಮರಕ್ಕೆ ಬಳ್ಳಿಗೆ ಗುಹಾನಿಳಯಕ್ಕೆ ಪುಳಿಂದಮಾಳೆಗ ।
ದ್ರಿಗಳಿಡೆಯಪ್ಪವಲ್ಲದೆ ನೆಗೞ್ತೆಯ ಕಲ್ಪಕುಜಕ್ಕೆ ಚೆಲ್ವವೆ ॥
ತ್ತಗಲದ ಕಲ್ಪವಲ್ಲಿಯುಕ್ಕೃತಿಮಚೈತ್ಯಗೃಹಕ್ಕೆ ದೇವಕೋ ।
ಟಿಗೆ ನೆಲೆ ಸಂದ ಮಂದರಮಹೀಧರಸಂದದಿನಾಗಲಾಪ್ರ್ಪವೇ ॥ ೧೦೦

ಎಂದು ಸುರಗಿರೀಂದ್ರದ ಸಿರಿಯನಸುರಸಂದೋಹಕ್ಕೆ ಪುರಂದರಂ ಪೊಗೞುತ್ತುಮದಂ ಬಲವಂದು ಚತುರ್ನಿಕಾಯಮುಮಂ ಶಿಖರಿಶಿಖರಕ್ಕೆ ನಡೆಪ್ಪದೆನಲೊಡಂ

ಮೇರುನಗಾಧೀಶಂ ರೂ ।
ವಾರದ ಹಾರಮನೆ ತೊಟ್ಟನೆಂಬಿನಮೆಸೆದ ॥
ತ್ತಾರ ಮನಕ್ಕಂ ಸುರಜನ ।
ಧಾರಿ ನಿರಂತರವಿಸಾರಿ ಬಿಡಪಡವೆರ್ಡೆಯೊಳ್ ॥ ೧೦೧

ಇರದೆ ಸುರಸತಿಯ ರಭಸ ।
ಕ್ಕರಲ್ಗಳಂ ಬಿಟ್ಟು ನೆಗೆದುವಳಿಗಳ್ ಸುರಸಂ ॥
ಪರಿಸುರ ನಯನಾದಿಗಳಾ ।
ದರದಿಂದೆಱಗಿದುವು ತತ್ಪ್ರಸೂನಾಳಿಗಳೊಳ್ ॥ ೧೦೨

ಆರೆವು ನಾಂ ಜಿನಪದಪ ।
ದ್ಮಾರಾಧನೆಗೆಂದು ಪಾರಿಜಾತದ ನನವಂ ॥
ದಾರದ ಹರಿಚಂದನದ ನ ।
ಮೇರುವ ಸಂತಾನದಲರನಮರಿಯರಾಯ್ದರ್ ॥ ೧೦೩

ಆಗಳ್

ಘನತರಭದ್ರಶಾಳದಿನಿನಿತ್ತೆಡೆಮಾಡದೆ ನಂದನಕ್ಕೆ ನಂ ।
ದನದಿನದೊಂದು ಬೇಗದೊಳೆ ಸೌಮನಸಕ್ಕೆ ತಗುಳ್ಪುದುಮತ್ತೆ ಸೌ ॥

ಪುನಸದಿನೆಯ್ದಿ ಪಾಂಡುಕವನಕ್ಕ*ಡರ್ತು ಸುರೇಂದ್ರವಾರಣಂ ।
ಕನಕನಗೇಂದ್ರಮಂ ಪವನನುನ್ನಶರದ್ಘನಕೂಟಮೆಂಬಿನಂ ॥ ೧೦೪

ಅಂತು ಬಂದು ತದ್ವನದ ಪೂರ್ವೋತ್ತರವೀಥೀದಿಗ್ಭಾಗದೊಳ್

ಉನ್ನತಿಯಿಂ ಯೋಜನನೆಂ ।
ಟುನ್ನೀಳದಿನಾಳ್ದು ನೂಱನಗಲದಿನಯ್ವ ॥
ತ್ತನ್ನಿರ್ಮಳಹಿಮಕರದಳ ।
ಸನ್ನಿಭಮೆನೆ ಪಾಂಡುಕಂ ಶಿಳಾತಳಮೆಸಗುಂ ॥ ೧೦೫

ಪುದಿಯೆ ನವರತ್ನಜಾಂಬೂ ।
ನದರುಚಿ ಕಡೆಗಡೆಯೊಳೆಸೆವುದಾಶಿಲೆ ದೇವಾ ॥
ಗದ ಗದ್ರುಸಣಿಗೆಯುಮನರೆದೆಗೆ ।
ದದೊಂದು ಶಶಿಕಾಂತಕಾಂತಮುಕುರಾಕೃತಿಯಂ ॥ ೧೦೬

ಆಗಳಾಶಿಳಾತಳಮೆ ಜಗತಿಮಂಡಳಮಾಗೆ ವಿಕ್ರಿಯೆಯಿನಾಖಂಡಳಂ ನಿರ್ಮಿಸಲ್ವೇಳ್ದುದುಂ

ಶಕ್ರಂ ತಾನಲ್ತಣಂ ಬಣ್ಣಿಪ ಫಣಿಪತಿವಾಕ್ಯಕ್ಕಮೆಂಬಂತು ಶೋಭಾ ।
ಧಿಕ್ಯಂಬೆತ್ತತ್ತು ಮುಕ್ತಾಮಣಿಗಣರಚಿತಂ ಭಾದ್ಯಹೃದ್ಯಂ ಕನನ್ಮಾ ॥
ಣಿಕ್ಯಸ್ತಂಭಾವಳಂಬಂ ಹರಿದುಪಳತುಳಾಜಾಳಲೀಳಾಕುಳಂ ತ್ರೈ ।
ಲೋಕ್ಯಾಧೀಶಾಭಿಷೇಕೋಚಿತಮಮರಕೃತಂ ಕಾಯಮಾನಂ ನವೀನಂ ॥

ಸಂಗತಕೋಣಚತುಃಕಳ ।
ಶಂಗಳ ದೇದೀಪ್ಯಮಾನದೀಪಂಗಳ ಜಾ ॥
ಳಂಗಳ ಧೂಪಘಟಂಗಳ ।
ಭೃಂಗಾರಂಗಳ ವಿಳಾಸಮಸವಳಮದಱೊಳ್ ॥ ೧೦೮

ಆತಪವಾರಣಚಮರೀ ।
ಜಾತಕಳಶಸುಪ್ರತಿಷ್ಠಿತಾದರ್ಶಪತಾ ॥
ಕಾತಾಳವೃಂತಭೃಂಗಾ ।
ರಾತಿಸ್ಪಷ್ಟಾಷ್ಟಮಂಗಳಂ ಸೊಗಯಿಸುಗುಂ ॥ ೧೦೯

ನಗಪತಿಗಿಡೆ ಪೆರ್ಚೆನೊಸಲೆನೆ ।
ಸೊಗಯಿಪ ಪಾಂಡುಕವಿಶಾಳಶಿಳೆಯೊಳದೇಂ ದಿ ॥
ಟ್ಟಿಗೆ ವಂದುದೊ ಮಾಣಿಕ್ಯದ ।
ಮೃಗಾರಿಪೀಠಂ ಲಲಾಮುಮೆನೆ ಕುಂಕುಮದಾ ॥ ೧೧೦

ಅದಱಿರ್ಕೆಲದೊಳಮತಿಸ ।
ಮ್ಮದದಿಂ ಜನ್ಮಾಭಿಷವಣಮಂಗಳವಿಧಿಯೊಳ್ ॥
ತ್ರಿದಶಾಧಿಪರೇಱಲ್ಕಿ ।
ಕ್ಕಿದ ಭದ್ರಾಸನಮುಮೆರಡುಮೇನೊಪ್ಪಿದುವೋ ॥ ೧೧೧

ಆಸಿಂಹವಿಷ್ಟರದೊಳ್ ತ್ರಿವಿಷ್ಟಪಾಧೀಶನಂ ಪೂರ್ವಾಭಿಮುಖನಿವಿಷ್ಟಂಮಾಡೆ

ಅರುಣಮಣಿಪೀಠರುಚಿಯುಂ ।
ಪರಮನ ಧವಳಾಂಗರುಚಿಯುಮಾವರಿಸೆ ದಿವಾ ॥
ಕರಚಂದ್ರನೊಡನೆ ಬೆಳಪಂ ।
ಬರಮಂ ನೆನೆಯಿಸಿತು ಸವನಮಂಡಪಮಾಗಳ್ ॥ ೧೧೨

ಸುರಪತಿ ದಹನಂ ಧರ್ಮಂ ।
ನಿರುತಿ ವರುಣನನಿಲನೈಳಬಿಳನೀಶಮಹೀ ॥
ಶ್ವರನಿಂದುವೆಂಬ ದಿಕ್ಪಾ ।
ಳರುಮಂ ದಶದಿಶೆಯೊಳಿರಿಸಿ ಪರಿಕರಸಹಿತಂ ॥ ..

ಮತ್ತಮೊಳಗಣ ನಾಲ್ಕುಂ ದೆಸೆಯೊಳ್ ಆರಣಾಚ್ಯುತೇಂದ್ರಪ್ರಮುಖರಪ್ಪ ಕಲ್ಪಾಮರರುಮಂ, ಚಮರವೈರೋಚನಪ್ರಮುಖರಪ್ಪ ಭವನಾಮರರುಮಂ, ಚಂದ್ರಾದಿತ್ಯಪ್ರಮುಖರಪ್ಪ ಜ್ಯೋತಿಷ್ಕಾಮರರುಮಂ, ಸತ್ಪುರುಷಮಹಾಪುರುಷಪ್ರಮುಖರಪ್ಪ ವ್ಯಂತರಾಮರರುಮಂ ನಿರವಿಸಿ ಸೌಧರ್ಮೇಂದ್ರನೀಶಾನೇಂದ್ರನುಂ ತಾನುಮುತ್ತರದಕ್ಷಿಣಾಭಿಮುಖರಾಗಿ ಜನ್ಮಾಭಿಷೇಕೋನ್ಮುಖರುಪಪೀಠಂಗಳನಲಂಕರಿಸಿ,

ಸುರಕಾಂತಾಗೀತನಾದಂ ಸುರಕರತಳಸಂತಾಡಿತಾತೋದ್ಯನಾದಂ ।
ಸುರಸಂದಿಸ್ತೋತ್ರನಾದಂ ಸುರಜನಜಯಜೀವಪ್ರಣಾದಂ ಸುರೋರ್ವೀ ॥

ಘನಕುಂಜಪ್ರತ್ಯಸಂಛನ್ನಪಟುತರನಿನಾದಂ ದಿಶಾಕಾಶಚಕ್ರೋ |
ದರಮುಂ ತೀವ್ರತ್ತುಮಿರ್ಪನ್ನೆಗಮಮರಸಯೋಽಪರ್ಷಣೋದ್ಯುಕ್ತರಾದರ್ ||

ಇದು ದಲಭಿಷವಣವೃಷ್ಟಿ |
ಪ್ರದನೀಳಪಯೋದಮಾಳೆ ತಾನೆಂಬಿನೆಗಂ ||
ಪುದಿದುದು ಕಾಳಾಗರುಧೂ |
ಪದ ಕರ್ಪೂರ್ಗೆ ಯುವಿರ್ ಪವಿರ್ ರೋದೋಂತರಮುಂ || ೧೧೫

ಸಿತಕುಸುಮಾಕ್ಷತಚಂದನ |
ಯುತಜಳಬಿಂದುಗಳಿನಿಂದ್ರರಘೌರ್ಯೋರ್ದ್ಧರಣಂ ||
ಪ್ರತಿಪಾದಿಸಿದುದು ತಾರೋ |
ದ್ಗತಿಯುಂ ನಭವಲ್ಲಿ ಸವನನಾಂದೀವಿಧಿಯೊಳ್ || ೧೧೬

ಅನಂತರಂ ಪಾರಿಜಾತಪಲ್ಲವೋಲ್ಲಸಿತಮುಖಂಗಳುಂ ಮಂದಾರಮಾಳಾಳಂಕೃತಕಂಠಂಗಳುಂ ಹರಿಚಂದನಚರ್ಚಿತಮಧ್ಯಂಗಳುಮಪ್ಪ ಕಲ್ಯಾಣಕಳಶಂಗಳಂ ಕಳಶೋದ್ಧಾರಮಂತ್ರಪೂರ್ವಕಮೆತ್ತಿಕೊಂಡು

ದಳಿತಾಂಭೋಜರಜಃಪಿಶಂಗಿತಲಸದ್ಗಂಧಾದಿತೀರ್ಥೋದಕಂ |
ಗಳನಂಹೋಮಳಭೇದಕಂಗಳನುರುಶ್ರೇಯಃಫಳೋತ್ಪಾದಕಂ ||
ಗಳನಸ್ಕಿತರ್ ಜಿನಾರ್ಭಕಂಗೆ ದಿವಿಜೇಶರ್ ಮಾಡಿದರ್ ಮುಖ್ಯಮಂ |
ಗಳಮಂ ಸ್ನಾನವಿಧಾನಮಂ ಸಮುದಿತಾನೇಕಾನಕಧ್ವಾನಮಂ || ೧೧೭

ಸುರವೃಂದಾರಕರೆಯ್ದೆ ಮುಂದುವರಿದೊಂದಾನಂದದಿಂ ತಂದು ತಂ |
ದಲರಂ ಗಂಧಮನಕ್ಷತಪ್ರಕರಮಂ ದರ್ಭಾಳಿಯುಂ ದೂರ್ವೆಯುಂ ||
ಚರುವಂ ನೀಡೆ ಶಚೀಯುತಾಮರಿಯರರ್ಚಾದ್ರವ್ಯಸಂಶುದ್ಧಿಯುಂ |
ತ್ವರಿತಂಮಾಡೆ ಸಮಗ್ರಮಾಯ್ತು ಭಗವಜ್ಜನ್ಮಾಭಿಷೇಕೋದ್ಯಮಂ || ೧೧೮

ಅಮಳಜ್ಞಾನಂಗಿದು ಪಂ |
ಚಮಗತಿರಾಜ್ಯಾಭಿಷೇಕಮಿಂತಿಲ್ಲಿಗೆ ಪಂ ||
ಚಮಜಳಧಿಜಳಮೆ ಯೋಗ್ಯಂ |
ಸುಮರ್ಜನಕ್ಕೆಂದು ಬೆಸಸಿದಂ ಸೌಧರ್ಮಂ || ೧೧೯

ಆಗಳ್

ನಗಪತಿ ತಾನೆ ಜೈನಸವನೋತ್ಸವದೊಳ್ ಪಿರಿದಱ್ತಿಯಿಂದೆ ನೀ ।
ವೊರ್ಗೆಯುಳೊಡಱ್ ಪಂಚಕಮಂಪಯೋಧಿಗೆ ನೀಡಿದನಕ್ಕುಮೆಯ್ದೆ ದೋ॥
ಯುರ್ಗಳಮನಿಕ್ಕೆಲಕ್ಕಮೆನೆ ಕಬ್ಬಜರೋಳಿಗಳಗ್ರಸಾನುವಿಂ ।
ದೊಗೆದು ಕಡಲ್ವರಂ ನಿ*ಮಿರ್ದವೆ ನವ*ದಿರ್ದರ್ವ್ರೊ ಕಣ್ಗೆ ನಾಡೆಯುಂ॥೧೨೦

ಅನಂತರಂ

ಸರದದ ತುಂದಲ ಸಂಜೆಯು ।
ನೆರೆದ ಮುಗಿಲ್ ಪೀಱಿದಪ್ಪುವು ನೀರ್ಗಳೆಂಬಂ ॥
ತಿರೆ ಪಳಕಿನ ನೀಲದ ಕೆಂ ।
ಬರಲ ಕೋಡಂ ತರದೆ ಮೊಗೆದುವಂದಿಂಗಡಲೊಳ್ ॥ ೧೨೧

ದಿಟದಿಂ ಪಯೋಧಿಯುಂ ತಳ ।
ತಟಮಂ ಸಾರ್ವಿನೆಗಮಸುರಕುಳಕರಕಳಿತಂ ॥
ಘಟಜಾತಂ ಪೀರ್ದೊಡದಂ ।
ಘಟಜಾತಂ ಪೀರ್ದನೆಂದು ನುಡಿಸರ್ ಗಾಂಪರ್ ॥ ೧೨೨

ಬಡಱೆಂಟು ಯೋಜನಂ ಮೊಗೆ ।
ದೆಡೆ ಯೋಜನಮೊಂದು ಪೋಱ್ಪೆಸಿಸಿದ ಪೆಂಪಂ ॥
ಗಡಣಿಸಿ ಘಟಂಗಳಮ*ದಿರ್ನ ।
ಮಡುಗಳೆ ನಡೆವಂತೆ ತಿಂಬಿ ನಡೆಪುವು ಪಲವುಂ ॥ ೧೨೩

ಬೃಂದಾರಕರೋರೊರ್ವರ್ ।
ಗೊರ್ಂಮು ಕನತ್ಕಳಶನಿಕರಮಂ ಕೆಯ್ಗೆಯ್ಯೊಳ್ ॥
ತಂದೀವ ಕೊಳ್ವ ಸಂಭ್ರಮ ।
ದಂದಂ ಪೋಲ್ತತ್ತು ಕಂದುಕಕ್ರೀಡಿತಮಂ ॥ ೧೨೪

ಅನಿಮಿಷಕೋಟಿ ರತ್ನಘಟಪೇಟಕದಿಂದಮೃತಾಬ್ಧಿದುಗ್ಧಮಂ ।
ಜನಿತಮರುನ್ಮನೋಜವದೆ ತಂದೆಡೆಮಾಡದೆ ನೀಡೆ ತಾಳ್ದಿ ಪಾ ॥
ವನತರನೀರಪೂರಿತಫಲಾವಿಳಕೋಮಳನಾಳಿಕೇರಕಾ ।
ನನದವೊಲಾಯ್ತು ಪೂರ್ಣಕಳಶಾಕುಳಬಾಹುಸಮೂಹಮಿಂದ್ರರಾ ॥೧೨೫

ಅಂತು ವಿಕ್ರಿಯಾಶಕ್ತಿಯಿಂ ಶಕ್ರರಮರಸಮಿತಿ ನೀಡಿವನೇಕಘಂಟಂಗಳ ನನೇಕಘಟಂಗಳಿಂ ತಾಳ್ದು ಧಾರಾಭಿಷೇಕಮಂ ಜಯಜಯನಿನಾದಪೂರ್ವಕಂ ಮಾಡುವಾಗಳ್

ಪರಮಜಿನನೆಂಬ ಗುಣಗಣ |
ಸುರತ್ನನಿಧಿಗಿಂದ್ರರೆಂಬ ತರುಗಳ್ ಬೇಱ ॥
ಲ್ಪಿದಂತಿರ್ದುವು ತತ್ತ |
ತ್ಪರಶಾಖಾಕಳಿತಕಳಶಧಾರಾಕ್ಷೀರಂ ॥ ೧೦೬

ಜಿನತನುಗೆ ಕಾಂತಿಯಿಂ ಸೋ |
ಲ್ತು ನಾಣ್ಚಿ ನೀರಾಗಿ ಕರಗಿ ಪರಿಯುತ್ತಿರ್ದ ॥
ಪ್ಪನೊ ಚಂದ್ರನೆನಿಸಿದುದು ಪೆಳ |
ಕಿನ ಕೊಡದಿಂ ಸುರಿವ ದುಗ್ಧಧಾರಾಪೂರಂ ॥ ೧೦೭

ಕ್ಷೀರನಿರಂತರಧಾರಾ |
ಪೂರದ ಪುದುವಿಂ ಜಿನಾನನಂ ಶೋಭಾಸಂ ॥
ಸ್ಮಾರಕಮಾದುದು ಶಾರದ |
ನೀರದಪರಿಪಿಹಿತತುಹಿನಕರಮಂಡಳದಾ ॥ ೧೦೮

ಜಿನಶಿಶುವ ಕೋಮಳಾಮಳ |
ತನು ಸವನಪಯಃಪ್ರವಾಹದೊಳ್ ಸೊಗಯಿಸಿದ ॥
ತ್ತನಿಮಿಷರ ಕಣ್ಗೆ ಗಂಗೆಯ |
ಫೇನಲೊಳ್ ನಳನಳಿಸಿ ಮಿಸುಪ ಬಿಸವಲ್ಲರಿವೋಲ್ ॥ ೧೦೯

ಬಳಸಿರೆ ಜಿನತನುವಂ ದು |
ಗ್ಧಲಹರಿ ತದ್ದುಗ್ಧಲಹರಿಯಂ ಸುರಯೋಷಿ ॥
ತ್ಕುಳಮುಗ್ಧಾಪಾಂಗಪ್ರಭೆ |
ಬಳಸಿರೆ ಮನಮೊಳಸಿ ಬಳಸಿದತ್ತಭಿಷವದೊಳ್ ॥ ೧೧೦

ಕಡಲೊಳ್ ಪಾಲಂ ಮೊಗೆವಂ |
ದೊಡವಂದುವು ತಾಗಿ ರತ್ನಪೀಠಮನೀಗಳ್ ॥

ಪಿಡಿದಪುವ್ರೋ ಮುತ್ತುಗಳನೆ ।
ಬೆಡಂಗನೊಳಕೆಯ್ದುಪ್ಪೊಗೆವ ದುಗ್ಧಲವಂಗಳ್ ॥ ೧೩೧

ಅಂತು ಸಂಧ್ಯಾಂಭೋಧಸನ್ನಿಭಂಗಳಪ್ಪ ಶಾತಕುಂಭಕುಂಭಂಗಳಿಂ ಜಂಭಾರಿ ಶಂಭುಗಭಿಷವಮಂ ತುಮುಳಕೇಳಿಯಿನೊಡರ್ಚಿದಾಗಳ್

ಗಿರಿಯಲ್ಲಿ ಘನಘಟಾವಳಿ ।
ಸುರಿದುವು ಪಯಮಂ ದಿಟಕ್ಕೆ ತಾನೆನಿಸಿ ಮರು ॥
ದ್ಗಿರಿಯಲ್ಲಿ ಘನಘಟಾವಳಿ ।
ಸುರಿದುದು ಪಯಮಂ ಮೃದಂಗನಿನದಸ್ತನಿತಂ ॥ ೧೩೨

ನೀಡಿಸಿ ಕೊಳ್ವ ಕೆಯ್ಗಳುಮನಿತ್ತ ಸುರಾಳಿಗೆ ಕುಂಭಕೋಟಿಯಂ ।
ನೀಡುತುಮಿರ್ಪ ಕೆಯ್ಗಳುಮನಿತ್ತ ಜಿನಂಗಭಿಷೇಕಶೋಭೆಯಂ ॥
ಮಾಡುವ ತನ್ನ ಕೆಯ್ಗಳುಮನಿತ್ತ ನನುಸ್ಕೃತಿಗಗ್ರಭಾಗದೊಳ್ ।
ಕೂಡುತುಮಿರ್ಪ ಕೆಯ್ಗಳುಮನಿತ್ತ ವಿಚಿತ್ರಮೊ ಶಕ್ತಿ ಶಕ್ರನಾ ॥ ೧೩೩

ಸಕಳಾಮರರ್ ಪಯೋವಾ ।
ಹಕರಸುರಿಯುರಲ್ಲಿ ಪರಿವೆಸಂಗೆಯ್ವರ್ ಸ್ನಾ ॥
ಪಕನಿಂದ್ರಂ ಸುರಗಿರಿ ಪೀ ।
ಠಿಕೆ ನೀರ್ದೊರ್ಣಿ ದುಗ್ಧವಾರ್ಧಿ ಜಿನಮಜ್ಜನದೊಳ್ ॥ ೧೩೪

ಅಂತೈರಾವತಕರಸ್ಫೂಳಕ್ಷೀರಧಾರಾಸಹಸ್ರಂಗಳಂ ಜಿನಶಿಶುವಿನ ಶಿರದೊಳ್ ಸುರಿವ ಶತಮುಖನುತ್ಸವೋನ್ಮುಖತೆಗಂ ಬಾಳಕನ ವಿಜಳಿತವೃತ್ತಿಗಂ ಅನಿಮಿಷನಿಕಾಯಂ ವಿಸ್ಮಯಸ್ತಿಮಿತನಯನನಾಗಿ ನೋಡುತ್ತುಮಿನಿತಿರ್ದನ್ನೆಗಂ

ಮಿಳಿರ್ವ* ಪತಾಕೆಗಳೆತ್ತಿದ ।
ಶಿವಮೆನೆ ಜಿನಶಿಶುವ ರೇಚಕಾನಿಳಪತಿಯಿಂ ॥
ತಳರ್ದು ನಭೋಬ್ಧಿಯ ನಾಸಂ ।
ಕುಳದಂತೋಡಿದುದು ಸುರವಿಮಾನವಿತಾನಂ ॥ ೧೩೫

ಜಿನಜನ್ಮೋತ್ಸವದೊಳ್ ವೇ ।
ದಿನಿಗಿರಿಸಿದ ಕಾಂಚನಧ್ವಜಸ್ತಂಭಮಿದೆಂ ॥

ಜಿನೆಗಂ ಸೊಗಯಿಸಿದುದು ಮೇ ।
ರುನಗಂ ಪ್ರೋಚ್ಛ್ರಿತದುಗ್ಧಪೂರದುಕೂಲಂ ॥ ೧೩೬
ಉದಯಂ ಹಿಮಶೈಳದೊಳ್ ।
ಲ್ಲದೆ ಪಿರಿದುಂ ಹೇಮಶೈಳದೊಳ್ ಸಮನಿಸುವಿಾ
ತ್ರಿದಶನದಿಗೆಂಬಿನಂ ಪೊ ।
ಣ್ಮಿದುದಭಿನವಸವನದುಗ್ಧನಿರ್ಝರಪೂರಂ ॥ ೧೩೭
ಪಸರಿಸಿ ಪೊನ್ನ ಪಾಸಱೆಗಳೊಳ್ ಮಣಿಶೃಂಗಶತಾಂತರಾಳದೊಳ್ ।
ನುಸುೞ್ದು ತುಱುಂಬಿ ಮೇಖಳೆಗಳೊಳ್ ಸರಸೀಕುಳದೊಳ್ ಸಮಂತು ಮೇ॥
ೞಿಸಿ ಘನಗಹ್ವರೋದರದೊಳಾದಮೆ ತಿಂಬಿ ಸುಮೇರುಶೈಳದೆ ।
ಣ್ದೆಸೆಯೊಳಮುಬ್ಬರಂಬರಿದು ಪಾಲ ಪೊನಲ್ ಪಡೆದತ್ತು ಲೀಲೆಯಂ ॥ ೧೩೮
ಶೈಲಪತಿಯೆನ್ನ ತಲೆಯೊಳ್ ।
ಪಾಲಂ ಕಱೆದಂ ಸುರೇಂದ್ರನಿನಿತುಮಹತ್ವ ॥
ಕ್ಕಾಳಂಬಮಾಡಿದನೆಂ ।
ಬಾಳಾಪಮಿದೆನಿಸಿತಾಪಯಃಪ್ಲವರಾಗಂ ॥ ೧೩೯
ಮೊದಲಂ ಬಳಸಿರೆ ಗುಂಟಿಸಿ ।
ದುದಕದಪೋಲಭಿಷವಾಂಬು ಮೇರುನಗಂ ಸ್ಕಂ ॥
ಧದಪೋಲಿರೆ ತೀರ್ಥಕರನ ।
ಗ್ರದೊಳಿಂದ್ರನ ಪುಣ್ಯಕುಜದ ಫಲದಪೋಲಿರ್ದಂ ॥ ೧೪೦
ಕ್ಷೀರಸಮುದ್ರಮುತ್ತು ಬಱಯಿತ್ತಮರರ್ ಮೊಗೆವೊಂದುವೇಗದಿಂ ।
ಮೇರುನಗೇಂದ್ರಮಿತ್ತು ಮುೞುಗಿತ್ತು ಪರೀತಪಯಃಪ್ರವಾಹದಿಂ ॥
ತಾರಕಿತಂಬೊಲತ್ತು ನಭಮಾಯ್ತು ವಿಕೀರ್ಣಲವಪ್ರಪಂಚಸಂ ।
ಭಾರದಿನೆಂದೊಡೇಂ ಪೊಗೞ್ವುದಿಂದ್ರನ ಮಾಡ್ಪ ಮಹಾಭಿಷೇಕಮಂ ॥ ೧೪೧
ಪರಿವ ತದಂಭಃಪೂರಾಂ ।
ತರದೊಳ್ ನಸು ತೋಂಕೆ ತಾರಕಾಖ್ಯೆಯುಮಾದಂ ॥
ತರಣಿಸಮಾಖ್ಯೆಯುಮಾಗಳ್ ।
ದೊರೆವೆತ್ತುವು ನಾಡೆ ತಾರೆಗಂ ಸೂರ್ಯಂಗಂ ॥ ೧೪೨

ಎಱಗಿದ ತುಂಬಿಗೆ ಬಿಂಬದ ।
ಕಱೆ ಪೊಸಬೆಯಾಗೆ ತೇಂಕಿ ಬಾಂದೊಱೆವ್ರೆನಲೊಳ್ ॥
ಮಿಱುಪ ಧವಳಸ್ಮಿತಾಬ್ಜದ ।
ತೆಱನಂ ಮಱೆಯಿಸಿದನಬ್ಜನಂತಾರ್ಣವದೊಳ್ ॥ ೧೪೩

ಅಂತತಿಕ್ರಾಂತಜ್ಯೋತಿಃಕಳಾಪಮುಂ ಪ್ರಾಪ್ತಪ್ರಮದ್ವೀಪವನಮಾಗಿ
ತದ್ದುಗ್ಧಸಂಕುಳಂ ಬೆಸೆ ।
ಬಿದ್ದಂ ಪಱಿದೆಯ್ದೆ ಬೆರಸಿ ನಿಲೆ ಲವಣೋದ ॥
ನ್ವದ್ದುಗ್ಧಜಳಧಿಗಳ್ಗನ ।
ನುದ್ದೇಶಿಸಿ ಕವಿಗಳುಸಿರ್ವರೈಕ್ಯಮನಿನ್ನುಂ ॥ ೧೪೪

ಜಿನರಾಜಸ್ನಪನಾಂಬು ಪ್ರವರ್ಧಿ ಪರಿಪಂದಿಂದಿತ್ತಲತ್ಯಂತಪಾ ।
ವನಮಾಗಿರ್ಪುವು ನಾಡೆ ರೂಢಿವಡೆದಂತೀದ್ವೀಪದೊಳ್ ಕೂಡೆ ಸ ॥
ಜ್ಜನತಾಸಂಶ್ರಯಮಾಗೆ ಪುಣ್ಯನದಿ ಪುಣ್ಯಕ್ಷೇತ್ರಮಾರಯ್ಯೆ ಪು ।
ಣ್ಯನಗಂ ಪುಣ್ಯಸರೋವರಪ್ರತತಿ ಪುಣ್ಯಾರಣ್ಯಮೆಂದೀಗಳುಂ ॥ ೧೪೫

ಅನಂತರಮನಂತಚತುಷ್ಟಯಾಧಿಪತ್ಯಕ್ಕಿದುವೆ ರಾಜ್ಯಾಭಿಷೇಕಮೆಂಬಂತೆ ಚತುಷ್ಕೋಣಕಳಶದಿಂ ಮಜ್ಜನಂಬುಗಿಸಿ ದರ್ಭಾನ್ನಪ್ರದೀಪಫಳಕುಳಂಗಳಿಂ ನೀರಾಜನವಿಧಾನಮನೊಡರ್ಚಿ ಸಂಗತಾನೇಕಮಂಗಳಗೀತಾತೋದ್ಯರವಂಗಳೆಸೆಯೆ ಕಾಶ್ಮೀರಕರ್ಪೂರಹರಿಚಂದನೋನ್ಮಿಶ್ರಿತಾರ್ಣಃಪ್ರಪೂರ್ಣಸೌವರ್ಣಘಟಂಗಳನೆತ್ತಿಕೊಂಡು

ಆದಿವಿಜಾಧಿಪರ್ ಮಿಸಿಸೆ ಗಂಧಜಲಂ ಜಿನನಂಗಸಂಗತಾ ।
ಮೋದದೊಳೊಂದಿ ಕಂಪು ತನಿಗೊರ್ವೆ ಮದಾಳಿಕುಳಕ್ಕೆ ನಿರ್ಭರಾ ॥
ಹ್ಲಾದಮನಿತ್ತು ಸಿಂಪಿಣಿಯುಲಂಪನಮರ್ತ್ಯವಧೂಜನಕ್ಕೆ ಸಂ ।
ಪಾದಿಸಿ ಮತ್ತೆ ಮಾಡಿದುದು ಮಂದರಕಂ ಪರಿಭಾವಿಳಾಸಮಂ ॥ ೧೪೬

ಸಕಳಸುರಸಮಿತಿ ತನತನ ।
ಗೆ ಕೊಂಡು ಜಿನಸವನಪರಮಪಾವನಗಂಧೋ ॥
ದಕಮಂ ತಳೆದಾಬೆಂ ಸಾ ।
ರ್ಥಕತೆಯನೆಯ್ದಿಸಿದುದುತ್ತಮಾಂಗಕ್ಕಾಗಳ್ ॥ ೧೪೭

*
ಕುಳಿರ್ವಭಿಷೇಕಗಂಧಸಲಿಲಂಗಳನಾಗಳೆ ಮಸ್ತಕಾಗ್ರದೊಳ್ ।
*
ತಳೆದಲರ್ಗಣ್ಣೊಳೊತ್ತಿ ನಳಿತೋಳ್ಗಳೊಳೊಯ್ಯನೆ ಪೂಸಿ ಕೋಮಳಾಂ॥
ಗುಳಿಗಳೊಳಿಟ್ಟುಕೊಂಡೆರ್ದೆಯೊಳಂಟಿ ನಿರಾಕೃತಪಾಪತಾಪಮು ।
ತ್ಪುಳಕಕದಂಬಕಂ ನಲಿದುದಂದು ಕರಂ ದಿವಿಜಾಂಗನೋತ್ಕರಂ ॥ ೧೪೮

ಸವನನವಗಂಧಜಳಸಿಂ ।
ಧುವಿನೊಳ್ ನೀರಾಟದಿಂದೆ ರಮಿಯಿಸಿ ಮೆಱೆದ ॥
ತ್ತವಯುವದೆ ದಿವಿಜಕೋಟಿಗೆ ।
ದಿವಿಜಗಜಂ ಗಂಧಸಿಂಧುರತ್ವಮನಾಗಳ್ ॥ ೧೪೯

ದುರಿತೋಪತಾಪಮಂ ಸಂ ।
ಹರಿಸಲುಮಖಿಲಜನಪುಣ್ಯಲತಿಕಾಂಕುರಮಂ ॥
ಪರಿವರ್ಧಿಸಲುಂ ನೆಱೆಯದೆ ।
ಪರಮಜಿನಸ್ನಾನಗಂಧಜಲಲವನಿವಹಂ ॥ ೧೫೦

ಸಮನಂತರಂ,

॥ ಮಾಳಿನಿ ॥

ಸುರಭಿಸಲಿಲದಿಂದಂ ಚಂದನಕ್ಷೋದದಿಂದಂ ।
ಸರಳಪದಕದಿಂದಂ ಪುಷ್ಪಮಾಳಾಳಿಯಿಂದಂ ॥
ಸರಸರುಚಕದಿಂದಂ ಪ್ರಜ್ವಲದ್ದೀಪದಿಂದಂ ।
ಸ್ಫುರದಗರುಸುಧೂಪೋದ್ದಾಮಧೂಮೌಘದಿಂದಂ ॥ ೧೫೧

ವರಫಳಕುಳದಿಂದಂ ಚಾಮರಚ್ಛತ್ರಕೇತೂ ।
ತ್ಕರಪರಿಕರದಿಂದಂ ನೂತ್ನರತ್ನಾಂಚಿತಾಳಂ ॥
ಕರಣನಿಚಯದಿಂದಂ ಸಾಂಗಸಂಗೀತದಿಂದಂ ।
ಪರಮಚರಣಪೂಜಾವ್ಯಾಪ್ತಿಯಂ ಭಕ್ತಿಯಿಂದಂ ॥ ೧೫೨

ವ॥ ಮಾಡಿ ಬಱಿಯಮರ್ಹದಭಿಮುಖಂ ಶತಮುಖನಖಿಳಸುರಸಮಿತಿವೆರಸು ಕುಟ್ಮಳಿತಕರಸ್ಪುಟಘಟಿತಮುಕುಟನಿಕಟನಾಗಿ

॥ ಹರಿಣೀ ॥

ಜಯ ಜಯ ಜಯಸ್ವೀಕಾರೇಚ್ಛಾ ಗತಾಂತಕರಾಜದು ।
ರ್ಜಯ ಜಯ ಜಯ ಪ್ರೋದ್ಯತ್ಪಾಪಂ ಮದೀಯಮಧೀಶ ತ ॥
ರ್ಜದು ಜಯ ಜಯವ್ಯಾಮೋಹಾದ್ದೇವ ಮಾಂ ಸಹಸಾಪಸ ।
ರ್ಜಯ ಜಯ ಜಯ ತ್ರೈಲೋಕ್ಯಾಶ್ಚರ್ಯಸದ್ವಿಭವಪ್ರಭೋ ॥ ೧೫೩

॥ ಮಾಲಿನೀ ॥

ಜನನಜಲಧಿಪಾರಂ ಗಂತುಮಿಚ್ಛೋರ್ಜನಸ್ಯ ।
ತ್ವಯಿ ಕೃತಪರಿಚರ್ಯಾ ಸ್ವಸ್ಯ ಸೌಖ್ಯಸ್ಯ ಹೇತುಃ ॥
ಪರಮಜಿನ ಯಥಾ ಸಾಂಯಾತ್ರಿಕಸ್ಯ ಪ್ರಯತ್ನಃ ।
ಪ್ರವಹಣದೃಢಕರ್ಮಣ್ಯಂಬುರಾಶಿಂ ವಿವಕ್ಷೋಃ ॥ ೧೫೪

॥ ವಸಂತತಿಳಕಂ ॥

ತ್ವಂ ಸೇವ್ಯಭವ್ಯಜನವತ್ಸಲ ಮಾಮಕೀನ ।
ಮಾಯುಸ್ತ್ವದೀಯಪದಪಲ್ಲವಸಕ್ತಭಕ್ತ್ಯಾ ॥
ಸ್ಮೃತ್ಯಾ ಪ್ರಸನ್ನಮಧುರೋಕ್ತಿನಿಯುಕ್ತನುತ್ಯಾ ।
ನತ್ಯಾ ಯಥಾ ವ್ರಜತಿ ದೇವ ತಥಾ ಕುರುಷ್ವ ॥ ೧೫೫

॥ ಸ್ಕಂದಕಂ ॥

ತ್ರಿಭುವನಚೂಡಾಮಣಯಃ ।
ಕಾಳೋರಗವಿಷಮಗರಳವಿಷಹರಮಣಯಃ ॥
ನತಜನಚಿಂತಾಮಣಯೋ ।
ಮಮ ಹೃದಿ ನಿವಸಂತು ಜೈನಪದನಖಮಣಯಃ ॥ ೧೫೬

ಎಂದಭಿವಂದಿಸ್ರದುಮಾಗಳರ್ಹದಂಗಸಂಗತಜಳಲವಂಗಳಂ ಶುಚಿ ಶುಚಿವಸ್ತ್ರಪಲ್ಲವದಿನೊತ್ತಿ ಕಳೆದು, ನಿರ್ಲೇಪಂಗೆ ಸುಗಂಧಾನುಲೇಪಮಂ ಸಮೆದು, ಇಕ್ಷ್ವಾಕುವಂಶಲಕ್ಷ್ಮೀಲಲಾಮಂಗೆ ಲಲಾಮಮನಿಟ್ಟು, ಕಾಶ್ಯಪಗೋತ್ರಪವಿತ್ರಂಗೆ ಕಟಿಸೂತ್ರಮಂ ಕಟ್ಟಿ, ನಿರಂಜನಪದೇಚ್ಛುಗಂಜನಮನೆಚ್ಚು, ಭುವನಭೂಷಣಂಗೆ ಬಾಳೋಚಿತಭೂಷಣಂಗಳಂ ತುಡಿಸಲೊಡಂ

ಮಣಿಮಯಕುಂಡಳಂ ಸಹಜವಿದ್ಧವಿರಾಜಿತಕರ್ಣದೊಳ್ ಶಿಖಾ ।
ಮಣಿ ಶಿಖೆಯೊಳ್ ಸುರತ್ನಕೃತಮಾಣವಕಂ ಗಳದೊಳ್ ಹಿರಣ್ಮಯಂ ॥

ಕಿಣಿ ಕಟಿಯೊಳ್ ರಣದ್ರುಚಿರಕಂಕಣವಾಮಣಿಬಂಧದೊಳ್ ಸ್ಫುರತ್ ।
ಘೃಣಿಗಣನೂಪುರಂ ಚರಣದೊಳ್ ದೊರೆವೆತ್ತುವು ದೇವದೇವನಾ ॥ ೧೫೭

ಆಗಳ್

ತೂಕರಿಸಿ ಪರಸಲೆಂದು ಶ ।
ಚೀಕಾಂತೆಯೊಡರ್ಚೆ ನಾಣ್ಚಿ ತಲೆವಾಗಿ ಬಱಿ ॥
ಕ್ಕಾಕೆ ಜಿನನೃಪಗತಬೋ ।
ಧಾಕೃತಿಯೆಂದದನೆ ನುಡಿಗೆ ನತಿಗೇಱಿಸಿದಳ್ ॥ ೧೫೮

ಅತಿಶಯಮಂ ಜಿನಪತಿಯಾ ।
ಕೃತಿಯನಭೀಕ್ಷಿಸುವ ಪೊಗಲ್ವೆ*ಪೇಕ್ಷೆಯೊಳಿ ದಿವ ॥
ಸ್ಪತಿಯುಂ ಫಣಿಪತಿಯುಂ ಪರಿ ।
ವೃತನಯನಸಹಸ್ರಮುಖಸಹಸ್ರರುಮಾದರ್ ॥ ೧೫೯

ಅಂತು ನಿಷ್ಠಾಪಿತಪರಮೇಷ್ಠಿಜನ್ಮಾಭಿಷೇಕನಾಗಿ

ಕನಕನಗಾಗ್ರದಿಂದೆ ಹಿಮವದ್ಗಿರಿಚೂಳಿಕೆಗುಯ್ವ ಲೀಲೆಯಿಂ ।
ಜಿನಪತಿಯಂ ಮರುತ್ಪತಿ ನಿಜದ್ವಿಪಮಸ್ತಕದಲ್ಲಿಗುಯ್ದು ಮೆ ॥
ಲ್ಲನೆ ನವದಿವ್ಯವಸ್ತ್ರಪಿಹಿತಾಂಕದೊಳಿಟ್ಟು ತಳರ್ಚಿದಂ ಬಱಿ ।
ಕ್ಕನಿತುಮನಭ್ರವೀಥಿಯೊಳೆ ಚಂದ್ರಪುರಕ್ಕೆ ಚತುರ್ನಿಕಾಯಮಂ ॥ ೧೬೦

ಆಗಳ್

ಸುರನಿಕರಕಳಕಳಂ ಮುಸು ।
*ಳ್ದಿರೆ ಗರ್ಜನೆ ಮಾಣ್ದು ಶಾರದೋತ್ತುಂಗಪಯೋ ॥
ಧರಕೂಟಮೆನಿಸಿದುದು ಮಂ ।
ದರಶೈಳಂ ಸವನದುಗ್ಧಲಹರೀದಿಗ್ಧಂ ॥ ೧೬೧

ಓಸರಿಸೆ ಕಳಕಳಂ ಸುರ ।
ರಾಸಮಯದೊಳೋದಿ ಪೋದ ಶಾಸ್ತ್ರಾಭ್ಯಾಸ ॥
ಪ್ರಾಸಾದಮೆಂಬ ವಾಗ್ವಿ ।
ನ್ಯಾಸಕ್ಕೆಡೆಯಾಗಿ ಬಿನ್ನನಿರ್ದುದಗೇಂದ್ರಂ ॥ ೧೬೨

ಸುರವೃಂದಾರಕಕೌಸುಮ ।
ಪರಾಗಸಂದೋಹವಾತ್ಯೆ ನೆಗಪಿತ್ತತ್ತಂ ॥
ಬರದೊಳ್ ಪಿಂದನೆ ಮಂದರ ।
ಗಿರಿ ಬಂದಪ್ಪುದೆಂಬ ಸಂದೆಗದ ದಂದುಗಮಂ ॥ ೧೬೩

ಅಂತು ಬಂದು ಬಹಿಃಪುರದೊಳವತರಿಸಿ ಬೞಿಯಮಷ್ಟಮತೀರ್ಥಂಕರನ ಬರವಿನೊಸಗೆಯೊಳಷ್ಟಶೋಭಾಪರಿಪುಷ್ಟಮಪ್ಪ ಪುರಮಂ ಪುರಂದರಂ ಪುಗುವಾಗಳಮರಸೈನ್ಯಕಳಕಳಾವಿಳಭೂರಿಭೇರೀಪ್ರಣಾದಸಂಪಾದಿತಪ್ರಮೋದಪರವಶಂ ನೆಱೆದು ಬಂದು ಶೃಂಗಾಟಕಸವಿಧಸೌಧಸೌಧೋತ್ಸಂಗದೊಳ್ ನಿಂದು ವಿವಿಧಾರ್ಘ್ಯಾಂಜಳಿಗಳಂ ಕೊಟ್ಟು

ತನತನಗೆಱಗಿದುದು ಪುರೀ ।
ಜನಮೀಕ್ಷಿಸಿ ದೇವರಾಜನಂಕಸ್ಥಿತನಂ ॥
ಜಿನರಾಜನನಲ*ದೋರ್ಪ್ಪವ ।
ಮನಂಗಳುಂ ಮುಗಿದ ಕೈಗಳುಂ ಬೆರಸಾಗಳ್ ॥ ೧೬೪

ದಿವಿಜಗಜಾಗ್ರದೊಳಿರ್ದಂ ।
ಭುವನಾಗ್ರದೊಳಿರ್ದನೆನಿಸಿದಂ ಹರಿಯುಂ ತಾ ॥
ನವಳಂಬಿಸಿರ್ದಮಖಿಳ ।
ಕ್ಕವಳಂಬನಮೆನಿಸಿದಂ ಜಿನಾರ್ಭಕನೀಗಳ್ ॥ ೧೬೫

ದೊರೆವೆತ್ತುದು ಪೃಥುಕತ್ವಂ ।
ಪರಮನೊಳಾತ್ಮೀಯಜನನಿಯುದರದೊಳಿರ್ದಂ ॥
ಪರಿಕಿಪೊಡಾಕ್ರಾಂತಚರಾ ।
ಚರಗೋಚರಸಕಳಭುವನನಾದುದಱಿಂದಂ ॥ ೧೬೬

ಎಂದಭಿವರ್ಣಿಸುತಿರ್ಪನ್ನೆಗಂ ಪ್ರವೃದ್ಧೋತ್ಸಾಹಬುದ್ಧಿವೃದ್ಧಂವೃದ್ಧಶ್ರವಂ ನಿರ್ಧಾರಿತಮಹರ್ಧಿಕಾಮರಸಮಾಜಂ ರಾಜಮಂದಿರಮಂ ಮಂದರೋಪಮಮಂ ಪೊಕ್ಕು ಮುನ್ನಮೆ ಕಲ್ಪಜಶಿಲ್ಪಿಜನಪರಿಕಲ್ಪಿತಮಾಗಿರ್ದನಲ್ಪಮಣಿಮಂಟಪದೊಳಘದ್ವಿಪಗಜಾರಿಯುಂ ಗಜಾರಿಪೀಠಾಧಿರೂಢಂ ಮಾಡಲೊಡಂ

ಸುತಮುಖನಿರೀಕ್ಷಣೋತ್ಸುಕ ।
ಮಂತ್ರಿಗಳ್ ಭೂಭುಜನುಮರಸಿಯುಂ ಪರಿತಂದ ॥
ಪ್ರತಿಮನನೀಕ್ಷಿಸಿ ನಯನ ।
ದ್ವಿತಯಕ್ಕೊಡರಿಸಿದರಂತವರ್ ಸಫಲತೆಯಂ ॥ ೧೬೩

ಆಗಳವರನುಚಿತವಿಷ್ಟರೋಪವಿಷ್ಟರಂ ಮಾಡಿ
ಭುವನಜ್ಯಾಯನ ತಂದೆ ತನ್ವಿ ಭುವನ ತಾಯೆಂಬೊಂದು ಸಯ್ಪಿಂಗೆ ನೋಂ ।
ತವರಾರ್ ನಿಮ್ಮವೊಲೆಂದು ಬಣ್ಣಿಸಿ ಸಹಸ್ರಾಕ್ಷಂ ಮಹಾಸೇನಭೂ ॥
ಧನನಂ ಪೆರ್ಮೆಯ ಲಕ್ಷ್ಮಹಾರಮಣಿಯುಂ ದಿವ್ಯಾಂಬರಾಲೇಪಮಾ ।
ಲ್ಯವಿಭೂಷಾದಿಗಳಿಂದೆ ಪೂಜಿಸಿದನಾವೊಂ ಪೂಜಿಸಂ ಪೂಜ್ಯರಂ ॥ ೧೬೪

ದೊರಕೊಳೆ ಪದಾರ್ಥಸಂಶಯ ।
ಮಿರದಾಗಳೆ ಬಂದು ಜಿನಪಿತೃದ್ವಂದ್ವಮನಾ ॥
ದರದಿಂ ಬಲಗೊಳಲೊಡನೋ ।
ಸರಿಸುಮದೆನೆ ಪೊಗೞಲಱಿವರಾರವರಱಿವಂ ॥ ೧೬೫

ಎಂದು ವಾಸುಗಿಯುಂ ಪೊಗೞ್ದು ಪೂಜಿಸಿದಂ. ಆಗಳ್ ವಾಸವಂ ಜನ್ಮಾಭಿಷೇಕೋತ್ಸವಮನನರ್ಗ ತೀರ್ಥಕರಜನ್ಮಕ್ರಮಮಿದೆಂದಱಿಯೆ ತಿಳಿಪುವುದುಮವರತ್ಯಂತಸಂತೋಷಾಕ್ರಾಂತಸ್ವಾಂತರಾಗಿ

ಸುರರಾಜಂ ಮದಧೀಶ್ವರಂ ಶಿಶು ದಲೆಂದೇನಿರ್ದನೇ ತಾಂ ಮಹ ।
ತ್ತರನಾದಂ ಶಚಿ ದಾದಿಯಾದಳಮರರ್ ಪೇೞ್ವಂತುಟಂ ಮಾೞ್ಪ ಕಿಂ ॥
ಕರರಾದರ್ ನವದಿವ್ಯವಸ್ತುಚಯಮಸ್ಮದ್ಗೇಹದೊಳ್ ನೋೞ್ಪೊಡು ।
ಬ್ಬರಮಾಯ್ತಾದೊಡಮೇನೊ ಮತ್ಸುತನ ಪುಣ್ಯಕ್ಕಿಂತಿದಾಶ್ಚರ್ಯಮೇ ॥
ಎಂದು ಜಗದ್ಗುರುಜನನೀಜನಕರ್ ತಮ್ಮೊಳತಿಸನ್ಮದದಿಂ ನುಡಿದು ಜಾತಕರ್ಮೋತ್ಸವಮನೊಡರ್ಚಿದಾಗಳ್

ಆತತಕೀರ್ಣಚೂರ್ಣಪಟವಾಸದಿನಾವೃತದಿಕ್ಸಮೂಹಪಿ ।
ಷ್ಟಾತಕದಿಂ ಬಲೀಕೃತನವಾರುಣನೀರರುಹಾಳಿಯಿಂ ಸನು ॥

ದ್ಯೋತಿತರತ್ನಭೂಷಣದಿನುಜ್ಜ್ವಲತೋರಣಶೋಣಪಲ್ಲವ ।
ವ್ರಾತದಿನೇಕರಾಗರಸಪೂರಿತಮಾಯ್ತು ನಿಸಿತ್ತು ತತ್ಪುರಂ ॥ ೧೨೧

ಸುರನರಗಾಯಿಕಾನಿಚಯಸಂಗತಮಂಗಳಗೀತನಾದದಿಂ ।
ಸುರನರವಾದಕಪ್ರಕರವಾದ್ಯಸಮುದ್ಗತಹೃದ್ಯಶಬ್ದದಿಂ ॥
ಸುರನರನರ್ತಕೀಲಲಿತನರ್ತನನರ್ತನದಿಂ ನೃಪೇಂದ್ರಮಂ ।
ದಿರಮದು ದಿವ್ಯಮಾನುಷವಿಳಾಸರಸಾತ್ಮಕಮಾದುದಾವಗಂ ॥ ೧೨೨

ಮನೆಯಿದು ವಿಮಾನಮಿದು ಪರಿ ।
ಜನಮಿದು ಸುರಜನಮಿದರಸನಿವನಿಂದ್ರನಿವಂ ॥
ಜನಪಸತಿಯಿಾಕೆ ಶಚಿಯಿಾ ।
ಕೆ ನೋೞ್ಪೊಡೆಂದಱಿಯಲರಿದದೇಂ ಸಿರಿ ಪಿರಿದೋ ॥ ೧೨೩

ಸುರಜನಮುಂ ಪುರಜನಮುಂ ।
ಪರಿಜನಮುಂ ಪರಮಪುರುಷಜನ್ಮೋತ್ಸವನಿ ॥
ರ್ಭರತರಹರ್ಷರಸಾಮೃತ ।
ಶರಧಿಯೊಳೇಂ ಕೂಡೆ ಮೂಡಿ ಮುೞುಂಗಿದುದೋ ॥ ೧೨೪

ಅಂತು ನಾಟಕಂನಲಿವುದಂ ಕಂಡು ತಾನುಂ "ಆನಂದಸೀಮಾ ಖಲು ನೃತ್ಯಸೇವಾ" ಎಂಬ ನಾಟ್ಯವೇದಾರ್ಥಮಂ ಸಮರ್ಥಿಸುವಂತೆ ರಸಂ ಭಾವಂ ಅಭಿನಯಂ ಧರ್ಮಿ ಪ್ರವೃತ್ತಿ ಸಿದ್ಧಿ ಸ್ವರಮಾತೋದ್ಯಂ ಗಾನಂ ರಂಗಂ ಸಂಗ್ರಹಮೆಂಬ ಪನ್ನೊಂದು ನಾಟ್ಯಾಂಗದೊಳ್ ನೆರೆದು ನಾಟಕಾದಿರಸರೂಪಕಂಗಳೊಳ್ ದೇವನಾಯಕಾಯುಕ್ತಮುಂ ವೀರರಸೋಪೇತಮುಮಪ್ಪ ಸಮವಾಕಾರರೂಪಕಮಂ ಗರ್ಭಾವತರಣಕಲ್ಯಾಣಪ್ರಸ್ತುತಮೆ ವಸ್ತುವಾಗೆಯುಂ ಜ್ಞಾನತ್ರಯೀನೇತೃವೆ ನೇತೃವಾಗೆಯುಂ ದಾನದಯಾವೀರರಸಂಗಳೆ ರಸಂಗಳಾಗೆಯುಂ ಸ್ವರ್ಗಿಗರೆ ಚತುರ್ವರ್ಗಿಗಳಾಗೆಯುಂ ತ್ರಿದಶವಾದಕರೇ ವಾದಕರಾಗೆಯುಂ ಗಂಧರ್ವಮರರೇ ಗಾಯಕರಾಗೆಯುಂ ಸುತ್ರಾಮನನೆಸಂತ್ರಾಸಫಲಾರ್ಥಿತ್ವದಿಂ ಸೂತ್ರಧಾರವೃತ್ತಿಯಂ ತಳೆದು ನಟನಲಂಪಟಗೃಹೀತಸಮುಚಿತನೈಪಥ್ಯನುಮುಪಚರಿತನಾಂದೀಸಮು

ಯಭಾರತಿಕಾಚಾರನುಮಾಗಿ ರಂಗಪ್ರವೇಶದೊಳ್ ದರ್ಶನಾವರಣೋಪ ಶಾಂತಿಯೆಂಬಂತೆ ಯವನಿಕಾಪಸರಣಮಾಗಲೊಡಂ

ಪದದೊಳ್ ಸಮಪಾದಂ ಹೃದ ।
ಯದೊಳಂಜಳಿ ಮುಖದೊಳಮಳಸಮದೃಷ್ಟಿ ಬೆಡಂ ॥
ಗೊದವಿರೆ ಸೂತ್ರಿಸಿ ಬರೆದಂ ।
ದದೊಳಿರ್ದಂ ಕುಳಿಶಿ ನಿಂದು ಋಜ್ವಾಗತದೊಳ್ ॥ ೧೭೫

ಅಂತು ನಿಂದು ಪುಷ್ಪಾಂಜಲಿವಿಕ್ಷೇಪಮಂ ಮಾಡಿ ನಿಟಿಳನಿಹಿತಾಂಜಳಿ ಯಾಗಿ

ಪರಮನ ಚರಣನಖಾಮೃತ ।
ಕಿರಣನನೋಲಗಿಪ ತರಳತಾರಾಗಣಮಂ ॥
ಪರಿಹಾಸಂಗೆಯ್ವುದು ಕೇ ।
ಸರಿಪೀಠೋಪಾಂತದೊಳ್ ಲತಾಂತಪ್ರಸರಂ ॥ ೧೭೬

ಅನಂತರಂ ಮಂಗಳಪದಪದವಾಕ್ಯದಿಂ ಪ್ರಸ್ತಾವನೆವಡೆದು ಬೞಿಯಂ ಪ್ರರೋಚನಾರ್ಥಂ ಪೂರ್ವರಂಗಪ್ರಸಂಗಮಂ ಮಾಡಿದಾಗಳ್

ಕಿವಿಗಿಂಪಂ ಮೃದುಗೇಯಮೀಯೆ ಮೃದುಗೇಯಕ್ಕಾದಮೋರನ್ನಮೆಂ।
ಬವೊಲಿಂಬಾಗಿರೆ ವಾದ್ಯಶಬ್ದಮತಿಸಾಮ್ಯಂ ವಾದ್ಯಶಬ್ದಕ್ಕೆ ನೋ ॥
ಡುವೊಡೆಂಬೊಪ್ಪದೊಳೊಂದೆ ನೃತ್ಯಮಳವಟ್ಟಾನೃತ್ಯದಿಂದುಣ್ಮಿ ಪೊ।
ಣ್ಮೆ ವಿಶೇಷಂ ರಸವೃತ್ತಿಯೇನೆಸೆದುದೋ ತದ್ರಂಗಸಂಗೀತಕಂ ॥ ೧೭೭

ತದನಂತರಂ ವಸ್ತುವಿಷಯದೊಳ್ ಸರ್ವರಸಾಯತ್ತಮಪ್ಪ ಭಾರತೀವೃತ್ತಿಯಂ ಪೊರ್ದಿ ಲಲಿತನೃತ್ಯದೊಳ್ ನಿಬದ್ಧಾನಿಬದ್ಧಭೇದಭಿನ್ನತ್ರಿಮಾರ್ಗಗೀತಂಗಳೊಳಂ ತತ್ವಾನುಗತೌಘವಾದ್ಯಂಗಳೊಳ್ ಸಂಗತಂಬಡೆದು,

ಸಕಳಾಂಗೋಪಾಂಗದಿಂದಾಂಗಿಕಮತಿವಿಶದಂ ಗಾನಪಠ್ಯೋಕ್ತದಿಂ ವಾ।
ಚಿಕಮೌಚಿತ್ಯನೈಪಥ್ಯದೆ ಸುಸದೃಶಮಾಹಾರ್ಯಕಂ ಸತ್ವಭಾವಾ ॥
ಧಿಕಚೇಷ್ಟಾಸ್ಪಷ್ಟಿಯಿಂ ಸಾತ್ವಿಕಮಮರ್ವ*ನಮವ್ಯಾಜದಿಂ ಮೆಚ್ಚೆ ಸಾಮಾ।
ಜಿಕರಿಂದ್ರಂ ಲೀಲೆಯಿಂದಂ ಚತುರಭಿನಯಚಾತುರ್ಯದೊಳ್ ಕೂಡೆ ಸಂದಂ ॥

ಭರತಾಗಮಲಕ್ಷ್ಮಿಗೆ ನಿಜ ।
ಕರಣಮಳಂಕರಣಮಂಗಹಾರಂ ಹಾರಂ ॥
ಪಿರಿದುಂ ತಾನೆನೆ ಮೆಱೆದಂ ।
ಸುರಪರಿವೃಢನಾಂಗಿಕಾಭಿನಯಪರಿಚಯಮಂ ॥ ೧೭೯

ಕುಳಿಶಿಗಭಿನಯದೊಳಾದಂ ।
ಗಳಕ್ಕೆ ನತಿ ದೃಷ್ಟಿಗುತ್ಸವಂ ಹಸ್ತಕ್ಕಂ ॥
ಜಳಯೆ ಬರುತಿರ್ದುವೇನ ।
ಗ್ಗಳವೋ ಜಿನಭಕ್ತಿಯೆಸಕಮಾತನ ಮನದೊಳ್ ॥ ೧೮೦

ಸಭ್ಯತಮುದಂ ಹರಿ ಮೆಱೆದಂ ।
ಸಭೆಗೆ ವಿಭಾವಾನುಭಾವಸಾತ್ವಿಕಭಾವ ॥
ವ್ಯಭಿಚಾರಭಾವಮೆಂಬಿವ ।
ಅಭಿನಯದಿಂ ಸ್ಥಾಯಿಭಾವದೊಳ್ ರಸದೊದವಂ ॥ ೧೮೧

ಇದು ಭಾವಮಿದು ರಸಂ ಮ ।
ತ್ತಿದು ವೃತ್ತಿಯೆನಿಪ್ಪ ಸಂದ ಸಮಕಟ್ಟುಗಳೊಳ್ ॥
ತ್ರಿದಶಪತಿ ಭರತಶಾಸ್ತ್ರದ ।
ಮೊದಲ ನಿಬಂಧನಮೆ ಮೂರ್ತಿಗೊಂಡಂತಿರ್ದಂ ॥ ೧೮೨

ಅಭಿಷೇಕಾಮೃತದಿಂ ಹೇ ।
ಮಭೂಧ್ರಮಂ ಮುನ್ನ ಮುೞುಗಿಸಿದವೋಲಮರ ॥
ಪ್ರಭು ಮುೞುಗಿಸಿದಂ ತದಾ ।
ಜಭವನಮಂ ಮತ್ತೆ ಲಲಿತನೃತ್ಯಾಮೃತದಿಂ ॥ ೧೮೩

ಸಭೆ ವಿಬುಧಸಭೆ ಜಗತ್ಪತಿ ।
ಸಭಾಧಿಪತಿ ಶಕ್ರನಲ್ತೆ ನರ್ತಕನೆನೆ ತ ॥
ದ್ವಿಭವಮನಣ್ಣ ನಭೂತೋ ।
ನ ಭವಿಷ್ಯತಿಯೆಂದೆ ಮಾಣದಾರ್ ನೆಱೆ ಪೊಗೞ್ವರ್ ॥ ೧೮೪

ಎಂಬಿನಂ ಪಿರಿದು ಪ್ರೀತಿಯಿಂ ನರ್ತಿಸಿಯುಂ ಮಾಣದುತ್ಸವೋನ್ಮತ್ತಂ ಮ
ತ್ತಮಿತರಜನಕೌತುಕೋತ್ಪಾದನೋಪಾಯಮನುದ್ಧತಾಭಿನಯಪ್ರಾಯ

ಮುಂ ಕೇವಳಂ ತಾಳಲಯಾಶ್ರಯಮುಮಪ್ಪ ತಾಂಡವಮನಾಡಲೆಂದಾರಭ
ಟೀವೃತ್ತಿಯುಂ ಕೈಕೊಂಡು

ಮನದೊಳ್ ಪೊದಳ್ದು ಪೊಣ್ಮಿದ ।
ಜಿನನ ಮಹೋತ್ಸಾಹದೊಡನೆ ಬಳೆದುದು ದೇಹಂ ॥
ತನತನೆ ಬಾಂಬರೆಗಂ ಬಳೆ ।
ದನಿಮಿಷಪತಿ ನಟನಪಟುತೆಯಂ ಪ್ರಕಟಿಸಿದಂ ॥ ೧೮೫

ಒರ್ಮೆಯೆ ನಿಲವುಗಳನಿತುಮ ।
ನೊರ್ಮೆಯೆ ಪದಗತಿಗಳನಿತುಮಂ ವಿಕ್ರಿಯೆಯಿಂ ॥
ದೊರ್ಮೆಯೆ ದೃಷ್ಟಿಗಳನಿತುಮ ।
ನೊರ್ಮೆಯೆ ಹಸ್ತಂಗಳನಿತುಮಂ ಹರಿ ಮೆಱೆದಂ ॥ ೧೮೬

ಸ್ಥಳನಳಿನಾವಕೀರ್ಣಮೆನಿಸಿತ್ತು ವಸುಂಧರೆ ಪಲ್ಲವೋತ್ಕರಾ ।
ವಿಳಮೆನಿಸಿತ್ತು ಕೂಡೆ ದೆಸೆ ಕೈರವದಾಮನಿಕಾಮವಿಭ್ರಮಾ ॥
ಕುಳಮೆನಿಸಿತ್ತು ಮೇಘಪಥಮೆಂಬಿನೆಗಂ ಚರಣಪ್ರಚಾರದೋ ।
ಸ್ತಳವಳನಾವಳೋಕನವಿಳಾಸಮದೇನೆಸೆದತ್ತೊ ಶಕ್ರನಾ ॥ ೧೮೭

ಕೞಿವ್ರೂವೆಂಬನ್ನೆಗಂ ರೇಚಕಪವನಪಟುಕ್ಷೇಪದಿಂ ಋಕ್ಷಮೆಲ್ಲಂ ।
ಕೞಿಲುತ್ತಿರ್ದತ್ತು ಬಾಹಾಪರಿಘನಿಕರಸಂಭ್ರಾಂತಿಯಿಂ ದಿಗ್ಗಜಾಘಂ ॥
ಪೆಱುತ್ತಿರ್ದತ್ತು ಪಾದಾಹತಿಯಿನವನಿಯುಳ್ಳಡೆ ವಾರ್ಧಿವ್ರಜಂ ಬೆಂ ।
ಬೞಿಯಿಂ ತುಳ್ಕಾಡ ತಿರ್ದತ್ತೆನೆ ನಟಯಿಸಿದಂ ತಾಂಡವೋದ್ದಂಡನಿಂದ್ರಂ ॥

ಅದಲ್ಲದೆಯುಂ

ಆರಯೆ ದೇವನೋಲಗದೊಳೊಪ್ಪುವ ಮೂರ್ತಿಯದೊಂದು ತತ್ಪ್ರತೀ
ಹಾರಕವೃತ್ತಿಯೊಳ್ ನೆಱೆದ ಮೂರ್ತಿಯದೊಂದು ವಿಚಿತ್ರಮಾಗೆ ನಾ ॥
ನಾರಸನೃತ್ಯದೊಳ್ ನಲಿವ ಮೂರ್ತಿಯದೊಂದೆನೆ ತೋಱಿದಂ ಸಮಂ ।
ತಾರ ಮನಕ್ಕಮಚ್ಚರಿಯನಿಂದ್ರನದೊಂದು ಮಹೇಂದ್ರಜಾಲಮಂ ॥ ೧೮೯

ಒರ್ಮೆ ವಸುಂಧರಾತಳದೊಳೊರ್ಮೆ ದಿಶಾವಳಯಾಂತದೊಳ್ ಪೊದ ।
ಳ್ದೊರ್ಮೆ ನಭೋವಿಭಾಗದೊಳನೇಕವಿಧಾಭಿನಯಂಗಳಿಂದೆ ಸಾ ॥

ಧರ್ಮನದೇನಗುರ್ವಿಸಿ ವಿಗುರ್ವಿಸಿ ತೋಱಿದನೋ ಸ್ವರೂಪಮಂ ।
ಪೆರ್ಮೆಯ ನಾಟ್ಯಧರ್ಮಿಯನಳಂಕೃತಿವೆತ್ತಿರೆ ಲೋಕಧರ್ಮಿಯಂ॥ ೧೯೦

ನರನಾರೀನಿಕರಕ್ಕೆ ಕೌತುಕಮನಿತ್ತತ್ತೆಯ್ದೆ ದಿಗ್ಭಿತ್ತಿಯೊಳ್ ।
ಬರೆದಂತುರ್ವರೆಯೊಳ್ ಸಮಂತು ಬಳೆದಂತಾಕಾಶದೊಳ್ ಕೂಡೆ ಬಿ ॥
ತ್ತರದಿಂ ಮಾರ್ಪೊಳೆದಂತನೇಕನಿಜನೃತ್ಯಾಕಾರಮಾನಂದಬಂ ।
ಧುರಭಾವಂ ಭರದಿಂದುಪಕ್ರಮಿಸೆ ಶಕ್ರಂ ವಿಕ್ರಿಯಾಶಕ್ತಿಯಿಂ ॥ ೧೯೧

ಅದಲ್ಲದೆಯುಂ ಬಳರಿಪುವ ಬಾಹುನಿವಹಮಂ ನವರತ್ನಕೇಯೂರಕಾಂತಿಸಂತಾನಮೆಂಬಂತಡದರ್

ಬಿಂಕಂಬೆತ್ತಿರೆ ಹಸ್ತನ ।
ಖಾಂಕುರದೊಳ್ ಬಾಹುಶಾಖೆಯೊಳ್ ದಿವಿಜನಟೀ ॥
ಸಂಕುಳಮಂದನುಗತಿಯಿಂ ।
ದಂಕುರಶಾಖಾಭಿನಯಮನೇಂ ತೋಱಿದುದೋ ॥ ೧೯೨

ಅಮರಿಯರುಮಿಂದ್ರನೊಡನೊಡ ।
ನಮರೀಜನವೇಷದಮರರುಂ ತದುಭಯದೊಳ್ ॥
ಸಮುದಯದೊಳಾಡುವೆಡೆಯೊಳ್ ।
ಸಮಸಂದುವು ಲಾಸ್ಯತಾಂಡವಪ್ರಕ್ರಿತಂಗಳ್ ॥ ೧೯೩

ತಳೆದೆಸೆಯೆ ವಲನನರ್ತನ ।
ವಿಳಾಸಮಂ ಹರಿಯ ತೋಳ್ಗಳಂತವಱೊಳ್ ಸಂ ॥
ಚಳಿಸದೆ ನಿಂದರ್ ಚಕ್ರಂ ।
ದೊಳವಾಡುವರಂತಮರ್ತ್ಯನರ್ತಕಿಯರ್ಕಳ್ ॥ ೧೯೪

ಆಗಳಾಕೆಯರ ಪಂಚವಿಧಪದತಳಸಂಚಾರದಿಂ ಗಗನತಳಮೆಲ್ಲಂ ಕೆಂದಳಿರ ಪಂದರಿಕ್ಕಿದಂತೆಯುಂ, ಆಕೆಯರ ನವವಿಧಬಾಹುನಳನದಿಂದೆಳಲತೆಯ ಬಳ್ಳಿ ಚಳಿಸಿದಂತೆಯುಂ, ಆಕೆಯರ ಚತುಷ್ಷಷ್ಟಿವಿಧಹಸ್ತವಿಸ್ತಾರದಿಂ ಬಯಲ್ದಾವರೆಯ ಬನನುರಲ್ದಂತೆಯುಂ, ಆಕೆಯರ ಷಟ್ತ್ರಿಂಶತ್ಸುಧಾಸ್ಮೇರಾಂಬಕಕದಂಬದಿಂ ಕರ್ನೆಯ್ದಿಲೆಸಳ ಮುಱಿ ಕಱಿದಂತೆಯುಂ, ಆಕೆಯರಷ್ಟವಿ

ಧಾಳೋಕನರುಚಿಯಿಂ ಕುಡುಮಿಂಚಿನೊಳ್ ಕಟ್ಟಿ ಮೆಱೆದಂತೆಯುಂ, ಆಕೆಯರ ಸಪ್ತವಿಧಭ್ರೂವಿಭ್ರಮದಿಂ ಮದನನ ಪದೆವಿಲ್ಗಳಂ ಕೆದಱಿದಂತೆಯುಂ, ಆಕೆಯರ ಚತುರ್ದಶವಿಧಾಸ್ಯವಿಳಸಿತದಿಂ ಶಶಿಬಿಂಬಕದಂಬಕಮಂ ಪಸರಿಸಿದಂತೆಯುಂ, ಆಕೆಯರುಭಯವಿಧಗಾನದಿಂ ಜೇನ ಸೋನೆ ಸುರಿದಂತೆಯುಂ, ಅತಿ ಮನೋಹರಮಾಗೆ

ಎತ್ತೆತ್ತಂ ನರ್ತಿಸೆ ನಿಜ ।
ನೃತ್ತಕರೋತ್ಕರದೊಳಚ್ಚರಸಿಯರ್ ಕಣ್ಗಂ ॥
ಚಿತ್ತಕ್ಕಂ ಪೊಸದಾದಂ ।
ನೃತ್ತಾಂಗಂ ಕಲ್ಪಭೂಜಮೆನಿಸಿ ಬಿಡೌಜಂ ॥ ೧೯೫

ಕುಡುವರ್ ಬೇಳ್ಪರ್ಥಮಂ ಕೇಳಿಪ ನಟರ್ಗ*ಧಿನಾಥರ್ಮನಂಗೊಂಡುಮುನ್ನಂ
ಬಿಡವರ್ ಶ್ರೀಮಂತರಪ್ಪನ್ನೆಗಮೆನಿಸುವುದದಂತಿರ್ಕೆ ದೇವೇಂದ್ರನೀಗಳ್ ॥
ಗಡ ಕೇಳಿಪ್ಪಂ ನಟಂ ಬೇಳ್ಪಿನುಮೆನೆ ಪದಪಿನ್ನೆಂತುಟೆಂಬಂತದಂ ತಾಂ।
ಕುಡುವರ್ಹತ್ಸ್ವಾಮಿ ಬಲ್ಲಂ ಪಡೆವಮರವರಂ ಬಲ್ಲನಿಂ ಬಲ್ಲನಾವಂ॥ ೧೯೬

ಇಂದ್ರಂ ನಿಜದಕ್ಷಿಣದಿವಿ ।
ಜೇಂದ್ರಂ ಶಚಿ ಲೋಕಪಾಳನಿಕರಂ ಬೆರಸು ॥
ವೀರ್ಂದ್ರತೆಗೆವಂದು ಬೞಿಕೆ ಜಿ ।
ನೇಂದ್ರೋಪಾಸನದ ಫಲದೆ ಮುಕ್ತಿಗೆ ಸಲ್ವಂ ॥ ೧೯೭

ಎನಿಸಿದಾನಂದಸಂಗೀತಸಪರ್ಯಾಪರಿಸಮಾಪ್ತಿಪ್ರಣಾಮಾನಂತರಂ ನಾಮಕರಣೋದ್ಯುಕ್ತನಾಗಿ

ಆದಿಜಿನೇಶನಿಂ ಭರತಚಕ್ರಿಗೆ ಭಾವಜಿನಾಹ್ವಯಂ ಸಮಾ ।
ವೇದಿತಮಾದುದಂ ಜನನಿಯಾಸ್ಯಮನುಜ್ಜ್ವಳಚಂದ್ರಬಿಂಬದಂ ॥
ತಾದಿವದಿಂದೆ ಬಂದು ಪುಗುತಂದುದನೆಲ್ಲ ಜನಕ್ಕೆ ಮಾನಸಾ ।
ಹ್ಲಾದಮನೀವುದಂ ಬಗೆಗೆ ತಂದು ವಿಚಾರಿಸಿ ನೋಡಿ ನಾಡೆಯುಂ ॥ ೧೯೮

ಅಪ್ರತಿಮಪ್ರಭಾವಯುತಮಂ ಸಮುದೀರಣಮಾತಪಪ್ರತಾ ।
ಪಪ್ರತಿರೂಪಮಂ ಶ್ರವಣಯುಗ್ಮರಸಾಯನಮಂ ಸಮಸ್ತಸಾ ॥

ಧುಪ್ರಿಯಮಂ ಜಗತ್ಪ್ರಥಮಮಂಗಳಮಂ ಪಡೆದಿಟ್ಟನೆಂದು ಚಂ ।
ದ್ರಪ್ರಭನಾಮಮಮಂ ಮಘವನಷ್ಟಮತೀರ್ಥಕರಂಗೆ ಸಾರ್ಥಮಂ॥ ೧೯೯

ಬಗೆವೊಡದು ವಸ್ತುಕೃತಿಲತಿ ।
ಕೆಗೆ ಫಳಮದು ವರ್ಣಕೃತ್ಯಳಂಕೃತಿಗಾದಂ ॥
ಸೊಗಯಿಪ ನಾಯಕಮಣಿ ತಾ ।
ನೆ ಗಡಂ ಚಂದ್ರಪ್ರಭಾಭಿರಾಮಂ ನಾಮಂ ॥ ೨೦೦

ನೆನೆದೊಡೆ ಪೇಳ್ದೊಡೆ ಕೇಳ್ದೊಡೆ ।
ಜನಿಯಿಸುವುದು ಸಕಳಕರ್ಮನಿರ್ಜರೆಯಂ ತಾ ॥
ನೆನೆ ಚಂದ್ರಪ್ರಭನಾಮಮೆ ।
ಜನಕ್ಕೆ ಸಾಕಲ್ಯಸೌಖ್ಯಸಾಧನಮಲ್ತೇ ॥ ೨೦೧

ಅಂತು ವಿಶ್ವವಿಘ್ನವಿಚ್ಛೇದಕಸಿದ್ಧಮಂತ್ರಮಂ ಪ್ರಸಿದ್ಧೋಪದೇಶಂಗೆಯ್ವಂತೆ ಪೆಸರಿಟ್ಟು

ಜಯ ಜಯ ಚಂದ್ರಪ್ರಭ ಕುವ ।
ಳಯಕ್ಕೆ ನಿನ್ನುದಯದೊಳ್ ವಿಕಾಸಶ್ರೀಯಂ ॥
ದಯೆಗೆಯ್ದುದುಚಿತಂ ವಿ ।
ಪ್ರಿಯಮಂ ರತಿಪತಿಗೆ ಪಡೆದೆಯಿದುವೆ ವಿಚಿತ್ರಂ ॥ ೨೦೨

ಎಂದು ಪೊಡೆವಟ್ಟು

ಸದಭಿದ್ಯೋತಕನೊಳ್ ಪ್ರದೀಪಕರಣಂ ತಾನೇವುದುದ್ಬೋಧತಾ ।
ಸ್ಪದನೊಳ್ ಯಾಮಿಕವೃತ್ತಿಯೇವುದು ವಿಶುದ್ಧಾಕಾರನೊಳ್ ಸ್ನಾನಮೇ ॥
ವುದು ಲೋಕತ್ರಿತಯೈಕರಕ್ಷಕನೊಳಾರಕ್ಷಾಸಮಾಯೋಗಮೇ ।
ವುದು ಮೇಣಾಬೊಡಮೇನೊ ಬಾಲ್ಯವಿಹಿತಂ ಲೋಕೋಪಚಾರಕ್ರಮಂ॥

ಎಂದಮರ್ತ್ಯಂ ಧಾತ್ರೀಮಹತ್ತರಾಂಗರಕ್ಷಕಾಧ್ಯಕ್ಷವಾರ್ತಾಹರಸಹಚರಸುಕುಮಾರಾದಿಗಳನಗಲದಿರ್ಪಂತಪ್ಪಯಿಸಿ ತೀರ್ಥಕೃತ್ಪದದ್ವಂದ್ವಮುಮಂ ತತ್ಪಿತೃದ್ವಂದ್ವಮುಮಂ ಬೀಳ್ಕೊಂಡು ಬಲಗೊಂಡು ನಡೆಯೆ

ಅಗಲದೆ ಜಿನನತ್ತಲೆ ದಿ |
ಟ್ಟಿಗಳೆಱೆಯೆ ಮರುನ್ನಿವಾಸದತ್ತಲೆ ಮಾರ್ಗಂ ||
ದೆಗೆಯೆ ಚರಣಂಗಳಿಂತೆಱೆ |
ದೆಗೆಸೂದುದು ಪೋಗು ದಿವಿಜರಾಜಂಗಾಗಳ್ || ೨೦೮

ಅಂತೆಂತಾನುಮರಮನೆಯಂ ಪೊಱಮಟ್ಟು ಶಚೀದೇವಿವೆರಸು ನಿಜಗಜಾಮಗಾಹಿತಗಗನಮಂಡಳನಾಖಂಡಳಂ ಚತುರ್ನಿಕಾಯಾಮರಸಮಾಜಮಂ ವಿಸರ್ಜಿಸಿ ತಾನುಂ ನಿಜಾವಾಸಮಂ ಪೊಕ್ಕು

ಸಮಸಂದತ್ತರ್ಹದಾರಾಧನೆಯೊಳ್ ಕರಣವ್ಯಾಪ್ತಿಯಿಂದೇಱಿತೆನ್ನು |
ದ್ಯಮಮೊಳ್ಪಿಂದಿಂದು ಪೆತ್ತೆಂ ಸುಕೃತದೊದವನಿಂದೆಯ್ದಿದೆಂ ತನ್ಮಹಾನಂ |
ದಮನಿಂದಾಯ್ತೆನ್ನ ದೇವಾಧಿಪಪದವಿಗೆ ಸಾಫಲ್ಯಮೆಂದಂದು ಮುಯ್ವಂ |
ಸುಮನಶ್ಶಕ್ರೇಶನಾಂತಂ ವರಚರಿತನನೇಕಾಂತವಿದ್ಯಾವಿನೋದಂ || ೨೦೯

|| ಗದ್ಯಂ ||

ಇದು ಪರಮಪುರುನ್ನಾಥಕುಲಕುಭೃತ್ಸಮುದ್ಭೂತಪ್ರವಚನಸರಿತ್ಸರಿನ್ನಾಥ
ಶ್ರುತಕೀರ್ತಿತ್ರೈವಿದ್ಯಚಕ್ರವರ್ತಿ ಪದಪದ್ಮನಿಧಾನದೀಪವರ್ತಿ

ಶ್ರೀಮದಗ್ಗಳದೇವ

ವಿರಚಿತಮಪ್ಪ

ಚಂದ್ರಪ್ರಭಪುರಾಣದೊಳ್

ಜಗನ್ನಾಥಜನ್ಮಾಭಿಷವಣಕಲ್ಯಾಣವರ್ಣನಂ

ದ್ವಾದಶಾಶ್ವಾಸಂ

ಶ್ರೀಮುಖದೊಳ್ ನಸುನಗೆ ಬೆ ।
ಳ್ದಾವರೆಯೊಳಲರ್ಕೆಯೆಂಬವೊಲ್ ಪಸರಿಸೆ ಲ ॥
ಕ್ಷ್ಮೀಮಯನೆಸೆದಂ ಶಿಶು ಬಿಸ ।
ಕೋಮಳತನು ಜೈನಜನಮನೋಹರಚರಿತಂ ॥ ೧

ಅಮೃತದ್ಯುತಿಮಂಡಳದೊಳ ।
ಗಮರ್ದ*ನ ಪನಿ ತರದಿನೊಗೆದುವೆನೆ ಪನೆಗಳ್ ಚೆ ॥
ಲ್ವಮರ್ದ* ಮುಖಬಿಂಬದೊಳ್ ರುಚಿ ।
ನಿಮಿರ್ವ*ನೆಗಂ ಪುಟ್ಟ ದಿಟ್ಟಿಗಿತ್ತುವಲಂಪಂ ॥ ೨

ಎಳವಸಲೆಯ ಮೇಲೊಯ್ಯನೆ ।
ತಳರ್ದಾ*ಡುವ ರಾಜಹಂಸಬಾಳಕನೆಂಬೊಂ ॥
ದಳತೆಗೆ ವಂದಂ ಮರಕತ ।
ತಳದೊಳ್ ತಳರಡಿಯನಿಡುವ ತನ್ನೃಪತನಯಂ ॥ ೩

ರಂಜಿಸಿದುದು ಕಾಂಚನಮಣಿ ।
ಮಂಜೀರಕವಿರುತಿ ಚರಣದೊಳ್ ಸರಸಿಜದೊಳ್ ॥
ಕಿಂಜಳ್ಕಪಿಂಗಭೃಂಗೀ ।
ಶಿಂಜಿತಮೆನೆ ಬಾಳಕಂ ತಳರ್ನಡೆವೆಡೆಯೊಳ್ ॥ ೪

ಪಿರಿದುಂ ರಜಸ್ತಮೋಗುಣ ।
ಮೆರಡುಮನಿರದಿಕ್ಕಿ ಮೆಟ್ಟಿದಂ ಶಿಶುತೆಯೊಳಂ ॥
ಪರಮನೆನಿಸಿದುದು ಪ್ರಬಿದಿರೆ ।
ಚರಣದ್ಯುತಿ ನೀಲಕುಟ್ಟಿಮದೆ ದಟ್ಟಡಿಯೊಳ್ ॥ ೫

ಸುರದಾರಕತತಿ ತಾರಕ ।
ಪರಿಕರಮೆನೆ ಪಂಚರತ್ನಪಾಂಶುಪರೀತಂ ॥

ಕರವೊಸೆದಂ ಜಿನಚಂದ್ರಂ ।
ಪರಿವೇಷದ ಚಂದ್ರನೆನೆ ಶಿಶುಕ್ರೀಡಿತದೊಳ್ ॥ ೬

ಎಲೆಯುರಳೆಲೆ ಮಾಂಗಾಯ್ ಕಾಯ್ ।
ತೊಳಗುವ ಕಣ್ಮಲರಲರ್ ಮುಗುಳ್ನಗೆ ಚೆಲ್ವಂ ॥
ತಳೆದ ಮುಗುಳ್ನಗೆಯೆನೆ ಕ ।
ಣ್ಗೊಳಿಪಂ ಶಿಶು ಕಲ್ಪಕುಜದ ಸಸಿಯೆಂಬಿನೆಗಂ ॥ ೭

ಅನಿಮಿತ್ತಂ ಪನೆಗಳ್ ಪಳಚ್ಚನೆಸೆವನ್ನಂ ಮಂದಹಾಸಪ್ರಕಾ ।
ಶನಮಂ ಮುದ್ದುಮೊಗಕ್ಕೆ ತಂದು ಪರಿತಂದಪ್ಪಪ್ಪೆನುತ್ತಪ್ಪಿ ಪಿಂ ॥
ದನೆ ಪೊಕ್ಕೊಯ್ಯನಡಂಗಿ ದಾಯೆನುತೆ ಮತ್ತೆಯ್ತಂದು ಮಂಡಾಡಿ ಭೂ ।
ಪನುಮಂ ದೇವಿಯುಮಂ ಪ್ರಮೋದರಸದೊಳ್ ತೇಂಕಾಡಿಪಂ ನಂದನಂ ॥

ನಳಿನ ನಿಜಬಂಧುಗಳ ಕರ ।
ತಲದಿಂ ಕರತಳಕೆ ಬಾಳಕಂ ಬರುತಿರ್ದಂ ॥
ಬೆಲೆಯಿಡಲಣಮಱಿಯದ ಮಂ ।
ಡಲಿಗಳ್ ಪರಿಕಿಪ ಪರಾರ್ಧ್ಯಮಣಿಯೆಂಬಿನೆಗಂ ॥ ೯

ಅದಲ್ಲದೆಯುಮಮರ್ತ್ಯಧಾತ್ರೀಸಾರ್ಥಮುಜ್ಜುಗಿಪ ಸಜ್ಜೆಯ ಮಜ್ಜನದ ಸಜ್ಜೀಕರಣದೊಳಮಸ್ವಪ್ನಯಾಮಿಕಾಸಮೂಹಮನುಸರಿಸುವಿರುಳ ಪಗಲ ಸುವಿಧಾನದೊಳಮಮೃತಾಶನಮಹಾನಸಪ್ರತತಿ ಪದವಡಿಸುವನ್ನಪಾನದ ವ್ಯವಹರಣದೊಳಮಭಿನವೇಂದುಸಂಕಾಶತೆಯಿನನುದಿನಂ ಬಳೆಯೆ ಬಳೆಯೆ

ಏನಂ ಪೇೞ್ವುದೊ ಮೇಷಮಲ್ಲಮಹಿಷಾದ್ಯಾಕಾರಮಂ ತಾಳ್ದು ಬಂ ।
ದಾನಾಕಾಧಿಪಬಾಳಕರ್ ಬಿನದದಿಂ ಪ್ರೋದ್ದಾಮಡೆಯುಂ ಮುಂದದೆ ॥
ತ್ತಾನುಂ ದೇವನ ಚಿತ್ತದೊಳ್ ನಲವು ಪುಟ್ಟುತ್ತಿಲ್ಲ ನೋೞ್ಪಿಂದು ಹಿಂ ।
ಸಾನಂದಕ್ಕೊಳಗಾಗಲೇನಱಿಗುಮೋ ಶಾಂತಾತ್ಮನೆಂತಿರ್ದೊಡಂ ॥ ೧೦

ಅದಲ್ಲದೆಯುಂ

ಗುರು ಪೆಱನಾವಂ ತ್ರಿಜಗ ।
ದ್ಗುರುಗೆನೆ ಸಂಸ್ಕಾರವಶದೆ ಕಮನೀಯಕಳೋ ॥
ತ್ಕರವುಮನುತ್ತಮಶಾಸ್ತ್ರೋ ।
ತ್ಕರಮುಮನಭ್ಯಸಿಸದಾಗಳಱಿದನನಿಂದ್ಯಂ ॥ ೧೧

ಕ್ಷಿತಿಪತಿಸುತನೊಳ್ ಜ್ಞಾನ ।
ತ್ರಿತಯಂ ಸಹಜಂ ಮತಿ ಶ್ರುತಾವಧಿಯೆನೆ ತ ॥
ನ್ಮತಿಯುಂ ಶ್ರುತಮುಂ ಬೋಧೋ ।
ದ್ಗತಿಯುಂ ಬಣ್ಣಿಸುವೆನೆಂಬ ನುಡಿ ಪುನರುಕ್ತಂ ॥ ೧೨

ಮತ್ತಂ ನಿತ್ಯನಿಸ್ವೇದವೃತ್ತಿಯುಂ, ಸಕಳಶಾರೀರಮಳವಿಹೀನತ್ವಮುಂ, ಶುದ್ಧಧವಳರುಚಿರತೆಯುಂ, ಸಮಚತುರಶ್ರಸಂಸ್ಥಾನಪ್ರಕೃತಿಯುಂ, ವಜ್ರವೃಷಭನಾರಾಚಖಚಿತಶರೀರಸಂಧಿಸಂಧಾನಸಂಪತ್ತಿಯುಂ, ತ್ರಿಲೋಕಲೋಚನಮನಃಪ್ರಹ್ಲಾದಸಂಪಾದನಸಮರ್ಥಸೌಂದರ್ಯಮುಂ, ಸಂಮಿಳಿತಸಕಳಸೌರಭಪ್ರಭಾವಾಭಿನವಬಂಧುರಸೌಗಂಧ್ಯಮುಂ, ಸ್ವಸ್ತಿಕಾಂಕುಶತಿಳಮಸೂರಿಕಾದ್ಯಷ್ಟೋತ್ತರಶತಲಕ್ಷಣನವಶತವ್ಯಂಜನೋಪರಂಜಿತಾಗಣ್ಯಸೌಲಕ್ಷಣ್ಯಮುಂ, ಮೃದುಮಧುರಗಂಭೀರೋದಾರಪ್ರಿಯಹಿತವಚನವೈಚಿತ್ರ್ಯಮುಂ, ಪ್ರತಿಹತಾನಂತವೀರ್ಯಗುಣಮುಮೆಂಬ ದಶವಿಧಸಹಜಾತಿಶಯಸಂಪನ್ನಮುಂ, ಪವನಪಿತ್ತಪೀನಸಾಸತ್ವಮಸಂಭಾವನಾಮಯವಿಜಯನೋಕಮರ್ಪಚಕಯಾದ್ಯುಪಘಾತವ್ಯಪೇತಮುಂ, ಅಶೇಷವಿಷಪಾಷಾಣಕಾಷ್ಟಕಂಟಕಾಯುಧಾಗ್ನಿವಾತವರ್ಷಶೀತಾತಪಾದಿಬಾಧಾನಿರ್ಭೇದ್ಯಮುಂ, ನಿರತಿಶಯೇಂದ್ರಿಯಾತೀಂದ್ರಿಯಾರ್ಥಸಮುಪಗತಾಭ್ಯುದಯನಿಶ್ಶ್ರೇಯಸಸುಖಸಾಧನಮುಂ, ಪಂಚಾಶದುತ್ತರಚಾಪಪರಿಮಿತೋತ್ಸೇಧಮುಂ, ನಿರಾಕೃತತುಷಾರಗೋಕ್ಷೀರಹಾರಕಾಂತಿಸಂತಾನಧವಳರುಚಿನಿಚಿತಮುಂ, ದಶಲಕ್ಷಪೂರ್ವಪರಿಮಿತಾಯುಷ್ಯಮುಮಪ್ಪ ಚರಮಪರಮೌದಾರಿಕಶರೀರಮಂ ತಳೆದು ಎರಡು ಲಕ್ಕೆಯುಮಯ್ವತ್ತು ಸಾಸಿರ ಪೂರ್ವಂ ಕುಮಾರಕಾಲಂ ನೆಱೆದುದೆಂಬಂದದಿನಿರೆ

ನಗೆಗಣ್ಗಳ್ ಸೋಲವಂ ಕೈರವದೊಳೊಡರಿಸಲ್ ಸ್ಮೇರನೀರೇಜದೊ
ಳ್ಪಂ। ಮೊಗಮಿತ್ತೊಪ್ಪಲ್ ಮೊಗಂ ಪೆ ರುರವುರದೆಗೊಳಲ್ ಶ್ರೀಯುನಿಂದು
ಪ್ರಭಾಶೋ॥ ಭೆಗೆ ಮೆಯ್ ಮೆಯ್ಸ್ಪರ್ಚಲ್ಕೈರಾವತಕರಪರಿಘಾಕಾರವಂ
ಕೈಕೊಳಲ್ವುಂ। ಬಗೆವನ್ನಂ ಯೌವನಶ್ರೀ ಪಡೆದುದು ಪರಮೇಶಾಂಗ
ಮಂಪ್ರೋರ್ದ್ದಿ ಚೆಲ್ವಂ॥ ೧೩

ಉದಯದಿನಂ ಸಮಗ್ರಕರವೃತ್ತಿಯನೆಯ್ದಿದ ಶಕ್ತಿಗೆ ಪಾರಿಜಾ।
ತದ ಸಸಿ ಚಾರುವೃತ್ತತೆಯನಾಂತೆಸಕಂ ಶಿಶುಭಾವದಿಂದು ಮಾ॥
ಣದೆ ಸಕಳತ್ವಮಂ ತಳೆದ ಚೆಲ್ವಿನಿತುಂ ತನಗಾದುದಾವಗಂ।
ಪುದುವೆನೆ ದೇವನೇಂ ನೆಱೆದ ಜವ್ವನದೊಪ್ಪಮನಪ್ಪುಕೆಯ್ದನೋ॥ ೧೪

ಒಡವಂದುವು ಮಱುಭವಮಂ।
ಬಿಡದಹಮಿಂದ್ರತೆಯ ಶೈಲಿಯುಂ ಮೆಯ್ವೊಳಗುಂ॥
ಗಡಣದಿನೆನೆ ವಿಮಳತೆಯುಂ।
ಪಡೆದುದು ತದ್ರಾಜಸುತನ ಮನಮುಂ ತನುವುಂ॥ ೧೫

ಪೊಸಮುತ್ತಿಂ ಸಮೆದಂತೆ ನುಣ್ಬಳಿಕಿನಿಂ ಗೆಯ್ದಂತೆ ಕರ್ಪೂರದಿಂ।
ದೆಸೆಯಾಚ್ಛಾದಿಸಿದಂತೆ ಕೋಮಳಮೃಣಾಳೀಕಾಂಡದಿಂ ಮಾಡಿದಂ॥
ತೆ ಸುಧಾಂಭೋನಿಧಿಫೇನದಿಂ ನೆಱೆಪಿದಂತಾಶ್ಚರ್ಯಮಂ ಕಣ್ಗೆ ಪು।
ಟ್ಟಿಸಿ ಚಂದ್ರಪ್ರಭಮೂರ್ತಿಯೇಂ ತಳೆದುದೋ ಧಾವಲ್ಯಸಾಕಲ್ಯಮಂ॥೧೬

ಘನಭಂಗಂ ಗಾಂಗತೋಯಂ ಜಡವಿಕೃತಿಮಯಂ ಮೌಕ್ತಿಕಂ ದಕ್ಷಿಣಾ
ವ। ರ್ತನಯುಕ್ತಂ ಪಾಂಚಜನ್ಯಂ ಪ್ರಕೃತಿತರಳಮೂರ್ಜಾಂಬುದಂ
ಕಂಟಕವ್ರಾ॥ ತನಿರುದ್ಧಂ ಪುಂಡರೀಕಂ ಬಗೆವೊಡೆ ದಿಟಮೊಂದೊಲ್ಲದ
ನ್ಯೂನಶೋಭಾ। ಭಿನವಂ ತಾನೆಂದು ಚಂದ್ರಪ್ರಭನನೆ ಪರಿಪಾಂಡುಪ್ರಭಾ
ಲಕ್ಷ್ಮಿಸಾರ್ದ್ದಳ್॥ ೧೭

ಬಳಗಮುರ್ದ್ದುಱದಿರೆ ಶಶಿಮಂ।
ಡಳಮಂ ಕಂಡರಿಸಿ ಪಡೆದ ಪೊಸಸರಿಜೆನೆ ಕ॥
ಣ್ಗೊಳಸಿದುದಮಳದಯಾರಸ।
ಕಳಿತಮನೋವೃತ್ತಿಮೂರ್ತಿ ಚಂದ್ರಪ್ರಭನಾ॥ ೧೮

ವೃತ್ತಂ

ಭುವನೋದ್ಧಾರಕಮಪ್ಪ ತೋಳ್ಗನಿತು ನೀಳ್ಪಕ್ಷೋಣಿಲಕ್ಷ್ಮೀವಿಹಾ।
ರವಿಳಾಸೋಚಿತಮಪ್ಪುರಕ್ಕನಿತು ಪೆಂಪಾಶ್ಚರ್ಯಸೌಂದರ್ಯವ॥
ರ್ಯವಚಶ್ರೀಕುಳಸದ್ಮಮಪ್ಪ ವದನಾಂಭೋಜಕ್ಕನಿತೊಪ್ಪವೊ।
ಪ್ಪವುದೆಂಬಂತಿರೆ ರೂಪುಜವ್ವನದೊಳೀನೊಳ್ಪಂಗಡಪರ್ಗಾದುದೋ॥ ೧೯

ಇಲ್ಲಿಂದಿತ್ತಲ್ ಪೊರ್ದುಗೆ।
ಯೆಲ್ಲಿಯುದಭವಂಗಮೆನಗಮೆಂದಾಕೃತಿಯೊ॥
ಳ್ಪೆಲ್ಲಂ ನೆಲಸಿದುದೆನೆ ತವಿ।
ಲಿಲ್ಲದ ಚೆಲ್ವಿಂಗೆ ಚರಮತನು ತೊಡವಾಯ್ತೋ॥ ೨೦

ಅದಲ್ಲದೆಯುಂ

ಪರಿಪೂರ್ಣಂ ಜವ್ವನಂ ಸಂಗಡಿಸಿರೆ ಪರಮೌದಾರಿಕಂ ಮೂರ್ತಿ ದಿವ್ಯಾಂ।
ಬರಭೂಷಾಲೇಪಮಾಲ್ಯೋತ್ಕರವಿರಚಿತನೈಪಥ್ಯಸಂಭೂತಶೋಭಾ॥
ಪರಿತಂ ಬೇಱೊಂದಿದಾಪೂರಿತವಿಮಳಕಳಾಚಂದ್ರಬಿಂಬಂ ಸಮುದ್ಯ।
ತ್ಕರಜಾತಶ್ರೀಯುತಂ ತಾನೆನೆ ನಯನಚಕೋರಕ್ಕೆ ಮಾಡಿತ್ತಲಂಪಂ॥ ೨೧

ಕರತಳಕಾಂತಿಪಲ್ಲವಿತಪಾಂಡುಕಪೋಳೆಯರಶ್ರುಬಿಂದುವಿ।
ಸ್ತರತರಸೂಕ್ಷ್ಮಪಕ್ಷ್ಮಪುಟಿಕಾಂಜಳಿಯರ್ ಘನಸಾರರೇಣುಪಾಂ॥
ಡುರಿತನತಾಂಸೆಯರ್ ಶ್ವಸಿತಸಂಕಟಗದ್ಗದಿಕಾಪ್ರಪಂಚವಿ।
ಸ್ಫುರಿತಕುಚಾಗ್ರೆಯರ್ ಬಯಸಿ ಬಾಯ್ವಿಡುವರ್ ಕುರುವಂಶಮೇರುವಂ॥

ಎನಿತು ಸಿರಿಯೆನಿತು ಜವ್ವನ।
ಮೆನಿತ್ತು ಸೌಭಾಗ್ಯಮೀಶನೊಳ್ ಸಮನಿಸಿದ॥
ತ್ತನಿತೆ ಗುಣಮನಿತೆ ಸುಚರಿತ।
ಮನಿತ್ತೆ ಶೌಚಂ ಪೊದಱ್ದುದೇಂ ವಿಸ್ಮಯಮೋ॥ ೨೩

ಅದಲ್ಲದೆಯುಂ

ಕೇವಲಬೋಧಸಂಜನನದಿಂ ಸಮನಿಪ್ಪಮನಸ್ಕವೃತ್ತಿ ಮೇಣ್।
ದೇವನನಿಂದೆ ಪೊರ್ದಲನುಗೆಯ್ದುಪುದಕ್ಕುಮದೆಂಬ ಸಂದೆಗಂ॥

ತೀವೆ ಸುಹೃಜ್ಜನಂಗಳ ಮನಂಗಳೊಳಾವಗಮಾಜವಂಜವ ।
ಶ್ರೀವಿಭವಂಗಳೊಳ್ ತೊಡರ್ದು*ವಿಲ್ಲ ಮನಂ ಪಿರಿದಾಮಹಾತ್ಮನಾ ॥ ೨೪

ಶಾಂತಾತ್ಮರ್ ತರಳೆಗೆ ಸಿರಿ ।
ಗೆಂತೆಱಪರೊ ವಾಣಿಯಂತೆ ಚತುರಯಶಶ್ರೀ ॥
ಯಂತಮಳಮುಕ್ತಿಯಂತೇ ।
ಕಾಂತಮನೋಹರಿಯಿವಳ್ ದಲೆಂದೊಣರ್ದ*ಪರೇ ॥ ೨೫

ಅಂತಗಣ್ಯರೂಪಲಾವಣ್ಯತಾರುಣ್ಯಸೌಭಾಗ್ಯಭಾಗ್ಯಸಂಪತ್ಸಮೇತನಾಗಿ ಪ್ರಸುಪ್ತಮಕರಕೇತನವಿಜಯರತ್ನಾಕರದಂತಾಗಿಯುಮುಪೇತಮಾನ್ಮಥವಿಕಾರಂ ಕುಮಾರನಿರೆ ಕಂಡು ಮಹಾಸೇನಮಂಡಳೇಶ್ವರಂ ವಿಸ್ಮಯಂಬಟ್ಟು,

ಸಹಜಜ್ಞಾನಮನೋಹರಂ ಚರಮದೇಹಂ ಮೋಕ್ಷಲಕ್ಷ್ಮೀಕೃತ ।
ಸ್ಪೃಹನೀಜನ್ಮಸಮುದ್ರಮಂ ತರಿಯಿಸಲ್ಕರ್ಹತ್ತಪಃಪೋತಸಂ ॥
ಗ್ರಹಮುಂ ಭೋಂಕನೆ ಮಾಡಿದಂ ಬೞಿಕನಾಥಂ ಮತ್ಕುಲಂ ತತ್ಸಮಂ ।
ಮಹಿ ತರ್ಸಂದಮದಾವುದೋ ಮದುವೆಗಂ ಪಟ್ಟಕ್ಕಮಿನ್ನೀತನಂ ॥ ೨೬

ಎಂದು ಮನದೊಳೆ ಬಗೆದು ಸಕಲಸಾಮ್ರಾಜ್ಯಲಕ್ಷ್ಮೀದೇವತೋಪಮೆಯಪ್ಪ ಲಕ್ಷ್ಮಣಾಮಹಾದೇವಿಯು ಸಮೀಪಕ್ಕೆ ಬಂದು ತನ್ನ ಮನೋಗತಮನಱಿಪೆ ಬೞಿಯುಮಿರ್ವರುಂ ವಿನೋದಸ್ಫಟಿಕವಳಭಿಯೊಳ್ ಸಹಜಾಭ್ಯಾಸಮಂತ್ರತಂತ್ರಸಾಧ್ಯಾನೇಕವಿಧವಿಮಳಕಳಾಕುಶಳನುಂ ಕುಮಾರಪರಿವೃಢನುಮುತ್ತುಂಗಸಿಂಹಾಸನಾರೂಢನುಮಾಗಿರ್ದ ತೀರ್ಥಕರಕುಮಾರನಲ್ಲಿಗೆ ವಂದು ತದುಪವಿಷ್ಟವಿಷ್ಟರಾಭ್ಯರ್ಣಸೌವರ್ಣಪೀಠಮನಳಂಕರಿಸಿ ನಿಜಮನೋಗತೋದ್ಯೋಗಸಂಸಿದ್ಧಿಸಂಶಯಾಕುಳಿತಮಾನಸಂ ಪತ್ತೆಸಾರ್ದಮರಚಮರರುಹದೆರಲ ಪೊಯ್ಲಿನಿಂ ತೊನೆದು ಜೋಲ್ವ ಪಾರಿಜಾತದರಲ ಕರ್ಣಪೂರಮುಂ ಮಗುಳೆ ತಗುಳ್ಬಯುಂ ಗೀರ್ವಾಣವೈಣಿಕರ್ ಬಾಜಿಸುವ ಗಾಂಧಾರಗ್ರಾಮಮೂರ್ಛನೋಚ್ಚಾರಕ್ಕೆ ಮೆಚ್ಚಿ ಮಾಡುವ ಶಿರಃಕಂಪನದಿನೋರೆಪ್ರೋದ ಮಣಿಮಕುಟಮುಂ ಸಯ್ತು ಸೌರ್ಚಿಯುಂ ವಕ್ಷಸ್ಥಲೋಪಲಕ್ಷಿತಶ್ರೀವತ್ಸಲಕ್ಷಣಮುಂ ಮುಸುಂಕಿ ಪಸರಿಸಿರ್ದ ತೋರಮುತ್ತಿ

ನೈಸರಮನೊಯ್ಯನೋಸರಿಸಿಯುಂ ಆರೋಗಣೆಯ ಕಡೆಯೊಳಮರವಟು ಗಳವಟಯ್ಸಿದ ಕೆಯ್ಗಟ್ಟಿಯೊಳುಗುರ್ಗಳೊಳಗಾಱಿ ನಿಂದ ಹರಿಚಂದನರ ಜಮಂ ನಖಮುಖದಿನುದಿರ್ಚಿಯುಮಿಂತೆಂತಾನುಮನುವರ್ತನದಿನವಸರಂಬ ಡೆದು ಭೂಕಾಂತನೊಯ್ಯನಿಂತೆಂದಂ:—

ಒಗೆದುದು ಮುಕ್ತಾಫಳಮೆಂ ।
ಬ ಗೆಣನೆಯಿಂ ಶುಕ್ತಿಪ್ರಟಿಕೆ ಪೆಸರಾದುದು ನಿ ॥
ನ್ನ ಗುರುತ್ವದಿಂದೆ ನಿಜಪಿತೃ ।
ಯುಗಮೆಂದೆಮಗಾದುದಧಿಕಗೌರವಮಿಾಗಳ್ ॥ ೨೭

ಮತಿಯು ಪಸಣಿಂ ವಯೋಪ್ರ ।
ವೃದ್ಧತೆಯೆಮ್ಮೊಳ್ ಜ್ಞಾನವೃದ್ಧತೆಯೆ ನಿನ್ನೊಳ್ ಸಂ ॥
ಗತಿವೆತ್ತುದೆ ಪೇೞ್ಗುಮಾವಗ ।
ಮತಕ್ಕ್ಯಗುಣ ನೀತಿವೇೞ್ವುದಿದು ಸಲ್ಗೆ ವಲಂ ॥ ೨೮

ಅದುಕಾರಣದಿಂ,

ಕ್ಷಿತಿಗಿಕ್ಷ್ವಾಕುಕುಳಂ ಪವಿತ್ರತರಮಾದತ್ತಾದಿತೀರ್ಥೇಶಸಂ ।
ತತಿಯಿಂದಿಂದುವರಂ ತನೂಭವ ಭವತ್ಸಂತಾನದಿಂದಿನ್ನುಮೂ ॥
ರ್ಜಿತಮಪ್ಪಂತಿರೆ ಧರ್ಮಸಂತತಿನಿಮಿತ್ತಂ ನೀಂ ವಿವಾಹೋತ್ಸವೋ ।
ಚಿತಮಂ ಮನ್ನಿಪುದೆಮ್ಮುತೀರ್ವರ ಮನಕ್ಕಂ ಮಾೞ್ಪುದಾನಂದಮಂ ॥ ೨೯

ಸುತ ತಲೆವೀಸದೆ ಮತ್ಸಂ ।
ತತಿಜನ್ಮಾರ್ಥಮೆ ವಧೂಪರಿಗ್ರಹಣಪ್ರ ॥
ಸ್ತುತಮನೊಡಂಬಡುವುದು ತ ।
ತ್ಪ್ರತಿಷೇಧಂ ಪ್ರಾಪ್ತಿಪೂರ್ವಕಂ ತಾನಲ್ತೇ ॥ ೩೦

ಎನಲೊಡಂ

ಮೊಗದೊಳ್ ದೇವಂಗೆ ಮುಗು ।
ಳ್ನಗೆಯೊಗೆದು ಪಿತೃದ್ವಯಾಭಿವಾಂಛಿತಲತೆಗಂ ॥

ಬಗೆಯೆ ಮುಗುಳ್ನಗೆಯಾಯ್ತೆನೆ ।
ಸೊಗಯಿಸಿದುದು ತತ್ಫಲಪ್ರಸೂತಿನಿಮಿತ್ತಂ ॥ ೨೯

ಆಗಳ್

ವದನಮಲರ್ಗೆಸಿರದಿನಿತಿ ।
ರ್ಪುದುಮಪ್ರತಿಷಿದ್ಧಮನುಮತಂ ಭವತಿಯೆನಿ ॥
ಪ್ಪಿದನಱಿದರಸನುಮರಸಿಯು ।
ಮದೇಂ ಪ್ರಮೋದಪ್ರಕರ್ಷಮಂ ತಾಳ್ದಿದರೋ ॥ ೩೦

ಅಂತು ತಮ್ಮೊಳಿಚ್ಛಾವಿಸೌತಾನುಕಂಪಿಯುಮವಶಿಷ್ಟಸಂಸ್ಕೃತಿಸುಖಾನುಭವಕಾಲಪ್ರಮಾಣಾನುಸ್ಮೃತಿಯುಂ ಕಾರಣಮಾಗೊಡಂಬಟ್ಟುದನಱಿದು ಮನದ ಕೊನೆಯೊಳ್ ಗುಡಿಗಟ್ಟಿ ಮಱುದಿವಸಂ ಸಮುಚಿತಾವಸರದೊಳ್ ಅಶೇಷಕುಲವೃದ್ಧರೊಳಂ ಬುದ್ಧಿವೃದ್ಧರೊಳಮಾತ್ಮೀಯಸುತಮನೋಮದಗಜಾಳಾನಸ್ತಂಭೆಯುಂ ಭವಿಷ್ಯದ್ಭಾಗ್ಯೆಯುಮಾಮುಷ್ಯಾಯಣೆಯುಮಪ್ಪ ಕನ್ನೆಯಾವಳಕ್ಕುಮೆಂದು ನುಡಿಯುಲೊಡಮವರ್ ತನುತಮಗೆ

ನುತನಾಥವಂಶವಂಶೋ ।
ತ್ಥಿತಮುಕ್ತಾಪ್ರತಿಮೆ ವಿಜಯಕೇತುಮಹೀಭೃ ॥
ತ್ಸುತೆ ವನ್ಯಕುಮಾರಾನುಜೆ ।
ವಿತತಜಗನ್ಮಾನ್ಯೆ ರಾಜಕನ್ಯಾರತ್ನಂ ॥ ೩೩

ಅಮಳಗುಣನಿವಹನಿತ್ಯಾ ।
ಶ್ರಮತ್ವದಿಂ ಭುವನವಿದಿತನಿಜಜನ್ಮತೆಯಿಂ ॥
ಕಮಳಪ್ರಭೆಯೆನೆ ನೆಗಬ್ದಿಳ್ ।
ಕಮಳಪ್ರಭೆಯೆಂಬಳಮಳಕಮಳಾವಿಳೆಯರ್ (?) ॥ ೩೪

ಸ್ವಕುಳಪಯೋಧಿಚಂದ್ರಿಕೆ ಮನೋಜಜಗತ್ರಯಜೈತ್ರವೈಜಯಂ ।
ತಿಕೆ ಗುಣಮೌಕ್ತಿಕಪ್ರಸವಶುಕ್ತಿಕೆ ಮಾನನಿಧಾನದೀಪವ ॥
ರ್ತಿಕೆ ವಿಸರದ್ವಿಳಾಸರಸಪಾತ್ರಿಕೆ ರಾಜ್ಯರಮಾಶ್ರಯಾಬ್ಜಕ ।
ರ್ಣಿಕೆ ನಯನಾಳಿಜಾಳನವಮಾಳಿಕೆಯೆಂಬುದು ಲೋಕಮಾಕೆಯಂ ॥ ೩೫

ಎಂದು ಪೊಗೞ್ವುದುಮುತ್ಸವೋತ್ಸುಕಹೃದಯನಿದುವೆ ಮದುವೆಗೆ ಪದ ನೆಂದು ಪುರೋಹಿತಪುರಸ್ಸರಂ ಮಹತ್ತರರನಟ್ಟಿ ಕನ್ಯಾರತ್ನಮಂ ಬರಿಸಿ ಸ ಮನಂತರಂ ಲೇಖವಾಹಕರಂ ಶತಮುಖನಲ್ಲಿಗೆ ಕಳಿಸುವುದುಂ ತದಾಕರ್ಣ ನೋದೀರ್ಣರಾಗಸಾಗರಪರಿಪ್ಲುವಿತಾಂತರಂಗನಾಗಳೆ ಬಂದು ಚಂದ್ರಪುರ ಮುಮನರಮನೆಯುಮಂ ಪೊಕ್ಕು

ಕಲ್ಪಜಪತಿ ಬೆಸಸೆ ಮರು ।
ಜ್ಛಿಲ್ಪಿಗಳುದ್ವಾಹಗೇಹಮಂ ಸಮೆದರತಿ ॥
ಸ್ವಲ್ಪಸಮಯದೊಳೆ ವಿವಿಧವಿ ।
ಕಲ್ಪಕನದ್ರತ್ನಕೂಟಕುಳಸುಘಟಿತಮಂ ॥ ೩೬

ಮತ್ತಮಾಮಂದಿರಂ ಮಂದರದಂತಶೇಷವಸ್ತುವಿಸ್ತೃತಜಗತೀವಳಯ ಮಧ್ಯಾಸಿತಮುಂ, ದಿಶಾಪರಿಧಿಯಂತೆ ಭದ್ರಲಕ್ಷಣೋಪೇತನುತ್ತಮವಾರಣಾ ಷ್ಟಕಪರಿವೇಷ್ಟಿತಮುಂ, ಪಾಂಡುರಾಜಕುಲದಂತೆ ಪಂಚಜನಮನೋಹರ ಪ್ರಪಂಚಪಾಂಚಾಳಿಕೋದಂಚಿತಮುಂ, ಸುಕರಕವಿವಾಕ್ಯದಂತೆ ಸುವರ್ಣ ಘಟನಾಭಿತ್ತಿವಿಸ್ತಾರಮುಂ, ನಾಳಿಕೇರಫಲದಂತೆ ಖರ್ಪರುಚಿಲಸದ್ದಾರುಬಂ ಧಬಂಧುರಮುಂ, ಮರುತ್ತರಂಗಿಣೀಪ್ರವಾಹದಂತುತ್ತರಂಗಸಂಗತಲಕ್ಷ್ಮೀ ಸನಾಲಕ್ಷಿತಮುಂ, ಮಾನಸಸರೋವರದಂತೆ ನಿರಂತರಕಾಂತಧವಳಚ್ಛದಾ ವಳೀವಳಯಿತಮುಂ, ಸಾತ್ವಿಕಭಾವಸಮುದಯದಂತೆ ವಿಚಿತ್ರಸ್ತಂಭಶೋ ಭಾಸಂಭೃತಮುಂ, ಚರಣಾಭರಣದಂತೆ ರತ್ನಮಯತುಳಾಕೋಟಿಘಟಿತ ಮುಂ, ವಾರಾಶಿತೀರದಂತನಂತರತ್ನಕಾಂತಿಕಬಳಿತೋತ್ತುಂಗವೇದೀಸಮು ತ್ಪಾದಿತಕೌತುಕಮುಂ, ವನೌಷಧಿವರ್ಗದಂತೆ ಕನಕಭೃಂಗಾರಕದಂಬವಿಭ ವಾಲಂಬಮುಂ, ಅರಣ್ಯಾನಿಯಂತರ್ಜುನಾಕ್ಷತರುಚಿರಪಾತ್ರವಿಳಸನೋದಾ ತ್ತಮುಂ, ಮದಗಜಾಸ್ಯದಂತಗ್ರಪಲ್ಲವೋದಗ್ರಪೂರ್ಣಕುಂಭಾಭಿರಾಮ ಮುಂ, ಪ್ರಸೂತಿಕಾವಾಸಗರ್ಭದಂತೆ ಸದರ್ಭಕಾವಿರ್ಭಾವಮುಂ, ಗಗನ ವಳಯದಂತೆವಳಂಬಮಾನಧಾರಾವಳೀವಿಳಾಸಮುಂ, ಮರ್ತ್ಯಪ್ರಕೃತಿ ಯಂತೆ ಪರಿಚಿತಸತಾಕಾಸಮುದಯಮುಮಾಗಿ,

ಜನನಯನಪ್ರತ್ರಿಕಾನ ।
ರ್ತನಗೃಹಮಾನಂದಮಯಮನೋವೃತ್ತಿವಿವ ॥

ರ್ತನಗೃಹಮಂಭಿವರ್ಣನವಾ ।
ಗ್ವಿನೋದಗೃಹಮೆನಿಸಿದತ್ತು ಪರಿಣಯನಗೃಹಂ ॥ ೩೭

ತನ್ಮಧ್ಯದೊಳ್

ನವರತ್ನಕಾಂತಿಸಂತಾ ।
ನವಿರಾಜಿತಕನಕವೇದಿಯೊಳ್ ಪಳಿಕಿನ ಪ ॥
ಟ್ಟವಣೆ ನೆನೆಯಿಸಿದುದಾಮೇ ।
ರುವ ಮೇಖಳೆಯಲ್ಲಿ ಪ್ರೊಳೆವ ಪಾಂಡುಕಶಿಳೆಯಂ ॥ ೩೮

ನಳನಳಿಪ ಜಾಗದೊಪ್ಪುವ ।
ತಳಿ*ರ್ಗಳಸದ ಬೆಳಪ ರತ್ನದೀಪದ ಬಂದ ॥
ಕ್ಕಳವಟ್ಟ ವರ್ಣಪೂರದ ।
ತೊಳಗುವ ದರ್ಪಣದ ನೇರ್ಪು ನೆಲಸಿತ್ತದಱೊಳ್ ॥ ೩೯

ಗುಡಿಗಟ್ಟುವ ಕಡೆಯಿಕ್ಕುವ ।
ಸೊಡರ್ವೆ*ಳಗುವ ತೋರಣಂದಗುಳ್ಬುವ ಚಳೆಯಂ ॥
ಗುಡುವರಿಸಿರಿಗಂಪುಗಿದುವಲ (?) ।
ದೊರ್ಡಚರ್ಚವಮರಿಯರ ಕೆಯ್ತುಮಚ್ಚರಿಯದಱೊಳ್ ॥ ೪೦

ಸುೞಿವ ಸುರಯುವತಿಯರ್ಕಳ ।
ನೆೞಲೊಪ್ಪಿರೆ ರತ್ನಭಿತ್ತಿಭಾಗಂಗಳ್ ನಿ ॥
ರ್ಮಳಲಾಕ್ಷಾಚಿತ್ರಂಗಳ ।
ತಳೆದಂತಿರ್ದುವು ವಿವಾಹಗೇಹಾಂತರದೊಳ್ ॥ ೪೧

ಆಗಳವರ್ಗಳ್ ಮಜ್ಜನಾನಂತರಂ ವಧೂವರರಂ ನವ್ಯದಿವ್ಯಕುಸುಮವಸನಭೂಷಣಾನುಲೇಪನಂಗಳಿನಲಂಕರಿಸಿ ತಂದು ತದ್ವೇದಿಕಾಗೃಹದೊಳ್ ಮಹಾಸೇನಮಹೀಪತಿ ಪಾಣಿಗ್ರಹಣಕಲ್ಯಾಣಮನೊಡರ್ಚಲೊಡಂ

ಸ್ವಪ್ರಬಳಪುಣ್ಯದಿಂ ಚಂ ।
ದ್ರಪ್ರಭಸೆನನಾಗೆ ತತ್ಕರಸ್ಪರ್ಶದೆ ಯು ॥

ಕ್ತಪ್ರೀತಿವಿಕಸನಂ ಕಮ ।
ಳಪ್ರಭೆಗಾಯ್ತಖಿಳದೃಕ್ಛಿಳೀಮುಖಸುಖದಂ ॥ ೪೦

ಅನಂತರಮೊಂದೆ ಪಸೆಯೊಳ್ ಸುವಾಸಿನೀಜನಾರೋಪಿತಾದ್ರಾಕ್ಷತಮ
ನಾಂತು ಕುಳ್ಳಿರ್ದು

ನಿರುತಂ ಪ್ರಕೃತಿಪ್ರತ್ಯಯ ।
ಮೆರಡುಂ ಕೂಡಿಯೆ ಕೃತಾರ್ಥವೃತ್ತಿಯನಾಂಪಂ ॥
ತಿರೆ ಮದುವೆ ನೆರೆದು ವನಿತಾ ।
ವರರಿರ್ವರುಮಾಂತರಂದು ಚರಿತಾರ್ಥತೆಯಂ ॥ ೪೨

ಇಂದೆಮಗೆ ಪೊರೆವ ತಾಯುಂ ।
ತಂದೆಯುಮೊಳಗಾದರೆಂದು ನೋಡಿದುದತ್ಯಾ ॥
ನಂದದೆ ಪರಿಜನಮುಂ ಪ್ರಜೆ ।
ಯುಂ ದಂಪತಿಗಳನನೂನಮಂಗಳಯುತರಂ ॥ ೪೪

ಸುರಗೀತಂ ಮರ್ತ್ಯಗೀತಂ ಸುರಸಮುದಯವಾದ್ಯಂ ನೃಸಂದೋಹವಾದ್ಯಂ।
ಸುರಕಾಂತಾನಂದನೃತ್ಯಂ ಮನುಜಮುದನತೀಹರ್ಷನೃತ್ಯಂ ಸಮಂತಾ ॥
ಗಿರೆ ಬೇಱೊಂದಿಂತಿದಕ್ಕುಂ ಕುತಪಜನನಿಧಾನಂ ದಲೆಂಬಂತಿರುರ್ವೀ ।
ಶ್ವರಗೇಹಂ ವರ್ಯತೂರ್ಯತ್ರಯಮಯಮೆಸೆದತ್ತಾಗಳಾಶ್ಚರ್ಯಭೂತಂ॥

ಕನಕಾಮತ್ರಂಗಳೊಳ್ ತೀವಿದ ಮಣಿಗಣಕರ್ಪೂರಕಸ್ತೂರಿಕೋಪಾ।
ಯನಮಂ ದೇವೇಶದೇವೀಪ್ರತತಿಗೆ ಪದೆಪಿಂ ಲಕ್ಷ್ಮಣಾದೇವಿ ಭೂಭೃ ॥
ದ್ವನಿತಾನೀಕಕ್ಕನೂನೋತ್ಸವಮೊದವೆ ಶಚೀದೇವಿಯಿಾವಾರ್ಪಿನೊಪ್ಪಂ ।
ಮನುಜರ್ಗಂ ಸಗ್ಗಿಗರ್ಗಂ ಸಮನಿಸಿತಿದಪೂರ್ವಂ ಮನಕ್ಕೆಂಬಗುರ್ವಂ॥

ವಿರಚಿಸುವಳ್ ಸಮಂತುಚಿತಮಂಗಳಮಂ ಶಚಿ ನಾಕಿನಾಯಕಂ ।
ಪರಿವೆಸಗೆಯ್ವನುಬ್ಬರದ ನಿಬ್ಬಣಿಗರ್ ಸುರರಸ್ತು ಕಾರದೊಳ್ ॥
ನೆರಪಿದ ವಸ್ತು ಕಲ್ಪಕುಜಪಲ್ಲವಪುಷ್ಪಫಳಾಳಿಯೆಂದೊಡಿಂ ।
ಪರಿಣಯನಪ್ರಮೋದಮುದಮಾನುಷಮಲ್ಲವೆ ದೇವದೇವನಾ ॥ ೪೭

ಆವಿವಾಹೋತ್ಸವಾನಂತರಂ ಮತ್ತೊಂದು ಶುಭದಿನಮುಹೂರ್ತದೊಳ್

ಕಮಳಪ್ರಭೆಗೀಗಳೆ ಸಮ ।
ತಿ ಮಾೞ್ಪೆನೆನ್ನಗ್ರತನಯನೊಳ್ ರಾಜ್ಯಶ್ರೀ ॥
ರಮಣಿಯುಮಂ ನೆರೆಪುವೆನೆಂ ।
ಬ ಮಹೋದ್ಯೋಗಮನೆ ಮನಕೆ ತಂದು ನರೇಂದ್ರಂ ॥ ೪೮

ಜನನಸ್ನಾನಕ್ಕಮಾಯ್ತಗ್ಗಳಮೆನೆ ಪರಮೋತ್ಸಾಹದಿಂ ಪೊಂಗಿ ಗಂಗಾ।
ದಿನದೀತೋಯಂಗಳಿಂ ಮಂಗಳಪಟಹರವಂ ಪೊಣ್ಮೆ ದೇವಂಗೆ ತಾಂ ಮ॥
ಜ್ಜನಮಂ ಮುಂ ಮಾಡಿ ಸಿಂಹಾಸನದೊಳಿರಿಸಿ ಸಂಯೋಜಿತಾಶೇಷಸಾಮ್ರಾ।
ಜ್ಯನಿಯೋಗಂ ಪಟ್ಟಮಂ ಕಟ್ಟಿದನಿರದೆ ಮಹಾಸೇನನಿಂದ್ರದ್ವಿತೀಯಂ ॥

ಅಂತು ಜನಕನುಪರೋಧದಿಂದಾಧಿರಾಜ್ಯಸೌಖ್ಯಾಭಿಮುಖ್ಯಮಂ ತಳೆದ ನಿಜಪತಿಯ ಪದತಳಂಗಳಂ ಪ್ರಣಯಮಾನಪ್ರಸಾದನಸಮಯದೊಳ್ ಕಮಳಪ್ರಭಾಮಹಾದೇವಿಯುತ್ತಂಸಕನಕಪದ್ಮಾಸನದೊಳ್ ವಿರಚಿಸಿಯುಂ, ಆಮನೋಹರಿ ಮನೋಹರನಯನಪಾರಿಮಂಗಳನನಂಗಕೇಳಿಯೊಳ್ ಲಾವಣ್ಯರಸಭರಿತಗಂಭೀರನಾಭೀಕೂಪದೊಳ್ ನೀಡುಮೋಲಾಡಿಸಿಯುಂ, ಆವಿಳಾಸವತಿ ಜಗತ್ಪತಿಯ ಭುಜಭುಜಗಂಗಳಂ ಕೋಮಳಾಂಗಮಳಯರುಹಶಾಖೆಯುಂ ಸುತ್ತಿ ಪತ್ತುವಿಡದಂತಾಗೆ ನಿಯಮಿಸಿಯುಂ, ಆನವೀನಯೌವನಾಳಂಕಾರೆ ಸಹಜಸೌಂದರ್ಯಾಳಂಕಾರನ ವಿಶಾಳವಕ್ಷಃಪ್ರದೇಶಪದ್ಮಾವಸಥಮಂ ಸಮುತ್ತುಂಗಕುಚಯುಗರಥಾಂಗಮಿಥುನಕ್ಕೆ ಪೆರ್ಚಿದಲ್ಕೆಯಿನಿರ್ಕೆದಾಣಂಮಾಡಿಯುಂ, ಆಮೃದುಮಧುರಭಾಷಿಣಿ ಗುಣಭೂಷಣನ ಕರ್ಣಯುಗ್ಮಮಂ ಸೌಹಾರ್ದವಚನಾನುವಿದ್ಧಸಂಭಾಷಣಮಣಿಮಯಾವತಂಸಗಳಿನಳಂಕರಿಸಿಯುಂ, ಆಲಾವಣ್ಯರಸತರಂಗಿಣೀತರಂಗಭಂಗುರಭ್ರೂವಿಭ್ರಮೆ ವಿಗತಾಶೇಷವಸ್ತುವಿಷಯಭ್ರಮನ ನಿರ್ಮಳಮನೋಮಹಾರ್ಣವಮನಾತ್ಮೀಯಗುಣಸಮಸ್ತವಸ್ತುನಿಕರಕ್ಕೆ ಸಲೆ ನೆಲೆಮಾಡಿಯುಂ, ಸಮಸಮಾಯೋಗಸಂಭವಸುಖೋನ್ಮುಖರನೇಕದಿನಂಗಳಂ ನಿಮಿಷಮಾತ್ರಂಗಳಾಗಿ ಕಳಿಪುತ್ತುಮಿರೆಯಿರೆ,

ಹಿಮಕಿರಣಂಗಮೊಂದಿದ ಲಸತ್ಕಳೆಗಂ ಪ್ರಕಟಪ್ರಭಾವಮ ।
ಪ್ಪಮೃತಮೆ ಪುಟ್ಟುವಂದದೆ ಜಗತ್ಪತಿಗಂ ಸತಿಗಂ ಧರಾಧರ ॥

ಕ್ಷಮನೆನೆ ಪುಟ್ಟಿದಂ ಕ್ರಮಸಮಾಕೃತಿರೂಪವಿಳಾಸಯೌವನೋ ।
ದ್ಗಮನಭಿಮಾನಮೇರು ವರಚಂದ್ರಸಮಾಹ್ವಯನಂದು ನಂದನಂ ॥ ೫೦

ಆಕುಮಾರಂಗೆ ಪರಮೇಶ್ವರಂ ಯುವೇಶ್ವರಪದವಿಯಂ ದಯೆಗೆಯ್ಯೆ

ಜನಕಂಗೆ ವೃದ್ಧರಾಜತೆ ।
ತನಗಧಿರಾಜತೆ ಸುತಂಗೆ ಯುವರಾಜತೆಯಿಂ ॥
ತನುರೂಪಮಾಗಿ ಸಮನಿಸೆ ।
ವಿನುತಜಗತ್ತ್ರಿತಯಮಾಯ್ತು ರಾಜ್ಯತ್ರಿತಯಂ ॥ ೫೧

ಪ್ರಥಿತಾಮಳಚರಿತಂ ತ ।
ತ್ಪೃಥಿವೀಪತಿಯರಸುಗೆಯ್ಯೆ ಜನಮಾದುದು ಸ ॥
ತ್ಪಥವರ್ತಿ ಯಥಾರಾಜಾ ।
ತಥಾಪ್ರಜಾ ಎಂಬ ನೀತಿಯಂ ನೆನೆಯಿಪವೋಲ್ ॥ ೫೨

ಭೂತಾನವಕರಮಾದುದ ।
ಭೂತಾನವಕರಮುಮಾದುದಿಂತಿದು ಚಿತ್ರಂ ॥
ನೀತಿಯುತಮಾದುದೆಂದುಮ ।
ನೀತಿಯುತಮುಮಾದುದಖಿಳಪೂಜ್ಯನ ರಾಜ್ಯಂ ॥ ೫೩

ಪುಳಿನದೊಳ್ ವಿಯೋಗಂ ಕರಿ ।
ಯೊಳ್ ಪಾಂಶುಳಕೇಳಿ ಭೇರಿಯೊಳ್ ದಂಡಹತಂ ॥
ಸಳಿಳಾಶಯದೊಳ್ ಕುರವಾ ।
ಕುಳತೆ ದಿಟಂ ನಿಂದುವಂದು ಪೊರ್ದದೆ ಜನಮಂ ॥ ೫೪

ಚರರಿಲ್ಲದೆ ಪರನೃಪರಂ ।
ತರಂಗಳಂ ತಿಳಿದು ನೆಗಳ್ಪ* ಬಿನ್ನವಿಸದೊಡಂ ॥
ಪರಿಜನದ ಮನಮನಱಿದೀ ।
ವರಸುತನಂ ತದ್ವಿವೇಕನಿಧಿಯೊಳ್ ಸಹಜಂ ॥ ೫೫

ಮತ್ತಮಾಚಂದ್ರಪ್ರಭಾಧೀಶ್ವರನ ರಾಜ್ಯಚಂದ್ರಪ್ರಭಾಪ್ರಸರಂ ಕುರುಕುಳಗಗನತಳಮಂ ಬೆಳಗಿಯುಂ, ಸದ್ಧರ್ಮವಾರ್ಧಿಯಂ ಪ್ರವರ್ಧಿಸಿ

ಯುಂ, ದುಷ್ಕೃತಾಂಧಕಾರಸಂದೋಹಮನದಿರ್ಪಿಯುಂ, ಕುಮತಪಂಕೇಜಮಂ ಸಂಕೋಚಕ್ಕೆ ಸಲಿಸಿಯುಂ, ಭವ್ಯಕುಮುದಸಮುದಯಮನನುದ್ಬೋಧಿಸಿಯುಂ, ಪರಚಕ್ರಚಕ್ರಾನೀಕಮಂ ವಿಘಟಿಸಿಯುಂ, ಸೇವಕಚಕೋರನಿಕರಮಂ ತಣಿಪಿಯುಂ, ಪ್ರಜಾನಿಕರಸಕಳೌಷಧಿಸಂಕುಳಮಂ ಸಫಳಂಮಾಡಿಯುಂ, ಮಿತ್ರಪಾರ್ಥಿವಾಂತರಂಗಚಂದ್ರಕಾಂತಸಂತಾನಮಂ ಸಾರ್ದ್ರತೆಗೆ ಸಲಿಸಿಯುಂ ಇಂತವಿರುದ್ಧಮುಮತಿಪ್ರವೃದ್ಧಮುಮೆನಿಸಿ ಸಲಿಸುತ್ತುಮಿರೆ,

ಪರಮೇಶಂ ಜೀವಿತೇಶಂ ತಮಗೆ ದಿಟದಿನೆಂದುರ್ವೆ ಕಾಂತಾಜನಂ ಮ |
ತ್ತರುಹಂ ರಾಜ್ಯಾರ್ಹನೆಂದೊಲ್ದಿಳೆಗೆ ಧರೆ ಜಗದ್ಬಂಧು ಮದ್ಬಂಧುವೆಂದೊಂ ‖ ದಿರೆ ಹರ್ಷೋತ್ಕರ್ಷದೊಳ್ ಬಾಂಧವಸಮಿತಿ ಮನೋವೃತ್ತಿಗತ್ಯಂತಶೋಭಾ | ಕರಮಾಯ್ತಾಶ್ಚರ್ಯಲೀಲಾವಿಭವಮಭವಸಂಭಾವಿತಂ ರಾಜ್ಯಕಾಲಂ ‖ ೫೬

ಅಂತಾಱುಲಕ್ಕೆಯುಮಯ್ವತ್ತುಸಾಸಿರ ಪೂರ್ವಮುಮಿರ್ಪತ್ತುನಾಲ್ಕು ಪೂರ್ವಾಂಗಮುಂ ರಾಜ್ಯಕಾಲಂ ಸಂದುದೆಂಬಂದಿಂಗದೊಂದುದೆವಸಮತಿಚಿತ್ರಕೂಟಕೋಟಾಕೋಟಿವಿಷಮಿತಪಯೋದಸಥಮಪ್ಪ ಪರಿಷನ್ಮಂಟಪದ ಮಧ್ಯದಲ್ಲಿ

ಹರಿಪೀಠಮನೀಶನಳಂ |
ಕರಿಸಿದನುದಯಾದ್ರಿಯಂ ಸುಧಾಕರನೆಂತಂ ‖
ತಿರೆ ನಿರ್ಮಳಾಂಬರಾಳಂ |
ಕರಣಂ ಕಾಶ್ಮೀರಸಾರಸಂಧ್ಯಾರಾಗಂ ‖ ೫೭

ತ್ರಿಭುವನಚೂಡಾಮಣಿಯು |
ಪ್ಪಭವಂಗಾನಾಬೆನಲ್ತೆ ಚೂಡಾಮಣಿಯೆಂ ‖
ಬಭಿನವರಾಗೋದಯಮಂ |
ಬ ಭಂಗಿಯಿಂ ಮಕುಟಮಾಲ್ಯಮಣಿರುಚಿಯೆಸೆಗುಂ ‖ ೫೮

ಅಕಳಂಕನ ಸಹಜಚ್ಛವಿ |
ದ್ರ್ಯಕರ್ಣಪಾಳಿಕೆಗಳಲ್ಲಿ ತೊಳಗುವ ಮಾಣಿ ‖

ಕ್ಯಕನತ್ಕುಂಡಳರುಚಿ ಮುಖ ।
ಸಕಳೇಂದುಗೆ ಪಡೆದುನುದಯರಾಗಶ್ರೀಯುಂ ॥ ೫೯
ಐರಾವತಘನಕುಂಭಾ ।
ಕಾರಾಂಸಸ್ಥಳಿಗೆ ನಿಮಿರ್ದು* ಪಸರಿಸೆ ಮಣಿಕೇ ॥
ಯೂರಪ್ರಭೆಯುಭಿನವಸಿಂ ।
ದೂರಾರುಣಕಾಂತಿಯೆನಿಸಿ ಸೊಗೆಯಿಸಿತಾಗಳ್ ॥ ೬೦
ಜಗದಧಿಪತಿಯುಗಲ್ದು*ರದೊಳ್ ।
ಸೊಗಯಿಸುವ ಸಹಸ್ರಗುಚ್ಛಮಧ್ಯದ ಹರಿನೀ ॥
ಳಗಭಸ್ತಿ ತಿಂಬೆ ನಾಭಿಗೆ ।
ಜಗುನೆಯ ಸುಳಿಯೊಪ್ಪಮಾದುದೊಚ್ಚತನಾಗಳ್ ॥ ೬೧
ಎರಡುಂ ಕೆಲದೊಳಮಿರ್ದಮ ।
ರರಮಣಿಯರ್ ಬೀಸುವನುಳಚಮರರುಹಂಗಳ್ ॥
ಪರಿಕಲಿಸೆ ಮೇಗೆ ಪ್ರೋಲ್ತಂ ।
ಶರದದ ಮುಗಿಲೆಬಿಪುದಾರಶಾರಾಚಳಮಂ ॥ ೬೨
ಕಮಳಪ್ರಭೆವೆರಸಾತ್ಮ ।
ಪ್ರಮದೆಯುರಾಕಮಳೆವೆರಸು ಜಳದೇವಿಯುರಾ ॥
ದಮೆ ಬಳಸಿದಂದದಿರೆ ಸಿತ ।
ಕಮಳಾಕರಮುಂ ಗುಣಾಕರಂ ನೆನೆಯಿಸಿದಂ ॥ ೬೩
ಚರಮಾಂಗನಂಗಕಾಂತಿ ।
ಸ್ಫುರಿತಜ್ಯೋತ್ಸ್ನಪ್ರವಾಹದೊಳ್ ಮನದೊಲವಿಂ ॥
ಪರಿವರಿಯಾಡಿದುದಂತಃ ।
ಪುರಾಂಗನಾನಯನಚಳಚಕೋರೀನಿಚಯಂ ॥ ೬೪
ಆಪರಿಷಲ್ಲಕ್ಷ್ಮಿಯ ಹಾ ।
ರೋಪಮಮಾಗೆರಡು ಕೆಲದೊಳಂ ತರದಿಂದಂ ॥
ಭೂಪಾಳಕರಿರೆ ಸಕಳಗು ।
ಣೋಪೇತಂ ನಡುವೆ ತರಳಮಣಿಗೆಣೆಯಾದಂ ॥ ೬೫

ಅಂತುಭಯಪಾರ್ಶ್ವದೊಳಂ ಮಹಾಸೇನಮಹಾರಾಜನುಂ ವರಚಂದ್ರ ಕುಮಾರನುಂ ಮೊದಲಾಗೆ ಮೂರ್ಧಾಭಿಷಿಕ್ತಮಕುಟಬದ್ಧಮಹಾಸಾಮಂತಮಂತ್ರಿಮಹತ್ತರಾದಿಗಳ್ ಯಥೋಚಿತಾಸನಂಗಳೊಳಿರೆ

ಪರಮನ ದಯಾವಳೋಕನ ।
ವರಚಂದ್ರಿಕೆಯಲ್ಲಿ ಸಿರಿಯ ಪಿಡಿವಂದದೆ ಭೂ ॥
ವರ ಕರಕಮಳಂ ಮುಗಿದುವು ।
ಪರಿಗತಕಂಕಣರವಾಳರಝಂಕರಣಂಗಳ್ ॥ ೬೬

ಮತ್ತಂ

ಕವಿತಾಕೌಶಲಮುಂ ಗಮ ।
ಕಿ........ಯುಂ ವಾದಪಟುತೆಯುಂ ವಾಗ್ಮಿಳಮುಂ ॥
ಕವಿಗಳ ವಾಗ್ಮಿಗಳ ಗಮಕಿ ।
......ಗಳ ನೆರವಿ ಮೆಱೆಯಲಿರ್ದತ್ತದಱೊಳ್ ॥ ೬೭

ತೂರ್ಯತ್ರಿತಯದ ನಿಜಚಾ ।
ತುರ್ಯಮನಂತಲ್ಲಿ ಮೆಱೆದು ಮೆಚ್ಚಿಸುವೀತಾ ॥
ತ್ಪರ್ಯದಿನಮರ್ತ್ಯಕುತಪಂ ।
ಪರ್ಯಾಯದಿನಿರ್ದುದಭವನಾಸ್ಥಾಯಿಕೆಯೊಳ್ ॥ ೬೮

ಇರದೆ ನುಡಿಗೊರ್ವೆ ಝಂಕರಿ ।
ಪರಸುಗಳ ನಿಯೋಗಮಂ ನಿವೇದಿಸುವ ಮಹ ॥
ತ್ತರರ ಪೊಗಬ್ಬಿರ್ಥಿಗಳ ಚ ।
ಪ್ಪರಿಸುವ ಪಡಿಯಱರ ನಿನದಮೊದವಿದುದಾಗಳ್ ॥ ೬೯

ಮೃಗಮದದ ಹಿಮದ ಕುಂಕುಮ ।
ದಗುರುವ ಚಂದನದ ಸಾರಸೌರಭಮಂ ಬಾ ॥
ರ್ತೆಗೆಯದೆ ದೇವನ ದಿವ್ಯಾಂ ।
ಗಗಂಧಮಂ ಬಳಸಿ ಸುೞಿದುದಳಿನಿಕುರುಂಬಂ ॥ ೭೦

ಜಗದೀಶಾಂಗಮಯೂಖಚಂದ್ರಿಕೆಯನೆಂದೊರ್ವೊರ್ವೆ ಮಿಶ್ರೀಭವ ।
ನ್ಮೃಗಭೂಚಂದನಪುಷ್ಪಸೌರಭಮನೆಂದೊರ್ವೊರ್ವೆ ಗೀರ್ವಾಣಮಂ ॥

ದಿಗಣಸ್ತೋತ್ರವಿಚಿತ್ರನಿಸ್ಸ್ವನವುಸಂದೊವೊರ್ವೆರ್ ಸಾಕ್ಷ್ಯರ್ಯವೋ ।
ನುಗುಱುತ್ತಿರ್ದುದೊ ತತ್ಸಭಾಸದನಮೂತ್ಮದ್ವಾರನಕ್ತ್ರಂಗಳುಂ ॥ ೭೧

ಅಂತು ಸಕಳಸಾಮ್ರಾಜ್ಯಲೀಲಾವಿಭವಕ್ಕಿದುವೆ ಸೀಮೆಯೆಂಬಂತೆಷ್ಟ ವೂದ ಬಹ್ಯೋಲಗದೊಳಿರ್ಪನ್ನೆಗಂ

॥ ಉತ್ಸಾಹವೃತ್ತ ॥

ಉಡುಗಿದುರದ ತೂಪ ಸಿರದ ಸೆರೆ ಪೊದಟ್ದಿ ಮೆಯ್ಯ್ಯ ಕೋ ।
ಲ್ವಿಡಿದ ಕೆಯ್ಯ್ಯ ತಲೆಯು ನರೆಯು ಮೊಗದ ತೆರೆಯು ಭಂಗಿ ಮು ॥
ಪ್ಪಡಸಿದಂದವುಂ ಜಲಕ್ಕನಱಿಪೆ ಬಿಡದೆ ಪ್ರಯ್ಯಲಂ ।
ಕುಡುತುವೊರ್ವನೋಲಗಕ್ಕೆ ಬಂದನಂದನಿಂದ್ಯನಾ ॥ ೭೦

ಬಂದು ಪೊಡೆವಟ್ಟು ಬಱಿಕಿಂ ।
ತೆಂದಂ ನಿನಗಿಂದಿನಿರುಳೊಳಂತಕನಿಂದೆ ॥
ಯ್ತಂದಪ್ಪುದು ಬಾಧೆ ತಪ್ಪದಿ ।
ದೆಂದು ನಿಮಿತ್ತಜ್ಞನುಸಿರ್ದನಧಿಕಪ್ರಜ್ಞಂ ॥ ೭೩

ಮತ್ತಂ

ಚಿಕ್ಕನೆ ಬಲ್ಲಿದರಂ ಮಱೆ ।
ವೊಕ್ಕೊಡದೋಸರಿಸಿ ಪೋಕುಮಲ್ಲದೆ ನೀನಿಂ ॥
ತಕ್ಕಟ ಱಿಕ್ಕಟಮಿದೊರ್ಡೆ ।
ಪಕ್ಕಕ್ಕೊಳಗಪ್ಪೆ ಪಸಿದು ಮಸಗಿದ ಜವನಾ ॥ ೭೪

ಎಂದಿದುಮ್ರವುಂ ಪೇಟ್ದೊಡದುಕಾರಣದಿನೇಟ್ತಂದೆಂ–

॥ ಉತ್ಸಾಹವೃತ್ತ ॥

ಅಂತಕಾಂತಕಂ ದಿಟಕ್ಕೆ ದೇವ ನೀನೆ ಭಾವಿಪಂ ।
ದಂತಱಿಂದೆ ಕಾವುದೆನ್ನನಾವ ತೆಱದೊಳಂ ಭಯ ॥
ಭ್ರಾಂತನಂ ಬಱಿಕ್ಕಮೆಂತುಮಾಪದರ್ಥಯುಕ್ತರೊಳ್ ।
ಶಾಂತಿಯುಂ ಸನಂತು ಮಾಡುವುದು ಗುಣಂ ಮಹತ್ತರಂ ॥ ೭೫

ಎಂದು ನುಡಿದದೃಶ್ಯಮಪ್ಪುದುಂ ವಿಸ್ಮಯರಸೈಕಭಾಜನಂ ಸಭಾಜನಂ

ದೇವಿದೇನೆಂಬುದಂ ಬೆಸಸಿಮೆನೆ ದರಸ್ಮಿತಾನನಂ ಜ್ಞಾನತ್ರಯನಿಧಾನನಿಂ
ತೆಂದಂ:—

ಧರ್ಮರುಚಿಯೆಂಬನಾಸೌ |
ಧರ್ಮೇಂದ್ರನ ಬೆಸದಿನೀಜರಾಜರ್ಜರವಂ ॥
ನಿರ್ಮಿಸಿ ಶರೀರವಂ ತಳೆ |
ದೊವೊರ್ದಲೊಳೆ ಮೃತ್ಯುಭೀತನಾಗನಮರ್ತ್ಯರ್ಗಂ ॥ ೭೬

ಬಂದಂ ವಿಷಯವಿರಕ್ತತೆ |
ಯುಂ ದಿಟದಿಂದೆವಗೆ ಮೂಪ್ಪಿ ಬಗೆ ಕೆಯ್ಮ್ಗೆ ತಾ ॥
ನೆಂದವಧಿಬೋಧದಿಂದಱಿ |
ದಂದು ಸಭಾಸದರ್ಗೆ* ಪೇೞ್ದು ಕಳಿಪಿದನವರಂ ॥ ೭೭

ಅಂತು ವಿಸರ್ಜಿತಸಭಾಸದನನುಂ ಪರಮವೈರಾಗ್ಯಾಸ್ಪದನುಮಾಗಿ
ತನ್ನೊಳಿಂತೆಂದಂ:—

ಭೋಗಾನುಭವಕ್ಷಮತೆಯು |
ದಾಗದು ಜರೆಯಿಂದೆ ತನಗೆ ಮಱುಕಂ ಮನದಿಂ ॥
ಪೋಗದು ನೆನೆಯದು ಜವನು |
ದ್ವೇಗಮುಮಂ ರಾಗಿ ಜನದ ಗತಿವಿಪರೀತಂ ॥ ೭೮

ವಳಿ ತೆರೆ ಪಳಿತಂ ನೊರೆಯು |
ಚ್ಚಳಿಪ ಘನಶ್ವಾಸಮದುವೆ ಘೋಷಂ ಜರೆ ತಾಂ ॥
ಜಳನಿಧಿಯೆನೆ ಯಮಬಡವಾ |
ನಳಂಗೆ ಜೀವನಮೆ ಪೀರ್ವ ಜೀವನಮಲ್ತೇ ॥ ೭೯

ತನಗಂ ಗೌರವಕಂ ಸಂ |
ಹನನಕ್ಕಂ ಸಾಧುವೃತ್ತಿಗಂ ವಿಗ್ರಹಕಂ ॥
ನೆನೆವೊಡನುಗ್ರಹಕಂ ಮೇ |
ಳನಮೆತ್ತಣದೊಡಲೊಳೊಳ್ಪನಱಸುವರಜ್ಞರ್ ॥ ೮೦

ಪಂಚೇಂದ್ರಿಯ ವಶದಿಂದಂ |
ಪಂಚಜನಂ ಜನ್ಮಜಳಧಿಯೊಳ್ ಜನಸಮುಮಂ ॥

ಪಂಚತೆಯುಮನೆಯ್ದುತ್ತುಂ ।
ಪಂಚಮಗತಿಪಥಮನೆಂತುಮೆಯ್ದದೆ ಪೋಕುಂ ॥ ೮೧

ಪರಿಜನಫಳವತ್ಕ್ಷೇತ್ರೋ ।
ತ್ಕರಬಂಧುಸಮೂಹಭವನಮಹಿಳಾವಳಿಯಿಂ ॥
ದುರಂತರಪವರ್ಗಚಿಂತಾ ।
ಪರಿಗತನಪವರ್ಗಚಿಂತೆಯುಂ ಮಾಡುಗುಮೇ ॥ ೮೨

ಅವುದಱೊಳತಿಪ್ರಿಯಮನುಂ ।
ಜೀವಂ ಮಾಡಿದಪುದೊಳ್ಳಿತೆಂದಱಿಯದೆ ಮು ॥
ತ್ತಾವಸ್ತುವೆ ತನ್ನಯ ದುಃ ।
ಖಾವನಿಜದ ಬೀಜಮಕ್ಕುಮಿದು ನಿರ್ವ್ಯಾಜಂ ॥ ೮೩

॥ ತ್ರಿಪದಿ ॥

ಕರ್ಮರಾಜನವಿಡಿದು ಧಾರ್ಮಿಕಂಗೊಳಗಹರು ।
ಧರ್ಮರಾಜನನಗಲ್*ದು ಧರೆಯಲ್ಲಿ ಯುಕ್ತಮದ ।
ಧರ್ಮಕ್ಕೆ ಕುದಿವರಿದು ಚಿತ್ರಂ ॥ ೮೪

ನರರ್ಗೆ ಭಾವಿಸೆ ಪೋತಪರಿಕರಮೆನಿತು ಕಾಂ ।
ಪಿರಿದಾದುದನಿತೆ ಮುಳುಂಗುಗುಂ ಜನ್ಮಸಾ ।
ಗರದೊಳಗಿಂತಿದು ಚಿತ್ರಂ ॥ ೮೫

ಓವೋವೊ ಜನ್ಮಜಾಳಂ ।
ಭಾವಿಪೊಡೇನರಿದೊ ಸಿಲ್ಕಿ ಸಿಡಿಮಿಡಿಗೊಳ್ವರ್ ॥
ಧೀವರರುಮೆಂದೊಡೀಜಡ ।
ಜೀವಂಗಳ್ ತೊಡರ್*ದು ಮಿಡುಕುತಿರ್ಪುದು ಪಿರಿದೇ ॥ ೮೬

ನೆರಪಿದ ಪುಣ್ಯದ ಪಾಪದ ।
ಪರಿಪಾಕಮೆ ತನಗೆ ತವದ ಪಾಥೇಯಮದಾ ॥
ಗಿರೆ ತಿರಿವುವು ಜೀವಂ ಸಂ ।
ಸರಣಾಟವಿಯೊಳಗೆ ತಪ್ಪಿ ನಿರ್ವೃತಿಪಥಮಂ ॥ ೮೭

ವ್ಯಾಧಿವ್ಯಾಧಭಯಂಕರಂ ಯಮದವಜ್ವಾಳಪ್ರತಾಪೋದ್ಧೃತಂ ।
ಕ್ರೋಧಾಶೀವಿಷಭೀಷಣಂ ಸ್ಮರಮೃಗಾರಿಕ್ರೂರಮನ್ಯಾಸದು ॥
ಬೋರ್ಧಾಗಾಧಪ್ರರಾಣಕೂಪವಿಷಮಂ ತಾನೆಂದೊಡೇನುಂಬೆ ನಿ ।
ರ್ಬಾಧಾವಸ್ಥಿತಿ ದೇಹಿಗಳ್ಗೆ ಪಿಟದಿಂ ಸಂಸಾರಕಾಂತಾರದೊಳ್ ॥ ೪೮

ಕಱಿದ ಭವನಿಗಳದೊಳ್ ತೊಡ ।
*ರ್ದಱಿವಾನಸನಿಕರ್ಮಮಧಿಕನಿಕರ್ಮಮೆ ಪಿರಿದುಂ ॥
ಪುಱಿ ನೆಯ್ದ ನೆಯ್ಗೆಯೊಳ್ ಬಲ ।
ವಱಿದು ನೊಱಿಂ ಸಿಲ್ಕುಗುಂ ಗಜಂ ಸಿಲ್ಕುಗುಮೇ ॥ ೪೯

ಪೊಂದುವ ಪುಟ್ಟುವಾರ್ತ ಪರಿಣಾಮದೆ ವರ್ತಿಸುತಿರ್ಪ ದಂದುಗಂ ।
ಮೊಂದುದಱಿಂ ಚತುರ್ಗತಿಗಳೊಳ್ ಸುೞಿಗಾಳಿಯ ತೂಲದಂತೆ ಜ ॥
ಕ್ಕಂದೊಳದಂತೆ ಋಟಣದ ಗುಂಡಿಗೆಯಂತೆ ಕುಳಾಳಚಕ್ರದಂ ।
ತಿಂದುವರಂ ತೊಱಲ್ತುರುತುಮಿರ್ದದೆ ಸಾಲದೆ ಕರ್ಮಯೋಗದಿಂ ॥ ೫೦

ಎಂದು ನಿಶ್ರೇಯಸಶ್ರೀಸಮಾಶ್ಲೇಷಾಭಿಲಾಷನಾಗಿರ್ಪುದುಂ ಪ್ರೋಕ್ತನಿಜನ್ಮಪರಿಚಿತಾಗಮಸಾರಸರ್ವಸ್ವನಿರ್ವಿಕಲ್ಪರುಂ, ತೀರ್ಥಕರಪರಿನಿಷ್ಕ್ರಮಣಸಮಯಮಧುಸಮಯಪ್ರತಿಬೋಧನವಚನಚತುರಕಳಕಂಠಕಲ್ಪರುಂ, ಪ್ರಭೂತಶುಭಭಾವನಾನಲ್ಪಕಲ್ಪರುಂ, ನಿರಂತರನಿವಾಸಿಕೃತಬ್ರಹ್ಮಕಲ್ಪರುಮಪ್ಪ ಸಾರಸ್ವತಾದಿತ್ಯವಹ್ನ್ಯರುಣಗರ್ದತೋಯತುಷಿತಾವ್ಯಾಬಾಧಾರಿಷ್ಟರೆಂಬ ಲೋಕಾಂತಿಕದೇವರೆಣ್ಬರುಂ ಬಂದು

ಸುರುಚಿರಮಣಿಮಯಜಿನಬಿಂ ।
ಬರಾಜಿತೋತ್ತುಂಗಮಕುಟನಿಕಟರ್ ನಲವಿಂ ॥
ಪರಮನ ಚರಣಾಂಬುಜಮಂ ।
ದರದಳಿತನಮೇರುಕುಸುಮದಿಂ ಪೂಜಿಸಿದರ್ ॥ ೫೧

ಅನಂತರಂ

ಈನುತಿಯಿಾಸಂಸಾರ ।
ವ್ಯಾಮೋಹವಿರಕ್ತಿಯಾತಪಶ್ರೀರತಿ ಮ ॥

ತ್ತೀವಮುಕ್ತಿಗಮನಶಕ್ತಿ ಮ ।
ಪಾವಹಿಮ ಪೆಱಂಗಿವುಂಟೆ ನಿನ್ನೊಳೆ ಸಾಜಂ ॥ ೯೦

ಅಕ್ಷಯಸುಖಮನುಪಾರ್ಜಿಪು ।
ದೀಕ್ಷಿತಿಸುಖಮಂ ವಿಸರ್ಜಿಪುದು ನೀಮೆಂದೀ ॥
ಪಕ್ಷದೊಳೇಂ ತತ್ತನ್ನಾ ।
ಮಾಕ್ಷರಮಱಿಪವೆ ಗುಣಾಗುಣಂಗಳನವಱಾ ॥ ೯೩

ಅದುಕಾರಣದಿಂ

ಅಷ್ಟಮತೀರ್ಥಕರತ್ವಮ ।
ನಷ್ಟಮಹಾಪ್ರಾತಿಹಾರ್ಯವಿಭವಮನೊಳಕೆ ॥
ಯ್ದಷ್ಟವಿಧಕರ್ಮಜಯದಿಂ ।
ದಷ್ಟಮಮಹಿಗೆಯ್ದಿ ತಳೆ ಗುಣಾಷ್ಟಕದೊಳ್ಪಂ ॥ ೯೪

ವೃತ್ತಂ

ಇರದೆ ಸುಪಾರ್ಶ್ವತೀರ್ಥಕರರಿಂ ಬೞಿಕಿತ್ತಲಿನಿತ್ತು ಕಾಲಮಂ ।
ತರಿಸಿದ ಧರ್ಮತೀರ್ಥಪರಿವರ್ತನಮಂ ಪೊಸತಾಗಿ ಮಾಡಿ ಮಾ ॥
ಕ್ಷರಿಕರದಿಂದೆ ಭವ್ಯಜನಮಂ ತಣಿವೆಯ್ದಿಸಿ ತೀರ್ಥಕೃತ್ತ್ವಮಂ ।
ಪರಮಮಹತ್ವಮಂ ನೆಱಪಲೀಪದನಲ್ತೆ ಪದಂ ಗುಣಾಸ್ಪದಂ ॥ ೯೫

ದೇವ ಭವದ್ವಿಧರಿಂ ಮು ।
ನ್ನಾವಗಮಱಿಪುದನೆ ನಿಮಗೆ ಮಾತನಿದಂ ಪ್ರ ॥
ಸ್ತಾವಿಸಿದೆವೀಗಳಂಬುಧಿ ।
ಗೀವಂತೆ ತದಂಬುವಿಂದಮರ್ಘ್ಯಾಂಜಳಿಯಂ ॥ ೯೬

ವೃತ್ತಂ

ಸಹಜಸಮಗ್ರಬೋಧನಿಧಿಯಂ ಚರಮಾಂಗನನಾತ್ತನಿವೃತಿ ।
ಸ್ಪೃಹನನದೂರಸಂಸರಣವಾರಿಧಿತೀರನನೇಂ ಪ್ರಬೋಧಿಪಾ ॥
ಗ್ರಹಮೆಮಗುಂಟೆ ನಿನ್ನ ಪರಿನಿಷ್ಕ್ರಮಣೋದ್ಯಮಮಂ ಜಗತ್ತ್ರಯಿಾ ।
ಮಹಿತಮನಾಮಭೀಕ್ಷಿಸಿ ಕೃತಾರ್ಥರೆನಿಪ್ಪುದಿದೊಂದೆ ಸಾಲದೇ ॥ ೯೭

ಎಂದವರ್ ಪ್ರತಿಬೋಧಿಸಿ ನಿಜನಿವಾಸಕ್ಕೆ ಪೋಗಲೊಡಂ,

ಕರೆದಾಗಳ್ ಜನನೀಜನ ।
ಕರನಾಪ್ತರನಱಿಪಿ ನಿಜಮನೋರಥಮಂ ತ ॥
ತ್ಪರಿನಿಷ್ಕ್ರಮಣಮನಿತ್ತಂ ।
ವರಚಂದ್ರಸುತಂಗೆ ರಾಜ್ಯಮಂ ಸಕಳೇಜ್ಯಂ ॥ ೯೮

ಅನ್ನೆಗಮವಧಿಬೋಧದಿಂ ಪರಿನಿಷ್ಕ್ರಮಣಕಲ್ಯಾಣಮನಱಿದು

ದಿವಿಜೇಂದ್ರಂ ಪರಿವೇಷ್ಟಿತತ್ರಿದಶಬೃಂದಂ ಕಲ್ಪವಲ್ಲೀವನೋ ।
ದ್ಭವಸತ್ಪುಷ್ಪಫಳಾದಿಮಾಂಗಳಿಕವಸ್ತುನ್ಯಸ್ತಹಸ್ತಾಪ್ಸರೋ ॥
ನಿವಹಂ ದುಂದುಭಿಕಂಬುಕಾಹಳಮಿಳತ್ಕೋಳಾಹಳವ್ಯಾಪ್ತದಿ ।
ಗ್ವಿವರಂ ಬೇಗಬೆ ಬಂದು ಚಂದ್ರಪುರಮಂ ಪೊಕ್ಕಂ ಮಹಾನಂದದಿಂ ॥ ೯೯

ಅನಂತರಂ ಪರಿತ್ಯಕ್ತರಾಜ್ಯಂಗೆ ತಪೋರಾಜ್ಯಾಭಿಷೇಕಮನನೇಕತೀರ್ಥಜಲಂಗಳಿಂ ತೀರ್ಥನಾಥಂಗೆ ಮಾಡಿ ದೇವಾಂಗವಸ್ತ್ರಹರಿಚಂದನಾನುಲೇಪನಪಾರಿಜಾತಕುಸುಮದಾಮೇಂದ್ರಚ್ಛಂದಾದಿಭೂಷಣಂಗಳನಳಂಕರಿಸಿ ಸುರಶಿಲ್ಪಿಗಳಿಂ ಮುನ್ನಮೆ ವಿಚಿತ್ರಮಾಗಿ ನಿರ್ಮಿಸಿದುರ್ದಂ ತಂದವಟಯ್ಸುವುದುಂ ಪರಮಪದವೀಪ್ರಾಸಾದಪ್ರಥಮಸೋಪಾನಮನೇಱುವಂತೆ

ಸಿವಿಗೆಯನೇಱೆ ರತ್ನಮುಯಮಂ ವಿಮಳಾಹ್ವಯಮಂ ಮಹೀಶರು ।
ತ್ಸವಯುತರೊಯ್ದು ರೇಬಿಡಿಯನತ್ತಲನಿತ್ತಡಿಯುಂ ವಿಯಚ್ಚರರ್ ॥
ಸವಿಭವರೊಯ್ದರತ್ತಲಖಿಳಾಮರರುಂ ಮುದದೊಯ್ದರತ್ತಹು ।
ತ್ತವಯುವದೊಯ್ದರಂದಭವನಂ ತಳೆದಿಂದ್ರರದೊಂದು ಲೀಲೆಯಿಂ ॥ ೧೦೦

ಆಸಮಯದೊಳ್

ನೆಟ್ಟನೆ ಪೇೞ್ದು ತನ್ನಯ ಮನೋಗತಮಂ ಜನಕಂಗೆ ಪಟ್ಟಮಂ ।
ಕಟ್ಟಿ ಸುತಂಗೆ ರಾಜ್ಯಭರಮಂ ವಿನಿಯೋಜಿಸಿ ಕೊಟ್ಟು ತಾಂ ತಪಂ ॥
ಬಟ್ಟಪೆನೆಂದು ಪೋದನೆನಗಿಂ ಪೆಜಿರಾರ್ ಸರಣೆಂದು ನೊಂದು ಬಾ ।
ಯ್ವಿಟ್ಟು ಪಲುಂಬಿ ಪಂಬಲಿಸಿದಳ್ ಕಮಳಪ್ರಭೆಯಾತ್ಮನಾಥನಂ ॥ ೧೦೧

ಸುಮನರ್ ಗಳ್ಪೂರ್ವತಾರಂ ಮೊದಲೆನೆ ಬಿಡದಾರಾಧಿಸುತ್ತಿರ್ದರ್ಪರೆ ನ ।
ಮ್ಮ ಮಗಂ ಲೋಕತ್ರಯಾಧೀಶ್ವರಪದವಿಗೆ ಸಂದಪ್ಪನೆಂದಲ್ತೆ ನಮ್ಮಿಂ ॥
ದನುಗಲ್ಪಿರ್ದಪ್ಪನೆಂಬುಮ್ಮಳಮದು ನಿಮಗಿನ್ನೇಕೆ ತ್ವಚ್ಛೇಷ್ಟಕಲ್ಯಾ ।
ಣಮಹೋತ್ಸಾಹಂಗಳಂನೋಡಿಯೆ ಪದೆವೆರ್ದೆಯುಂ ಕೂಡೆಸಂತೈಸುತಿರ್ಪರ್॥

ಎಂದು ಮಹಾಸೇನಮಹೀಭುಜನುಂ ಲಕ್ಷ್ಮಣಾಮಹಾದೇವಿಯುಂ ತಮ್ಮೊಳ್ ನುಡಿಯುತ್ತುಮಿರ್ದರ್. ಇತ್ತಲ್

ಸುರಶೈಳಕ್ಕೊಯ್ದು ರಂದರ್ಭಕನನೆ ಭರದಿಂ ದೇವನಂ ದೇವರಾಜಂ ।
ಪಿರಿದುಂ ಕೆಯ್ಯಂಟಲಿನ್ನಿತ್ತಪನೆ ನಮಗೆ ನಾವೆಲ್ಲನುಂ ನಿಚ್ಚಲುಂ ತ ॥
ಚ್ಚರಣಾಂಭೋಜಾತಸೇವಾಸುಖಮನನುಭವಿಪ್ಪೆಂದು ಸೈಪಿಂಗೆ ಪ್ರೀಪಾಂ।
ತರವಿಂದಿಂದಾದುದಕ್ಕುಂ ಧರೆಗಮುನಿತೆಯುಕ್ಕುಂ ಸ್ವರಾಜನ್ಯತಿತ್ವಂ ॥ ೧೦೩

ಅಂತು ಪೌರಜನಂಗಳೋರೊರ್ವರೊಳುಸಿರ್ದರ್. ಅನ್ನೆಗಂ ಶುಭಂಕರೋದ್ಯಾನವನನೆಯ್ದಿ ಶಿವಿಗೆಯಿಂದಮಿೞಿಪಿ ತನ್ಮಧ್ಯದೊಳ್ ವಿಶಾಳಶಶಿಕಾಂತಶಿಳಾತಳವನೊಳಗುಮಾಡಿ ಮುನ್ನಮೆ ಸಮೆದಿರ್ದ

ದ್ವಾರಚತುಷ್ಕಾನ್ವಿತಮಂ ।
ಸಾರಮಣಿದ್ವಾರಬಂಧಬಂಧುರಮಂ ವಿ ॥
ಸ್ತಾರಿತನವೀರುಪಲ್ಲವ ।
ತೋರಣಮಂ ಚಳಿತಧವಳಕೇತನಪಟಮಂ ॥ ೧೦೪

ಕಾಂತಚ್ಛದವೃತಮಂ ತ ।
ತ್ಪ್ರಾಂತರಚಿತಮಣಿವಿಳಾಸಮಂ ರಸಚಿತ್ರಾ ॥
ಕ್ರಾಂತಸ್ತಂಭೋತ್ಕರಮಂ ।
ಸಂತಾನಕಸತ್ಫಳಾಳಿಭೃತನವಸದಮಂ ॥ ೧೦೫

ನವರತ್ನವರ್ಣಪೂರಮ ।
ನವಿರಳಕರ್ಪೂರಚೂರ್ಣಸಂಪಾದಿತರಂ ॥
ಗವಲಿವಿರಾಜಿತಮಂ ನಯ ।
ನವಿನೋದಾಗರಮೆನಿಪ್ಪ ಪಟಮಂಡಪಮಂ ॥ ೧೦೬

ಸೌಧರ್ಮೇಂದ್ರದತ್ತಹಸ್ತಾವಳಂಬನೊಳಪ್ರೋಕ್ಷ್ಯ
ಧೃತಮುಕುಟಕುಂಡಳಾಂಗದ ।
ಶತಗುಚ್ಛಕಟಕನಿಕಾಯುಮಂ ತಳೆದು ಜಿತ ॥
ದ್ಯುತಿಸೂರ್ಯಗ್ರಹನಕ್ಷ ।
ತ್ರತಾರೆಗಳ್ ಬಳಸಿದಮರಗಿರಿಯುಂ ಪೋಲ್ತಂ ॥ ೧೦೭

ತತ್ಸಮಯದೊಳ್

ಸುರರ ಕಳಕಳಮನುಪಸಂ ।
ಹರಿಸುತ್ತುಂ ಮಂಗಳೋಪಕರಣಂಗಳನೋ ॥
ಸರಿಸುತ್ತುಂ ಪಡಿಯಟನುಂ ।
ಪರಿಚಾರಕನುಂ ದಲೆನಿಸಿದಂ ಸೌಧರ್ಮಂ ॥ ೧೦೮

ಅನಂತರಂ ಬಿತ್ತರಿಸಿದ ಮುತ್ತಿನ ಚೌಕದೊಳಗಣತಿಪ್ರಶಸ್ತಸಂಸ್ತರಣದೊಳ್ ಪರಿಹೃತಪರಿಧಾನನುಂ ಪರ್ಯಂಕಾಸನಾಸೀನನುಮುದೀಚೀದಿಶಾಭಿಮುಖನುಮಾಗಿ

ಶುಭಪರಿಣತಿಯುಂ ತಳೆದುಭ ।
ಯುಭಯುಪರಿಗ್ರಹಮನಖಿಳಸತ್ವಂಗಳೊಳಂ ॥
ಪ್ರಭವಿಸೆ ಸಮಭಾವನೆ ತನ ।
ಗಭಿನುತದೀಕ್ಷಾಗ್ರಹಂ ತ್ರಿಸಾಕ್ಷಿಕಮಾದಂ ॥ ೧೦೯

ಆಗಿ,

ಇರದೆ ನಮಸ್ಸಿದ್ಧೇಭ್ಯ ।
ಸ್ವರಮಾಸ್ಯದಿನೊಗೆಯೆತನ್ನ ಕೇಶೋತ್ಕರಮುಂ ॥
ಪರಮಂ ಪಂಚೇಂದ್ರಿಯಮುಮ ।
ಲರಾಜಿಯೆನೆ ಪಂಚಮುಷ್ಟಿಯಿಂದದೆ ಕಿಟ್ಟಂ ॥ ೧೧೦

ಸದಭಿಷ್ಟುತಂಗೆ ಸಮನಿಸಿ ।
ದುದು ವಿಶ್ರುತಪುಷ್ಯಮಾಸದೊಳ್ ನುತಸಿತಪ ॥
ಕ್ಷದೊಳೆಸೆವೇಕಾದಶಿಯೊಳ್ ।
ವಿದಿತಾನೂರಾಧೆಯೊಳ್ ತಪಶ್ರೀಯೋಗಂ ॥ ೧೧೧

ಉದಯಿಸಿತು ಕೇವಲಜ್ಞಾ ।
ನದ ಮುಂಬಿದು ನೋಟ್ಪೊಡೆಂಬಿನಂ ತಪನಂ ಕೊ ।
ಳ್ವುದುಮೊಡನೆ ಮನಃಪರ್ಯಯು ।
ಮುದಾತ್ತಮನನೆನಿಪ ತನ್ಮುನೀಂದ್ರೋತ್ತಮನೊಳ್ ॥ ೧೧೨

ಆಗಳಮರಪತಿಮುಖಸಮುದ್ಘೋಷಿತಜಯಜಯಧ್ವಾನದೊಡನೆ
ಸುರವಶ್ಯಕಂಠಿಕಾಗೀ ।
ತರವಂ ಗೀರ್ವಾಣವಾದಕಾತೋದ್ಯಭವ ॥
ಸ್ವರಮುಮರನರ್ತಕೀನೂ ।
ಪುರನಿನದಂ ಪೊಣ್ಮಿದತ್ತು ದೆಸೆದೆಸೆಗಳೊಳಂ ॥ ೧೧೩

ಪರಮಂ ಪರಿಹರಿಸಿದಳಂ ।
ಕರಣಾಂಬರಕುಸುಮಮಾಳೆಗಳನಮರರ್ ಬಿ ॥
ತ್ತರದಿಂದೆ ತೊಟ್ಟುಮುಟ್ಟುಂ ।
ಕಿರೀಟದೊಳ್ ತಳೆದುಮೇಂ ಮನಂಪೆರ್ಚಿದರೋ ॥ ೧೧೪

ತತ್ಸಮಯದೊಳಮರಪತಿ ಜಗತ್ಪತಿಯ ಮಧುಕರನೀಳಕುಂತಳಪ್ರಪಂಚಮಂ ಪಂಚರತ್ನಪಟಳಕದೊಳ್ ತಳೆದೊಯ್ದು ಪಂಚಪಯೋರಾಶಿಯೊಳ್ ಪಂಚಮಹಾಶಬ್ದದೊಡನೆ ಪಸರಿಸಲೊಡಂ

ವರಜನನಾಭಿಷೇಕದೊಳೊಡರ್ಚಿತೆ ಮತ್ಪಯಸಕ್ಕೆ ಮುಂ ಜಗ ।
ದ್ಗುರುವ ಶಿರೋಜಸಂಗತಿಯನೀಪರಿನಿಷ್ಕ್ರಮಣಪ್ರಮೋದದೊಳ್ ॥
ದೊರೆಕೊಳಿಸಿತ್ತೆ ಮುತ್ತುಱದುದರ್ಕೆ ಭವತ್ಕೃತದಿಂ ಪವಿತ್ರತಾ ।
ಪರಿಗತನಾದೆನೆಂದು ಹರಿಗೆಂಬವೊಲಾದುದು ಘೂರ್ಣಿತಾರ್ಣವಂ ॥ ೧೧೫

ಸಮನಂತರಂ ಮಗುಳ್ದು ಬಂದು,

ಬಗೆದುತ್ಸಾಹದೆ ದೇವತೂರ್ಯದ ಲಯಕ್ಕೆದಾರ್ಡಿಯುಂ ಪಾಡಿಯುಂ ।
ಪೊಗ*ಟ್ದುಂ ಮೊಣದೆ ಮತ್ತೆ ಮೂಮೆ ಬಲವಂದುಂ ದಿವ್ಯಸಂಸೇವ್ಯವ ॥
ಸ್ತುಗಳಿಂದರ್ಚಿಸಿಯುಂ ಪದಕ್ಕೆಱಗಿಯುಂ ದೇವೇಂದ್ರನತ್ಯಂತಭ ।
ಕ್ತಿಗುಣಪ್ರೇರಿತಚಿತ್ತವೃತ್ತಿ ಮೆಱೆದಂ ಯೋಗೀಂದ್ರಕಲ್ಯಾಣಮಂ ॥ ೧೧೬

ಅಲ್ಲಿಂ ಬಱಿಯಂ

ಮುನಿಪಾದದ್ವಂದ್ವಮಂ ಪೂಜಿಸಿ ನಡೆದು ನಭಶ್ಚಕ್ರದೊಳ್ ನಿಂದು ತದ್ಭಾ । ವನರಂ ಜ್ಯೋತಿಷ್ಕರಂ ವ್ಯಂತರರನುಚಿತದಿಂ ಪೋಗವೇೞ್ದಾವ ಗಂ ದೇ ॥ ವನಿಕಾಯಂ ತನ್ನ ನೆತ್ತಂ ಬಳೆಸಿ ಬರೆ ನಿಜಾವಾಸಮಂ ಪೋಗಿ ಪೊಕ್ಕಂ । ಜಿನಭಕ್ತಿ ಕ್ರೀಡದಾವಂ ಚತುರಜನಮನೋವ್ಯೋಮಪೀ ಯೂಷದಾವಂ ॥ ೧೧೩

॥ ಗದ್ಯಂ ॥

ಇದು ಪರಮಪುರುನ್ನಾಥಕುಲಕುಭೃತ್ಸಮುದ್ಭೂತಪ್ರವಚನಸರಿತ್ಸರಿನ್ನಾಥ ಶ್ರುತಕೀರ್ತಿತ್ರೈವಿದ್ಯಚಕ್ರವರ್ತಿ ಪದಪದ್ಮನಿಧಾನದೀಪವರ್ತಿ

ಶ್ರೀಮದಗ್ಗಳದೇವ

ವಿರಚಿತಮಪ್ಪ

ಚಂದ್ರಪ್ರಭಪುರಾಣದೊಳ್

ಪರಿನಿಷ್ಕ್ರಮಣಕಲ್ಯಾಣಂ

ತ್ರಯೋದಶಾಶ್ವಾಸಂ

ಚತುರ್ದಶಾಶ್ವಾಸಂ.

ಶ್ರೀಮಚ್ಚಂದ್ರಪ್ರಭವಿಭು ।
ಭೂಮಿಶಸಹಸ್ರಸಂಯುತಂ ವಿಮಳತಪ ॥
ಶ್ರೀಮಂಡಿತನಾದಂ ನಿ ।
ಸ್ಸೀಮಗುಣಂ ಜೈನಜನಮನೋಹರಚರಿತಂ ॥ ೧

ಕೈಯಿಕ್ಕಿ ಪರಮಪದವಿಗೆ ।
ಕೈಯಿಕ್ಕಿದನೆಂಬ ತೆಱದಿನಿರ್ದು ಬೞಿಕ್ಕಂ ॥
ಕೈಯೆತ್ತಿದನಖಿಳಜನಂ ।
ಕೈಯೆತ್ತಿ ನಿರೀಹವೃತ್ತಿಯಿಂ ಪೊಗೞ್*ವಿನೆಗಂ ॥ ೨

ಅಂತನುಷ್ಠಿತಷಷ್ಠೋಪವಾಸಂ ಚತುರ್ಥದಿನದೊಳ್ ಕೈಯೆತ್ತಿಕೊಂಡು ದುರ್ಧರತಪೋನಿಧಾನಸಾಧಕತಮಶರೀರರಕ್ಷಣನಿಮಿತ್ತಮುಂ ಷಟ್ಚತ್ವಾರಿಂಶದ್ದೋಷದೂರಮುಂ ನವಕೋಟಿಗುಣಪರಿಶುದ್ಧಮುಂ ದಾನಮಾರ್ಗದೀಪಪ್ರಭಾವನಾರ್ಥಮುಮಾಗಿ

ಕ್ರಮವಿಕ್ಷೇಪಮಹಾಕೃತದ್ರುತವಿಳಂಬಂ ದೋಯರ್ಗಂ ದೋಳನೋ ।
ದ್ಯಮದೂರಂ ನಯನಂ ಯುಗಪ್ರಮಿತಮಾರ್ಗಾಳೋಕನಾಸಕ್ತಮೊ ॥
ಪ್ಪೆ ಮಹೀಚಕ್ರಮನಂಘ್ರಿಪಂಕಜರಜಂಗಳ್ ನೀರಜಂಮಾಡೆ ನಿ ।
ರ್ಮಮನೀರ್ಯಾಪರಿಶುದ್ಧಿವೆತ್ತು ತಳರ್ದಂ* ಸಾಶ್ಚರ್ಯಚರ್ಯಾರ್ಥದಿಂ ॥

ಅಂತು ತಳರ್ದು ನಳಿನಪುರಮಂ ಪೊಕ್ಕು ತೂರ್ಯತ್ರಯಪ್ರವರ್ತನಾನಾಥಪ್ರಸೂತಿಕಾತಿಥಿದೀನದಾನಶಾಳಾಕುಕರ್ಮಕಾಮುಕೋದ್ವಾಹಾದಿಗೇಹಂಗಳಂ ಪರಿಹರಿಸುತ್ತುಮುತ್ತಮಮಧ್ಯಮಜಘನ್ಯಯೋಗ್ಯಾವಾಸಂಗಳಂ ಲಾಭಾಲಾಭಮಾನಾವಮಾನಸಮಾಕೃತಚಿತ್ತವರ್ತನಂ ಚಂದ್ರಗತಿಯಿಂಸಲುತ್ತುಮಕ್ಷಮುಕ್ಷ್ವಾದಿಪಂಚವಿಧಾಹಾರಪರಿಕಲ್ಪಿತವೀರಚರ್ಯಾಮಾರ್ಗದಿಂ ಬರ್ಪಾಗಳ್

ಅನಗಾರವೇಳೆಯೊಳ್ ತ ।
ಜ್ಜನಾಧಿಪತಿಯತಿಥಿಸಂವಿಭಾಗಾರ್ಪಣನಿ ॥
ತ್ಯನಿಯಮಮದಿನಿರಿಸಿದ ಮುನಿ ।
ವಿನಿವೇದಕನನಮಳನೆಂಬವಂ ಪ್ರತಿಹಾರಂ ॥ ೪

ಅನತಿದೂರದೊಳೆ ಕಂಡು ಮುನ್ನಮೆ ಸತ್ಪಾತ್ರಗಮನಸಮಯಮಂ ಪೇಳುತ್ತುಮಿರ್ದ ಭವ್ಯೋತ್ತಮಂಗೆ ಬಿನ್ನವಿಸಲೊಡಂ

ಅನತಿಶಯಾರ್ಚನಾಪರಿಕರಂ ಬೆರಸಂತಃಪುರಂ ಸಮಂತು ಬೆ ।
ನ್ನನೆ ಬರೆ ಭವ್ಯಪಾರ್ಥಿವಚಯಂ ಕೆಲದೊಳ್ ಬರೆ ತನ್ನ ಕಣ್ಗಳುಂ ॥
ಮನಮುಮಲಂಪಿನಿಂ ಪರಿಯೆ ಮುಂದೆ ಮಹೀಪತಿ ಸೋಮದತ್ತನಾ ।
ಮುನಿಪತಿಗೆಂದು ಬಂದನಿದಿರಂ ಪರಿಶುದ್ಧಕೃತಾರ್ಥಬುದ್ಧಿಯಿಂ ॥ ೫

ಆಗಳ್

ಇರೆ ವದನಾಬ್ಜದೊಳ್ ಸುರಭಿಶೋಭೆಯವೋಲ್ ಶ್ರುತಲಕ್ಷ್ಮಿ ಕೂಡೆ ಸ ।
ಯ್ತಿರೆ ದಯೆ ನೇತ್ರಪುತ್ರಿಕೆಯವೋಲ್ ನಿಜನೇತ್ರದೊಳಾವಗಂ ತಪೋ ॥
ಭರಕೃತಶಕ್ತಿ ಮೂರ್ತಿಯೊಳಳಂಕೃತಿಯಂದದಿನೆಯ್ದೆ ಚೆಲ್ವುವೆ ।
ತ್ತಿರೆ ಮುನಿಯಿರ್ದನಂಬೊಸೆದು ಪುಂಜಿಸಿದಂದದೆ ಕಣ್ಣ ಪುಣ್ಯಮಂ ॥ ೬

ಅಂತಿರ್ದನಂ

ಇದಿ*ರ್ಗೊಂಡು ಭಕ್ತಿಪೂರ್ವಕ ।
ಮುದಾತ್ತಮತಿ ನಿಲ್ಲಿಮೆಂದು ವಂದಿಸೆ ನಿಂದಂ ॥
ಸದಯಂ ಪರಸಿ ತದೀಯಾ ।
ಸ್ಪದದೊಳ್ ಘನಪುಣ್ಯಪುಂಜಮೊಡನಿಲ್ವಿನೆಗಂ ॥ ೭

ಎನಗೆ ಪುರಾಕೃತಂ ಸುಕೃತಮಿಂದಿದಿ*ರ್ವಂದವೋಲಾಯ್ತು ತೀರ್ಥನಾ ।
ಥನ ಪದಪಾಂಸುವಿಂ ನಗರಿಯಿಂದತಿಪಾವನಮಾಯ್ತು ಮತ್ಕುಲಂ ॥
ಜನನುತಮಿಂದದಾಯ್ತು ಚರಿತಾರ್ಥನೆನೆಂದು ಮಹೋತ್ಸವಾನಕ ।
ಧ್ವನಿಭರಿತಾಂಬರಂ ಪುಗಿಸಿದಂ ನಿಜಮಂದಿರಮಂ ಮುನೀಂದ್ರನಂ ॥ ೮

ಅನಂತರಮತ್ಯಂತಪವಿತ್ರವೇತ್ರವಿಷ್ಟರಾಸೀನಂಮಾಡಿ

ಚಳನತಳಂಗಳಂ ತೊಳೆದು ಮುಂ ಬೞಿಕಬ್ಜೆಯಿ ತೀರ್ಥವಾರಿಯಿಂ ।
ಮಳಯಜಗಂಧದಿಂ ಕಳಮತಂಡುಳದಿಂ ಸಿತಪ್ರಸೂನದಿಂ ಸಮು ॥
ಜ್ಜ್ವಳತರಪಾತ್ರಪೂರ್ಣಚರುವಿಂ ಮಣಿದೀಪದಿನುದ್ಧಧೂಪದಿಂ ।
ಫಳಕುಳದಿಂ ಧರಾಧಿಪತಿ ಪೂಜಿಸಿದಂ ನಿರವದ್ಯವೃತ್ತನಂ ॥ ೯

ಆಗಳ್ ಪ್ರತಿಗ್ರಹಾದಿನವವಿಧಪುಣ್ಯಪಣ್ಯನುಂ ಶ್ರದ್ಧಾದಿಸಪ್ತಗುಣಮಣಿವಿಭೂಷಣನುಮಾಗಿ ಸಪ್ರಕಾಶಶುಚಿಪ್ರದೇಶದೊಳ್ ನಿಱಿಸಿ ಸಿದ್ಧಭಕ್ತಿಕರಣಾನಂತರಂ

ಪರಮಮುನೀಶೋತ್ತಾನಿತ ।
ಕರಪುಟದೊಳ್ ಪರಮಭಕ್ತಿಯಿಂದಿಕ್ಕೆ ನೃಪಂ ॥
ಪರಮಾನ್ನಮಂ ತ್ರಿವಾರಂ ।
ನಿರಂತರಂ ನೆಱಪಿದಂ ಸ್ವಕಾಯಸ್ಥಿತಿಯುಂ ॥ ೧೦

ಅಮಳಗುಣನಕ್ಷಯಂ ದಾ ।
ನಮಸ್ತು ಪೆಂದಂದು ಪರಸಿ ನೃಪನಂ ಗಮನೋ ॥
ದ್ಯಮನಪ್ಪುದುಮಂತಾಗಳ್ ।
ಸಮಂತು ತದ್ರಾಜಮಂದಿರಪ್ರಾಂಗಣದೊಳ್ ॥ ೧೧

ಅಲರ್*ಱೆ ಪೊಮ್ಮಳೆ ಮಂದಾ ।
ನಿಳನನಿಮಿಷದುಂದುಭಿಸ್ವನಂ ದಿವಿಜಮುಖೋ ॥
ಚ್ಚಳಿತಾಹೋದಾನಸ್ವನ ।
ಮಿಳಾತಳಾಶ್ಚರ್ಯಮಾಯ್ತು ಪಂಚಾಶ್ಚರ್ಯಂ ॥ ೧೨

ಬೞಿಕಂ ತನ್ಮುನಿನಾಥಂ ।
ತಳರೆ ತಪೋವನಕೆ ನೃಪನುಮನುಗನುನಪರಂ ॥
ತಳರ್ದು* ನಿಜವಿನಯದಿಂದೇಂ ।
ತಳೆದನೊ ಕರಿಪತಿಯ ಬೞಿಯ ಕಳಭಾಕೃತಿಯುಂ ॥ ೧೩

ಅಂತು ಪುರಪರಿಸರಂಬರಂ ಕಳಪಿ ಬೞಿಯುಮೆಂತಾನುಂ ಮಗುಳ್ದು ಬಂದು

ಆವಗಮಾತ್ಮಾಂಗಣದೊಳ್ ।
ತೀವಿದಾಶ್ಚರ್ಯರತ್ನಸಂಚಯಮುಮಂ ತ ॥
ದ್ಭಾವರನಾನಗರದ ಭ ।
ವ್ಯಾವಳಿಯುಂ ಕರೆದು ಪೆಚ್ಚುಗೊಟ್ಟಂ ಪಡೆಪಿಂ ॥ ೧೫

ಅನ್ನೆಗಮಿತ್ತ ತನ್ಮುನೀಂದ್ರನುಂ ಪುಣ್ಯಾರಣ್ಯಮಂ ಪೊಕ್ಕು ಶುಚಿತಮ ಶಿಳಾತಳಾಗ್ರದೊಳ್ ಪ್ರತಿಮಾಯೋಗದಿನಿರೆ

ಸಮನಖದಿಂದೆ ನಿಂದ ಪದಯುಗ್ಮಮನ್ರಂಕದೆ ಜಾನುಪಾರ್ಶ್ವದೊಳ್ ।
ಕ್ರಮದಿ ಮರಲ್ದ ಹಸ್ತಯುಗಳಂ ಪರಿಭಾವಿಸೆ ನಿರ್ವಿಕಾರಮ ॥
ಪ್ಪ ಮುಖಮುಮೊಪ್ಪಿ ತಳ್ತಿರ್ದ ಪೂತ ಸಿತಸ್ಥಳಪದ್ಮವಲ್ಲರೀ ।
ಭ್ರಮಮನೊಡರ್ಚಿದತ್ತು ತನು ಯೋಗನಿಯೋಗದೊಳಿರ್ದ ಯೋಗಿಯಾ ॥

ಆಗಳ್

ಪೊಸಜಿ ಕಪ್ಪಮಾತಪದಿನೆಂದು ಕುಳಿರ್ಕೊಳುತಿರ್ಪ ಪಾಂಡುಪ ।
ದ್ಮಾಸನಮಂ ಪದಕ್ಕೆ ಧವಳಾತಪವಾರಣಮಂ ಶಿರಕ್ಕಿರ ॥
ಣ್ಯಾಸಿತದೇವತಾಪ್ರತತಿ ತಾಂ ಸಮಕಟ್ಟಿದುದಾರ ಚಿತ್ತದೊಳ್ ।
ಭಾಸುರಭಕ್ತಿಯಂ ಪಡೆಯದಾನಿರಪೇಕ್ಷನ ಯೋಗಲಕ್ಷಣಂ ॥ ೧೬

ಅದಲ್ಲದೆಯುಂ

ಪರಮೇಶಂ ಸಂಗತಾಂತರ್ಜಪನಿಯಮನವಿಸ್ಪಷ್ಟನಿಷ್ಕ್ರಾಂತಮಂತ್ರ।
ಸ್ವರದಿಂ ಸಂಜಾತಗಂಗಾಪ್ಲವರವನಿನದದ್ಗಹ್ವರಂ ಹೈಮ್ಯಧಾತ್ರೀ ॥
ಧರಮೋ ಮೇಣೀಷದಂತಸ್ತನಿತಪರಿಚಿತಂ ಶಾರದೋತ್ತುಂಗಧಾರಾ ।
ಧರಮೋ ಮೇಣೆಂಬ ಚೆಲ್ವಂ ತಳೆದನಚಳಿತಂ ಪೂರ್ಣಚಂದ್ರಾಂಶುವರ್ಣಂ॥

ಮತ್ತಂ

ಜಪಿಯಿಸುತೊಳಗೊಳಗವ್ಯ ।
ಕ್ತಪದಾಕ್ಷರಮುಂ ಮುಮುಕ್ಷುಕುಂಜರನಿರ್ಪಂ ॥
ರಿಪುಘಾತಿಸೇನೆಯುಂ ಘಾ ।
ತಿಪೆ ತಕ್ಕೆಂದಿಂತು ಮೊಱಗುತಿರ್ಪವೊಲಾಗಳ್ ॥ ೧೮

ಅಭ್ರೂವಿಕಾರಮನುಪದ್ಯ ।
ಪ್ಯಭ್ರಮಮವಿಕಾಸಘೋಣಮನತಿಶ್ಲಿಷ್ಟೋಷ್ಠಃ ॥
ಷ್ಠ್ಯಭ್ರಾಜಿತವರಾಯತ್ತಾನನ ।
ಶುಭ್ರಾಂಬುಜಮಾತ್ಮಭಾವನಾತತ್ಪರನಾ ॥ ೧೯

ಧ್ಯಾನಪ್ರದೀಪಶಿಖಿಯಿಂ ।
ತಾನೊಗೆದುದು ಮೇಗೆ ಸಿಮಿ*ರ್ದ ಕಜ್ಜಳಲತೆಯೆಂ ॥
ಬೀನುಡಿಗೆಡೆಯಾದುದು ಮಂ ।
ದಾನಿಳನಿಂ ಮಿಳಿ*ರ್ವ ಕುಂತಳಂ ಮುನಿಪತಿಯಾ ॥ ೨೦

ಜಲಜವನಂಗಳೊಳ್ಪೊರೆಯಿನುಣ್ಮುವ ಶೀಕರವಾರಿಯಂ ಪೊದ ।
ಱ್ದಲ*ರ್ಗಡುವಿಂದಮಲ್ಲುಗುವರಲ್ಗಳನೊಯ್ಯನೆ ತಂದು ತಂದು ನಿ ॥
ಚ್ಚಲುಮಂಭವಾಂಘ್ರಿಪಂಕಜಮನರ್ಚಿಸುಗುಂ ಪವಮಾನನಂತೆ ಪಲ್ ।
ವಲೆಯೊಳಗಿರ್ದೊಡಂ ಪರಮಪೂಜ್ಯರೆ ಪೂಜೆಯನೆಂತುಮೆಯ್ದುಗುಂ ॥ ೨೧

ಮತ್ತಂ

ಅಲುಗದೆ ಕೆಳರ್ತ ಮರಗಳೊ ।
ಳೆಲೆಯಂ ಕಟಿಲಿಸದೆ ಪೂತ ಗಿಡುಗಳೊಳರಲಂ ॥
ಸಲೆ ಬಿರ್ಚದೆ ತಳ್ತು ಲತಾ ।
ವಲಿಗಳೊಳೊಳ್ಗುಡಿಯನೂಡುಗುಂ ಗಂಧವಹಂ ॥ ೨೨

ವನದೇವತೆಯರ್ ನಿಚ್ಚಂ ।
ಮುನಿಪತಿಯಂ ಸ್ತುತಿಯಿಪುಕ್ತಿಗಳನಾಲಿಸಿ ಕ ॥
ಲ್ತಿನಿಸಂ ಕಳಕೀರಕುಳಂ ।
ಮನದೊಲವಿಂದೋದುತಿರ್ಪುವಾಮುನಿವನದೊಳ್ ॥ ೨೩

ಪುಗಲೆಂದುವು ಕೋಗಿಲೆಗಳ್ ।
ಮೃಗಪಶುಗಣಮುಂ ಮನೋಜ ಪೊಕ್ಕಿಸುವಾಮೊ ॥
ಗ್ಗುಗಳಲ್ಲಿ......ದರ್ಪ ।
ನಗಾಧಬೋಧಂ ದಲೆಂದು ಬಾಱಿಪ ತೆಱದಿಂ ॥ ೨೪

ಕೇಸರವಂ ಕ*ರ್ದುಕದೆ ಮ ।
ತ್ತಾಸನಮಂ ಪೀಱದೆಸಳೊಳಿಜಗಟೆ ರಜಮಂ ॥

ಸೂಸಟೆ ಪೊಸಪೂವಿಂಪೊಱ |
ಸೂಸುವ ಸೌರಭದೆ ತಣಿವುವಾವನದಳಿಗಳ್ || ೨೫

ಆಪರಮಯೋಗಿಯೆಂಬ ಮ |
ಹಾಪರ್ವತದಿಂದಮುಣ್ಮಿ ಶಾಂತರಸನವೀ ||
ನಾಪಗೆ ತನ್ಮಯಮೆನಿಸಿ |
ತ್ತಾಪುಣ್ಯಾರಣ್ಯದೊಳ್ ಚರಾಚರಚಯಮಂ || ೨೬

ಪಿಂಗದೆ ನಾಗಬಂಧದೊಳೆ ನಾಗಚಯಂ ಪೆಡೆದಿರ್ದುವೆಯ್ದೆ ಸಾ |
ರಂಗದ ಕೋೞ್ಕಿಳೊಳ್ ಶಬರರಿಂ ನಲವಿಂದೆ ಕುರಂಗಸಂಕುಳಂ ||
ಸಂಗತಿವೆತ್ತು ದೀವದ ಮೃಗಂಗಳ ಭಂಗಿಯೆನಿರ್ದುದೊಯ್ಯನ |
ಗ್ರಾಂಗುಳಿಯಿಂದೆ ಪಿಕ್ಕಿದುದು ಸಿಂಗದ ಕೇಸರಮಂ ಮತಂಗಜಂ || ೨೭

ಕರಿಣಿಗಳುಂ ಪದೆಪಿಂ ಕೇ |
ಸರಿಣಿಗಳುಂ ಸಿಂಹಶಿಶುಗಮಿಭಕಳಭಕ್ಕಂ ||
ತೊರೆದ ಮೊಲೆಯೂಡುತಿರ್ದುವು |
ಪರಸ್ಪರದ್ವೇಷಭಾವಮಂ ಬಿಟ್ಟದಱೊಳ್ || ೨೮

ಪೆಣ್ಬುಲಿಯ ಮುಂದೆ ನಲಿದುದು |
ಕಣ್ಬರಿವೆತ್ತಿರಲೆ ಗೋಣಸು ನರ್ತಿಸುವ ನವಿ ||
ಲ್ಗಣ್ಬೀಲಿಯೊಳಗೆ ಸುೞಿದುದು |
ತಣ್ಬಸಲೆಯೊಳಾಡುವಂತೆ ನಾಗರ ಮಱಿಗಳ್ || ೨೯

ಅಂತವಿಶ್ರಾಂತಶಾಂತರಸವಿಸರಪೀಯೂಷಸಂಚಯಪಂಚನವಾರಾಶಿ ಏಕಮಾಸಪ್ರಕಲ್ಪಿತಪ್ರತಿಮಾಯೋಗಮಂ ನಿರ್ವರ್ತಿಸಲೊಡಂ

ಇನ್ನಪ್ಪಷ್ಟಗುಣಕ್ಕಿವು |
ಮುನ್ನಮೆ ಸೂಚಕಕಱಮಾಗಿ ಬಂದುವು ತಾಮೆಂ ||
ಬನ್ನಿಗಮೇಂ ಸಮನಿಸಿದುದೊ |
ಸನ್ನುತಮತಿಗಷ್ಟಋದ್ಧಿಗಳ್ ಕ್ರಮದಿಂದಂ || ೩೦

ಅವಾವುವೆಂದೊಡೆ— ಕೇವಲಜ್ಞಾನಾವಧಿಮನಃಪರ್ಯಯಜ್ಞಾನಂ ಬೀಜಬುದ್ಧಿ ಕೋಷ್ಠಬುದ್ಧಿ ಪದಾನುಸಾರಿತ್ವಂ ಸಂಭಿನ್ನಶ್ರೋತೃತ್ವಂ ದೂರಾ

ಸ್ವಾದನದೂರಸ್ಪರ್ಶನ ದೂರದರ್ಶನ ದೂರಾಘ್ರಾಣ ದೂರಶ್ರವಣ ಸಮರ್ಥತೆಯುಂ ದಶಪೂರ್ವತ್ವಂ ಚತುರ್ದಶಪೂರ್ವತ್ವಂ ಅಷ್ಟಾಂಗನಿಮಿತ್ತವೇದಿತ್ವಂ ಪ್ರಜ್ಞಾಶ್ರವಣತ್ವಂ ಪ್ರತ್ಯೇಕಬುದ್ಧಿತ್ವಂ ಪ್ರವಾದಿತ್ವಮೆಂದಷ್ಟಾದಶಪ್ರಕಾರಮಪ್ಪ ಬುದ್ಧಿಋದ್ಧಿಯೊಳಂ. ಪರ್ಯಂಕಾಸನಾದಿಯೋಗಾಸ್ಥಿತಸ್ವರೂಪಚಾರಣತ್ವಮುಂ ಜಳಜಂಘಾತಂತುಪುಷ್ಪಪತ್ರಬೀಜಶ್ರೇಣ್ಯಗ್ನಿಶಿಖಾಗಮನಾದ್ಯನೇಕವಿಕಲ್ಪಸಂಯುತಾಕಾಶಗಾಮಿತ್ವಮೆಂದಿರ್ತಱನಪ್ಪ ಕ್ರಿಯಾಋದ್ಧಿಯೊಳಂ, ಅಣಿಮೆ ಮಹಿಮೆ ಲಘಿಮೆ ಗರಿಮೆ ಪ್ರಾಪ್ತಿ ಪ್ರಾಕಾಮ್ಯಮೀಶಿತ್ವಂ ವಶಿತ್ವಂ ಅಪ್ರತಿಘಾತಮಂತರ್ಧಾನಂ ಕಾಮರೂಪಿತ್ವಮುಮೆಂಬ ಬಹುಭಂಗೀಸಂಗತಮಪ್ಪ ವಿಕ್ರಿಯಾಋದ್ಧಿಯೊಳಂ, ಉಗ್ರತಪಂ ದೀಪ್ತತಪಂ ತಪ್ತತಪಂ ಮಹಾತಪಂ ಘೋರತಪಂ ಘೋರಪರಾಕ್ರಮಂ ಘೋರಗುಣಬ್ರಹ್ಮಚರ್ಯಮೆಂದು ಸಪ್ತವಿಧಮಪ್ಪ ತಪೋಋದ್ಧಿಯೊಳಂ, ಮನೋಬಳಂ ವಾಗ್ಬಳಂ ಕಾಯಬಳಮೆಂದು ಮೂಱುಂ ತೆಱನಾದ ಬಳಋದ್ಧಿಯೊಳಂ, ಆಮರ್ಷಂ ಕ್ಷ್ವೇಳಂ ಜಲ್ಲಮಲಂ ವಿಷೌಷಧಿ ಸರ್ವೌಷಧಿ ಆಶ್ಯಾವಿಷ ದೃಷ್ಟಿವಿಷಮೆಂದಷ್ಟವಿಧಮದೌಷಧಋದ್ಧಿಯೊಳಂ, ಆಲಸ್ಯವಿಷತ್ವಂ ದೃಷ್ಟಿವಿಷತ್ವಂ ಕ್ಷೀರಾಸ್ರವತ್ವಂ ಮಧ್ವಾಸ್ರವತ್ವಂ ಸರ್ಪಿರಾಸ್ರವತ್ವಮಮೃತಾಸ್ರವತ್ವಮೆಂದನೇಕಪ್ರಕಾರಷಟ್ಪ್ರಕಾರಮಾದ ರಸಋದ್ಧಿಯೊಳಂ, ಅಕ್ಷೀಣಮಹಾಶನಂ ಅಕ್ಷೀಣಮಹಾಬಳಮೆಂದಿರ್ತೆಱನಾದಕ್ಷೀಣಋದ್ಧಿಯೊಳಂ ನೆಱೆದು ಸಕಳಸತ್ವಗುಣಾಧಿಕಕ್ಲಿಷ್ಯಮಾಣಾವಿನೀತಜನಂಗಳೊಳ್ ಮೈತ್ರಪ್ರಮೋದಕಾರುಣ್ಯಮಧ್ಯಮಸ್ಥವಿವೃತ್ತಿಗಳನವಳಂಬಿಸುತ್ತುಂ ಗ್ರಾಮನಗರಖೇಡಖರ್ವಡಮಡಂಬದ್ರೋಣಾಮುಖಘೋಷಪತ್ತನಾಕರಂಗಳನಸಂಗದಿಂ ವಿಹಾರಿಸುತ್ತುಂ ಬರ್ಪಲ್ಲಿ

ಎಸೆವ ನಿಜಕೋಷ್ಠಋದ್ಧಿ ।
ಪ್ರಸರತೆಯಿಂದಾವನಾವ ತತ್ವದೊಳೇನಂ ॥
ಬೆಸಗೊಂಡೊಡಮಾಗಳೆ ನಿರ ।
ಒಸುವ ಸಮರ್ಥತೆಯನಾಂತನಾಮುನಿಮುಖ್ಯಂ ॥ ೩೧

ಗಗನದೊಳಾಪರಮಾಣುವಿ ।
ನಗಲದ ವೀಧಿಯೊಳೆ ಸಯ್ತು ತೊಲಗದೆ ನಡೆವಂ ॥

ಬಗೆದೀಯರ್ ಶುದ್ಧ್ಯರ್ಥಮ ।
ನಗೆಹರ್ತಂ ಶ್ರೇಣಿಚಾರಣತ್ವದ ಗುಣದಿಂ ॥ ೨೨

ಪ್ರತಿರೋಧಿಸಿ ವಜ್ರದ ಪ ।
ರ್ವತಂಗಳನಿತಾನುಮಿದಿರ್ಗೊಡವನನವಯವದಿಂ ॥
ಸ್ವತನುವೆ ಭೇದಿಸಲಾಪ್ಪ ।
ಪ್ರತಿಸ್ರೋತದಿನಾದವಸೆದನಿಂದ್ರಪ್ರತಿಮಂ ॥ ೨೩

ತಪದ ಪರೀಷಹದಾಯಾ ।
ಸಪರಂಪರೆಯಿಂದಮಿನಿತು ಕಂದದೆ ತಪ್ತಂ ॥
ತಪನೀಯಮೆಂಬವೋಲ್ ನಿಜ ।
ವಪು ತೊಳತೊಳತೊಳಗೆ ತಪ್ತತಪದಿಂದೆಸೆದಂ ॥ ೨೪

ಪರಮಾಗಮಮೆಲ್ಲಮನು ।
ಚ್ಚರಿಸುವನಂತರ್ಮುಹೂರ್ತಕಾಲದೊಳೆಂಬ ॥
ಚ್ಚರಿವೆತ್ತ ವಾಗ್ಬಳಂ ಬಂ ।
ಧುರಮಾದುದು ದುರಿತಬಳತಮೋದಿನಕರನೊಳ್ ॥ ೨೫

ಉಲ್ಲಾಘತೆಯಿಂ ರೋಗಿಗ ।
ಳೆಲ್ಲಂ ತಳೆವಲ್ಲಿಗೌಷಧಂ ಸ್ವತನುಭೃತಂ ॥
ಜಲ್ಲನುಲಮಾದುದೆನೆ ಮುನಿ ।
ವಲ್ಲಭನಾಸಕಳಸತ್ವಹಿತಕರನಾದಂ ॥ ೨೬

ಅಮರ್ದ*ಂ ಪೀರ್ದಂದದೆ ತಣಿ ।
ದು ಮನಂ ಪೆರ್ಚುವರತಿಕ್ಷುಧಾರ್ತರ್ ನಿಜಪ ॥
ಕ್ತ್ರಮನೀಕ್ಷಿಸಲೊಡಮೆಂಬೊಂ ।
ದಮೃತಾಸ್ರವಗುಣಮನಮಿತಗುಣನೊಳಕೆಯ್ದಂ ॥ ೨೭

ತನಗಿತ್ತ ಚರ್ಯೆಗೆಬಿದಶ ।
ನಮದಂ ದಿನದಿನದೊಳೆನಿಬರುಂಡೊಡಮಿರ್ದಂ ॥
ದಮೆ ತವದಿನಿತೆಂಬಕ್ಷೀ ।
ಣಮಹಾಶನವೃತ್ತಿ ಕೀರ್ತಿವೆತ್ತುದು ಪಿರಿದುಂ ॥ ೨೮

ಎಂದಿವು ಮೊದಲಾಗೆ ಸಕಳಋದ್ಧ್ಯಂಗಪ್ರಭಾವಾಸ್ಪದನಶೇಷಸಾವದ್ಯಾತ್ಯಂತದೂರನಪ್ಪ ಜಿನಕಲ್ಪಿತಮೆಂಬಾಚರಣಮಂ ಪೂರ್ಣಾನೇಕದಿನಂಗಳಂ ಯೋಗಯೋಗ್ಯಸ್ಥಳಂಗಳೊಳನುಷ್ಠಿಸಿ ತದ್ಧ್ಯಾನಮಾನಸನಾಗಿರ್ಪಲ್ಲಿ

ತಾರಾನಕ್ಷತ್ರಗ್ರಹ ।
ತಾರೇಶಚತುಷ್ಕರೊಗೆದು ಸೊಗಯಿಸುವ ವಿಹಾ ॥
ಯೋರಂಗಮೆನಿಸಿದಂ ಮುನಿ ।
ಸಾರಚತುರ್ಜ್ಞಾನವಿಳಸಿತಂ ನಿಶ್ಚಳಿತಂ ॥ ೩೯

ಅದೆಂತೆಂದೊಡೆ—

ಎಯ್ದಿದ ತತ್ತದ್ವಿಷಯಮನ ।
ನಯ್ದುಂ ತೆಱದಿಂದ್ರಿಯಗಳಿಂ ಮನದಿಂದಾ ॥
ರಯ್ದಱಿಯುತ್ತಿರ್ಪುದು ತಾ ।
ನೆಯ್ದೆ ಮತಿಜ್ಞಾನಮೆಂಬ ಪೆಸರಿಂದೆಸೆಗುಂ ॥ ೪೦

ಈಯೊಂದೆ ಮತಿಜ್ಞಾನ ।
ಕ್ಕಾಯತಿವೆತ್ತೊಂದಿ ತೋಱುಗುಂ ತತ್ತ್ವಾಭಿ ॥
ಪ್ರಾಯದವಗ್ರಹಮೀಹೆಯು ।
ವಾಯಂ ಧಾರಣಮೆನಿಪ್ಪ ನಾಲ್ಕುಂ ಭೇದಂ ॥ ೪೧

ಮತ್ತಮಿದು ಬಹುಬಹುವಿಧಂ ಕ್ಷಿಪ್ರಮನಿಸೃತಮನುಕ್ತಂ ಧ್ರುವಮೆಂದಾಱು; ತದಿತರಂಗಳಿಂತು ಪ್ರತ್ಯೇಕಂ ಪನ್ನೆರಡು ಭೇದಮಕ್ಕುಂ. ಅಲ್ಲಿಯವಗ್ರಹಮರ್ಥಾವಗ್ರಹಂ ವ್ಯಂಜನಾವಗ್ರಹಮೆಂದಿರ್ತೆಱಂ. ಚಕ್ಷುರಿಂದ್ರಿಯಕ್ಕಂ ಮನಕ್ಕಮರ್ಥಾವಗ್ರಹಮಲ್ಲದೆ ವ್ಯಂಜನಾವಗ್ರಹಮಿಲ್ಲ. ಇಂತು ಸ್ಪರ್ಶನರಸನಘ್ರಾಣಶ್ರೋತ್ರೇಂದ್ರಿಯಂಗಳೆಂಬ ನಾಲ್ಕುಮೊಂದೊಂದರ್ಕಱುವತ್ತು ತೆಱಂ. ಚಕ್ಷುರಿಂದ್ರಿಯಂ ನಾಲ್ವತ್ತೆಂಟು ತೆಱಂ. ಮನಮುಮನಿತೆ ತೆಱಂ. ಇಂತು ಮತಿಜ್ಞಾನಂ ಮುನ್ನೂಱ ಮೂವತ್ತಾಱು ಭೇದಮಕ್ಕುಂ. ಅದಲ್ಲದೆಯುಂ,

ಮತಿಪೂರ್ವಕಮುತ್ತದಿನ ।
ರ್ಥತತಿಯನಱಿವುದು ಸಮಂತು ತಾಂ ಪೆಸರಿಂದಂ ॥
ಶ್ರುತಭೇದಂ ತದ್ಭೇದ ।
ದ್ವಿತಯಂ ಲಿಂಗಜಮುಮಾವಗಂ ಶಬ್ದಜಮುಂ ॥ ೪೦

ಅಲ್ಲಿ

ಲಿಂಗಜಮನೇಕಭೇದಮ ।
ನಂಗೀಕರಿಸಿರ್ಕುಮಾವಗಂ ಶಬ್ದಭವಂ ॥
ಸಂಗೞಿಸಿರ್ಕುಂ ಪನ್ನೆರ ।
ಡಂಗಂ ಪದಿನಾಲ್ಕು ಪೂರ್ವಮೆಂಬಿನನನಿಶಂ ॥ ೪೩

ಅಂತವಱೊಳಂಗಂಗಳಾವುವೆಂದೊಡೆ—

ಪ್ರಕಟತರಾಚಾರಂ ಸೂ ।
ತ್ರಕೃತಂ ಸ್ಥಾನಂ ಬೞಿಕ್ಕೆ ಸಮವಾಯಾಧ್ಯಾ ॥
ಧಿಕೃತಂ ವ್ಯಾಖ್ಯಾಪ್ರಜ್ಞಾ ।
ಪ್ತಿಕರಂ ಜ್ಞಾತೃಕಥೆಯೆಂಬಿವೆಸೆಗುಂ ಮತ್ತಂ ॥ ೪೪

ಕ್ರಮದಿಂದುಪಾಸಕಾಧ್ಯಯ ।
ನಮುಮಲ್ಲಿಂ ಬೞಿಕಮಂತಕೃದ್ದಶಮುಂ ಮು ॥
ತ್ತಮಳಗುಣಮರ್ಣನೋಪ ।
ಕ್ರಮಮೆನಿಸಿದನುತ್ತರೋಪಪಾದಿಕದಶಮುಂ ॥ ೪೫

ಪರಿವಿಡಿಯಿಂ ಪ್ರಶ್ನವ್ಯಾ ।
ಕರಣಮುಮಾರಯೆ ವಿಪಾಕಸೂತ್ರಮುಮನಾಪ ॥
ನ್ನೆರಡನೆಯುದೃಷ್ಟಿವಾದಮು ।
ಮರುಶೋಭೆಯುನಾಂತುಮಾಪ್ತಪರಿಕಥಿತಂಗಳ್ ॥ ೪೬

ಮತ್ತಂ

ಪರಿಕರ್ಮಂ ಸೂತ್ರಂ ವಿ ।
ಸ್ತರಿತಪ್ರಥಮಾನುಯೋಗಮಾಪೂರ್ವಗತಂ ॥

ವರಚೂಳಿಕೆಯೆಂಬಿವು ಪ ।
ನ್ನೆರಡನೆಯಂಗಕ್ಕೆ ಭೇದಮಯ್ದು ವಿಕಲ್ಪಂ ॥ ೪೭

ಆಭೇದಂಗಳೊಳ್ ನಾಲ್ಕನೆಯ ಪೂರ್ವಗತದೊಳ್ ಪುಟ್ಟಿ,
ತರದಿಂದುತ್ಪಾತಪೂರ್ವಂ ಬಳಿಕ ಸೊಗಯಿಪ ಗ್ರಾಯಣೀಯಂ ಬಳಿಕ್ಕಂ।
ವರವೀರ್ಯಾನುಪ್ರವಾದಂ ಬಳಿಕೆ ನಿಯತಮಪ್ಪಸ್ತಿನಾಸ್ತಿಪ್ರವಾದಂ ॥
ಪರಮಜ್ಞಾನಪ್ರವಾದಂ ಬಳಿಕೆ ಬಳಿಕೆ ಸತ್ಯಪ್ರವಾದಂ ಬಳಿಕ್ಕಂ ।
ದೊರೆವೆತ್ತಾತ್ಮಪ್ರವಾದಂ ಬಳಿಕಮುಚಿತಕರ್ಮಪ್ರವಾದಂ ದಲಕ್ಕುಂ॥ ೪೮

ಬಳಿಕಂ ಪ್ರತ್ಯಾಖ್ಯಾನಂ ।
ಬಳಿಕ್ಕೆ ವಿದ್ಯಾನುವಾದಕಲ್ಯಾಣಂಗಳ್ ॥
ಬಳಿಕಂ ಪ್ರಾಣಾವಾಯಂ ।
ಬಳಿಕ್ಕೆ ನೆಗಳ್ದಕ್ರಿಯಾವಿಶಾಳಸಮಾಖ್ಯಂ ॥ ೪೯

ಬಳಿಕಂ ಕಡೆಯೊಳ್ ರೂಢಿಯ ।
ನೊಳಕೆಯ್ದಿರೆ ಲೋಕಬಿಂದುಸಾರಂ ಚೆಲ್ವಂ ॥
ತಳೆದು ಚತುರ್ದಶಪೂರ್ವಂ ।
ಗಳಂತು ಸೊಗಯಿಸುವು ಭವ್ಯಸಂಸೇವ್ಯಂಗಳ್ ॥ ೫೦

ಆಚತುರ್ದಶಪೂರ್ವಂಗಳ ವಸ್ತುಗಳ್, ಪ್ರತ್ಯೇಕಮನುಕ್ರಮದಿಂ

ಪತ್ತು ಪದಿನಾಲ್ಕು ನಿಯಮಂ ।
ಬೆತ್ತೆಂಟೋರೊಂಬತೆಯ್ದು ಪನ್ನೆರಡೀರಾ ॥
ಱತ್ತು ಪದಿನಾಱು ಮತ್ತಿ ।
ರ್ಪತ್ತಾಮೂವತ್ತು ಸಂದ ಪದಿನೈದಕ್ಕುಂ ॥ ೫೧

ಪತ್ತಕ್ಕುಂ ಪ್ರತ್ಯೇಕಂ ।
ಮತ್ತಂ ಪೆಸವಕ್ಕೆ ವಸ್ತುವೋರೊಂದರ್ಕಿ ॥
ರ್ಪತ್ತಕ್ಕುಂ ಪ್ರಾಭೃತಕಂ ।
ಬಿತ್ತರದಿನನೇಕಭೇದಸಂಘಾತಕೃತಂ ॥ ೫೨

ಅಂತು ವಿವಿಧವಿಕಲ್ಪಪರಿಕಲ್ಪಿತಂ ಶ್ರುತಜ್ಞಾನಮಕ್ಕುಂ. ಅವಲ್ಲದೆಯುಂ,

ಪ್ರಕೃತಸ್ವದ್ರವ್ಯಕ್ಷೇ ।
ತ್ರಿಕಾಲಭಾವಾಶ್ರಯಂಗಳಿಂ ಪುದ್ಗಲವ್ಯ ॥
ತ್ತಕಮಂ ಮರ್ಯಾದಾಪು ।
ರ್ವಕಮರಿವುದದವಧಿಯೆಂಬ ಪೆಸರ್ವ*ಡೆದಿರ್ಕುಂ ॥ ೫೩

ಬಗೆಯೆ ಭವಪ್ರತ್ಯಯಮುಂ ।
ಸೊಗಸೆ ಗುಣಪ್ರತ್ಯಯಮುಂ ತದುಭಯಮೆನಿಕ್ಕುಂ ॥
ಮಗುಳೆ ಗುಣಪ್ರತ್ಯಯದೊಳ್ ।
ನೆಗ*ಳ್ಗುಂ ಭೇದತ್ರಯಂಗಳನುಗತಿಯಿಂದಂ ॥ ೫೪

ಅವಾವುವವೆಂದೊಡೆ ಸಂ ।
ಭಾವಿತಸಾಮರ್ಥ್ಯಸಮಧಿಕಂಗಳ್ ಸಲೆ ದೇ ॥
ಶಾವಧಿ ಪರಮಾವಧಿ ಸ ।
ರ್ವಾವಧಿಗಳೆನಿಪ್ಪ ಪ್ರಚಿತನಾಮಯುತಂಗಳ್ ॥ ೫೫

ಅವಱೊಳ್ ದೇಶಾವಧಿ ಅನುಗಾಮಿ ಅನನುಗಾಮಿ ಹೀಯಮಾನಂ ವರ್ಧಮಾನಮನವಸ್ಥಿತಮನವಸ್ಥಿತಮೆಂದು ಷಟ್ಪ್ರಕಾರಮನುಳ್ಳದಕ್ಕುಂ. ಅವು ಗುಣಾಧಿಕರ್ಗೆ ಶಂಖಾದಿಚಿಹ್ನಂಗಳೊಳ್ ಪುಟ್ಟುಗುಂ. ತೀರ್ಥಕರರ್ಗೆ ಸರ್ವಾಂಗದೊಳ್ ಪುಟ್ಟುಗುಂ. ಇಂತವಧಿಬೋಧಂ ಬಹುವಿಧಮಕ್ಕುಂ. ಅದಲ್ಲದೆಯುಂ,

ಮನದಿಂದಾರಯದನ್ಯರ ।
ಮನೋಗತಾರ್ಥಂಗಳಂ ಸಮಂತಱಿವುದು ಸ ॥
ನ್ಮುನಿಗಳ್ಗಲ್ಲದೆ ಪುಟ್ಟದು ।
ವಿನುತಮನಃಪರ್ಯಯಾಭಿಧಾನಂ ಜ್ಞಾನಂ ॥ ೫೬

ಕ್ರಮದಿಂ ಋಜುಮತಿಯುಂ ವಿಪು ।
ಲಮತಿಯುಮೆಂದದಱ ಭೇದಮಿರ್ತೆಱನಕ್ಕುಂ ॥
ಸಮಸಂದದ್ವ್ಯರ್ಥದ್ವೀ ।
ಪಮೆನಿಸಿ ಮೊದಲೆನಿಸುಗು ನಿಜವ್ಯವಹೃತಿಯೊಳ್ ॥ ೫೭

ಅಂತು ವಿಶಿಷ್ಟಬೋಧಚತುಷ್ಟಯಾಳಂಕೃತಚರಮಶರೀರಂ ಚಂದ್ರಪ್ರಭಮುನಿಪ್ರಭು ಪರಮಪಂಚಮಜ್ಞಾನಸಂಜನನಕರಣಾತ್ಯಂತಶುದ್ಧಧ್ಯಾನೋದ್ಯೋಗಸಂಸಕ್ತಚಿತ್ತಂ ಛದ್ಮಸ್ಥಕಾಲಂ ಮಾಸತ್ರಯಪ್ರಮಿತಮಾದುದೆಂಬಂದಿಂಗೆ

ಚಿತ್ತಿದೆನಗತುಳಫಳಸಂ ।
ಪತ್ತಿಯುನಬಿಸಲ್ಕೆ ಬರ್ಪವೋಲಲ್ಲಿ ತಪ್ರೋ ॥
ವೃತ್ತಿ ಸಮನಿಸಿದದಲ್ಲಿಗೆ ।
ಮತ್ತೆಬ್ಬಿಂದಂ ಸುಬೋಧಲಬ್ಧಿನಿಮಿತ್ತಂ ॥ ೫೯

ಅಂತು ಮುನ್ನೆ ದೀಕ್ಷಾಗ್ರಹಣಮಾದ ಶುಭಂಕರೋದ್ಯಾನಕ್ಕೆ ವಂದೊಂದು ನಾಗವೃಕ್ಷದಕ್ಷೂಣಚ್ಛಾಯಾಚ್ಛನ್ನಮಪ್ಪ ನಿರ್ಮಳಶಿಳಾತಳದೊಳ್ ಈರ್ಯಾಪರಿಶುದ್ಧೀಕರಣಾನಂತರಂ ಪೂರ್ವಾಭಿಮುಖನಾಗಿ

ಕೃತಪರ್ಯಂಕಾಸನಂ ಸೂಸದೆ ನಿಲೆ ಕರಮುತ್ತಾನಕಸ್ವಸ್ತಿಕಂ ನಾ ।
ಭಿತಟನ್ಯಸ್ತಂ ಬೆಡಂಗಾಗಿರೆ ನಯನಯುಗಂ ನಿಶ್ಚಳಧ್ಯಾನಮುದ್ರಾಂ ॥
ಕಿತಮಾದಂ ಚೆಲ್ವನಾಲಿಂಗಿಸೆ ವಿಶದಶಿಗ್ರಾಮಸಂಶುದ್ಧಸಿದ್ಧ ।
ಪ್ರತಿಮಾನಿಷ್ಕಂಪನಿರ್ದಂ ಯತಿಪತಿ ಪರಮಧ್ಯಾನಯೋಗಪ್ರಯೋಗಂ ॥

ಆಗಳ್

ಪರಿಹೃತವಾತಪಾತರುತಮುಜ್ಝಿತಪಲ್ಲವಕಂಪನಸ್ವನಂ ।
ವಿರಹಿತಕೀರತಾರರಣಿತಂ ಗತಕೋಕಿಳಕಾಕಳೀಕಮುಂ ॥
ತರಿತಮದಾಳಿಝಂಕೃತಮಪಾಕೃತಶಾರಿಚಟೂಕ್ತಿ ಚಿತ್ರದೊಳ್ ।
ಬರೆದ ಬನಂಬೊಲಾದುದು ಬನಂ ಮುನಿಯೋಗವಿಘಾತಭೀತಿಯಿಂ ॥ ೬೦

ಅಂತವ್ಯಗ್ರನುಂ ಬಾಹ್ಯಸಮಗ್ರಸಾಮಗ್ರನುಮಾಗಿ ಲೋಕಾಗ್ರಮನೆಯ್ದುವಾಗ್ರಹದಿಂ ತತ್ಸ್ಥಾನನಿಷ್ಠಿತರಪ್ಪ ಸಿದ್ಧಪರಮೇಷ್ಠಿಗಳಷ್ಟಗುಣಂಗಳಂ ಕ್ಷಾಯಿಕಸಮ್ಯಕ್ತ್ವಮನಂತಜ್ಞಾನಮನಂತದರ್ಶನಮನಂತವೀರ್ಯಮಮೂರ್ತತ್ವಮವಗಾಹಿತ್ವಮಗುರುಲಘುತ್ವಮವ್ಯಾಬಾಧಿತ್ವಮೆಂಬಿವಂ ಪರಿಭಾವಿಸುತ್ತುಂ ಧ್ಯಾನೋನ್ಮುಖನಾಗಿ

ಪರಮಪ್ರವಚನರತ್ನಾ ।
ಕರಸಮುದಿತನವಪದಾರ್ಥದಿಂ ಮತಿಯುನಳಂ ॥
ಕರಿಸಿ ಮುನಿನಾಯಕಂ ಬಿ ।
ತ್ತರದಾಜ್ಞಾವಿಚಯವಿಳಸನೋಚಿತನಾದಂ ॥ ೬೧

ಬಿಡದೆ ಚತುರ್ಗತಿಯೊಳ್ ಬೞಿ ।
ವಿಡಿದಬಿಲೆ ತೊೞಲ್ವುತಿರ್ಪಘಪ್ರತತಿಯ ಬ ॥
ಲ್ದೊಡರನೆ ಬಿಡಿಸುವ ಬಗೆಯೊಳ್ ।
ತೊಡರ್ದಚಳನಪಾಯವಿಜಯಚಿಂತೆಯನಾಂತಂ ॥ ೬೨

ಇರದೆ ಶುಭಾಶುಭಕರ್ಮ ।
ಸ್ವರೂಪಮಂ ತತ್ಫಲಂಗಳಂ ಪರಿವಿಡಿಯಿಂ ॥
ಪರಿಭಾವಿಸೆ ಪರಮಯತೀ ।
ಶ್ವರನಂದು ವಿಪಾಕವಿಜಯಪರಿಚಿತನಾದಂ ॥ ೬೩

ಕ್ರಮದಿನನುಪ್ರೇಕ್ಷೆಗಳೊಳ್ ।
ಸಮಸಂದಾದ್ರವ್ಯಭೇದಸಂಸ್ಥಾನಮನಾ ॥
ದಮೆ ಚಿಂತಿಸಿ ಮುನಿಮುಖ್ಯಂ ।
ಸಮಸ್ತಸಂಸ್ಥಾನವಿಜಯಸುಸ್ಥಿತನಾದಂ ॥ ೬೪

ಅಂತು ಚತುರ್ವಿಧಧರ್ಮಧ್ಯಾನಮಂ ಧ್ಯಾನಿಸುತ್ತುಂ ನಿರತಿಶಯಲೇಶ್ಯಾವಿಶುದ್ಧನಧಃಪ್ರವೃತ್ತಮಪೂರ್ವನಿವೃತ್ತಮೆಂಬ ಕರಣತ್ರಯಶೋಷಣದಿನನಂತಾನುಬಂಧಿಸಂಜ್ಞೆಯಿಂ

ತಳೆದಿರ್ದ ದಿಕಷಾಯಮಂ ।
ಗಳನಾದಂ ಕ್ರೋಧಮಾನಮಾಯಾಲೋಭಂ ॥
ಗಳನುೞಿದಿರಾಱುಮೊಳಾ ।
ಗಳೆ ಯೋಗಿಜನಸ್ತುತಂ ವಿಸಂಯೋಜಿಸಿದಂ ॥ ೬೫

ಅನಂತರಮಿನಿತುಬೇಗಂ ವಿಶ್ರಮಿಸಿ ಪೂರ್ವೋಕ್ತಮದಿಂ ಮಿಥ್ಯಾತ್ವಸಮ್ಯಗ್ಮಿಥ್ಯಾತ್ವ ಸಮ್ಯಕ್ತ್ವಪ್ರಕೃತಿಗಳೆಂಬ ದರ್ಶನಮೋಹನೀಯತ್ರಿತಯಮಂ ಲಯಕ್ಕೆ ಸಲಿಸಿ

ತ್ರಿಕರಣಪರಿಣತನೇಱುಂ ।
ಪ್ರಕೃತಿಗಳುಮನಿಂತು ಕಿಡಿಸಿ ತತ್ಕ್ಷಯದಿಂ ಕ್ಷಾ ॥
ಯಿಕಸಮ್ಯಗ್ದೃಷ್ಟಿತ್ವಮು ।
ನಕಳಂಕಂ ತಳೆದು ಶುದ್ಧದರ್ಶನನಾದಂ ॥ ೬೨

ಆಗಿ ಬಱಿಯಂ ಕರ್ಮವಿಕಾರಮುಂ ಜೀವಸ್ವಭಾವಮುಂ ಪರಸ್ಪರಾತಿಕ್ರಮ ಮಂ ಮಾಡಿ ಸಂಕ್ಲೇಶವಿರೋಧಂಗಳ್ ನಿಯಮದಿಂ ಪರಾವರ್ತಿಸುವುದಱಿಂ ದಮುಂ ಶುದ್ಧೋಪಯೋಗಂ ಸಮೃದ್ಧಮಪ್ಪನ್ನೆಗಂ ಚಾರಿತ್ರಮೋಹೋ ದಯಮುಮುಂ ಜ್ಞಾನವೈರಾಗ್ಯಸಂಪತ್ತಿಯುಮೊಂದನೊಂದೊಟ್ಟಯಿಸುತಿರ್ಪು ದಱಿಂ ಮುಂ ಅಂತರ್ಮುಹೂರ್ತಂಬರಂ ಪ್ರಮತ್ತಾಪ್ರಮತ್ತಾಪರಾವರ್ತ ನಸಹಸ್ರಂಗಳಂ ಕಳಿಪಿ ನಿಶ್ಶ್ರೇಯಸಾನಂತಬೋಧಸುಖಪ್ರಾಸಾದಾರೋ ಹಣನಿಶ್ರೇಣೀಭೂತಕ್ಷಪಕಶ್ರೇಣಿಯೋಗ್ಯಾಧಃಪ್ರಮತ್ತಕರಣಪರಿಣತಾತಿಶ ಯಾಪ್ರಮತ್ತಗುಣಸ್ಥಾನದೊಳ್ ಸ್ಥಿತಿಬಂಧಾಪಸರಣಸಹಸ್ರಂಗೆಯ್ದನಿತಾ ನುಂ ಬೇಗದಿಂ

ಉಪಗತಮಪೂರ್ವಕರಣ ।
ಕ್ಷಪಕಗುಣಸ್ಥಾನಮಾಗೆ ತನಗೆ ಬಱಿಕ್ಕಾ ॥
ತ್ಮಪರಂ ನಾಲ್ವತ್ತೆರಡೆಂ ।
ಬ ಪವಣ್ ನೆಲಸಿದ ವಿಕಲ್ಪದಿಂದೊಪ್ಪುವುದಂ ॥ ೬೩

ಪೃಥಕ್ತ್ವವಿತರ್ಕವಿಚಾರಾಭಿಧಾನಮುಂ ಪ್ರಥಮಶುಕ್ಲಧ್ಯಾನಮುಂ ಧ್ಯಾನಿ ಸುತ್ತುಮಾಯುಷ್ಕರ್ಮಮುಱಿಯೆ ಉಱಿದಖಿಳಕರ್ಮಂಗಳಂ ಸ್ಥಿತ್ಯನು ಭಾಗಕಾಂಡಕಾಘಗುಣಸಂಕ್ರಮಣಪ್ರದೇಶಗುಣಶ್ರೇಣಿನಿರ್ಜರೆಗಳನನುಕ್ರ ಮದಿಂ ಕಿಡಿಸುತ್ತುಂ ಪ್ರತಿಕ್ಷಣಮನಂತಗುಣಪ್ರಭಾವದೊಳೊಂದಿದೊಂ ದೊಂದೆ ಪರಿಣತಿಯ ನಿವೃತ್ತಿಕರಣಕ್ಷಪಕಗುಣಸ್ಥಾನಮಂ ಪೊರ್ದಿ ಪೂ ರ್ವೋಕ್ತಸ್ಥಿತಿಕಾಂಡಕಾದಿಕರಣದಿನಂತರ್ಮುಹೂರ್ತದೊಳ್ ಶುದ್ಧಪರಿ ಣಾಮದೊಳ್ ನಿದ್ರಾನಿದ್ರಾಪ್ರಚಲಾಪ್ರಚಲಸ್ತ್ಯಾನಗೃದ್ಧಿ ನರಕತಿರ್ಯಗ್ಗ ತಿತತ್ಪ್ರಾಯೋಗ್ಯಾನುಪೂರ್ವ್ಯೇಕೇಂದ್ರಿಯಜಾತ್ಯಾತಪೋದ್ಯೋತಸ್ಥಾವರ ಸಾಧಾರಣಸೂಕ್ಷ್ಮಂಗಳೆಂಬ ಷೋಡಶಪ್ರಕೃತಿಗಳಂ ನಿಶ್ಶೇಷಂ ಕಿಡಿಸಿ ಮ ತ್ತಮಂತರ್ಮುಹೂರ್ತದಿನತಿವಿಶುದ್ಧಪರಿಣಾಮಪರತಂತ್ರರಾಗಿ,

ಅಪ್ರಭುವಮುನಿಕುಲತಿಲಕನ ।
ಪಪ್ರತ್ಯಾಖ್ಯಾನಕರ್ಮಸತ್ವಂಗಳ ರೂ ॥
ಪಪ್ರಳಯಮನೆಯ್ದಿಸಿದಂ ।
ಕ್ಷಿಪ್ರಮನುಕ್ರಮದೆ ತತ್ಕಷಾಯಾಷ್ಟಕಮಂ ॥ ೨೮

ಬಳಿಕಂ ತತ್ಪರಿಣಾಮದೆ ।
ಬಳೆದಂತಃಕರಣಮಂ ತಗುಳ್ಚಿ ಚತುಸ್ಸಂ ॥
ಜ್ವಳನನವಲೋಕಷಾಯಂ ।
ಗಳಂಬಘೆಪ್ರಕೃತಿಗಿಂತು ಪದಿನಾಱಿಕ್ಕಂ ॥ ೨೯

ಮತ್ತಂ ಕತಿಪಯಸಮಯದೊಳನುಕ್ರಮದಿಂ ನಪುಂಸಕವೇದಂ ಸ್ತ್ರೀ
ವೇದವೆಂಬ

ಎರಡುಮಂನದಿರ್ಪ ಸಮನಂ ।
ತರದೊಳ್ ಪುಂವೇದಪೂರ್ವಸತ್ಕರ್ಮಪರಂ ॥
ಪರವೊಱಿಸಿ ಕಿಡಿಸಿದಂ ಹಾ ।
ಸ್ಯರತ್ಯರತಿಶೋಕಭಯಜುಗುಪ್ಸೆಗಳಾಱಂ ॥ ೩೦

ಸಮಯೋನದ್ವ್ಯಾವಳಿಕಾ ।
ಳಮಾತ್ರದಿಂ ಪುರುಷವೇದದಭಿನವಬಂಧ ॥
ಕ್ರಮಮುಮನಱಿಸಿ ನಿವೇ ।
ದಮುಯುಂ ತಾನಾದನತಿಬಳಂಗರಿದುಂಟೇ ॥ ೩೧

ಮತ್ತಂ ಪರಿಮೃಷ್ಟಾವಶಿಷ್ಟಸಂಜ್ವಳನಚತುಷ್ಟಯಮಂ ಪ್ರತಿಕ್ಷಣಂ ಪ್ರವರ್ತಮಾನಾನುಭಾಗಾಶ್ವಕರ್ಣಕರಣಪೂರ್ವಸ್ಪರ್ಧಕಮರ್ದನದಿನಂತರ್ಮುಹೂರ್ತಮಂ ಕಳಿಪಿ ಬಳಿಯಮುಚಿತಕೃಷ್ಟಿಕ್ರಿಯೆಯಿಂ ಪೂರ್ವಾಪೂರ್ವಸ್ಪರ್ಧಕಾನುಭಾಗಮನನಂತಗುಣಹಾನಿರೂಪದಿಂ ದ್ವಾದಶಸಂಗ್ರಹಕೃಷ್ಟಿಗಳಂ ಮಾಡುತ್ತುಮಂತರ್ಮುಹೂರ್ತದಿಂ ಕೃಷ್ಟಿರೂಪಪ್ರವಿಷ್ಟಚತುಃಕಷಾಯಸಮಸ್ತಾನುಭಾಗನಾಗಿ ಮತ್ತಮಿನಿತು ಬೇಗದಿಂ ಪ್ರತ್ಯೇಕಂ ತ್ರಿವಿಧಮಪ್ಪ ಕ್ರೋಧಮಾನಮಾಯಾಸಂಜ್ವಳನಕೃಷ್ಟಿಗಳನನುಕ್ರಮ

ದಿಂ ಬೇಱವೇಱ ಕಿಡಿಸಿ ಮೂಳೋಚ್ಛಿತ್ತಿಯಂ ತತ್ಕಷಾಯತ್ರಯಕ್ಕೆ ಪಡೆದು ಮತ್ತಂ ಕಿಱದುಬೇಗದಿಂ ಲೋಭಸಂಜ್ವಳನಪ್ರಥಮಕೃಷ್ಟಿಗತಾನುಭಾಗಮಂ ಭಂಜಿಸಿ ಬಱಯಮೆರಡನೆಯ ಕೃಷ್ಟಿಗತಾನುಭಾಗಮಂ ಭಾವಿಸುತ್ತಂ ಬಾದರಸಾಂಪರಾಯಕೃಷ್ಟ್ಯನುಭಾಗಮನನಂತಗುಣಹಾನಿರೂಪದಿಂ ತುಂದಿಸಿ ಸೂಕ್ಷ್ಮಸಾಂಪರಾಯಕೃಷ್ಟಿಗಳಂ ಮಾಡುತ್ತುಮಂತಮುರ್ಹೂತರ್ಕಾಲದಿಂ ಬಾದರಲೋಭಸಂಜ್ವಳನಮಂ ಕಿಡಿಸಿ ಸಾಮಾಯಿಕಚ್ಛೇದೋಪಸ್ಥಾಪನಾಶುದ್ಧಿಸಂಯಮಸಮೇತಾನಿವೃತ್ತಿಕರಣಕ್ಷಪಕಗುಣಸ್ಥಾನಮಂ ದಾಂಟಿ ಸಮನಂತರದಿಂ ಸೂಕ್ಷ್ಮಸಾಂಪರಾಯಸಂಯಮೋಪಯುಕ್ತ ಸೂಕ್ಷ್ಮಸಾಂಪರಾಯಕ್ಷಪಕನಾಗಿ,

ಪ್ರಕಟಂ ಯಥೋಕ್ತಪರಿಣಾ ।
ಮಕಾಲದಿಂ ಕಱಪಿ ಸೂಕ್ಷ್ಮಲೋಭಕಷಾಯ ॥
ಪ್ರಕೃತಿಯುಮನಷ್ಟವಿಂಶತಿ ।
ವಿಕಲ್ಪರಿಪುಮೋಹನೀಯಬಲಮಂ ಗೆಲ್ದಂ ॥ ೭೦

ಅನಂತರಂ ವಿಗೆತರಾಗದ್ವೇಷಭಾವಿಸಂಭಾವಿತಯಥಾಖ್ಯಾತಚಾರಿತ್ರಪವಿತ್ರಕ್ಷೀಣಕಷಾಯವೀತರಾಗಚ್ಛದ್ಮಸ್ಥಸಂಯತಗುಣಸ್ಥಾನಮಂ ಕರಣಲಬ್ಧಿಯ ಪರಮಪ್ರಕರ್ಷದಿಂ ಪಡೆದು ಶುದ್ಧನಿಶ್ಚಯನಯದಿಂ ಸ್ಪರ್ಶರಸಗಂಧವರ್ಣದೂರಮುಂ ಕಾರಣಸಮಯಸಾರಮುಮನಾದ್ಯನಿಧನಚೈತನ್ಯಮಯಮುಮಪ್ಪ ನಿಜನಿರಂಜನಪರಮಾತ್ಮಜ್ಯೋತಿಯೊಂದನೆ ನಿರ್ವಿಕಲ್ಪಕನಿಶ್ಚಯಭಾವಂ ಶ್ರುತಜ್ಞಾನದಿನವಳಂಬಿಸಿ ನಿಶ್ಚಳಮಾಗಿರ್ದ

ಕೇವಲಮೇಕತ್ವವಿತ ।
ರ್ಕಾವೀಚಾರದ್ವಿತೀಯಶುಕ್ಲಧ್ಯಾನ ॥
ಶ್ರೀವಿಳಸನದಿಂ ಮಾಡು ।
ತ್ತಾವಿಭು ಬಹಳಪ್ರದೇಶನಿರ್ಜರೆಗಳುಮಂ ॥ ೭೧

ಆಗುಣಸ್ಥಾನದುಪಾಂತ್ಯಸಮಯದೊಳ್ ನಿದ್ರಾಪ್ರಚಲೆಗಳಂ ಕಿಡಿಸಿ ಚರಮಸಮಯದೊಳೊರ್ಮೊದಲೊಳ್

ತವಿಸಿದನೆಯ್ದೆ ಮತಿಶ್ರುತ ।
ಮವಧಿಮನಃಪರ್ಯಯಾಹ್ವಯಂ ಕೇವಳಮೆಂ ॥
ಬಿವಱಾವರಣಮನಯ್ದುಮ ।
ನವದಾತಚರಿತ್ರನಿರತನಾತ್ಮೈಕರತಂ ॥ ೨೪

ನಿಧನಮನೆಯ್ದಿಸಿದಂ ಸುಗು ।
ಣಧನಂ ತತ್ತ್ವೈಕಸಾಧನಂ ವಿಜಿತಾರಿ ॥
ಪ್ರಧನಂ ಚಕ್ಷುರಚಕ್ಷುರ ।
ವಧಿಕೇವಳದರ್ಶನಾವರಣಮಂ ನಾಲ್ಕಂ ॥ ೨೫

ವಿಭು ದಾನಲಾಭಭೋಗೋ ।
ಪಭೋಗವೀರ್ಯಾಂತರಾಯಪಂಚಕಮಂ ವೀ ॥
ತಭಯಂ ಲಯಕ್ಕೆ ಸಲಿಸಿದ ।
ನಭೂತಪೂರ್ವಪ್ರಭಾವನತಿಶಯವಿಭವಂ ॥ ೨೬

ಅಂತು ಘಾತಿಚತುಷ್ಟಯಕ್ಕಂ ಕದಳೀಘಾತಂ ಮಾಡಲೊಡಂ.

ಪದೆಪಂ ಸಂಯುತಚಕ್ರಮೆಯ್ದೆ ಲಯಮಂ ಘಾತ್ಯಂಧಕಾರಂ ಪ್ರತಾ ।
ಪದ ಪೆಂಪೊಂದಿರೆ ರಾಗಮಂ ಪಡೆಯೆ ಸದ್ಭವ್ಯಾಶಯಾದ್ರ್ಯಾಶೆ ಪೂರ್ವಾಂ ॥
ದದ ಕುಂದಂ ಕುಮುದೋತ್ಪಳಂ ತಳೆಯೆ ತಚ್ಚಂದ್ರಪ್ರಭಪ್ರಾಜ್ಞಗೇಂ ।
ದ್ರದೊಳಂದಾದುದು ಕೇವಳಾನಗಮಭಾಸ್ವದ್ಭಾನುಬಿಂಬೋದಯಂ ॥ ೨೭

ಅನಘಂಗೆ ಕೇವಲಜ್ಞಾ ।
ನನೇತ್ರಮುನ್ಮೀಳಿಸಿತ್ತು ಸರ್ವಗತಂ ಫಾ ॥
ಲ್ಗುನಮಾಸಬಹುಳಸಪ್ತ ।
ಮ್ಯನುರಾಧೆಯೊಳೊಂದಿ ಸಂದ ಸಾಯಂತನದೊಳ್ ॥ ೨೮

ಸಮಸಂದ ಮತಿಶ್ರುತಮವ ।
ಧಿಮನಃಪರ್ಯಯಮೆನಿಪ್ಪವುಱಿದಿರೆ ತನ್ನೊಳ್ ॥
ಕ್ರಮಕರಣವ್ಯವಧಾನ ।
ಪ್ರಮುಕ್ತಮೆಸೆದತ್ತು ವಿಮಳಕೇವಳಬೋಧಂ ॥ ೨೯

ಸುರಶಿಖರಿ ಭಾಸ್ವರಜ್ಯೋ ।
ತಿರಂಗವಮಂ ಜಳಧಿ ವಿಮಳಮಣಿಯುಂ ಗಗನಂ ॥
ಸ್ಫುರದಿಂದುವನಾಂತಂತಿರೆ ।
ಪರಮಂ ಕೈವಲ್ಯಬೋಧನುಂ ತೆಳೆದೆಸೆದಂ ॥ ೮೦

ಮತ್ತಂ ತತ್ಸಮಯದೊಳ್ ಲಬ್ಧಕ್ಷಾಯಿಕಸಮ್ಯಕ್ತ್ವಾದಿ ನವಕೇವಳ ಲಬ್ಧಿಯಾಗೆ,

ಆಧ್ಯಾತ್ಮಿಕಮೆನಿಸಿದ ಶು ।
ಕ್ಲಧ್ಯಾನಮೆ ಬಳೆದು ಪೊಱಗೆ ಬಳಸಿದುದೆನೆ ವಿ ॥
ಶ್ವಧ್ಯೇಯನ ಚರಮಾಂಗದೊ ।
ಳಧ್ಯಾಸಿತಮಾಯ್ತು ಮೆಯ್ಯ ದೀಪ್ತಿನಿಕಾಯಂ ॥ ೮೧

ಅಂತು ಯುಗಪತ್ಸಮುದಿತಸಹಸ್ರಸಹಸ್ರಪ್ರಭಪ್ರಭಾಭಾಸುರಪರಮೌದಾರಿಕಶರೀರಂ ಪಂಚಶತಚಾಪೋತ್ಸೇಧನಾಗಗನಕ್ಕೆ ನೆಗೆಯಲೊಡನಮರೇಂದ್ರಾಸನಕಂಪದೊಡನೆ

ವನಭವನಜ್ಯೋತಿರ್ಲೋಕ ।
ಕನಾಕಮೆಂಬಿವಱೊಳೆಯ್ದೆ ಭೇರೀಶಂಖ ॥
ಸ್ವನಮುಂ ಗಜಾರಿಘಂಟಾ ।
ಧ್ವನಿಗಳುಮಕೃತಂಗಳೊಗೆದುವಿರದೊವರ್ದಲೊಳ್ ॥ ೮೨

ಲೋಕತ್ರಯವರ್ತನಮುಮ ।
ನಾಕೇವಳಬೋಧನೇಕಸಮಯದೊಳಂತ ॥
ವ್ಯಾಕುಳಮಱಿವವೊಲಱಿದಂ ।
ಲೋಕತ್ರಯಮಂ ತದುದಯಮಂ ತತ್‌ಕ್ಷಣದೊಳ್ ॥ ೮೪

ಸಿರಿಸಾರದೆಯರ್ ಸಹಬಂ ।
ಧುರರುಚಿಸಂಪೂರ್ಣಚಂದ್ರನಮೃತಾಕರನೊಳ್ ॥
ಮೆಱೆವಂತನಂತಲಕ್ಷ್ಮೀ ।
ಪರಮಶ್ರೀಚಂದ್ರನಾಥನೇನೊಪ್ಪಿದನೋ ॥ ೮೧

ಈ ಪದ್ಯವು ಬಂದು ಪ್ರತಿಯಲ್ಲಿ ಮಾತ್ರ ಇದೆ; ಗ್ರಂಥಕರ್ತನದಲ್ಲವೆಂದು ತೋರುತ್ತದೆ.

ಪಾತಾಳಾವಸಥಂ ಮಹಾವನಸಮೂಹಂ ಸ್ವರ್ವಿಮಾನೋತ್ಕರಂ ।
ಜ್ಯೋತಿರ್ಲೋಕಮಿವೆಯ್ದೆ ಪಾಱೆನಿಸಿ ಬಂದತ್ತಾವಗಂ ತತ್ಕ್ಷಣಂ ॥
ವ್ರಾತಂ ವ್ಯಂತರದೇವಸಂತತಿ ದಿವಾಕಸ್ಸಂಕುಳಂ ಚಂಕನತ್ ।
ಜ್ಯೋತಿಷ್ಕಾವಳಿ ಕೇವಳಾವಗಮಕಲ್ಯಾಣೋತ್ಸವೋತ್ಸುಕ್ಯದಿಂ ॥ ೮೫

ಗಗನಮನಂತಮೆಂಬ ನುಡಿ ಸತ್ಯಮದಲ್ಲದೊಡೆಯ್ದೆ ಬರ್ಪ ದೇ ।
ವಗಣದನೂನಯಾನನಿಕರಕ್ಕೆ ವಿಭೂಷಣರತ್ನರಶ್ಮಿರಾ ॥
ಜಿಗೆ ವಿವಿಧಧ್ವಜಪ್ರತತಿಗಿದ್ದ ಚತುರ್ವಿಧವಾದ್ಯನಿಸ್ವನಾ ।
ನುಗಜಯಜೀವನಂದತುಮುಲಧ್ವನಿಗಿಂತೆಡೆಯಾಗಿ ತೋರ್ಕುಮೇ ॥ ೮೬

ಅನ್ನೆಗಂ,

॥ ಮಂದಾಕ್ರಾಂತೆ ॥

ವ್ಯಾಧೂತೋದ್ಯಚ್ಚಮರಜಮಿಳನ್ಮೌಳಿಭೂಷಾಮಣಿಶ್ರೇ ।
ಣೀಧಾಮೋದ್ಯೋತಿತದಶದಿಶಂ ಜೈನಕೈವಲ್ಯಕಲ್ಯಾ ॥
ಣಾಧೀನಾತ್ಮಂ ಸುರಪರಿವೃಥಂ ಸಿಂಧುರೇಂದ್ರಾಧಿರೂಢಂ ।
ಸೌಧರ್ಮೇಂದ್ರಂ ಶಚಿವೆರಸು ಬಂದಂ ಮಹಾನಂದದಿಂದಂ ॥ ೮೭

ತ್ರಿದಶಸ್ತ್ರೀಚಯಮುದ್ಘಶೋಣಮಣಿದೀಪಶ್ರೇಣಿಯಂ ಪಾರಿಜಾ ।
ತಗಳತ್ಪುಷ್ಪಕದಂಬಮಂ ವಿವಿಧರತ್ನಾಮತ್ರಸಂದೋಹಮಂ ॥
ಮುದದಿಂ ತಾಳ್ದಿ ಬರುತ್ತುಮತ್ತು ತಳೆದತ್ತಿತ್ತಾವಗಂ ಜ್ಯೋತಿರಂ ।
ಗದ ಮಾಲ್ಯಾಂಗದ ಭಾಜನಾಂಗದ ಚಳಚ್ಛಾಖಾವಳೀಲೀಲೆಯಂ ॥ ೮೮

ಪೊಳೆವೆಳಮಿಂಚುಗಳಂಬರ ।
ತಳದೊಳ್ ಮಿಳಿರ್ವಂತೆ ದಿವಿಜನರ್ತಕಿಯರ್ ಗೊಂ ॥
ದಳದಿಂದೆ ಗೀತವಾದ್ಯಂ ।
ಗಳ ಲಯದಿಂ ನರ್ತಿಸುತ್ತು ಬಂದರ್ ಪಲರುಂ ॥ ೮೯

ಅಂತು ನಭೋವಿಭಾಗಮೆಲ್ಲಂ ಚಂದ್ರಮಂಡಲಮಯಮುಮಂ, ದಿಶಾಪ್ರದೇಶಮೆಲ್ಲಂ ಸುರಶರಾಸನಮಯಮುಮಂ, ವಸುಧಾವಳಯಮೆಲ್ಲಂ ತಾರಕಾಮ

ಯುಮಯುಮಮಾದುದೆಂಬಂತಿರೆತ್ತಿದ ಮುತ್ತಿನ ಸತ್ತಿಗೆಯ ಮೊತ್ತಮುಂ, ಪಸರಿಸಿದ ಪಲತೆಱದ ಮಣಿದೊಡವುಗಳ ಬೆರಕೆವೆಳಗುಗಳ ಬಳಗಮುಂ, ಅಲ್ಲೊಕ್ಕ ಪುಷ್ಪವೃಷ್ಟಿಯ ಪಾರಿಜಾತದರಲ ಸೆರವಿಯುಂ, ಅತ್ತಿತ್ತಲುಮುತ್ಸಂತತೋಭಾವಳಂಬಮಾಗೆ ಚತುರ್ನಿಕಾಯಾಮರಸಮನ್ವಿತಂ ಬಂದು ಮುನ್ನಮೆ ತನ್ನ ಬೆಸದಿಂ ವೈಶ್ರವಣನಶ್ರಾಂತಭಕ್ತಿಯಿಂ ಸಮೆದ ಸಮವಸರಣಮಂಡಳಮನಾಖಂಡಳಂ ಪೊಕ್ಕು, ತನ್ಮಧ್ಯಸ್ಥಿತೋತ್ತುಂಗಸಿಂಹಾಸನಮನಳಂಕರಿಸಿರ್ದ ಭುವನತ್ರಯಜ್ಯಾಯನಂ ತ್ರಿಪ್ರದಕ್ಷಿಣಂಗೆಯ್ದು ನಿಟಿಳನಿಹಿತಮುಕುಳಿತಕರಸರೋಜನಾಗಿ

॥ ಪೃಥ್ವೀವೃತ್ತಂ ॥

ಸ್ತವಾವಳಿಗೆ ವಾಙ್ಮಯಂ ಸ್ಮೃತಿಗೆ ತಾಂ ಮನೋವೃತ್ತಿಯೆಂ ।
ಬಿವಾರಯೆ ಸಮನ್ತುಪಾಯಮೆನಿಸಿರ್ದುವಿರ್ದಂದುಮೇಂ ॥
ಅವಾಙ್ಮನಸಗೋಚರಂ ದಿಟಕೆ ನೀಂ ಬಟೀಕ್ಷಾವ್ರದೀ ।
ಭವಚ್ಚರಣಸೇವೆಯೊಳ್ ಕ್ರಿಯೆ ಜಿನೇಂದ್ರಚಂದ್ರಪ್ರಭಾ ॥ ೯೦

ಕಷಾಯಕಲುಷಾತ್ಮರಂ ಬಗೆದು ದೇವರೆಂದಾವಗಂ ।
ವಿಷಾದವಿಕಳತ್ವಮಂ ತಳೆವರನ್ಯರಜ್ಞಾನದಿಂ ॥
ನಿಷೇವ್ಯಜಳಮೋಹದಿಂ ಮರುಮರೀಚಿಯಂ ಪೊರ್ದುವಾ ।
ತೃಷಾರ್ತಮೃಗಜಾಳದಂದದೆ ಜಿನೇಂದ್ರಚಂದ್ರಪ್ರಭಾ ॥ ೯೧

ಅವಾರ್ಯಕುಮತಾವಳೀವಿಷಮನಕ್ರಚಕ್ರಾಕುಳಂ ।
ಭವಾಂಬುನಿಧಿ ದಾಂಟಲೆಂದರೆಬರಂತದಂ ಸಾರ್ವದುಂ ॥
ಭವನ್ಮತಬಹಿತ್ರಮಂ ತಳೆದು ಕರ್ಣಧಾರತ್ವಮಂ ।
ನಿವೇದಿಸಿ ಸುಮಾರ್ಗಮಂ ಪೊರೆ ಜಿನೇಂದ್ರಚಂದ್ರಪ್ರಭಾ ॥ ೯೨

ಜರತ್ತೃಣಜುಗುಪ್ಸೆಯಿಂ ಬಿಸುಟಹೀಂದ್ರಮರ್ತ್ಯೇಂದ್ರನಿ ।
ರ್ಜರೇಂದ್ರಪದಮಂ ಪದಾನತರ್ಗೆ* ಮತ್ತೆ ನೀನೀವುದೇಂ ॥
ಕರಂ ಬಗೆಯೆ ಚೋದ್ಯಮೋ ಬಯಸಿ ತಾಳ್ದಿದಾರ್ಹಂತ್ಯಮಂ ।
ನಿರಾಕುಳತಮೀವೆಯೆಂದೊಡೆ ಜಿನೇಂದ್ರಚಂದ್ರಪ್ರಭಾ ॥ ೯೩

ಲಸತ್ಸ್ಮಿತಸರೋಜಾಸನಮಂ ಹಿಮಕರೋಪಳಾದರ್ಶನಮಂ ।
ಪ್ರಸಿದ್ಧವಿಧುಬಿಂಬಮುಮಂ ನಿಲಿಸಿಮೆಲ್ಲಮೆಂದೆಲ್ಲಮಂ ॥
ಬಿಸುಟ್ಟುಮವಿಕಾರದೊಳ್ ನೆಲಸಿದತ್ತು ತತ್ಸ್ವೇಚ್ಛೆಯಿಂ ।
ಪ್ರಸನ್ನತೆ ನಿಜಾಸ್ಯದೊಳ್ ಸಲೆ ಜಿನೇಂದ್ರಚಂದ್ರಪ್ರಭಾ ॥ ೯೪

ತ್ವದೀಯ ತನುಚಿಂತೆಯುಂ ಪಡೆಯೆ ನಿತ್ಯನೈಶ್ಚಿಂತ್ಯಮಂ ।
ತ್ವದೀಯಪದಪೂಜೆಯೊಳ್ ತೊಡರೆ ಲೋಕಪೂಜ್ಯತ್ವಮಂ ॥
ತ್ವದೀಯಗುಣಕೀರ್ತನಕ್ಕಳಿಸೆ ಕೀರ್ತಿಯುಂ ನೀನೆ ಪೇಳಾ ।
ಇದೇವೆ ವಿಪರೀತಮಿಂತಿದು ಜಿನೇಂದ್ರಚಂದ್ರಪ್ರಭಾ ॥ ೯೫

ಸ್ಮರಂ ಸ್ಮರಣಮಾತ್ರದಿಂ ಪಡೆದನರ್ಧನಾರೀತ್ವಮಂ ।
ಹರಂಗೆ ದಿಟಮೆಂಬ ನಿನ್ನೊಳಮಹುರ್ತದಂಕಾರದಿಂ ॥
ವಿರೋಧಿಸಿ ಹತಪ್ರಭಂ ನಿಡಿದನಂತೆ ದಲ್ ಕಾರಣಂ ।
ಪರಾಭವಕೆ ಗರ್ವಮಲ್ಲದೆ ಜಿನೇಂದ್ರಚಂದ್ರಪ್ರಭಾ ॥ ೯೬

ಪದಂ ನಿನಗೆ ಮುಕ್ತಿಯೊಂದೆ ಕುಡುತಿರ್ಪ ನೀನಂತದಂ ।
ಪದಾಶ್ರಿತರ್ಗೆ* ಸಂತತಂ ಪಲರ್ಗೆ* ಕೊಟ್ಟೊಡಂ ಮತ್ತೆ ತ ॥
ತ್ಪದಚ್ಯುತಿಯುದಿಲ್ಲ ನಿನ್ನೊಳದು ಚೋದ್ಯಮೋ ತ್ವತ್ಪ್ರಭಾ ।
ವದಿಂದೆ ದೊರೆಕೊಳ್ವದಾವುದೊ ಜಿನೇಂದ್ರಚಂದ್ರಪ್ರಭಾ ॥ ೯೭

ಎಂದು ಸಮಸ್ತಾಮರಸಮೇತಂ ಸ್ತುತಿಗೆಯ್ದು ಮಾಣದೆ ಮತ್ತಂ,
ಸುಮನೋದಾಮಂಗಳಂ ಸಂಗಳಿಸು ಕನಕಕುಂಭಂಗಳಂ ತುಂಬು ತೀರ್ಥಾಂ
ಬುಮನುದ್ಯದ್ಗಂಧಮಂ ಗಂಧಮನಳವಡಿಸುತ್ಕೃಷ್ಟಮಂ ಕೊಳ್ಳ ಫಲವ್ರಾ॥
ತಮನಾನೈವೇದ್ಯಮಂ ಪರ್ಥಿಸು ಸರಭಿಲಸದ್ಧೂಪಮಂ ಕೂಡು ದೀಪ್ರೋ।
ದ್ಗಮಮಂ ಮಾಡಕ್ಷತಕ್ಷಾಳನಮನೊಡರಿಸೆಂದಿಂದ್ರನಿಂದ್ರಾಣಿಗೆಂದಂ॥ ೯೮

ಎನಲೊಡಮೊಡನೆ ತಂದವಟಯ್ಸಿದನೇಕದಿವ್ಯಾರ್ಚನಾದ್ರವ್ಯಂಗಳನಟ್ಟು ಮೆರಸರ್ಚಿಸಿಯುಮಿಂತು

ವರತೀರ್ಥಾಧೀಶನೇತ್ರೋತ್ಸವದೊಳೆ ಮನಮಂ ತದ್ಗುಣಸ್ತೋತ್ರಪ್ರವೃ
ತ್ತೋ । ತ್ಕರಪಾಠಪ್ರಸ್ತುತೋದ್ಯೋಗದೊಳೆ ವಚನಮಂ ತತ್ಪದಾಂ

ಭೋಜಪೂಜಾ ॥ ಕರಣಪ್ರಾಚುರ್ಯಕಾರ್ಯಾಂತರದೊಳ್ ತನುವಂ ಯೋಜಿಸುತ್ತಿರ್ದನಿಂದ್ರಂ । ಪಿರಿದೊಂದಾನಂದದಿಂದಂ ಸುಕೃತಿ ಸಕಳ ಸಾಹಿತ್ಯವಿದ್ಯಾವಿನೋದಂ ॥ ೯೯

॥ ಗದ್ಯಂ ॥

ಇದು ಪರಮಪುರುನ್ನಾಥಕುಳಕುಭೃತ್ಸಮುದ್ಭೂತಪ್ರವಚನಸರಿತ್ಸರಿನ್ನಾಥ ಶ್ರುತಕೀರ್ತಿತ್ರೈವಿದ್ಯಚಕ್ರವರ್ತಿ ಪದಪದ್ಮನಿಧಾನದೀಪವರ್ತಿ

ಶ್ರೀಮದಗ್ಗಳದೇವ

ವಿರಚಿತಮಪ್ಪ

ಚಂದ್ರಪ್ರಭಪುರಾಣದೊಳ್

ಕೇವಲಜ್ಞಾನೋದಯೋತ್ಸವಂ

ಚತುರ್ದಶಾಶ್ವಾಸಂ.

ಶ್ರೀದಂ ನಿಜಾಜ್ಞೆಯಿಂ ಸಂ ।
ಪಾದಿಸಿದಾಸಮವಸೃತಿಯನೀಕ್ಷಿಸಿ ಪರಮಾ ॥
ಹ್ಲಾದಮನಾಂತಂ ಪೌಳೊಳ್ ।
ಮೀದಯಿತಂ ಜೈನಜನಮನೋಹರಚರಿತಂ ॥ ೧

ಪರಮನನೆ ಕಾಣ್ಬ ಪೂಜಿಪ ।
ಭರದಿಂ ಮುಂ ಪೊಕ್ಕನಂತರಂ ತತ್ಸಭೆಯಂ ॥
ಹರಿ ನೋಡಿ ತನ್ನ ಕಣ್ಸಾ ।
ಸಿರಮುಮನಾನಂದರಸದೊಳೋಲಾಡಿಸಿದಂ ॥ ೨

ಪರಮೇಶಂ ಮಧ್ಯದ ಮಂ ।
ದರದಂತಿರೆ ಸಮವಸರಣವಳಯಮಂ ವಿಳಸ ॥
ದ್ಗಿರಿಸಿಂಧುನದೀಪುರಭೂ ।
ಸುರಜಂಬೂದ್ವೀಪಮೆಂಬಿನಂ ಸೊಗಯಿಸುಗುಂ ॥ ೩

ಅದು ಗಗನಲಕ್ಷ್ಮಿಗಾದ ।
ತ್ತುದಾತ್ತಮಂಡನಮದರ್ಕೆ ನಾಯಕಮಣಿಯುಂ ॥
ದದೆ ಮಧ್ಯದೊಳಿರ್ದಂ ದೇ ।
ವದೇವನತ್ರಾಸನುತ್ಪ್ರಭಂ ನುತಗಾತ್ರಂ ॥ ೪

ಮತ್ತಂ,

ಅದು ಪರಮಾರ್ಹಂತ್ಯಶ್ರೀ ।
ಸುದತೀವಿವಹನವಿಶಾಳವೇದಿಕೆಯನಘಂ ॥
ಗದು ಮುಕ್ತಿಗೆ ನಡೆಯಲೊಡ ।
ರ್ಚಿದ ಪೊಱವೀಡೆನಿಸಿದತ್ತು ತತ್ಸಭೆ ಶುಭದಂ ॥ ೫

ಅದೆಂತೆಂದೊಡೆ—

ಧರೆಯಿಂ ಪಂಚಸಹಸ್ರಚಾಪನಿಯತೋತ್ಸೇಧಂಬರಂ ವ್ಯೋಮಭೂ ।
ಮಿರುಹಸ್ಕಂಧಮಿದೆಂಬಿನಂ ನಿಮಿರ್ದು* ನಿಂದತ್ತಾದಮಾದರ್ಶಭೂ॥
ಸುರಮಾದ್ವಾದಶಯೋಜನಾತ್ತಸಮವೃತ್ತಂ ಕಣ್ಗೆ ಗೊತ್ತಪ್ಪಿನಂ ।
ಹರಿನೀಲೈಕಶಿಲಾಮಯಂ ಮಹಿತಳಂ ತೀರ್ಥೇಶನಾಸ್ಥಾನದಾ ॥ ೬

ಅಂತುಮಲ್ಲದೆಯುಂ

ಆಸಮವಸರಣಲಕ್ಷ್ಮಿಯ ।
ಭಾಸುರತರಪಂಚರತ್ನಮಯಕಾಂಚನಮಾ ॥
ಳಾಸಾದೃಶ್ಯಕ್ಕಾಯ್ತುವ ।
ಕಾಶಂ ಕಿಂಮಿಾರಕಿರಣಜಾಳಂ ಶಾಳಂ ॥ ೮

ತ್ರಿದಶೇಂದ್ರಧನುಶ್ಶ್ರೀಗಾ ।
[1]ಸ್ಪದಮೆನಿಸಿರ್ದುಂ ಬಟಿಕ್ಕಮಚಿರದ್ಯುತಿಸಂ ॥
ಪದಮೆನಿಸಿ ತೋರ್ಪುದಂ ತಾ ।
ಮದು ಚಿತ್ತಕ್ಕೆ ಚಿತ್ರತರಮೆಂಬಿನೆಗಂ ॥ (?) ೯

ಮತ್ತಂ

ತೊಳಪ ಸರಿಗೆಗಳ ಮುಗಿಲ ।
ಟ್ಟೆಳೆಗಳ ಮಿಳ್ಳಿಸುವ ಪಲವು ಪಬಿಯಿಗೆಗಳ ಗೊಂ ॥
ದಳಮೆಯ್ದೆ ಬಳಸಿ ಚೆಲ್ವಿನ ।
ಭೆಳಸೆನೆ ಸೊಗಯಿಪುದು ತನ್ಮಹಾಪ್ರಾಕಾರಂ ॥ ೧೦

ಮತ್ತಂ ವಸುಧಾವಲ್ಲಭ ।
ನೆತ್ತಿದ ಪೀಲಿದಟಿಯೆನಿಪ ನೀಳಸ್ಥಳಿಯಂ ॥
ಸುತ್ತಿ ಮಲರ್ದೆಸೆವ ತೊಂಗಲ ।
ಭಿತ್ತಿಯನೊಳಕೆಯ್ದುದತುಳಧೂಳೀಶಾಳಂ ॥ ೭

ಈ ಪದ್ಯವು ಒಂದು ಪ್ರತಿಯಲ್ಲಿ ಮಾತ್ರ ಇದೆ, ಗ್ರಂಥಕರ್ತನದಲ್ಲವೆಂದು ತೋರುತ್ತದೆ.

1. ಸ್ಪದಮನಿಸಿರ್ದಂ ಸಂಚರದ್ಯುತಿಸಂಪರಮೆನಿಸಿ ತೋರ್ಪುಯಂ ತೋಮದೆ ಮಿದುಚಿತ್ತಕೆ. ಕ॥

ಅವಱ ಪೂರ್ವಾದಿದಿಕ್ಚತುಷ್ಟಯದೊಳಂ ವಿಂಶತಿಸಹಸ್ರಸಂಖ್ಯಾಸಮನ್ವಿತಂಗಳುಂ, ದ್ಯುಚರಖಚರಭೂಚರವ್ಯಂತರೋರಗತಿರ್ಯಗ್ಭವ್ಯಗಣತ್ವರಿತಾರೋಹಣಾವರೋಹಣಕಾರಣಪ್ರಭಾವಪಾದಲೇಪಾದಿವಿಲಿಪ್ತಪ್ರಥಮಾಗ್ರಸೋಪಾನಸಮೀಚೀನಂಗಳುಮಾಗಿ,

ಧರೆಗಿೞಿವ ಬಾಂದೊಱೆಯ ಬ ।
ಲ್ದೆರೆಗಳೆ ಕರಮೆನಿಸಿ ಮಿಸುಪ ಪೊಸಸಳಿಕಿಂ ಬಿ॥
ತ್ತರಿಸಿದ ಸೋಪಾನಂಗಳ್ ।
ಕರಮೆಸೆದುವು ನೋಡಿದವರ ಕಣ್ ನುಣ್ಚುವಿನಂ ॥ ೧೧

ಆಸೋಪಾನಂಗಳಗ್ರದೇಶದೊಳ್

ದೆಸೆಯುಂ ಕೆಂಬಿಸಿಲೆಂಬಿನಂ ಬಳಸೆ ಪೀತೋದ್ದ್ಯೋತಸಂಘಾತಮಾ ।
ಗಸಮಂ ಚಿತ್ರಿಸೆ ಪಂಚರತ್ನಕಳಶೋದ್ಯತ್ಕಾಂತಿ ಮುಂದೊಂದಿ ಕ ॥
ಣ್ಬಸರಂಬೆತ್ತಿರೆ ತುಂಗತೋರಣಶತಂ ಕೆಂಬೊನ್ನ ಮಾಡಂಗಳೇ ।
ನೆಸೆದೊಪ್ಪಿರ್ದುವೊ ಬಿತ್ತರಂಬಡೆದು ತತ್ತದ್ಗೋಪುರದ್ವಾರದಿಂ ॥ ೧೨

ಹರಿನೀಳಮಹೀಪ್ರಾಂತ ।
ಸ್ಫುರದಂಶುಕೃತಾಂಧಕಾರಮಂ ಮೆಯ್ವೆಳಗಿಂ ॥
ಪರಿಹರಿಸಿರ್ಪರ್ ಜ್ಯೋತಿ ।
ಷ್ಕರಮುರದ ದೌವಾರಿಕರ್ ನಿರಂತರಮದಱೊಳ್ ॥ ೧೩

ಮತ್ತಮವಱೊಳ್ ಬಹಿರಂತರುಭಯಪಾರ್ಶ್ವವೇದಿಕಾದ್ವಯಂಗಳೊಳ್ ಕಳಶಭೃಂಗಾರುಚಾಮರವ್ಯಜನದರ್ಪಣಾತಪತ್ರಧ್ವಜಸುಪ್ರತಿಷ್ಠಕಂಗಳೆಂಬಷ್ಟಮಂಗಳಂಗಳುಮಂ, ಸ್ವಸ್ತಿಕಾದಿಪ್ರಾಸಾದಂಗಳುಮಂ, ಶಾಲ್ಯಾದಿಧಾನ್ಯಂಗಳುಮಂ, ದೇವಾಂಗಾದಿವಸ್ತ್ರಂಗಳುಮಂ, ಮಕುಟಾದಿವಿಭೂಷಣಂಗಳುಮಂ, ಮಾಕಂದಾದಿಸಕಳರ್ತುಕಫಲಂಗಳುಮಂ, ಸುವರ್ಣಸ್ಥಾಲ್ಯಾದಿಭಾಜನಂಗಳುಮಂ, ಚಕ್ರಾದ್ಯಾಯುಧಂಗಳುಮಂ, ತತಾದಿವಾದ್ಯಂಗಳುಮಂ, ಪದ್ಮರಾಗಾದಿವಸ್ತುಗಳುಮಂ, ಬೇಡಿದಾಗಳೆ ತಡೆಯದೆ ಕುಡುವ ನೈಸರ್ಪ ಪಾಂಡುಕ ಪದ್ಮ ಪಿಂಗಳ ಕಾಳ ಮಹಾಕಾಳ ಮಾಣವ ಶಂಖ ಸರ್ವರತ್ನಂಗಳೆಂಬ ನವನಿಧಿಗಳುಮಂ ನಿರಂತರಮೆನಿಸಿ

ಪ್ರತ್ಯೇಕಾಷ್ಟೋತ್ತರಶತ ।
ಮಿತ್ಯುಪಯುಕ್ತಂಗಳಿರ್ಪುವೊಪ್ಪದಿನೆನೆ ವು ॥
ತ್ತತ್ಯತಿಶಯಯುವಂ ತ್ರಿಭುವನ ।
ಪತ್ಯಾಸ್ಥಾಯಿಕೆಯನಾರೊ ಬಣ್ಣಿಸಲಱಿವರ್ ॥ ೧೪

ಅದಲ್ಲದೆಯುಂ ಉಭಯತಟಘಟಿತಸ್ಫಟಿಕಭಿತ್ತಿಭಾಸುರಂಗಳುಂ ತತ್ತದ್ಭೂಪ್ರದೇಶಪ್ರವೇಶೋಚಿತಪಕ್ಷದ್ವಯೋಪಲಕ್ಷಿತಕ್ಷುಲ್ಲಕದ್ವಾರಮನೋಹರಂಗಳುಮೇಕಕ್ರೋಶವಿಶಾಲಂಗಳುಮಾಗಿ,

ಕರಮೆಸೆವುವಾಚತುರ್ಮುಖ ।
ಪರಿಷದ್ಗೋಮಿನಿಯ ನಾಲ್ಕು ಸೀಮಂತದವೋಲ್ ॥
ಪುರವೀಥಿಗಳೋಳಿಯ ಗೋ ।
ಪುರಂಗಳಿಂ ನೀಳ್ದು ಮೊದಲ ಪೀಠಂಬರೆಗಂ ॥ ೧೫

ಎನಿಸಿ ಪರ್ವಿದ ಪೆರ್ವೀಥಿಗಳ ನಡುವೆ ಗೋಪುರದ್ವಾರಂಗಳಿಂತೊಟ್ಟು ಮಣಿತೋರಣಶತಾಲಂಕೃತಮಪ್ಪೇಕಗವ್ಯೂತಿಮಾತ್ರಾಂತರದೊಳ್

ಏನೆಸೆದುವೊ ನಾಲ್ದೆಸೆಗಳ ।
ಮಾನಸ್ತಂಭಂಗಳಮಳಪೀಠತ್ರಯಜಾಂ ॥
ಬೂನದಶಾಳತ್ರಯಮಣಿ ।
ಮಾನಿತಗೋಪುರಚತುಷ್ಟಯಂಗಳನನಿತುಂ ॥ ೧೬

ಮತ್ತಂ ಪ್ರಥಮಪ್ರಾಕಾರದೊಳಗೆ ಸುರಪತಿಪಿತೃಪತಿಸರಿತ್ಪತಿಧನಪತಿಸತತಕೇಳೀವಿಲಾಸೋಚಿತಂಗಳಪ್ಪ ನಾಲ್ಕುಂ ದೆಸೆಯ ರತ್ನಹರ್ಮ್ಯಂಗಳೊಳಂ, ಎರಡನೆಯ ಶಾಳದೊಳಗೆ ಪಾವಕಪುಣ್ಯಜನಪವಮಾನಪಶುಪತಿವಿನೋದವಿಹಾರಯೋಗ್ಯಂಗಳಪ್ಪ ನಾಲ್ಕುಂ ಕೋಣೆಗಳ ಸೌವರ್ಣಸೌಧಂಗಳೊಳಂ, ಅವನವಂ ಬಳಸಿದ ಹೃದ್ಯೋದ್ಯಾನಂಗಳೊಳಂ, ತೃತೀಯವಪ್ರದೊಳಗಪ್ರತಿಮಮಾಳಮಾಯುಜಸುವರ್ಣಕಳಶಮಣಿಮಯಂಗಳುಮಷ್ಟಾಷ್ಟಾರ್ಧಚತುಷ್ಟಾಪೋನ್ನತಂಗಳುಮಪ್ಪ ಮೂಱುಂ ಪೀಠಂಗಳ ಮೂರ್ಧದೊಳ್ ಪರಾರ್ಧ್ಯರತ್ನರಚಿತಜಿನಪ್ರತಿಕೃತಿಚತುಷ್ಟಯೋಪಶೋಭಿತಕನಕಮಯಚತುರಶ್ರಮೂಲಪ್ರದೇಶಂಗಳೊಳಮೊಳಮಟ್ಟಮುಂತುಮಲ್ಲದೆಯುಂ,

ಅಕುಟಿಳರೇಖೆಗಳ್ ಸುವಿದಿತಾಂತರವೀಥಿಗಳುದ್ಘಕಾಂತಿಗಳ್ ।
ಸಕುಲಿಶಪಙ್ಕ್ತಿಗಳ್ ಸಲೆ ಕುದೃಗ್ಜನದರ್ಶನಮೋಹನೀಯಮದಾ ॥
ರುಕುಳವಿದಾರಣೋಚಿತಸಿತಕ್ರಕಚಂಗಳವೆಂಬ ಲೀಲೆಯಂ ।
ಪ್ರಕಟಿಸುತಿರ್ಪುವಂತವಱ ಜಂಘೆಗಳೊಳ್ ದ್ವಿಸಹಸ್ರಧಾರೆಗಳ್ ॥ ೧೭

ಮತ್ತಮವನಿತರ್ಕಂ ಬೇಱೆವೇಱೆ
ಸಮವೃತ್ತಂ ವಿಮಳಸ್ಫಟಿ ।
ಕಮಯಂ ಮಧ್ಯಪ್ರಕಾಂಡಮಲ್ಲಿಂದತ್ತಂ ॥
ಕ್ರಮದೆ ಮಣಿಘಟಿತಕಟಕಂ ।
ಕುಮುದಂ ಕಟಕಂ ಮರಳ್ದು ಹೈಮಂ ಫಳಕಂ ॥ ೧೮

ಅದಱಗ್ರದೊಳೆಸೆದು ಚತು ।
ರ್ವದನಂ ಮಾಣಿಕ್ಯಮುಖಜಿನಾಕೃತಿ ನೆಲಸಿ ॥
ಪೊರ್ದು ಮುಕ್ತಾಛತ್ರತ್ರಯ ।
ಸದಮಳಭಾಭಾರಭರಿತರೋದೋವಿವರಂ ॥ ೧೯

ಫಳಕದ ನಾಲ್ಕುಂ ಗೊಂಟಿನೊ ।
ಳಲಘುಪತಾಕಾಚತುಷ್ಕಮಿರ್ಕುಂ ಮತ್ತಂ ॥
ಬಳಸಿ ಕಡೆಕಡೆಯೊಳೆಸೆಗುಂ ।
ಚಳಚಮರಜಲಂಬಮಾನಘಂಟಾಜಾಳಂ ॥ ೨೦

ಅಂತು ಸಕಳಾಳಂಕಾರಸಮೇತಂಗಳಪ್ಪ ನಾಲ್ಕುಂ ಮಾನಸ್ತಂಭಂಗಳ ಮೊದಲ ಮಗಿಲಿಂ ಪೊಱಗೆ ನಾಲ್ಕುಂ ಗೋಪುರದ್ವಾರಂಗಳೆಡೆಯೆಡೆಯೊಳ್ ಸಮವಸರಣಕ್ಷೇತ್ರವಿವಿಕ್ಷುಜನಪಾದಪ್ರಕ್ಷಾಳನೋಚಿತಕನಕಕುಂಡದ್ವಿತಯಮಂಡಿತೋಭಯಪಾರ್ಶ್ವಂಗಳಪ್ಪ ನಂದೆ ನಂದೋತ್ತರೆ ನಂದಾವತಿ ನಂದಿಘೋಷೆ ವಿಜಯೆ ವೈಜಯಂತಿ ಜಯಂತಿ ಅಪರಾಜಿತೆ ಅಶೋಕೆ ಸುಪ್ರತಿಷ್ಠೆ ಕುಮುದೆ ಪುಂಡರೀಕೆ ಹೃದಯಾನಂದೆ ಮಹಾನಂದೆ ಸುಪ್ರಬುದ್ಧೆ ಪ್ರಭಾಕರಿ ಎಂಬ ಪದಿನಾಱುಂ ರತ್ನಮಯಸೋಪಾನಪಙ್ಕ್ತಿಗಳಪ್ಪ ಸಮಚತುರಶ್ರವಾಪಿಗಳ್ ಪೂರ್ವಾದಿಪರ್ಯಾಯದಿನೊಂದೊಂದರ್ಕೆ ನಾಲ್ಕುಂ ನಾಲ್ಕಾಗಿ ದಿವ್ಯಯೋಷಿಜ್ಜನಮಜ್ಜನೋಪಯೋಗ್ಯಂಗಳೊಪ್ಪುಗುಂ. ಅದಲ್ಲದೆಯುಂ,

ಜಿನತನುಗೆ ಪನ್ನೆರಚ್ಮಡಿ ।
ಯೆನಿಪ್ರನ್ನತಿ ನೋಡಿದೆನ್ನರೊಳಮುನ್ನತಿಯಂ ॥
ಜನಿಯಿಪುದೆಂಬೀನುಡಿ ನಿಜ ।
ವೆನೆ ಮಾನಸ್ತಂಭಮಿಂತು ನಾಲ್ಕುಂ ರಮ್ಯಂ ॥ ೨೧

ಮಾನಸ್ತಂಭನಿಚಯಮು ।
ಜ್ಞಾನಿಜನಸ್ವಾಂತಜನಿತಮಾನಸ್ತಂಭಂ ॥
ತಾನೆನಸಿ ಮತ್ತೆ ಮಾಗಭಿ ।
ಮಾನಸ್ತಂಭಂಗಳೆನಿಸುಗುಂ ಪೊಗಟ್ವಿರ್ಗಂ ॥ ೨೨

ಆನಾಲ್ದೆಸೆಯ ಮಾನಸ್ತಂಭಂಗಳೆಡೆಯೆಡೆಯೊಳರ್ಧಯೋಜನವ್ಯಾಸಮನಪ್ಪಕೆಯ್ದು ಸಮಚತುರಶ್ರಂ ಪಾದಾಧಿಕಚತುರಶ್ರಂ ವೃತ್ತಮಾಯತವೃತ್ತಮಷ್ಟಾಶ್ರಂಗಳೆಂಬ ತಳಚ್ಛಂದಂಗಳಿಂ ಮೇಲೆ ಪ್ರಟ್ಟುವ ವೈರಾಜಂ ಪುಷ್ಪಕಂ ಕೈಲಾಸಂ ಮಣಿಕಂ ತ್ರಿವಿಷ್ಟಪಮೆಂಬ ಸ್ವರ್ಗಸಂಭವಂಗಳಪ್ಪಯ್ದು ಮಹಾಪ್ರಾಸಾದಂಗಳೊಳಂ, ಭೂಮಿಜಂಗಳಪ್ಪ ಸ್ವಸ್ತಿಕ ವರ್ಧಮಾನ ನಂದ್ಯಾವರ್ತ ಸರ್ವತೋಭದ್ರ ವಳಭಿಚ್ಛಂದಮೆಂಬಯ್ದುಂ ಪ್ರಾಸಾದಂಗಳೊಳಂ, ದ್ರಾವಿಡಂಕಾಳಿಂಗವೆಸರಂಯಾವ್ಯಂತರಮೆಂಬಂತರೀಜಾತಿಗಳೊಳಂದನುರಿ ಮಧುರಿ ಸಾಧಾರಿಣಿ ತ್ರಾಸ್ತಿಯೆಂಬ ನಾಲ್ಕುಂರೇಖೆಗಳೊಳಮಳವಟ್ಟ ಚೆಲ್ವಿನಿಂ "ಪ್ರಸೀದಂತಿ ಜನಮನಾಂಸಿ ದೇವಪ್ರಾಸಾದಾ" ಎಂಬ ನುಡಿಗೆ ನಿದರ್ಶನಮಾಗಿ ಸೊಗಯಿಸುವ,

ಪ್ರಾಸಾದಾಂತರದಿಂದಮಯ್ದು ಜಿನಚೈತ್ಯಾಗಾರಮೊಂದಿಂತೆ ವಿ।
ನ್ಯಾಸಂ ನಾಡೆ ಬೆಡಂಗುವೆತ್ತಿರೆ ಹಟತ್ತದ್ರತ್ನಕೂಟಾಂಶುಮಾ ॥
ಳಾಸಂಪೀತಪರೀತನಂದನತರುಚ್ಛಾಯಾಂಧಕಾರಂ ವಿಹಾ ॥
ರಾಸಕ್ತಾಮರಕಾಮಿನೀಸಮುದಯಂ ತದ್ಭೂಮಿ ಕಣ್ಗೊಪ್ಪಗುಂ ॥ ೨೩

ಮಣಿಯಯ್ದು ಮತ್ತೆ ಚಿಂತಾ ।
ಮಣಿಯೊಂದೆನೆ ಸಮೆದ ಬಣ್ಣಸರಮುಂ ತದ್ಭೂ ॥
ಪ್ರಣಯಿನಿ ತಳೆದಮ್ರೊಲೊಳ್ಪನ ।
ಕಣಿಯಾದುವು ರತ್ನಹರ್ಮ್ಯಚಯಚೈತ್ಯಂಗಳ್ ॥ ೪೨

ಮತ್ತಂ ತತ್ಪ್ರಮದವನಂಗಳೊಳ್

ಮೃದುಪದಪಾತಮಂ ಬಯಸದುತ್ಕಚಭಾರದ ಸೋಂಕನಾಸೆಗೆ ।
ಯ್ಯದ ವದನಾಸವಕ್ಕೆಳಸದಬ್ಜದಳಾಕ್ಷಿಯರೀಕ್ಷಣಕ್ಕಣಂ ॥
ಪದೆಯದಶೋಕಮಾಕುರವಕಂ ಬಕುಳಂ ತಿಳಕಂ ಮರಲ್ದರ ।
ಲ್ದುದೆ ಪೊಗ*ೞ್ಗಂ ಚರಾಚರಸುಖಾವಹಮಪ್ಪ ಜಿನಪ್ರಭಾವಮಂ ॥ ೨೫

ಬೇರ್ಗೊಂಡು ಪಣ್ತು ಪಲಸೆಳ್ ।
ನೀರ್ಗಾಯುಂ ತಳಿದ ತೆಂಗು ತನಿರಸಮೊಸರ್ವಾ* ॥
ನೇರ್ಗೊನೆಯನಾಂತ ಮಾವಿವು ।
ನೇರ್ಗಿಱಿಯವು ಕಲ್ಪತರುಗೆ ಸಿರಿಯಿಂದೆನಿಕುಂ ॥ ೨೬

ಮತ್ತಮಲ್ಲಿ,

ವಿಕಚೋತ್ಪಳಾಬ್ಜಕಲ್ಹಾ ।
ರಕುಳಂಗಳತುಚ್ಛಮೌಕ್ತಿಕಚ್ಛೇದಾಚ್ಛೋ ॥
ದಕಭರಿತಂಗಳ್ ವೃತ್ತ ।
ತ್ರಿಕೋಣಚತುರಶ್ರವಾಪಿಗಳ್ ಸೊಗಯಿಸುಗುಂ ॥ † ೨೭

ಅದಲ್ಲದೆಯುಮಲ್ಲಿ ವಿಹರಿಸುವ ಕಲ್ಪಾಮರವಿದ್ಯಾಧರಫಣಾಧರಜ್ಯೋತಿಷ್ಕನಾನವ್ಯಂತರದಿವ್ಯಭವ್ಯಜನಂಗಳಾಮಹಾವಾಪಿಗಳ ವಿಮಳಜಳದಿನಚಳನಂ ಪ್ರಮದವನಸುರಭಿಸುಮನದಿನಮನನರ್ಹತ್ಪರಮೇಷ್ಠಿಯುಂ ತತ್ತಚ್ಚೈತ್ಯಮಂದಿರಂಗಳೊಳಪೊಕ್ಕು ಪೂಜಿಸಿ ಮತ್ತಮತ್ಯಂತಭಕ್ತಿಭರದಿಂ ಶಕ್ತಿಯುಂ ವ್ಯುತ್ಪತ್ತಿಯುಮಭ್ಯಾಸಮುಮೆಂಬ ಗುಣತ್ರಯೋಪಯುಕ್ತರುಂ ರತ್ನತ್ರಯಾಳಂಕೃತರುಮಪ್ಪ ಸುಕವಿಗಳ್ ಸಮೆದತಿವಿಶಿಷ್ಟಶಿಷ್ಟಾದಿಪದಾಳಂಕಾರಾಸ್ಪದಂಗಳುಮುಪಮಾದ್ಯರ್ಥಾಳಂಕಾರ ಸಮರ್ಥಂಗಳುಂ ವೈದರ್ಭಾದಿರೀತಿಸಮೇತಂಗಳುಂ ರತ್ಯಾದಿಯೋಗ್ಯಭಾವಸಂಪಾದಿತಂಗಳುಂ ಶೃಂಗಾರಾದಿಸಮುಚಿತರಸಪ್ರಸರಾರ್ದ್ರಂಗಳುಮಪ್ಪ ವೃತ್ತಗಂಧಿ ಚೂರ್ಣಮುತ್ಕಳಿಕೆ ಲಲಿತಂ ಖಂಡಂ ವಿಚಿತ್ರಮೆಂಬಾಱು ತೆಱದ ಗದ್ಯಂಗಳೊಳಂ

† ಈಕಡೆ— ಅಂತು ಚತುರ್ಮುಖಂಗಳೊಳ್ ಪ್ರತ್ಯೇಕವಾಪಿತ್ರಯಂಗಳಕ್ಕುಂ. ಎಂದೊಂದು ಪ್ರತಿಯಲ್ಲಿದೆ.

ವೃತ್ತಂ ಜಾತಿಯೆಂಬೆರಡುಂ ಬಿದ ಪದ್ಯಂಗಳೊಳಂ ಮುಕ್ತಕಂ ಕುಳಕಂ ಕೋಶಂ ಸಂಘಾತಮೆಂಬ ಸಮುಕಟ್ಟಿನೊಳಮಳವಟ್ಟ ಪದವಾಕ್ಯಪ್ರಮಾಣಾದಿಸಾರಸಾಹಿತ್ಯಸರ್ವಸ್ವಂಗಳಪ್ಪ ಸ್ವರೂಪಸ್ತವ ಗುಣಸ್ತವ ವಸ್ತುಸ್ತವಂಗಳಂ ನಿರ್ಬಂಧದಿಂದೋದುವ ಮಧುರಗಂಭೀರನಾದಂಗಳೊಡನೆ ಪೂಜಾವರ್ಣನೂನಪ್ರತಿಧ್ವಾನಂಗಳನೊಳಕೆಯ್ದು ಜಿನಭವನರಮ್ಯಹರ್ಮ್ಯೋಪವನಕುಜಂಗಳಿಂ ರಂಜಿಪಾಪ್ರಾಸಾದಚೈತ್ಯಭೂಮಿಯಿಂದೊಳಗೆ

ತಳತಳಿಪಚ್ಚ ಪೊಚ್ಚಪೊಸಪೊಂಬೆಸದಿಂಬಿನ ವೇದಿಯೆಯ್ದೆ ವಂ ।
ಡಳಸಿದುದಾಸಭಾರಮೆಯು ನೂಪುರರೂಪದ ರೂಪ್ಯಗೋಪುರಂ ॥
ಗಳುಮಳವಟ್ಟುವಂತದಱ ನಾಲ್ದೆಸೆಯೊಳ್ ಬಱಕಂತವರ್ಕೆ ವಂ ।
ಗಳನಿಧಿರಕ್ಷಕಪ್ರತತಿ ಮುನ್ನಿರ್ದಂತೆಸೆದಿರ್ದುದೆತ್ತಲುಂ ॥ ೨೮

ಆವೇದಿಕೆಯಿಂದೊಳಗೊ ।
ಗ್ರ್ಗವುದ ತನಗಗಲಮಾಗೆ ಸೊಗಯಿಪ್ಪುದು ವಿಧು ॥
ಗ್ರಾವದ್ರವನಿರ್ಮಳತರ ।
ಜೀವನನಿಳಯಂ ಸಲೀಲಖಾತೀವಲಯಂ ॥ ೨೯

ಅಲ್ಲಿ,
ಸಾರಸಜೀವಂಜೀವಕ ।
ಹಾರೀತಕಹಂಸಕುರರಕಂಕಬಳಾಕಾ ॥
ಕಾರಂಡಕಚಕ್ರಾಹ್ವಚ ।
ಕೋರಬಕಪ್ರಕರನಿಕರಮುಸದಳಮೆಸೆಗುಂ ॥ ೩೦

ಮತ್ತಮಾಮಹಾಪರಿಖೆ ಶಬ್ದಶಾಸ್ತ್ರಪದ್ಧತಿಯಂತೆ ತುಹಿನನಿಪಾತಸಮುಪೇತೆಯುಂ, ಜಯನಶಾಲೆಯಂತೆ ಬಹುತರವಾರಿಭರಿತೆಯುಂ, ಅತಿಸಂಧಿತೆಯಂತೆ ವಿರಳೋತ್ಪಳಿಕಾತರಳೆಯುಂ, ಕರಿಕಪೋಳಪಾಳಿಯಂತೆ ಬಿಂದುಜಾಲಿಕಚಿತ್ರಾಗ್ರಭಾಸೆಯುಂ, ಪುಳಿಂದಕಾಂತೆಯಂತೆ ನಿರಂತರವನಭ್ರಮಾಯತ್ತೆಯುಂ, ಜನಕನಂದನೆಯಂತೆ ಅನುಕೂಲರಾಮಾನ್ವಿತೆಯುಂ, ವ್ಯಾಕೃಷ್ಟಚಾಪಾಟನಿಯಂತತಿಪ್ರಸನ್ನತಾತ್ಮಿಕೆಯುಂ, ಸರಸ್ವತಿಯಂತೆ ಕವಿಕುಳಕೃತಪಕ್ಷಪಾತೆಯುಂ, ರಾಶಿರಾಜಿಯಂತೆ ರಾಜಹಂಸಪ್ರಭಾರಾಜಿತೆಯುಂ,

ರಾತ್ರಿಯಂತಾಕುಳಕೋಕನದಪರಿಕಲಿತೆಯುಂ, ರಾಜನೀತಿಯಂತೆ ಕುವಲ
ದವನಶೋಭಿತೆಯುಮೆನಿಕುಂ. ಅಂತುಮಲ್ಲದೆಯುಂ,

ಯುತಕಮಳಂ ಗತಕಮಳಂ ।
ಭೃತಕುರವಂ ಮುಕ್ತಕುರವಮಾತ್ತಕುವಳಯಂ ॥
ಪ್ರತಿಮುಕ್ತಕುವಳಯಂ ಚಿ ।
ತ್ರತರಂ ನೋಡುವ ನರಂಗೆ ಖಾತಮಖಾತಂ ॥ ೩೧

ತಳದ ಹರಿನೀಳಭೂಮಿಯು ।
ಬೆಳಗು ಪಯಃಸ್ವಾಚ್ಛ್ಯದಿಂ ಪೊದಬ್ದಿರೆ ಪಂಕಾ ॥
ವಿಳತೆಯುಘಟಿತಮೆನುತ್ತುಂ ।
ಜಳಕೇಳಿಯೊಳಚ್ಚರಸಿಯರಚ್ಚರಿವಡುವರ್ ॥ ೩೨

ಅಳಿಪರಿವೃತಪದ್ಮಂಗಳೊ ।
ಮುಬಿಂಕಿ ನೆಗೆವಮರಿಯರ ಕುರುಳ್ ಪುದಿದ ಮೊಗಂ ॥
ಗಳೊ ಮೋಹಂದಾಳೋಚಿಪ್ರ ।
ದೊಳಗೊಳಗಲಗೆರ್*ಯ್ವ ದಿವಿಜವಧುನಿಕುರುಂಬಂ ॥ ೩೩

ಜಳಕೇಳಿಲೋಲಭಾವನ ।
ಲಳನಾಕುಚತಟವಿಲಿಖಿತಮೃಗಮದಪತ್ರಾ ॥
ವಳಿ ಪರಿಕಲಿಸಿ ತರಂಗಂ ।
ಗಳೊಳೀವುದದರ್ಕಪೂರ್ವಜಳನೀಳಿಕೆಯುಂ ॥ ೩೪

ಇರುಳುಂ ಪಗಲುಂ ಮರಲ್ದುಂ ।
ಬುರುಹಮುಮುತ್ಪಳಮುಮೆಸೆಗುಮೊಲವಿಂದೆ ಪರ ॥
ಸ್ಪರಕಲುಷಮನುಜಿದಂಭ ।
ಶ್ಚರಂಗಳಕರ್ುಂ ಪ್ರಭುಪ್ರಭಾವದಿನದರೊಳ್ ॥ ೩೫

ಮತ್ತಮಲ್ಲಿ

ಅಗಲದೆ ಮೋಹ ನೆರೆಯುದಿರುಳ್ ।
ಪಗಲೆಂಬಿವರೊಂದು ಪೋಗುಮಂ ಬರವುಮನಾ ॥

ಸೆಗೆಯುದಿ ರಥಾಂಗೆಯುಗಳಂ ।
ಬಗೆಯೊಳ್ ಬೇಱೊಂದು ತಣಿವನೊಳ್ಕೊಂಡಿರ್ಕುಂ ॥ ೩೬

ಅದಲ್ಲದೆಯುಂ

ಆಪರಿಖೆಯೆಂಬ ನೂತನ ।
ಕೂಪಾರದುದಗ್ರವಜ್ರವೇದಿಕೆಯೆಂಬಾ ॥
ಳಾಸಮನವಱನಾರ್ಕ್ತ್ರೀ ।
ರೋಪಾಂತದೊಳಿರ್ದ ವೇದಿಯೊದವಿಸಿತಾದಂ ॥ ೩೭

ಅನಘಜಿನಾಗಿಸದೆಸೆದಿ ।
ರ್ದುವು ವೇದೀದ್ವಾರಮಂಗಳಂ ನಿಧಿಪ್ರತಿಹಾ ॥
ರವಿತಾನಂಗಳ್ ಮುಂ ಪೇ ।
ಱ್ದವನೆ ವೊಲಂ ಪೋಲ್ತು ಯಮುಕವರ್ಣಂಗಳವೋಲ್ ॥ ೩೮

ಅಂತು ನಯನಹೃದಯಸಂಪನ್ನಿಧಿಯಾದ ವೇದಿಯಿಂದವೊಳಗೆ ಚತುಃಕ್ರೋಶವಿಷ್ಕಂಭಸಂಭೃತಮಾಗಿ

ಆವಿಷ್ಕೃತನಿಜಲಕ್ಷ್ಮೀ ।
ಯೌವನಮಾಮೋದಸಮುದಯೋತ್ಪಾದಿತಭೃಂ ॥
ಗಾವನಮೆಸೆದಿರ್ಪುದು ವ ।
ಲ್ಲೀವನಮನವರತಕುಸುಮರಸಕೃತಸವನಂ ॥ ೩೯

ಅತಿಲಲಿತಪತ್ರಕುಳಪರಿ ।
ವೃತಪತ್ರಲತಾಳಿ ವಿಕಚಪುಷ್ಪಚಯೋದಂ ॥
ಚಿತಪುಷ್ಪಲತಾಳಿ ಫಲ ।
ಪ್ರತತಿಚಲತ್ಫಲಲತಾಳಿಸೊಗಯಿಕುಮದಱೊಳ್ ॥ ೪೦

ಮತ್ತಮಾವನಂ ಬಹುಲತಾನ್ವಿತಮಾಗಿಯುಂ ಅಶಿಶಿರಬಾಧಾವಳಂಬಮಲ್ತು, ವಿನೂತಜಾತಿಯುತಮಾಗಿಯುಂ ಕುಲೀನವೃತ್ತಿವರ್ತನಮಲ್ತು, ಸಂಗತಾನೇಕಭಂಗಭಂಗುರಮಾಗಿಯುಂ ಸಮುದ್ರಶೋಭಾವಹಮಲ್ತು, ನಿರಂತರಸುಮನೋನಿವೇಶಮಾಗಿಯುಂ ಚೇತನತ್ವಾಭ್ಯುಪೇತಮಲ್ತು,

ಷಟ್ಪದೋತ್ಸಾಹಗೀತಕಾವರ್ತನವಿಷಯಮಾಗಿಯುಂ ಏಕದೇಶಶೋಭಾಪ್ರ
ಭಾಭೂತಮಲ್ತು. ಅಂತುಮಲ್ಲದೆಯುಂ

ಅಲರ್ದ*ಿನುರ್*ತ್ತೆ ಪೂತ ಪೊಸನುಲ್ಲಿಗೆ ಬಂಡುಣಿವಿಂಡು ಮುತ್ತೆ ಕ ।
ಟ್ಟಲಿಸುವ ಮೊಲ್ಲೆ ಕಂಪಿನೊಳೆ ಪೊಂಪುಳಿವೋಪಿರುವಂತಿ ಬಲ್ಮೆಗುಳ್ ॥
ನೆಲಸೆ ನೆಗಟ್ದಿ ಜಾಜಿ ವಿಗಳನ್ಮಕರಂದದೆ ನಾಂದ ಸಿಂದುರಂ ।
ಸಲೆ ಋತುವೆಲ್ಲಮಲ್ಲಿ ನೆಲಸಿರ್ದದನೇನಱಿಪಲ್ಕೆ ಸಾಲ್ವುವೋ ॥ ೪೧

ಮತ್ತಮಲ್ಲಿ

ಋತುಗಳನೊಂದನೊಂದು ಲತೆ ಪಾರ್ದಲರ್ವೇ*ರ್ಱುವುವಿಂತಧೀಶನ ।
ಪ್ರತಿಹತಶಕ್ತಿಯಿಂದಲರ್ದು*ವೊವೊರ್ದಲೆಲ್ಲಮನೇಕಗಂಧಸಂ ॥
ತತಿಗಳನಾಂತು ಗಂಧವಹಸಂಜ್ಞೆಗೆ ಸಾರ್ಥತೆಯಾದುದೆಂದು ಮಾ ।
ರುತನೊಳಕೆಯ್ದುದುಣ್ಮುವ ಪರಾಗಪರಂಪರೆಯಿಂದೆ ರಾಗಮಂ ॥ ೪೨

ಮಳಿನತೆ ಚಂದ್ರಜಿನೇಂದ್ರನ ।
ಬಳವತ್ಸಾಮರ್ಥ್ಯದಿಂದಮೋಸರಿಸೆ ತಳ ॥
ತ್ತಳಸುವ ಪೊಂಬಣ್ಣದಿನೆಸೆ ।
ವೆಳದುಂಬಿಗಳಿರ್ಪುವದಱೊಳತಿಕಾತುಕಮಂ ॥ ೪೩

ಪಿರಿದುಂ ರೇಫದ್ವಯಭಾ ।
ಸುರಮಂ ಚಂದ್ರಪ್ರಭಾಂಕಮಂ ನಲವಿಂದು ॥
ಚ್ಚರಿಸಿ ಮೊರೆವಳಿಗಳದಱೊಳ್ ।
ದ್ವಿರೇಫನಾಮಂಗಳಾದುವಂದಿಂಬಱಿಯಂ ॥ ೪೪

ಅಮನನನರ್ಚಿಸಲಿಚ್ಛಿಸು ।
ಪ ಮನಮೆ ತಮಗಾಗೆ ಬಳ್ಳಿವಳ್ಳಿಯೊಳೆಲ್ಲಂ ॥
ಸುಮನಃಪ್ರತತಿಯನಾಯ್ವರ ।
ಸುಮನಃಪ್ರಮದೆಯರನೂನರಾಗದಿನದಱೊಳ್ ॥ ೪೫

ಮತ್ತಂ

ನಿಜಗಮನತಿ್ರಭಂಗದೆ ಲತಾಳಿಯ ಭಂಗುರಭಂಗಶುದ್ಧಿಯಂ ।
ನಿಜಕರಪಲ್ಲವೋಲ್ಲಸನದಿಂ ನವಪಲ್ಲವಜಾಲಲೀಲೆಯಂ ॥
ನಿಜದರಹಾಸದಿಂ ಮುಕುಳಬೃಂದವಿಳದ್ದರಹಾಸಶೋಭೆಯಂ ।
ನಿಜಭುಜಶಾಖೆಯಿಂ ಲಲಿತಶಾಖೆಯನಗ್ಗಲಿಪರ್ ಲತಾಂಗಿಯರ್ ॥ ೪೬

ಅಂತು ದಿವಿಜವಲ್ಲಭಿಕಾಪ್ರತಾನವಾನಸೋಲ್ಲಸನಜನಕವಾದ ವಲ್ಲೀವನದಿನೊಳಗೆ,

ರಾರಾಜನ್ನಿಧಿಮಂಗಳೋಪಚಿತಪಕ್ಷಂ ಯಕ್ಷದೌವಾರಿಕೋ ।
ದಾರಂ ಚಂಚುರತಾರಗೋಪುರಚತುಷ್ಕಂ ತನ್ನೊಳೋರಂತೆ ವಿ ॥
ಸ್ತಾರಂಬೆತ್ತಿರೆ ಭೂರಿಸಾರರಚಿತಂ ಪ್ರಾಕಾರಮುದ್ಯತ್ಪ್ರಭಾ ।
ಭಾರಂ ಸುತ್ತಿದುದೆಯ್ದೆ ಲೋಚನಚಕೋರೀವಾಗುರಾಕಾರದಿಂ ॥ ೪೭

ಅಲ್ಲಿಂದೊಳಗೆ ಮತ್ತಂ ಚತುಃಕೋಣಶವಿಶಾಳಪ್ರದೇಶಂಗಳೊಳ್ ನಾಲ್ಕುಂ ಮಹಾವೀಧಿಗಳೆಡೆಯೊಳ್

ಸಿಱಿದಳದೊರ್ಂಗಲಿಂದೆಸೆವಶೋಕವನಂ ತನಿವಣ್ಣಗೊಂಚಲಿಂ ।
ದೊಱಗಿದ ಸಪ್ತಪರ್ಣವನಮುಳ್ಳಲದೊರ್ಳ್ಳಲರಿಂದಮೆತ್ತಲುಂ ॥
ಮಿಱುಗುವ ಚಾರುಚಂಪಕವನಂ ತಳಿರಿಂದಲರಿಂ ಫಳಂಗಳಿಂ ॥
ತುಱುಗಿದ ಬಾಳಚೂತವನಮೀಕ್ರಮದಿಂದಮೆ ತಪ್ಪದೊಪ್ಪುಗುಂ ॥ ೪೮

ಗಿಳಿಗಳ್ ಸ್ಯಾದ್ವಾದಮೀಮಾಂಸೆಯೊಳ್ ಬಿಡದುಪನ್ಯಾಸಮಂ ಮಾಳ್ಪುದಾದಂ
ಕಳಕಂಠಂಗಳ್ ಚತುರ್ವರ್ಗಂಗಳಮನೆ ನುಡಿಯುತ್ತಿರ್ಪುವಾಕಲ್ಪವಾಸಂ ॥
ಗಳವುದ್ಯತ್ಪದ್ಮರಾಗದ್ಯುತಿಗಳಮಳಚಂದ್ರೋಪಳಜ್ಯೋತಿಗಳ್ ಗೊಂ ।
ದಳದಿಂ ಸುತ್ತಿರ್ದ ನಾಲ್ಕುಂ ಬನದೊಳಗೆ ಕರಂ ಚೋದ್ಯಮುದ್ಯಾನದೇಶಂ॥

ಮತ್ತಮಲ್ಲಿ

ಮಣಿಮಯಶೃಂಗತುಂಗಕೃತಕಾಚಳಮಾಕೃತಕಾಚಳಾಗ್ರದೊಳ್ ।
ಕುಣಿವ ನವಿಲ್ ನವಿಲ್ಗೆ ಜತಿಯಂ ತಳತಾಳದಿನೊಂದಿಪಪ್ಸರೋ ॥
ಗಣಮಿರದಪ್ಸರೋಗಣಮನಾಱಿಪ ತೆಂಕಣ ಗಾಳಿ ಗಾಳಿಯೊಳ್ ।
ಪೆಣೆದಲರ್ಗಂಪಿನಿಂ ತಣಿದು ಪಾಡುವ ತುಂಬಿಯದೇನಳುಂಬಮೋ ॥ ೫೦

ಅದಲ್ಲದೆಯುಂ, ಕನಕಕೋಷ್ಟಚಕ್ರತ್ರಯಪರಿಕೃತೋತ್ತುಂಗಮಣಿಪೀಠತ್ರಯಾಧಿಷ್ಠಿತತೀರ್ಥಕರಪರಮದೇವಾಭಿಮುಖಪರ್ಯಂಕಾಸನಾಂಕಿತಾಷ್ಟಮಹಾಪ್ರಾತಿಹಾರ್ಯವರ್ಯಾರ್ಹದ್ಬಿಂಬಸಂಭೃತವಿಶಾಳಮೂಳಪ್ರದೇಶಮುಂ ಅನವರತಸವನಪೂಜೋನ್ಮುಖಾನೇಕವೈಮಾನಿಕಾವಾಸಭವನಾಮರಪರೀತಮುಮಾಗಿ

ಅನ್ಯೃತಶ್ರೀಯುಮನೀಯಲಾರ್ದಭಿನವಂ ಕಲ್ಪಾವನೀಜಾತಮಂ |
ಬ ಮಹೋದಾತ್ತತೆವೆತ್ತು ವಿಶ್ವಭುವನಪ್ರಸ್ತುತ್ಯಮಂ ಚೈತ್ಯವೃ ||
ಕ್ಷಮನೋರೊಂದನೆ ತಾಳ್ದಿ ಮಧ್ಯಮಹಿಯೊಳ್ ನಾಲ್ಕುಂ ಬನಂ ಪಾವನ |
ತ್ವಮನಾಳ್ದಿರ್ದುದಶೋಕಸಪ್ತದಳಚಾಂಪೇಯಪ್ರಭೇದಾನ್ವಿತಂ || ೫೧

ಅಂತನೂನಶೋಭಾವಳಂಬನಂಗಳೆರಡುಂ ಕೆಲಕೆಲದ ಪೆರ್ವೀಧಿಗಳೆರಡುಂ ದೆಸೆಯೊಳೆಸೆವೆಂಟುಂ ಕ್ಷುಲ್ಲಕದ್ವಾರದಿರ್ಕೆಲಂಗಳೊಳಮೆರಡೆರಡೆಸಿಸಿ

ಸೊಗಯಿಸುವುವು ನಾಟಕಶಾ |
ಲೆಗಳುತ್ತುಂಗತ್ರಿಭೂಮಿಕೋಪೇತಂಗಳ್ ||
ದ್ವಿಗುಣೀಕೃತಾಷ್ಟಸಂಖ್ಯಾ |
ನುಗತಂಗಳ್ ಶುಭ್ರಕಾಂತಿಭರಿತಾಭ್ರಂಗಳ್ || ೫೨

ಮತ್ತಮವಱೊಂದೊಂದು ಭೂಮಿಕೆಗಳೊಳ್[1] ಏಕತಾಳ ಧ್ರುವ ತ್ರಿಪುಡೆ ಮಟ್ಠೆಯ ಝಂಪೆ ಅಟತಾಳ ರೂಪಕಂ ಮೊದಲಾದ ಸೂತ್ರತಾಳಂಗಳೊಳಂ ನೂಱೆಂಟು ನ್ಯಾಸತಾಳಂಗಳೊಳಂ ಕೂಡಿ,[1]

ಪಸರಿಸಿದುದು ಭಾವಂ ರಸ |
ಮೊಸರ್ದುವು ಲಯದೊಡನೆ ಗೀತವಾದ್ಯಂ ಸಮಸಂ ||
ದೆಸೆದುದೆನೆ ದೇವಿಯರ್ ನಟ |
ಯಿಸುವರ್ ನಾಟಕಮನೊಡನೆ ಮೂವತ್ತಿರ್ಬರ್ || ೫೩

ಬಂದೊಂದು ನಾಟ್ಯಶಾಲೆಯ |
ಮುಂದೊಂದೊಂದೆಸಿಸಿ ಧೂಪಘಟಮುಂ ಪದಿನಾ ||
ಱುಂದೆಸೆದಿರ್ದುವು ಪದಿನಾ |
ಱುಂ ದಿವಮುಮನಡರೆ ಸುರಭಿಧೂಮಸ್ತೋಮಂ || ೫೪

ಅಂತನೇಕಶೋಭಾಪರಿಕಲಿತಮಾದುಪವನದಿನೊಳಗೆ
ಪೊಸ ಪೊನ್ನವೇದಿ ನಾಲ್ಕುಂ ।
ದೆಸೆಗಳೊಳಂ ಬೆಳ್ಳಿವೆಸದ ಬಾಗಿಲ್ವಾಡಂ ॥
ಪಸರಿಸಿದ ಸಕಳಮಂಗಳ ।
ವಿಸರಂ ನಿಧಿಸಮಿತಿ ಯಕ್ಷರಕ್ಷಕರೆಸೆಗುಂ ॥ ೫೫

ಮತ್ತಾ ವಿಶಾಳವೇದಿಯು ।
ಸುತ್ತಿಂದೊಳಗೇಕಯೋಜನವ್ಯಾಸಾಢ್ಯಂ ॥
ಪ್ರೋತ್ತುಂಗಕಾಂಚನಸ್ತಂ ।
ಭಾತ್ತಧ್ವಜಭೂಮಿಯಿರ್ಕುಮತ್ಯಭಿರಾಮಂ ॥ ೫೬

ಅಲ್ಲಿ

ಗರುಡಂ ಗಜಂ ಮಯೂರಂ ।
ಮರಾಳಮಂಬುರುಹಮಂಬರಂ ಚಂದ್ರಂ ಭಾ ॥
ಸುರಚಕ್ರಂ ದಾಮಂ ದಂ ।
ತಿರಿಪ್ಪವೆನಿಪ್ಪಂಕದಿಂ ದಶಧ್ವಜಮೆಸೆಗುಂ ॥ ೫೭

ಪರಿಕಿಪೊಡೊಂದೊಂದಷ್ಟೋ ।
ತ್ತರಶತಮೊಂದೆಸೆಯೊಳೆಯ್ದೆ ನಾಲ್ದೆಸೆಗಳವಂ ॥
ಬೆರಸಿದೊಡನಿಂತು ನಾಲ್ಸಾ ।
ಸಿರಮೆಣ್ಬತ್ತುಱಿಯೆ ಮತ್ತೆ ನಾಲ್ನೂಱಕ್ಕುಂ ॥ ೫೮

ಮತ್ತಮದೊಂದೊಂದರ್ಕೆ ।
ಷ್ಟೋತ್ತರಶತಮಾದುಪಧ್ವಜಂಗಳ್ ಲಕ್ಕಂ ॥
ಮೊತ್ತದೆ ನಾಲ್ಕುಸಹಸ್ರಂ ।
ಮತ್ತೆಱುವತ್ತಾಱು ಷಷ್ಟ್ಯಯುತಪಂಚಶತಂ ॥ ೫೯

ಬಗೆವಂದೆಣ್ಬತ್ತೆಣ್ಬ ರ ।
ಲಗಲಂ ದೈರ್ಘ್ಯಂ ದ್ವಿಗುಣಿತನವಶತಚಾಪಂ ॥
ಸೊಗಯಿಪ ಕಂಭಕ್ಕೆಡೆದೆಱೆ ।
ಪ್ರಗಳಪರ್ತ್ತಯ್ದು ಬಿಲ್ ಧ್ವಜಂಗಳ್ಗೆಲ್ಲಂ ॥ ೬೦

ಶರದದ ಬಿಳಿಯ ಮುಗಿಲ್ದೆಱೆ ।
ಪರಿಕಲಿಸುತ್ತಿರ್ದುವಂತರಿಕ್ಷದೊಳೆನಿಕುಂ ॥
ಪಿರಿದುಂ ಧ್ವಜನಿಕರಶಿರಃ ।
ಪರಿಲಗ್ನದುಕೂಲಲೋಲಪಟಿಕಾಜಾಲಂ ॥ ೬೧

ಕೆಲದ ಬನಂಗಳ ಕೃತ್ರಿಕಾ ।
ಚಲದ ಲತಾಂತಂಗಳನಿಳವಶದಿಂ ತದ್ಧ್ವಜ ॥
ತಳದೊಳ್ ಧ್ವಜಾಗ್ರಹತಿಯಿಂ ।
ಗಳಯಿಪ ತಾರಗೆಗಳೆನಿಸಿ ಬಂದುಗುತಿರ್ಕುಂ ॥ ೬೨

ಮತ್ತಂ

ಓರಂದವಾಗಿ ತರದಿಂ ।
ತಾರಾಧ್ವಕ್ಕೊಗೆದ ತದ್ಧ್ವಜಾಳಿ ಕುಬೇರಂ ॥
ಕಾರೋಪಕನೆನೆ ಬಳೆದ ಶ ।
ಚೀರಮಣನ ಪುಣ್ಯಫಲದ ಬೆಳೆಗೈಯೆನಿಕುಂ ॥ ೬೩

ಆಧ್ವಜಭೂಮಿಯಿಂದೊಳಗೆ

॥ ಅನವದ್ಯವೃತ್ತಂ ॥

ಬಳಸಿದತ್ತು ಮಹಾಹಿಮವದ್ಧಾತ್ರೀಧರಮೆತ್ತಲುಮೆಂಬಿನಂ ।
ತೊಳಗುವರ್ಜುನವರ್ಣದ ಶಾಳಂ ರಾಜತಗೋಪುರಜಾಳದಿಂ ॥
ಮಿಳಿರ್ವ* ಸರ್ವಮಹಾನಿಧಿರಾಜನ್ಮಂಗಳವಸ್ತುಸಮಾಜದಿಂ ।
ಜಳಜಪಾಳನನಾಗಕುಮಾರಾನೀಕದಿನೊಪ್ಪುವುದೊರ್ಮೆಯುಂ ॥ ೬೪

ಅಂತೆಸೆವ ಶಾಳವಳಯಾ ।
ಭ್ಯಂತರದೊಳ್ ಕಲ್ಪವೃಕ್ಷವನಮಹಿಯಿರ್ಕುಂ ॥
ಸ್ವಾಂತೋತ್ಸವಕರಮೆನಿಸಿ ಸ ।
ಮಂತಷ್ಟಸಹಸ್ರಚಾಪಕೃತವಿಸ್ತಾರಂ ॥ ೬೫

ಜ್ಯೋತಿಯನೀವ ಮಂದಿರಮನೀವ ಸುಧಾನ್ನಮನೀವ ವಸ್ತ್ರಸಂ ।
ಘಾತಮನೀವ ವಾದಿತಮನೀವ ಸುಮಾಲ್ಯಮನೀವ ಭಾಜನ ॥

ವ್ರಾತಮನೀವ ದೀಪಸಮುಮನೀವ ವಿಭೂಷೆಯನೀವ ಸೋಮಸಂ ।
ಘಾತಮನೀವ ಕಲ್ಪಕುಜಮೊಪ್ಪುವವಲ್ಲಿ ಗಶಾಂಗಸಂಗತಂ ॥ ೬೬

ಮತ್ತಂ

ದೇವನಗಾಗ್ರದಿಂದಭಿಷವೋತ್ಸವದಿಂದಿಳಿತಂದು ಬೇಗದಿಂ ।
ತೀವಿ ನಿಜಾಳವಾಳಕುಳಮಂ ತಣಿವಿತ್ತ ಸುಧಾಬ್ಧಿ ಜೀವನಂ ॥
ಜೀವನಮೆಂದೆ ಬಂದುದು ಜಿನೇಂದ್ರನನೋಲಗಿಪೆಳ್ತಯಿಂದೆ ಕ ।
ಲ್ಪಾವನಿಜೋತ್ಕರಂ ಕುರುಧರಿತ್ರಿಗಳೆಂದೆನಿಸಿತ್ತು ತದ್ವನಂ ॥ ೬೭

ಅದಲ್ಲದೆಯುಮಲ್ಲಿಸೊಗಯಿಸುವ

ಕೃತಕೋರ್ವೀಧರಜಾಳದೊಳ್ ಕೃತಕಸಿಂಧುವ್ರಾತದೊಳ್ ಕಾಂಚನೋ
ನ್ನತದೊಳ್ ವಾರ್ನಿಕುರುಂಬದೊಳ್ ವಿತತಧಾರಾಗೇಹಸಂದೋಹದೊಳ್ ॥
ಕೃತಪುಷ್ಪೋಚ್ಚ್ರಿದತಲ್ಪಕಲ್ಪಲತಿಕಾಗಾರಾಳಿಯೊಳ್ ದೇವದಂ ।
ಪತಿಗಳ್ ಕ್ರೀಡಿಪರೆಂದೊಡೇಂ ಬನಮದೆಂತುಂ ದಿವ್ಯಸಂಸೇವ್ಯಮೋ॥ ೬೮

ಮತ್ತಂ ಪೂರ್ವೋಕ್ತಕ್ರಮದಿಂ ನಾಲ್ದೆಸೆಯ ನಾಲ್ಕುಂ ಬನಂಗಳ ಮಧ್ಯದೊಳ್ ತ್ರಿಶಾಳಪರಿವೃತತ್ರಿವಿಷ್ಟರಾಗ್ರಕಾಯೋತ್ಸರ್ಗಸ್ಥಿತವಿಶುದ್ಧ ಸ್ಫಟಿಕಮಯಸಿದ್ಧಪ್ರತಿಮಾಪ್ರತಿಬದ್ಧಮೂಳಪ್ರದೇಶಪೇಶಲಂಗಳುಂ ಪ್ರ ತ್ರಿವಿಟಪಘಟಿತಘಂಟಾಜಾಳಮುಕ್ತಾದಾಮಚಾಮರೋದ್ಭಾಮಂಗಳುಮಪ್ಪ ನಮೇರುಮಂದಾರಪಾರಿಜಾತಹರಿಚಂದನಸಂತಾನಮೆಂಬ ಸಿದ್ಧಾರ್ಥಕವೃಕ್ಷಂ ಗಳಿಂದಮೆಂಟುಂ ಪಕ್ಷಕದ್ವಾರಂಗಳಿರ್ಕೆಲದ ಪದಿನಾಱುಂ ನಾಟಕಶಾಲೆಗ ಳಿಂದಮನಿತೆ ಧೂಪಘಟಂಗಳಿಂದಮೆಸೆದು ಸಕಳಮಂಗಳಜನ್ಮಭೂಮಿಯೂದ ಕಲ್ಪವೃಕ್ಷವನಭೂಮಿಯಿಂ ಬಳಿಕ್ಕೆ,

ಮಂಗಳನಿಧಿನಿಕರಸನಾ ।
ಥಂಗಳನತಿರುಚಿತರಜತರಚಿತಮಹಾದ್ವಾ ॥
ರಂಗಳನುರಗಪ್ರತಿಹಾ ।
ರಂಗಳನೊಪ್ಪುವುದು ಕನಕವೇದೀವಳಯಂ ॥ ೬೯

ಅಲ್ಲಿಂದೊಳಗರ್ಧಯೋಜನವಿಶಾಳಶೋಭಾವಿಷಯಮಾಗಿ

ನಯನಾಪ್ಯಾಯಿತಕ್ಕೆ ಮತ್ತಾ |
ರಯೆ ಕರ್ಣರಸಾಯನಕ್ಕೆ ಸುರನರಜನತಾ ||
ಶಯಸೌಖ್ಯಕ್ಕುದ್ಭವಭೂ |
ಮಿಯಿದೆನೆ ಸಂಗೀತಭೂತಳಂ ಸೊಗಯಿಸುಗುಂ || † ೩೦

ಮತ್ತಮಲ್ಲಿ ನೃತ್ಯಸಾಂಪ್ರದಾಯಕಸಾಮಾಜಕಜನನಿವೇಶೋಚಿತೋತ್ತುಂಗರಂಗಪಾರ್ಶ್ವವಿಶಾಳಭೂಪ್ರದೇಶಂಗಳಿಂದಂ ಅತಿಬಹಳಶಾತಕುಂಭಸ್ತಂಭಂಗಳಿಂದಂ ಅಪ್ರತಿಸುರತ್ನವರಾತಿಭದ್ರಂಗಳಿಂದಂ ಉದಾರಚತುರ್ದ್ವಾರಂಗಳಿಂದಂ ಆತ್ತಮತ್ತವಾರಣಂಗಳಿಂದಂ ಮತ್ತಂ ದೇವಮಾನವಮೃಗಖಗೋರ್ವೀಜಪರ್ವತಂಗಳಂ ಕ್ರಿಯಾಗುಣದ್ರವ್ಯಂಗಳಂ ಜಾತಿಯಾಗೆ ಬರೆದ ಚಿತ್ರಂ | ಚಿತ್ರಾರ್ಧಂ | ಚಿತ್ರಾಭಾಸಮೆಂಬ ಮೂಱುಂ ಚಿತ್ರದೊಳಂ, ಶ್ರುತವಿದ್ಧಮಾತ್ಮವಿದ್ಧಂ ಪರವಿದ್ಧಮೆಂಬ ವಿದ್ಧಪದ್ಧತಿಯೊಳಂ, ಋಜು | ಋಜುಪರಾವೃತ್ತಿ | ಅರ್ಧಋಜು | ಅರ್ಧಋಜುಪರಾವೃತ್ತಿ | ಸಾಚಿ | ಸಾಚಿಪರಾವೃತ್ತಿ | ದ್ವ್ಯರ್ಧಾಕ್ಷಂ | ತತ್ಪರಾವೃತ್ತಿ | ಪಾರ್ಶ್ವಗತಮೆಂಬನವಸ್ಥಾನಕಂಗಳೊಳಂ, ಆಯಾಮವಿಸ್ತಾರಮೆಂಬ ಮಾನದ್ವಯದೊಳಂ, ರಸಚಿತ್ರಂ | ಧೂಳೀಚಿತ್ರಮೆಂಬೆರಡೋಜೆಯೊಳಂ, ಪುಲಕಂ | ಪತ್ರಕಂ | ಬಿಂದುಕಂ | ಧೂಮ್ರಾವರ್ತಂ | ಉದ್ವರ್ತನಂ | ಚಿತ್ರವರ್ತಮೆಂಬಾಱುಮಣ್ಕೆಗಳೊಳಂ, ಉದಕಂ | ಅಧೋದಕಂ | ವರ್ಣಾಂತರಮೆಂಬೀಪಲವುಂ ಛವಿಗೆಯ್ವ ಪವದೊಳಮಳವಡೆ ಭೂತಭವದ್ಭಾವಿಶಲಾಕಾಪುರುಷಚರಿತಂಗಳಂ ದಿವ್ಯಜ್ಞಾನಿಗಳಿಂ ತಿಳಿದು ಜನ್ಮಪರಂಪರೆವೆರಸು ಮಯಮಾಂಡವ್ಯವಿಶ್ವಕರ್ಮರೆಂಬಮರ್ತ್ಯಚಿತ್ರಕರ್ ಬರೆದ ಚಿತ್ರಂಗಳೊಳಂ, ಅನಱಿಡೆಯಡೆಯೊಳ್ ಚಿತ್ರಾರ್ಧಪತ್ರಮೊಂದು ತದ್ವಿದ್ಯಾವೈಶಾರದ್ಯಮಂ ಮೆಱೆವ

† ಸುರನರ್ತಕಿಯರವರಿಸಲ್ |
ಲ್ಮರೆಯಾದತ್ತವರದಿವ್ಯರೂಪುಗುಣಂಗಳ್ ||
ವರಮೆಸೆನ್ನರಮಾದಂ |
ಸುರರಾಗಂವೀತರಾಗಮಯಮಾಯ್ತಾಗಳ್ || ೩೧

ಇದು ಬಂದು ಪ್ರತಿಯುಲ್ಲಿಲ್ಲ; ಗ್ರಂಥಕರ್ತನದಲ್ಲವೆಂದು ತೋರಿಬರುತ್ತದೆ.

ತೆಱದೆಕಳಕೆ । ಕಂಟಕಂ । ಬಾಳಶಿಶಿರ । ತ್ರಿಭಂಗಂ । ಮಾಕರಿಕೆಯೆಂಬ ಪಂಚಾಂಕುರಪ್ರಪಂಚವುಂ, ಗ್ರಂಥಿಗರ್ಭಂ । ಛಲಿತಾಳವಟ್ಟಂ । ಪ್ರದಿಪ್ರ। ಪ್ರೊದಱು । ಉತ್ಪಾಳಿಕವಿ । ಮರುಳು । ಪೂರ್ವಶಾಖೆ । ಪಶ್ಚಿಮಶಾಖೆ । ಶಿರಂ । ಮನುಶಿರಂ । ವರಾಹಕರ್ಣಿಕೆ । ಗಜಕರ್ಣಿಕೆಯೆಂಬವಯವಪ್ರಕಾರಮುಮೆಸೆಯೆ ಬರೆದ ಶಿಶು । ಸಕಲಂ । ಸ್ವಸ್ತಿಕಂ । ವರ್ಧಮಾನಂ । ಸರ್ವತೋಭದ್ರಂ । ಕಾಂತಂ । ಮಹಾಕಾಂತಂ । ಚಿತ್ರೋತ್ಸವಮೆಂಬೆಂಟುಂ ಪತ್ರಂಗಳೊಳಂ, ಅಸಾದೃಶ್ಯಮುಂ ದೃಶ್ಯಮುಮಾದ ಶುಶ್ಲಕ್ಷ್ಣಸುಧಾಭಿತ್ತಿಭಾಗಂಗಳಿಂದಮಪೂರ್ವಭಿತ್ತಿಯಂ ತಳೆದು

ಸಂಗೀತದ ದೆಸೆಯುಱಿಯದ ।
ವಂಗಂ ಪುಗಲೊಡನೆ ಪಾಡುವಾಡುವ ಚಿತ್ತಂ ॥
ಸಂಗಳಿಪುದೆನಿಪ ನೃತ್ಯಗೃ ।
ಹಂಗಳ್ ಸುತ್ತಿಱಿದು ನೆಱೆಯೆ ಮೆಱೆಯುತ್ತಿರ್ಕುಂ ॥ ೭೨

ಅದಲ್ಲದೆಯುಂ ಷಡ್ಜಮಧ್ಯಮಗ್ರಾಮಸಂಬಂಧಂಗಳಪ್ಪ ಅಷ್ಟಾದಶಜಾತಿಗಳೊಳ್ ಪುಟ್ಟಿದ ಪಲವುಂ ಗ್ರಾಮರಾಗಂಗಳೊಳಂ, ಅಲ್ಲಿ ಪುಟ್ಟಿದ ಭಾಷೆಗಳೊಳಂ, ಭಾಷೆಗಳೊಳ್ ಪುಟ್ಟಿದ ವಿಭಾಷೆಗಳೊಳಂ, ವಿಭಾಷೆಗಳೊಳ್ ಪುಟ್ಟಿದಂತರಭಾಷೆಗಳೊಳಂ, ತತ್ತದಂಗಂಗಳಪ್ಪ ರಾಗಾಂಗಂ । ಭಾಷಾಂಗಂ । ಉಪಾಂಗಂ । ಕ್ರಿಯಾಂಗಮೆಂಬ ದೇಶೀರಾಗಂಗಳೊಳಂ, ಮತ್ತಂ ಸ್ಥಾನತ್ರಯನಿಯುಕ್ತಮುಂ ಸ್ಥಾಯ್ಯಾದಿವರ್ಣಯುತಮುಂ ಅಮುಕ್ತಸ್ಥಾನರಂಜನೆಮುಂ ನಾನಾಲಂಕಾರಸಾರಮುಂ ಲಿಃನೋಲ್ಲಸನ್ನ್ಯಾದನ್ಯಾಸಭಾಸ ರಮುಂ ತಂ । ಹ । ಯ । ಎ । ಅ । ದ । ತಿನಂ । ಸಿತ । ನಿತ । ಗೀತಾಕ್ಷರೋಪಲಕ್ಷಿತಮುಂ ಗಮಕರಮಣೀಯಮುಂ ನಿಖಿಳಗೀತವಸ್ತ್ವಾದಿರೂಪಮುಮಪ್ಪಾಲಾಪಿಯೊಳಂ, ವಿಸ್ತರ । ಸಂಕೀರ್ಣ । ಶುದ್ಧ । ಮಿಶ್ರಮೆಂಬ ಚತುರ್ವಿಧರಾಗಂಗಳಿಂ ಉದ್ಗ್ರಾಹ । ದ್ರುವ । ಮೇಳಾಪ । ಭೋಗಂಗಳೆಂಬ ನಾಲ್ಕುಂ ಧಾತ್ವಂಗಂಗಳಿಂ, ಸ್ವರ । ಪದ । ಬಿರುದ । ಪಾಟ । ತೆನ್ನ । ತಾಳಮೆಂಬ ಷಡಂಗಂಗಳಿಂ ನಳಂ । ಕೃತಂ । ಪ್ರಸನ್ನಂ । ವ್ಯಕ್ತಂ । ಪೂರ್ಣಂ । ಸನಂ । ಸುಕುಮಾರಂ । ಸುರಕ್ತಂ । ಶ್ಲಕ್ಷ್ಣಂ । ಮಧುರಂ ।

ವಿನಿಕೃಷ್ಟವೆಂಬ ದಶಗುಣಂಗಳನೆಸೆವ ಗೀತಕಾದಿಶುದ್ಧಪ್ರಬಂಧಂಗಳೊಳಂ, ಮಾತೃಕಾದಿದೇಶೀಪ್ರಬಂಧಂಗಳೊಳಂ, ಧ್ರುವಾದಿದೇಶೀಗೀತಂಗಳೊಳಂ, ತ್ರಿಮಾರ್ಗಸೂಳಕ್ರಮದೊಳಂ, ಲಕ್ಷ್ಯಲಕ್ಷಣಕುಶಲರುಂ ಸಂದಷ್ಟಾದ್ಯೇಕೋನವಿಂಶತಿದೋಷದೂರರುಂ ಜಿತಶ್ರಮರುಂ ವಶ್ಯಕಂಠರುಮಪ್ಪ ಉತ್ತಮೋತ್ತಮಗಾಯಕರುಮಂ, ಮತ್ತಂ ತತಘನಸುಷಿರಾವನದ್ಧಚತುರ್ವಾದ್ಯಭೇದವೇದಿಗಳುಮಂ, ಏಕಹಸ್ತ। ದ್ವಿಹಸ್ತ। ಕೋಣ। ಹಸ್ತಕೋಣ। ಅಂಗುಳಿಕಾ। ಫೂತ್ಕಾರವಾದನ ಕ್ರಮಜ್ಞರುಂ, ಯತ್ಯಾದಿಸಪ್ತತ್ರಿಂಶದ್ವಾದ್ಯಪ್ರಬಂಧಪ್ರಯೋಗಪಟುಗಳುಮಂ, ಶುದ್ಧಂ। ಸಮಂ। ವಿಭಕ್ತಂ। ರಕ್ತಂ। ಮಧುರಂ। ಸ್ಫುಟಂ। ಪ್ರಹರಣಂ। ಶುಭದಂ। ವಿಘುಷ್ಟಂ। ಕಳಂ। ಘನಮೆಂಬ ದಶವಾದ್ಯಪ್ರಬಂಧಪ್ರಯೋಗಗುಣಪ್ರವೀಣರುಮಂ, ಗೀತಾನುಯಾಯಿ। ನೃತ್ಯಾನುಯಾಯಿ। ಉಭಯಾನುಯಾಯಿವಾದ್ಯಭೇದವಿಶಾರದರುಂ ವ್ಯಕ್ತಾದ್ಯಷ್ಟಹಸ್ತಗುಣಾಶ್ರಯರುಮಪ್ಪ ವಾದಕರುಮಂ, ಮತ್ತಂ ಸಂಯುತಾಸಂಯುತನೃತ್ಯಭೇದದಱುವತ್ತುನಾಲ್ಕು ಹಸ್ತಂಗಳುಮಂ ಸ್ಥಾಯೀಭಾವ। ವ್ಯಭಿಚಾರೀಭಾವ। ರಸಭೇದ ಮೂವತ್ತಱುದೃಷ್ಟಿಗಳುಮನಾಱುಂ ಪಾದಪ್ರಕಾರಂಗಳುಮಂ ಮತ್ತಮುೞಿದಂಗೋಪಾಂಗಪ್ರತ್ಯಂಗಚೇಷ್ಟೆಗಳುಮಂ ಮೂಱುಂ ಲಾಸ್ಯಸ್ಥಾನಂಗಳುಮನಾಱುಂ ನಾಟ್ಯಸ್ಥಾನಂಗಳುಮಂ ಮತ್ತಂ ಪಲವು ಮಿಶ್ರಸ್ಥಾನಂಗಳುಮಂ ಪದಿನಾಱು ಭೂಮಿಚಾರಿಗಳುಮನನಿತೆ ಗಗನಚಾರಿಗಳುಮಂ ಪತ್ತುಂ ಭೌಮಮಂಡಲಂಗಳುಮನನಿತೆ ವೈಹಾಯಸಮಂಡಲಂಗಳುಮಂ ಪದಿನಾಱುಂ ಹಾರಂಗಳುಮಂ ನೂಱೆಂಟು ಕರಣಂಗಳುಮಂ ಪದಿನೆಂಟು ದೇಶೀಕರಣಂಗಳುಮನೇೞುಂ ಭ್ರಮರಿಗಳುಮಂ ಮೂಱುಂ ತೆಱದ ಸೂಚಿಗಳುಮಂ ಕರಣಂಗಳ ಕೂಟದಿಂ ಪುಟ್ಟುವ ಮೂವತ್ತೆರಡಂಗಹಾರಂಗಳುಮಂ ನಾಲ್ಕುಂ ರೇಚಿತಂಗಳುಮಂ ಯಥಾಶಾಸ್ತ್ರಮುಮತಿಲಲಿತಮುಮಾಗಿ ಅಭಿನಯಿಸಲಱಿವ ರೂಪಲಾವಣ್ಯಪ್ರಾವೀಣ್ಯಯೌವನಾದಿಗುಣಪರಿಪೂರ್ತಿಯುನುಳ್ಳ ನರ್ತಕಿಯರುಮಂ, ಮೇಳವಱಿಯುಱಿದಾಯ್ದುಕೊಂಡು

ಶ್ಲೋ॥ "ಮುಖ್ಯಾ ದ್ವಾದಶಗಾತಾರಃ ದ್ವಾದಶೈವ ಚ ಗಾಯಿಕಾಃ ।
ಅಷ್ಟಾಚಿಹಲಿಕಾಃ ಪ್ರೋಕ್ತಾಃ ಷಟ್ತಥಾ ವಾಂಶಿಕಾ ಮತಾಃ ॥
ಬತ್ತಕಾರಾಶ್ಚ ಪಂಚಾಸ್ಯಃ ತಥಾ ಪಾಟಹಿಕಾಸ್ತ್ರಯಃ ॥
ಯತ್ರ ಮಾರ್ದಂಗಿಕಾಃ ಷಟ್ಚ ವೃಂದಸ್ಸ್ಯಾದುತ್ತಮೋತ್ತಮಂ॥"

ಎಂಬ ಭರತಾಗಮೋಕ್ತಕ್ರಮದಿಂ ದ್ವಾಪಂಚಾಶದ್ವಿದ್ಯಾವರ್ಜನಸಜ್ಜಿತಮಪ್ಪ ಸಂಪ್ರದಾಯಂಗಳುಮಂ ಸಮಕಟ್ಟಿ ದೇವಮಾನವಕುತಪವಿತತಿನೃತ್ಯಭವನಂಗಳೊಳ್ ಪ್ರತ್ಯೇಕಂ ಸಮುಸ್ತಾದಿಪೂರ್ವರಂಗಸಂಗತಿಯಿಂ ಶುದ್ಧಂ ಚಿತ್ರಮೆಂಬೆರಡುಂ ಪದ್ಧತಿಯೊಳ್ ಸರ್ವವಿದ್ಯೇಶ್ವರನುಂ ಚತುರಾಸ್ಯನುಮಪ್ಪ ತೀರ್ಥೇಶ್ವರನಂ ಕೇವಳಂ ತಾಳಲಯಾಶ್ರಯಮುಮಂ ದೇಶೀಯಮುಮಪ್ಪ ಸಂಗೀತಪ್ರಸಂಗದಿನೋಲಗಿಸುವಲ್ಲಿ,

ವಿತರೆಚ್ಚಾಯಾದಿಳರಾ ।
ಹತಿಯೊಳ್ ಗೀತಾನುಗತಿಯೊಳವಧಾನಸಮ ॥
ನ್ವಿತರತ್ತ ಮತ್ತೆ ತಾಳದೊ ।
ಳತಿದೃಢರೆನೆ ಪಾಡಿ ಗಾಯಕರ್ ಮೆಚ್ಚಿಸುವರ್ ॥ ೭೩

ಆದಂ ಗೀತದ ಬಣ್ಣಂ ।
ನಾದದೊಳಕ್ಕರಮುಮೆಯ್ದೆ ಶಬ್ದದೊಳಱಿಯ ॥
ಲ್ಕಾದಪುದೆನೆ ಬಾಜಿಸುವರ್ ।
ವಾದಕರುಂ ಪಿಕ್ಕೆ ಗೀತಸಮಯಮದಿಂಪಂ ॥ ೭೪

ತೊಡರದ ಪಹಲಣೆಯಿಂ ಪಯ ।
ದೊಡನುಗ್ಗಡಿಸುವುದು ತೂಕದೆಸಕಂ ಜತಿಯುಂ ॥
ನಡೆಯಿಸುವುದು ಕಿತ್ತು ಚಂಡಣೆ ।
ಗುಡುವುದು ನಚ್ಚಣಿಯರಾಟಮೇನಚ್ಚರಿಯೋ ॥ ೭೫

ಅಂತು ಸಾಶ್ಚರ್ಯತೂರ್ಯತ್ರಯಮಯಮಾದ ಭವನಭೂಚಕ್ರದೆಡೆಯೊಳೆಡೆಯ ನಾಲ್ಕುಂ ವೀಧಿಗಳ ಮಧ್ಯದೊಳ್ ಮಣಿಮಾಲಾವಿರಚಿತೋತ್ತುಂಗತೋರಣಶತಾಂತರಿತಂಗಳುಂ ಛತ್ರಚಾಮರಕನಕಕಿಂಕಿಣೀಜಾಳ

ಕುಸುಮಮಾಲಾವಿಳಾಸವಿಳಸಿತಂಗಳುಂ ಜಿನಸಿದ್ಧಬಿಂಬಕದಂಬಸಂಚ್ಛನ್ನಂ
ಗಳುಂ ಅಖಂಡಶೋಣಮಾಣಿಕ್ಯಘಟಿತಂಗಳುಮಾಗಿ,

ನವನಿಧಿಯೊಂದೊಂದನೆ ಕುಡು ।
ವ್ರವವರ್ಕೆವು ಭವ್ಯಸಮಿತಿಗಿಷ್ಟಮನಿತೊ ॥
ಪ್ಪವ ನವನವನಿಧಿ ನೋಡುವೊ ।
ಡಿವೆನಿಪ್ಪವು ಕೂಡೆ ನವನವಸ್ತೂಪಂಗಳ್ ॥ ೭೬

ಆಸಂಗೀತಭೂತಳದಿನೊಳಗೆ

ಪಳಿಕಿನ ಕೋಟೆ ಕೋಟೆಗಳವಟ್ಟ ಹರಿನ್ಮಣಿಗೋಪುರಂಗಳು ।
ಜ್ಜಳಿಸುವ ಗೋಪುರಂಗಳ ಕೆಲಂಗಳೊಳಿರ್ಪ ನಿಧಿಪ್ರತಾನಮಂ ॥
ಗಳತತಿ ಮತ್ತೆ ಕಲ್ಪಜಕುಮಾರರ ಭೂತಿಗಳಾತ್ತಹಸ್ತಮು ।
ಗ್ಗಳಿಸಿದ ಕಾಪು ಕಣ್ಗೆ ಸಮನಿಪ್ಪದು ಕೌತುಕಮಂ ನಿರಂತರಂ ॥ ೭೭

ಪರಮೌದಾರಿಕದಿವ್ಯಾಂ ।
ಗರೋಚಿ ಮೇಗೊಗೆದು ಬಳಸಿದತ್ತೆನೆ ನಿಮಿರ್ದ* ॥
ಚ್ಚರಿಯಾಯ್ತಾ ಕೋಟೆಯ ಕೊನೆ ।
ವರೆಗಂ ಶ್ರೀಮಂಡಪಂ ನಭಸ್ಸ್ಫಟಿಕಮಯಂ ॥ ೭೮

ಅಗಲಂ ತನಗೊಗ್ಗಾದುದ ।
ಮಿಗಿಲಿಲ್ಲೆನೆ ಶಾಳಮೂಳೆದಿಂದೆ ತಗುಳ್ದೊ ॥
ಪ್ಪುಗುಮಾಶ್ರೀಮಂಡಪದೊಳ ।
ಗೆ ಗಣಾವನಿದೇಶಮಸಮಸುಕೃತಿನಿವೇಶಂ ॥ ೭೯

ನೆಗೆಳ್ದಿರ್ದಾ*ನಾಲ್ಕುಂ ಬೀ ।
ದಿಗಳಿರಡುಂ ಕೆಲದವೆರಡು ಮತ್ತೆಡೆಯೆಡೆಯೊಳ್ ॥
ಸೊಗಯಿಪ್ಪವೆರಡೆರಡೆನೆ ಭಿ ।
ತ್ತಿಗಳೇರೆಂಟಲ್ಲಿ ಕೋಷ್ಠವಿರಾಜಿಕ್ಕುಂ ॥ ೮೦

ಮುನಿಪರ್ ಕಲ್ಪಜೆಯರ್ ಮನುಷ್ಯವನಿತಾ...ರ್ಯೆಯರ್ ಜ್ಯೋತಿರಂ ।
ಗನೆಯರ್ ವ್ಯಂತರಕಾಂತೆಯರ್ ಭವನವಾಸಸ್ತ್ರೀಯರಾಭಾವನರ್ ॥

ವನಜರ್ ಜ್ಯೋತಿಷ್ಕರ್ ಸುರರ್ ನರವರರ್ ತಿರ್ಯಕ್ಸಮೂಹಂಗಳೆಂ ।
ಬಿನಿತುಂ ಪನ್ನೆರಡುಂ ಗಣಂಗಳವಱೊಳ್ ಪರ್ಯಾಯದಿಂದೊಪ್ಪುಗುಂ ॥

ಅದೆಂತೆಂದೊಡೆ: ದತ್ತಾದ್ಯರಪ್ಪ ತೊಂಬತ್ತುಮೂವರ್ ಗಣಧರರುಂ, ನಾಲ್ಸಾಸಿರ್ವರ್ ದಶಪೂರ್ವಧರರುಂ, ಎರಡುಲಕ್ಕೆಯ ಪತ್ತುಸಾಸಿರದ ನಾಲ್ನೂರ್ವರ್ ಶಿಕ್ಷಕರುಂ, ಇರ್ಚ್ಛಾಸಿರ್ವರವಧಿಜ್ಞಾನಿಗಳುಂ, ಪದಿನೆಂಟು ಸಾಸಿರ್ವರ್ ಕೇವಲಜ್ಞಾನಿಗಳುಂ, ಅಱುನೂರ್ವರ್ ವೈಕ್ರಿಯಿಕರುಂ, ಎಂಟು ಸಾಸಿರ್ವರ್ ಮನಃಪರ್ಯಯಜ್ಞಾನಿಗಳುಂ, ಏೞುಂ ಸಾಸಿರ್ವರ್ ವಾದಿಗಳುಂ, ಮೂಱು ಲಕ್ಕೆಯುಮೆಣ್ಬತ್ತು ಸಾಸಿರ್ವರಾರ್ಯಿಕೆಯರುಂ, ಐದು ಲಕ್ಕ ಶ್ರಾವಕಿಯರುಂ, ಮೂಱು ಲಕ್ಕ ಶ್ರಾವಕರುಂ, ಅಸಂಖ್ಯಾತದೇವದೇವಿಯರುಂ, ಅಸಂಖ್ಯಾತತಿರ್ಯಕ್ಸಮಾಜಮುಂ, ಪ್ರಾಗುಕ್ತಪರ್ಯಾಯದಿಂ ಪರಿಮಿತಪ್ರವೇಶಕೋಷ್ಠಂಗಳೊಳ್ ಪರಮೇಷ್ಠಿಪ್ರಭಾವದಿನಸಂಶ್ಲಿಷ್ಟರೂಪಮಾಗಿರ್ಕುಂ. ಅದಲ್ಲದೆಯುಂ,

ದ್ವಾದಶಕೋಷ್ಠಗಣಂಗಳು ।
ಮಾದರದಿಂ ಬಳಸೆ ಮೊದಲ ಪೀಠಮಬೇಂ ಚೆ ॥
ಲ್ವಾದುದೊ ರವಿಮಂಡಳಮುಂ ।
ದ್ವಾದಶರಾಶಿಗಳ ಬಳಸಿದಂದದಿನಾದಂ ॥ ೪೧

ಆಗಳಾಕ್ಷೋಣಿಯಿಂದೊಳಗೆ

ಇದು ದೇವನ ಸಂಸ್ಥಾಗಾ ।
ರದೊಳಮರ್ದ ದುಕೂಲನವಖಳೂರಿಕೆಯೆಂಬಂ ॥
ಪದಿನೆಸೆವಾಕಾಶಸ್ಫಟಿ ।
ಕದ ವೇದಿಕೆಯೆಯ್ದೆ ಬಳಸಿ ಕೊಳಗುತ್ತಿರ್ಕುಂ ॥ ೪೨

ಮತ್ತಂ

ಮರಕತರಜತಚತುರ್ಗೋ ।
ಪುರದಿಂ ಮಂಗಳನಿಧಿಪ್ರತಾನಂಗಳ ಬಿ ॥
ತ್ತರದಿಂ ಕಾಪಿನ ಕಲ್ಪಾ ।
ಮರರಿಂ ತ್ರಿಗುಣಿಸುವುದೆಯ್ದೆ ವೇದಿವಿಳಾಸಂ ॥ ೪೪

ಅದಱಿಂದೊಳಗೆ ಲೋಕತ್ರಯಲಲಾಮಮೆನಿಸ ಪೀಠತ್ರಯಮಿರ್ದುದು. ಅಲ್ಲಿ

ಸುರುಚಿರವೈಡೂರ್ಯಮಯಂ ।
ಸ್ಫುರತ್ಪ್ರಭಾನಿಕರಭರಿತಕನಕಮಯಂ ಭಾ ॥
ಸುರಸಕಲಮಣಿಮಯಂ ಮೊದ ।
ಲೆರಡನೆಯಾದಲೆಯ ಪೀಠಮೊಪ್ಪುಗುಮೆಂದುಂ ॥ ೮೫

ಮತ್ತದುಮೆಸೆವೇೞ್ನೂಱ ।
ಯ್ವತ್ತು ಶರಾಸನಮುದಗಲಮಷ್ಟಾಷ್ಟಾರ್ಧಂ ॥
ಪ್ರೋತ್ತುಂಗತೆಯೆನೆ ಸೊಗಯಿಸು ।
ಮೆತ್ತಂ ಪ್ರಥಮದ್ವಿತೀಯನುತಪೀಠಂಗಳ್ ॥ ೮೬

ಪಂಚಧನುಶ್ಶತವಿಸ್ತ ।
ರಾಂಚಿತಸಮಭಾಗಮಾಚತುಶ್ಚಾಪೋತ್ಸೇ ॥
ಧಂ ಚಂಚನ್ಮಣಿರೋಚಿ ।
ಸ್ಸಂಚಯಮೊಪ್ಪುದುದಗ್ರಮಗ್ರಿಮಪೀಠಂ ॥ ೮೭

ಅದಲ್ಲದೆಯುಂ,

ರುಚಿರಮಕುಟಾಗ್ರದೊಳ್ ಧ ।
ರ್ಮಚಕ್ರಮಂ ಯಕ್ಷರೇಕಚಾಪಮಿತಮನಾಂ ॥
ತು ಚತುರ್ದಶೆಯೊಳಮಿರ್ಪರ್ ।
ಖಚರನರೇಂದ್ರಾರ್ಚಿತಾದಿಪೀಠದೊಳನಿಶಂ ॥ ೮೮

ಅಂಬರಹರಿತಾರ್ಕ್ಷ್ಯೋಕ್ಷಗ ।
ಜಾಂಬುಜಮಾಳಾಮೃಗೇಂದ್ರಚಿಹ್ನಪತಾಕಾ ॥
ಡಂಬರಮೆಸೆವುದು ಸುರನಿಕು ।
ರುಂಬಸುಪೂಜ್ಯದ್ವಿತೀಯಪೀಠದೊಳೆತ್ತಂ ॥ ೮೯

ನವನಿಧಿಯುಮಷ್ಟಮಂಗಲ ।
ನಿವಹಮುಮುಪನಿಧಿಗಳಂದದಿಂದೊಪ್ಪುವುವಿ ॥

ರ್ಪುರ್ವುಪಾಸಕಸಂದೋಹದ ।
ತವನಿಧಿಯೆನಿಸಿದ ತೃತೀಯಪೀಠದ ಕೆಲದೊಳ್ ॥ ೯೦

ವಿದಿತಂ ತತ್ಪೀಠದ ಮ ।
ಧ್ಯದೊಳಿರ್ಪುದು ಷಡ್ಗುಣ್ಯತಾಯಾಮವ್ಯಾ ॥
ಸದಿನಾತ್ತನವಕತೋತ್ಸೇ ।
ಧದಿನೊಪ್ಪುವ ಗಂಧಕುಟಿ ಘಟನ್ಮಣಿಘಟಿತಂ ॥ ೯೧

ಸುರಗಿರಿಯಂತೆವೊಲದು ವಿ ।
ಸ್ತರಕಲ್ಯಾಣಪ್ರದೇಶವಿಬುಧಾವಾಸಂ ॥
ಶರನಿಧಿಯಂತದು ರತ್ನಾ ।
ಕರಮದು ನಂದನವೆನಲ್ಕೆ ಕಮಲಾನಂದಂ ॥ ೯೨

ನಯಮಂ ಬೀಱುವ ಚಿತ್ರಪತ್ರನಿಧಿಕೂಟಸ್ತಂಭಭಿತ್ತಿಚ್ಛದಾ ।
ಶ್ರಯದಾಲಕ್ಷಣಮಾನಮೇಯಗುಣರೇಖಾಶುದ್ಧಿ ಸರ್ವಾರ್ಥಸಿ ॥
ದ್ಧಿಯತದ್ರತ್ನ ವಿಮಾನದಲ್ಲಿಯುಮಿವಿಲ್ಲೆಂಬೀಜಸಕ್ಕಾದುದಾ ।
ಶ್ರಯಮೇನಪ್ರತಿಬಂಧಿ ಗಂಧಕುಟಿ ಶಶ್ವದ್ಗಂಧಸಂತಾನಿತಂ ॥ ೯೩

ಪರಮಾತ್ಮನ ದಿವ್ಯವಪುಃ ।
ಪರಿಮಳದಿಂ ತೀವಿ ನಿಂದ ಗಂಧಕುಟಿಯ ಬಂ ॥
ಧುರಗಂಧದ ಕೆಲದೊಳ್ ಗಂ ।
ಧರಾಜಿಲೇಶಾರ್ಥದಿಂದೆ ವರ್ತಿಸುತಿರ್ಕುಂ ॥ ೯೪

ಮರವಟ್ಟಿದು ಮಳಯರುಹಂ ।
ಕರಗಿದುದಾಸವದ ನೆವದೆ ಕುಸುಮಂ ಕಾಳಾ ॥
ಗರು ಪೊಗೆಯುತಿರ್ದುದೊಡರಿಸೆ ।
ಪರಿಭವಮಂ ಗಂಧಕುಟಿಯ ನಿರ್ಭರಗಂಧಂ ॥ ೯೫

ತದ್ಗಂಧಕುಟಿಯ ಮಧ್ಯದೊ ।
ಳುದ್ಗತರತ್ನಾಂಶುಜಾಳಜಟಿಳಂ ರಾರಾ ॥

ಜಗ್ಗಜರಿಪುಧೃತಮಖಿಳಮ ।
ರುದ್ಗಣಸಂಸೇವ್ಯಮೊಪ್ಪುಗುಂ ಹರಿಪೀಠಂ ॥ † ೯೬

ಅಲ್ಲಿ

ಇಂತಿದೆ ಕರ್ಮನಿರ್ಜರೆಯನಾಗಿಪ ನಿರ್ಮಳಯೋಗಮುದ್ರೆಯಿಂ ।
ಬಂತಿರೆ ಸೌಷ್ಟವಂ ನೆಲಸಿ ಮೂರ್ತಿಯೊಳಾದಮನಂತಬೋಧಮ ॥
ಭ್ಯಂತರದೊಳ್ ಪೊದಲ್ದು ಬೆಳಗುತ್ತಿರೆ ಚಂದ್ರಜಿನೇಂದ್ರನೇಕಮು ।
ಷ್ಟ್ಯಂತರದಲ್ಲಿ ಮುಟ್ಟದೆಸೆದಿರ್ದನಣಂ ಹರಿವಿಷ್ಟರಾಗ್ರಮಂ ॥ ೯೭

ಸದಯಂ ತ್ರಿವಿಷ್ಟರಪಾ ।
ಗ್ರದೊಳೆಸೆವ ಗಜಾರಿಪೀಠದೊಳ್ ತ್ರೈಲೋಕ್ಯ ॥
ಗ್ರದೊಳೆಸೆವೀಷತ್ಪ್ರಾಗ್ಭಾ ।
ರದೊಳಿರ್ಪುದನಂದೆ ಸೂಚಿಪಂದದಿನಿರ್ದಂ ॥ ೯೮

ಅಂಚೆಯಮನಸಕಳಿದಮರ್ದಂ* ।
ಬಂಚಿಸಿ ಮಂಜಂ ಮರಳ್ಚಿ ಬಂದವಿಚಳಿತಂ ॥
ಚಂಚಚ್ಚಳಲಕ್ಷ್ಮಿಯ ।
ದೇಂ ಚಂದ್ರಪ್ರಭನ ತನುವಿನೊಳ್ ನೆಲಸಿದುದೋ ॥ ೧೦೦

ಪರಮನ ಮೆಯ್ಗದಿರೊಳ್ ಮೆ ।
ಯ್ಗರೆದಿರ್ಪುದು ನಿಚ್ಚಮುಚ್ಚಬೆಳ್ದಿಂಗಳದ ॥
ಕಿರ್ರುಳುಂ ಪಗಲುಂ ಮರಲ್ವುವು* ।
ಹರಿಸಂ ಕೈಗಣ್ಮೆ ನೋಲ್ಪ ಕಣ್ಗೆಯ್ದಿಲ್ಗಳ್ ॥ ೧೦೧

---

† ಪರಮೇಶಂ ನಿಜಮೆಂದತಿ ।
ಸಿರಿ ಪೇೞೆ ಸಹಸ್ರದಳದ ಪೊಂದಾವರೆಯಿಂ ॥
ದರುಹಂ ಜಗತ್ರಯಂಗಳ ।
ಸಿರಿಯುಂ ಕೈಸೇಱೆಯು ವಿಡಿದ ತೇಜದಿಂದೆಸೆಗುಂ ॥ ೯೬

ಈ ಪದ್ಯವು ಗ್ರಂಥಕರ್ತನದಲ್ಲವೆಂದು ತೋರಿಬಂದುದರಿಂದ ಕೆಳಗೆ ಕೊಟ್ಟಿದೆ. ಇದು ಬಂದು ಪ್ರತಿಯಲ್ಲಿಲ್ಲ.

ಅವಲ್ಲದೆಯುಂ,

ಇದು ಶರದಭ್ರದಿಂದುಗುವ ನಿರ್ಮಲವೃಷ್ಟಿಯಿದಿಂದು ಬಿಂಬದಿಂ ।
ದುದಯಿಪ ಸಾಂದ್ರಚಂದ್ರಿಕೆಯಿದಿಂಗಡಲಿಂದೊಗೆವುದ್ಧವೀಚಿಯಿಂ ॥
ತಿದು ಹಿಮಶೈಳದಿಂ ಪಸರಿಪಚ್ಛಮರುನ್ನದಿಯೆಂಬ ಲೀಲೆಗಾ ।
ದುದು ನೆಲೆ ಚಂದ್ರನಾಥಚರಮಾಂಗದಿನುಣ್ಮುವ ಕಾಂತಿ ಸಂತತಂ ॥ ೧೦೨

ಮತ್ತಂ

ಕೆಲದೊಳ್ ಪರ್ತಿಪ ರೂಪನೆ ।
ಸಲೆ ತಾನಱಿಪುವುದು ಚಂದ್ರರವಿರೋಚಿಸ್ಸಂ ॥
ಕುಳಮೇೞು ಭವದ ರೂಪಂ ।
ಜಲಕ್ಕನಱಿಪುವುದು ಜಿನನ ಘನಭಾವಳಯಂ ॥ ೧೦೩

ತ್ರಿಭುವನದೊಳಗಣ ಭವ್ಯರ ।
ನಭವಪದಾರ್ಚನೆಗೆ ಬನ್ನಿಮೆಂಬಂದದೆ ದುಂ ॥
ದುಭಿನಾದಮಾದಮೆಸೆವುದು ।
ನಭೋದಿಶಾವಳಯವಸುಮತೀತಳಭರಿತಂ ॥ ೧೦೪

ತವುಮುಂ ಚಂದ್ರಿಕೆಯುಂ ವೈ ।
ರಮನುೞಿದೊಂದಾಗಿ ದಿವದಿನಿೞಿತಂದಪುವೋ ॥
ಸಮವಸೃತಿಗೆನಿಸಿ ಸುರಿದುವು ।
ಸುಮವರ್ಷಮುಮಳಸುಮೇಳಸುಮಳಿಸಮುದಯಮುಂ ॥ ೧೦೫

ಸುರಪತಿಯನುರಾಗಪರಂ ।
ಪರೆ ಪರಮನ ಕೆಲದೊಳಗಲದಿರ್ದಪುವೆಂಬ ॥
ಚ್ಚರಿಯಂ ಪೆರ್ಚಿಸಿದುದು ಸುರು ।
ಚಿರಕಿಸಲಯಕುಸುಮಯುಕ್ತರಕ್ತಾಶೋಕಂ ॥ ೧೦೬

ಯುತಹಸ್ತವಿಕೃತಿಮಾಯು ।
ಪ್ರತಿರೋಧಜಮೇಕಕಾಲನರ್ತನವರ್ತ ॥

ವ್ಯತಿರಿಕ್ತಮೇವುದೆಂಬುದ ।
ರುತಮೆಂಬವೊಲೆಸೆವುದಸದಳಂ ದಿವ್ಯರವಂ ॥ ೧೦೭

ಇದು ಚಿತ್ರಂ ಛತ್ರತ್ರಯ ।
ಮುದಾತ್ತಮುಕ್ತಾಫಳಾಂಶುಪಾಂಡುರಮಾಗಿ ॥
ಪುರ್ದು ಮತ್ತನೂನರಾಗಮ ।
ನೊದವಿಸುವುದು ಭವ್ಯಜನದ ಕಣ್ಗಂ ಮನಕಂ ॥ ೧೦೮

ಪಿರಿದುಂ ಬಯಲೊಳ್ ಬಂಬ ।
ಲ್ದಿರೆ ಮಸಗಿದುದಭವನಂಗಚಂದ್ರಿಕೆಯೆಂಬಂ ॥
ತಿರೆ ಸುರನಿಕರಕರಪ್ರ ।
ಸ್ಫುರಿತಚತುಷ್ಷಷ್ಟಿಚಾಮರಂ ಕರಮೆಸೆಗುಂ ॥ ೧೦೯

ವನದಂತೆ ಭದ್ರಪಂಚಾ ।
ನನರಮ್ಯಂ ವನಧಿಯಂತೆ ಮಣಿಗಣಲಕ್ಷ್ಮೀ ॥
ವಿನಿಯುಕ್ತಂ ಕೌತುಕಮಂ ।
ಜನಿಯಿಸುವುದು ವಿಷ್ಟರಂ ತ್ರಿವಿಷ್ಟಪಪತಿಯಾ ॥ † ೧೧೦

ಆರಾತ್ನಂನೂತ್ನಸಿಂಹಾಸನಮೆಳೆವಬಿಕಂ ಪೋಲ್ವಿನಂ ಭಾಮರೇಂದ್ರಾ।
ಕಾರಂ ಕರ್ಪೂರದಿಂದಂ ಸಮೆದುದೆನಿಪಿನಂ ಶಾರದಾಂಭೋದಶೋಭಾ ॥
ಧಾರಚ್ಛತ್ರತ್ರಯಕ್ಕತ್ಯಧಿಕಧವಳಿಮಂ ಸಾರ್ವಿನಂ ತೀರ್ಥನಾಥೋ।
ದಾರಾಂಗಜಜ್ಯೋತ್ಸ್ನೆಯೆತ್ತಂ ಪಸರಿಸಿದುದು ಚಕ್ಷುಶ್ಚಕೋರಾತಿಸೇವ್ಯಂ ॥

ಮತ್ತಂ ಘಾತಿಚತುಷ್ಟಯಕ್ಷಯಾನಂತರಜನಿತಂಗಳಪ್ಪ

---

† ಸಿರಮೆನೆ ಚಂದ್ರಜಿನೇಂದ್ರನ ।
ಕಿರಣಂಗಳೊಳೊಪ್ಪಿ ತೋಱೆ ಲೋಕಕ್ಕೆಂ ॥
ಸಿರಿದಾವರೆಗಳ್ ದುಗ್ಧಾ ।
ಕರದೊಳ್ ಜನಿಸಿರ್ದುವೆಂದು ಪೇಱ್ವರ್ ಕವಿಗಳ್ ॥ ೧೧೧

ಈ ಪದ್ಯವು ಗ್ರಂಥಕರ್ತನವಲ್ಲವೆಂದು ತೋರಬರುವುದರಿಂದ ಕೆಳಗೆ ಕೊಟ್ಟಿದೆ, ಇದು ಒಂದು ಪ್ರತಿಯಲ್ಲಿಲ್ಲ.

ಚತುರಾಸ್ಯತ್ವಮಭುಕ್ತಿಭಾವಮನಿಮೇಷತ್ವಂ ನಭೋಯಾನಸಂ ।
ಗತಿ ಗವ್ಯೂತಿಚತುಶ್ಯತಾಂತರಸುಭಿಕ್ಷತ್ವಂ ವಿಮುಕ್ತೋಪಸ ॥
ರ್ಗತೆಯುಪ್ರಾಣಿವಧಂ ಸಮಾನನಖಕೇಶತ್ವಂ ಸಮಸ್ತಾಗಮ ।
ಜ್ಞತೆಯುಚ್ಛಾಯತೆಯೆಂಬ ಪತ್ತತಿಶಯಂ ತೀರ್ಥೇಶನೊಳ್ ಶೋಭಿಕುಂ ॥

ಅಪರಮನ ತನುವಿಂ ಕೇ ।
ಳೀಪರ್ವತಸಿದ್ಧಚೈತ್ಯತರುಹರ್ಮ್ಯಮಹಾ ॥
ಗೋಪುರಮಂಡಪವಸತಿ ।
ಸ್ತೂಪಾಶೋಕೋಚ್ಚ್ರಯಂ ದ್ವಿಷಡ್ಗುಣಮಕ್ಕುಂ ॥ ೧೧೪

ಉತ್ತುಂಗತೆ ನಾಲ್ವಡಿಯು ।
ರ್ಪತ್ತನುವಿಂ ಶಾಳವೇದಿಕಾಸಮಿತಿಗೆ ಭಾ ॥
ಸ್ವತ್ತೋರಣಗಣಮನಱಿನಿ ।
ನಿತ್ತಧಿಕಮೆನಿಕ್ಕುಮಾಗಮಜ್ಞರ ಮತದಿಂ ॥ ೧೧೫

ಅದಲ್ಲದೆಯುಮಷ್ಟೋತ್ತರಚತ್ವಾರಿಂಶದ್ಗವ್ಯೂತಿಪ್ರಮಿತಪರಿಷನ್ಮಹೀಮಂ
ಡಳಮಂ

ಅಂತರ್ಮುಹೂರ್ತದಿಂ ಪುಗ ।
ಲುಂ ತಡೆಯದೆ ಪೊಱಮಡಲ್ಕಮಾರ್ಪರ್ ಪೊಡರ್ಪಂ ॥
ಕಾಂತಾಶಿಶುವೃದ್ಧಸಮೂ ।
ಹಂ ತಳೆವುದು ತೀರ್ಥನಾಥಸಾಮರ್ಥ್ಯಕೃತಂ ॥ ೧೧೬

ಮೃತಿಜನನಶೋಕನಿದ್ರಾ ।
ರತದೋಷತ್ರಿತಯದೋಷಬಾಧೆಗಳೊಳ್ ತತ್ ॥
ಸ್ಥಿತದೇಹಿಸಮೂಹಂ ಸಂ ।
ಗತಿವಡೆಯದನಿತ್ತುಮಿಂತಿದೇಂ ವಿಸ್ಮಯಮೋ ॥ ೧೧೭

ಪುಗೆ ಪಸಿವುಂ ನೀರಳ್ಕೆಯುಂ ।
ಮಗುಳ್ದಪುದೆಂದು ರಮ್ಯಭೂಮಿಯುನರೆಬರ್ ॥
ಪೊಗೞ್ವ* ನುಡಿ ಸಮವಸೃತಿಯೊಳ್ ।
ಪುಗೆ ದಿಟನಾಕ್ಷುತ್ಪಿಪಾಸೆಗಳ್ ಕಿಡುವುದಱಿಂ ॥ ೧೧೮

ಬಗೆವೊಡಬೋಧತ್ರಿತಯಾ ।
ನುಗಳುಮಭವ್ಯರ್ಕಳುಂ ಕುದೃಷ್ಟಿಗಳುಮಸಂ ॥
ಜ್ಞಿಗಳುಮಣಮಿಲ್ಲೆನಿಸ್ಪಧಿ ।
ಕಗುಣಂ ಜಿನಸಭೆಯೊಳಲ್ಲದೆಲ್ಲಿಯುಮುಂಟೇ ॥ ೧೧೯

ಎನಿಸಿ ನಿಖಿಳಭುವನಾಲಂಕರಣಮುಮಾಗೆ

ವೈಶ್ರವಣವಾಸ್ತುವಿದ್ಯಾ ।
ವಿಶ್ರಮಣಸ್ಥಾನವದು ದಲೆನಿಸಿದುದಂ ವೃ ॥
ದ್ಧಶ್ರವನೀಕ್ಷಿಸಿದಂ ಜಗ ।
ದಾಶ್ರಯಣನ ಸಮವಸರಣಭೂಮಂಡಳಮಂ ॥ ೧೨೦

ಅಂತು ಸಹಸ್ರಲೋಚನಂ ನಿಜವಿಲೋಚನಮರೀಚಿನಿಚಯಂ ಅಮರಕಾಮಿನೀನಿಕರಕೇಕರಮಯೂಖಮಾಳೆಯೊಳಂ ನಿಳಿಂಪಸಮುದಯನಯನಕಾಂತಿಸಂತಾನದೊಳಂ ತಳ್ಪೊಯ್ದು ನಿಮಿರ್ದನೇಕಪ್ರಾಕಾರವೇದಿಕಾನಿಕರಮನೇಕವರ್ಣಮಾಗೆ ಧವಳಿಸೆಯುಂ, ಕನಕಹರಿನೀಳಗೋಪುರಕಳಾಪಮಂ ರೂಪ್ಯಗೋಪುರಂಗಳೊಳ್ ಸರೂಪ್ಯಮನೆಯ್ದಿಸಿಯುಂ, ಮಾನಸ್ತಂಭಂಗಳಂ ಬಳ್ಳಿಮಿಂಚಿನ ಬಳ್ಳಿವಳ್ಳಿಗಡರ್ಪನಿಟ್ಟಂತೆ ಮಾಡೆಯುಂ, ಪ್ರಾಸಾದಚೈತ್ಯಂಗಳಂ ಧವಳಕಮಳವಂದನಮಾಳಾಳಂಕೃತಂಗಳೆನಿಸೆಯುಂ, ಜಳಖಾತಿಕೆಯನಪೂರ್ವಫೇನಸಂತಾನನಿರಂತರಮಾಗಿಸಿಯುಂ, ವಲ್ಲೀವನಮನುತ್ಫುಲ್ಲಕುಸುಮಕಾಂತಿಯೊಡನೆ ಬೆಳೆದುಬಳಸೆಯುಂ, ಉಪವನಮುಮನಪರಿಮಿತತುಹಿನಪಟಳಪರಿವೃತಮೆಂಬ ಸಂದೆಗದೊಳೊಂದಿಸೆಯುಂ, ಕೇತನಪ್ರತಾನಮಂ ನವೀನಚೀನಧವಳಪಲ್ಲವೋಲ್ಲಸಿತದೊಳ್ ಯೋಜಿಸೆಯುಂ, ದಶಾಂಗಕಲ್ಪತರುನಂದನಮಂ ಮಾಲ್ಯಾಂಗಮಯಮೆಂಬ ವಿಸ್ಮಯಮನೊದವಿಸೆಯುಂ, ವಸ್ತುವಿರಚಿತೋತ್ತುಂಗಸ್ತೂಪಂಗಳಂ ಸ್ನಿಗ್ಧದುಗ್ಧಾಬ್ಧಿಸಿಕ್ತಂಗಳೆಂಬಾಡಂಬರಂಗಳನೊಡರ್ಚೆಯುಂ, ಸಂಗೀತಸೌಧಮಾಲೆಯುಂ ನೂತನಸುಧಾಲೇಪಶೋಭೆಯೊಳೊಡಗೂಡೆಯುಂ, ದ್ವಾದಶಗಣಮುಮನಸಮಯುಚಂಚಚ್ಚಂದ್ರಿಕಾಪ್ರವಾಹದೊಳವಗಾಹಮಿರಿಸೆಯುಂ, ಅರ್ಪದಂಗಪ್ರವಾಹಪೀಯೂಷದೊಳ್ ಬೆರಸಿ ಬೞಿಯಂ ಕ್ಷೀರನೀರನ್ಯಾ

ಯಿಂದೇಕೀಭಾವಮಾಗೆಯುಂ, ನೀಡುಂ ನೋಡಿ ನಿಜವಿನೋದಪರಂಪ
ರೆಯುಂ ಮೆಱೆದು ಭಕ್ತಿಭಾವಶುದ್ಧಸಿದ್ಧರಸನನೆಬಲಿದು †

ಸೌಧರ್ಮವುಮಂ ಸೌಧ ।
ರ್ಮಾಧಿಪತಿತ್ವಮುಮನಧಿಪತಿತ್ವಾಹಿತನಿ ॥
ರ್ಬಾಧವಿಳಾಸಮುಮನಣಂ ।
ಸೌಧರ್ಮೇಂದ್ರಂ ಮನಕ್ಕೆ ತಾರದೆ ನಿಂದಂ ॥ ೨೧೨

ಪ್ರತಿಹಾರಂ ತಾನೆ ಚಂಚಚ್ಚಮರರುಹಧರಂ ತಾನೆ ಪೀಠಾರ್ಚನಾಪ್ರ ।
ಸ್ತುತಯುಕ್ತಂ ತಾನೆ ತೂರ್ಯತ್ರಯಸಮಧಿಕೃತಂ ತಾನೆ ನಾನಾಪ್ರಕಾರ ॥
ಸ್ತುತಿಕಾರಂ ತಾನೆ ಮತ್ತಾವನೊ ಪೆಱನೆನೆ ದೇವಾದಿದೇವಾಂಘ್ರಿಸೇವಾ ।
ನತನಿರ್ಗಂ ಪುಣ್ಯಶೀಲಂ ಜಿನಸಮಯಸರಸ್ಸಾರಕೇಳೀಮರಾಳಂ ॥ ೨೧೩

॥ ಗದ್ಯಂ ॥

ಇದು ಪರಮಪುರುನಾಥಕುಳಕುಭೃತ್ಸಮುದ್ಭೂತಪ್ರವಚನಸರಿತ್ಸರಿನ್ನಾಥ

ಶ್ರುತಕೀರ್ತಿತ್ರೈವಿದ್ಯಚಕ್ರವರ್ತಿಪದಪದ್ಮನಿಧಾನದೀಪವರ್ತಿ

ಶ್ರೀಮದಗ್ಗಳದೇವ

ವಿರಚಿತಮಪ್ಪ

ಚಂದ್ರಪ್ರಭಪುರಾಣದೊಳ್

ಸಮವಸರಣವರ್ಣನಂ

ಪಂಚದಶಾಶ್ವಾಸಂ.

---

† ಇಲ್ಲಿಂದ ಮುಂದೆ ಸುಮಾರು ೯೦ ಪದ್ಯಗಳಷ್ಟು ಗ್ರಂಥವನ್ನು ಬರೆದು ಯಾರೋ ಸೇರಿಸಿದ್ದಂತೆ ತೋರುತ್ತದೆ. ಈ ಭಾಗವು ಅಶುದ್ಧವಾಗಿ ಏತದ್ಗ್ರಂಥಕರ್ತೃಕೃತವಲ್ಲವೆಂದು ತೋರಿಬರುವುದರಿಂದಲೂ, ಪುರಾತನಪ್ರತಿಯಲ್ಲಿ ಇಲ್ಲವಾದುದರಿಂದಲೂ, ಈ ಭಾಗವನ್ನು ಮುದ್ರಿಸದೆ ಬಿಟ್ಟಿರುತ್ತೇವೆ.

॥ ಷೋಡಶಾಶ್ವಾಸಂ ॥

ಶ್ರೀಯಮಂ ತಳೆದಂ ತ್ರಿಜಗ ।
ಜ್ಜಾಜ್ಯಯುಮಂ ವಿಮಳಾಂತರಂಗಬಹಿರಂಗಪದ ॥
ಸ್ಥಾಯಿನಿಯುಮಂ ಭವ್ಯೋತ್ಸವ ।
ದಾಯಿನಿಯುಮಂ ಜೈನಜನಮನೋಹರಚರಿತಂ ॥ ೧

ಒಳಗಣ ರತ್ನಪ್ರಕರಂ ।
ಗಳಿನಮೃತಪಯೋಧಿ ಸೊಗಯಿಪೊಂದಂದದೆ ತ ॥
ನ್ನೊಳಗಣ ರತ್ನತ್ರಿತಯಂ ।
ಗಳಿನಮೃತಶ್ರೀವಧೂಪ್ರಿಯಂ ಸೊಗಯಿಸಿದಂ ॥ ೨

ತಾಂ ಭುವನಭೂಷಣಂ ತನ ।
ಗಿಂ ಭೂಷಣಮೇವುದೆಂಬ ತೆಱದಿಂ ಜಿನದೇ ॥
ವಂ ಭೂಷಣಗಣರಹಿತನು ।
ದೇಂ ಭೂರಿತರೋಪಶೋಭೆಯಂ ತಾಳ್ದಿದುದೋ ॥ ೩

ಅಂತನಂತಚತುಷ್ಟಯಲಕ್ಷ್ಮೀಸಮಾಶ್ಲಿಷ್ಟನುಮಷ್ಟಮಹಾಪ್ರಾತಿಹಾರ್ಯಪ್ರಕೃಷ್ಟನುಂ, ಕಾಯಾಕಾರಪರಿಣತತ್ರಿಲೋಕಾಗ್ರ್ಯಪುಣ್ಯಪುದ್ಗಳಪುಂಜಾಯಮಾನಪರಮೌದಾರಿಕಶರೀರನುಂ, ಅಷ್ಟಾದಶದೋಷದೂರನುಂ, ಸಪ್ತರ್ಧಿಸಮುದಯಸಂತತೋಪಾಸ್ಯನುಂ, ಅಹಮಿಂದ್ರನಮಸ್ಯನುಂ, ಸಿದ್ಧಾಶೇಷಸಾಧ್ಯನುಂ, ಬುದ್ಧಸಮಸ್ತಬೋಧ್ಯನುಮಾಗಿರ್ಪನಂ; ಸೌಧರ್ಮೇಂದ್ರಪ್ರೇರಿತನುಂ, ಭವ್ಯಸಾರ್ಥಪ್ರಾರ್ಥಿತನುಮಾಗಿ

ವರಬುದ್ಧಿಚತುಷ್ಟಯಪರಿ ।
ಕರಿತಂ ಜ್ಞಾನರ್ಧಿಭಾಸುರಂ ಬೆಸಗೊಂಡಂ ॥
ಭರದೆ ಕೃತಾಂಜಲಿ ತತ್ತ್ವ ।
ಸ್ವರೂಪಮಂ ದತ್ತಗಣಧರಾಗ್ರಣಿ ಜಿನನಂ ॥ ೪

ಅಂತು ಬೆಸಗೊಳಲೊಡಂ

ದೂರಾಸನ್ನಸಮಂ ಗಂ ।
ಭೀರತರಂ ವ್ಯಾಪ್ತನಿಖಿಳತತ್ತ್ವಂ ಪೆರಪೋ ॥
ದಾರಂ ವ್ಯಪಗತಪದಸವಿ ।
ಕಾರಂ ಪೊಣ್ಮಿದುದು ಜಿನನ ದಿವ್ಯನಿನಾದಂ ॥ ೫

ಮತ್ತಂ

ಭೂರಿತರಭವ್ಯಪ್ರಳಕವಿ ।
ಡೂರಾಂಕುರಜನನಕಾರಿ ಮುನಿಹಂಸಮನೋ ॥
ಹಾರಿಯೆಸೆದುದು ಶಶಿಪ್ರಭ ।
ಶಾರದನೀರಧರಗರ್ಜಿತಂ ದಿವ್ಯರವಂ ॥ ೬

ಆದಿವ್ಯಭಾಷೆಯಿಂ ಜಗತ್ಸೇವ್ಯನಿಂತೆಂದು ಬೆಸಸಿದಂ:— ತತ್ತ್ವಮೆಂಬುದು ಜೀವಾಜೀವಾಶ್ರವಬದ್ಧಸಂವರನಿರ್ಜರಾಮೋಕ್ಷಭೇದದಿಂ ಸಪ್ತಪ್ರಕಾರಮಕ್ಕುಂ. ಅಲ್ಲಿ

ಪರಿಕಿಪೊಡೆ ಪುಣ್ಯಪಾಪಮು ।
ಮೆರಡುಂ ಬಂಧಾನುಬಂಧಿಗಳ್ ಬೇಱನಿಂ ॥
ನಿರವಿಪೊಡೆ ನವಪದಾರ್ಥತೆ ।
ದೊರೆಕೊಳ್ಗುಮಿನರ್ಕನುಕ್ತಮಾದ್ಯಯುಮದಱಿಂ ॥ ೭

ಆರಯೊಡಮೂರ್ತನಂ ಸ್ವಶ ।
ರೀರಮಿತಂ ನಿಜದಿನೂರ್ಧ್ವಗತಿ ಸಂಭವಸಂ ॥
ಹಾರದ್ರವ್ಯಾತ್ಮಂ ಸಂ ।
ಸಾರಸ್ಥಂ ಕರ್ತೃಭೋಕ್ತೃವೆನಿಕುಂ ಜೀವಂ ॥ ೮

ಆಜೀವನುಂ ಭವ್ಯಾಭವ್ಯಭೇದದಿಂ ದ್ವಿಪ್ರಕಾರಂ. ಅವರ್ಕೆ ನರಕತಿರ್ಯಙ್ಮನುಷ್ಯದೇವಗತಿವಿಕಲ್ಪದಿಂ ಚತುರ್ಭೇದಮಕ್ಕುಂ. ಆನರಕಭೂಮಿಗಳುಂ ಅಧೋಲೋಕದೊಳ್ ರತ್ನಪ್ರಭೆ । ಶರ್ಕರಪ್ರಭೆ । ವಾಳುಕಪ್ರಭೆ । ಪಂಕಪ್ರಭೆ । ಧೂಮಪ್ರಭೆ । ತಮಪ್ರಭೆ । ಮಹಾತಮಪ್ರಭೆಯೆಂ ಬೇೞುಂ, ಅಲ್ಲಿ

ಕರಗುಗುಮಾಗಳೆ ವಜ್ರಮು ।
ಮಿರದೆನಿಪುಷ್ಣಮಯಮಾಗಿ ನಾಲ್ಕರೆನೆಲನ ॥
ತ್ತೆರಡರೆಯುಗ್ನಿಗಮೈಕಿ ।
ಲ್ದೊರೆಕೊಳ್ಗ್ಗಮೆನಿಪ್ಪ ಶೀತಮುಮಮಾಗಿಕುರ್ಗಂ ॥ ೯

ಮತ್ತಮಾನರಕಬಿಲಂಗಳ್ ಇಂದ್ರಕಶ್ರೇಣೀಬದ್ಧಪ್ರಕೀರ್ಣಕರೂಪಂಗಳನನುಕ್ರಮದಿಂ

ತೋರ್ಪುವು ಮೂನತ್ತಯ್ದುಮ ।
ದಿರ್ಪತ್ತರೆವೆರಸು ಪತ್ತು ಮತ್ತೀರಯ್ದು ॥
ತ್ತಿರ್ಪುದು ಮೂಱಯ್ದ್ದನಂ ।
ನೇರ್ಪಡೆ ಲಕ್ಕೆಯಿವು ಕಡೆಯೊಳೆಯ್ದೆ ದಲಕ್ಕ್ಯಂ ॥ ೧೦

ಆಬಿಲಂಗಳೊಳಗಣ ಕರಭಖರಕುಕ್ಕುರಸೃಗಾಲಕಾಕಘೂಕಮುಖಾನುಕಾರಿಗಳಪ್ಪ ದುರ್ಗಂಧವೇಶ್ಮಕಶ್ಮಲೋಪಪಾದಸ್ಥಳಂಗಳೊಳ್ ಮಿಥ್ಯಾದರ್ಶನಾವಿರತಿಪ್ರಮಾದಕಷಾಯಬಹ್ವಾರಂಭಕೃಷ್ಣನೀಳಕಪೋತಲೇಶ್ಯಾದ್ಯಶುಭಪರಿಣಾಮಮುಂ ಕಾರಣಮಾಗೆ ಜೀವಂ ನೆಲಸಿದಂತರ್ಮುಹೂರ್ತಕಾಲದೊಳ್ ಆಹಾರಶರೀರೇಂದ್ರಿಯೋಚ್ಛ್ವಾಸನಿಶ್ವಾಸಭಾಷಾಮನಂಗಳೆಂಬ ಷಟ್ಪರ್ಯಾಪ್ತಿಗಳೊಳ್ ನೆಱೆದು ಹುಂಡಸಂಸ್ಥಾನಂಗಳುಂ ತೃತೀಯವೇದರುಂ ಮಷೀಮಳಿನಸವರ್ಣರುಂ ಪೂತಿಗಂಧರುಂ ಸಪ್ತಚಾಪತ್ರಿಹಸ್ತಷಡಂಗುಳಾದಿಪಂಚಧನುಶ್ಶತಪರ್ಯಂತದ್ವಿಗುಣದ್ವಿಗುಣೋತ್ಸೇಧರುಂ ಪೂರ್ವಾನುಪೂರ್ವೋತ್ತರಮಾದುತ್ಕೃಷ್ಟಮಧ್ಯಮಜಘನ್ಯಭೇದಪ್ರಯುಕ್ತೈಕತ್ರಿತಯಸಪ್ತಕದಶಸಪ್ತದಶದ್ವಾವಿಂಶತಿತ್ರಯಸ್ತ್ರಿಂಶತ್ಸಾಗರೋಪಮಾನಪ್ರಮಿತಾಯುಷ್ಯರುಮಾಗಿ ಪುಟ್ಟಿ ತೃತೀಯನರಕಂಬರಂ ಶಾರೀರಮಾನಸಕ್ಷೇತ್ರಜಪರಸ್ಪರೋದೀರಿತಧನಜ್ಯೋದೀರಿತಂಗಳೆಂಬ

ಪಂಚಪ್ರಕಾರದುಃಖಮೆ ।
ಪಂಚಮಹಾಭೂತಮಾಗೆ ಪುಟ್ಟಿದರೆಂಬಂ ॥
ತಂಚಿಮರಲ್ಲದ ಕೋಟಲೆ ।
ಯಂ ಚಿತ್ತದೊಳಾಂತು ನಾರಕರ್ ಸಲೆ ನಮೆವರ್ ॥ ೧೧

ಅದಲ್ಲದೆಯುಂ

ನಿಸದಂ ತಿರ್ಯಗ್ಜೀವಂ ।
ತ್ರಸಮುಂ ಸ್ಥಾವರಮುಮೆಂಬೆರಡು ಬಗೆದಱೊಳ್ ॥
ತ್ರಸಮೆನಿಕುಂ ದ್ವೀಂದ್ರಿಯದಿಂ ।
ಪೆಸಗೊಳ್ ಪಂಚೇಂದ್ರಿಯಂಬರಂ ಕ್ರಮದಿಂದಂ ॥ ೧೨

ಸ್ಥಾವರದೊಳ್ ಪೃಥ್ವ್ಯಪ್ತೇ ।
ಜೋವಾಯುವನಸ್ಪತೀದ್ಧಕಾಯಿಕಭೇದಂ ॥
ಜೀವಂ ಪಂಚವಿಧಂ ಪರಿ ।
ಭಾವಿ ಪೊಡೇಕೇಂದ್ರಿಯಪ್ರಪಂಚಿತಮನಿತುಂ ॥ ೧೩

ಅವಱೊಳುತ್ಕೃಷ್ಟದಿಂ ವನಸ್ಪತಿಕಾಯಿಕಕ್ಕೆ ಸಾಧಿಕಂ ಯೋಜನಸಹಸ್ರಮೂನಮಕ್ಕುಂ. ಅನಿತೆ ತಿರ್ಯಕ್ಪಂಚೇಂದ್ರಿಯಶರೀರಕ್ಕಮಕ್ಕುಂ. ಮತ್ತಂ

ಪನ್ನೆರಡು ಯೋಜನಂ ದೇ ।
ಹನ್ನೆಳ್ಪಂ ದ್ವೀಂದ್ರಿಯಕ್ಕೆ ಮೂಗಾವುದ ದಲ್ ॥
ಕೆನ್ನಂ ತ್ರೀಂದ್ರಿಯಕಂ ಮ ।
ತ್ತೆನ್ನದೆ ಚತುರಿಂದ್ರಿಯಕ್ಕೆ ಯೋಜನಮಕ್ಕುಂ ॥ ೧೪

ಮತ್ತಂ ಸ್ಪರ್ಶನರಸನಘ್ರಾಣಚಕ್ಷುಶ್ಶ್ರೋತ್ರಮೆಂಬಿಂದ್ರಿಯಪಂಚಕದೊಳ್ ಯಥಾಕ್ರಮಮೇಕೈಕವೃದ್ಧಿಯಿನೇಕದ್ವಿತ್ರಿಚತುಃಪಂಚೇಂದ್ರಿಯಮೆನಿಕ್ಕುಂ. ಏಕೇಂದ್ರಿಯದೊಳ್ ಪೃಥಿವೀಕಾಯಿಕಕ್ಕೆ ವರ್ಷಂ ಪನ್ನಿಚ್ಛಾಸಿರಮಕ್ಕುಂ. ವಾಷ್ಕಾಯಿಕ್ಕೇೞಿಂ ಸಾಸಿರಮಕ್ಕುಂ. ವಾಯುಕಾಯಿಕಕ್ಕೆ ಮೂಱು ಸಾಸಿರಮಕ್ಕುಂ. ವನಸ್ಪತಿಕಾಯಿಕಕ್ಕೆ ಪತ್ತುಸಾಸಿರಮಕ್ಕುಂ. ತೇಜಃಕಾಯಿಕಕ್ಕೆ ದಿನತ್ರಯಮಕ್ಕುಂ. ಉತ್ಕರ್ಷದಿನಾಯುಸ್ಸಮುದಯಮಕ್ಕುಂ. ಅದಲ್ಲದೆಯುಂ,

ಪನ್ನೆರಡು ವತ್ಸರಂ ದಿವ ।
ಸಂ ನಾಲ್ವತ್ತೊಂಬತಾಱು ದಲ್ ತಿಂಗಳ್ ಪ್ರಾ ॥

ವರ್ಷಂ ನೆಱೆಯೆ ಕೋಟಿಯಧಿಕತೆ ।
ಯಿಂ ನಿರುತಂ ದ್ವೀಂದ್ರಿಯಾದಿಗಳಾಯುಷ್ಯಂ ॥ ೧೫

ಅದಲ್ಲದೆಯುಂ ಭೋಗಕರ್ಮಭೂಮಿಭೇದದಿಂ ಮನುಷ್ಯಜೀವಂ ದ್ವಿಪ್ರಕಾರಮಕ್ಕುಂ. ಆಭೋಗಭೂಮಿಗಳುಂ ದೇವಕುರ್ವಾದಿಭೇದದಿಂ ಮೂವತ್ತಕ್ಕುಂ. ಅವು ಉತ್ತಮಮಧ್ಯಮಜಘನ್ಯಭೇದದಿಂ ಮೂದೆಱಂ. ತದ್ಭೂಮಿಜರ್ಗನುಕ್ರಮದಿಂ ಷಟ್ಚತ್ವಾರಿದ್ವಿಸಹಸ್ರಚಾಪೋತ್ಸೇಧಮಕ್ಕುಂ. ತ್ರಿದ್ವ್ಯೇಕಪಲ್ಯೋಪಮಂ ಜೀವನಮಕ್ಕುಂ. ಅಲ್ಲಿ

ಸಲೆ ದಶವಿಧಕಲ್ಪದ್ರುಮ ।
ಫಲಮಂ ಸತ್ಪಾತ್ರದಾನಸಾಮರ್ಥ್ಯದಿನಾ ॥
ಕುಲರಹಿತರ್ ದಂಪತಿಗಳ್ ।
ನಲವಿಂದನುಭವಿಪರಾಗಮನುಜರ್ ಮನುಜರ್ ॥ ೧೬

ಮತ್ತಂ ಕರ್ಮಭೂಮಿಗಳ್ ಭರತಾದಿಭೇದದಿಂ ಪದಿನೈದು. ಆರ್ಯಮ್ಲೇಚ್ಛಪ್ರಭೇದದಿಂ ತದ್ಭೂಮಿಜರ್ ಇರ್ತೆಱನಕ್ಕುಂ. ಅವರ್ಗುತ್ಕೃಷ್ಟದಯ್ನೂರೆಪ್ಪತ್ತಯ್ದು ಚಾಪಮುತ್ಸೇಧಂ, ಪೂರ್ವಕೋಟಿಪ್ರಮಾಣಮಾಯುಷ್ಯಮಿವು ವಿದೇಹಂಗಳೊಳ್ ನಿಯತಂ. ಭರತೈರಾವತಂಗಳೊಳ್ ಕಾಲವಶದಿಂ ವೃದ್ಧಿಹ್ರಾಸಂಗಳನೆಯ್ದುಗುಂ. ಆಕಾಲಮುತ್ಸರ್ಪಿಣಿಯುಮವಸರ್ಪಿಣಿಯುಮೆಂದವೆರಡು. ಅವ್ರೊಂದೊಂದರ್ಕೆ ಪತ್ತು ಕೋಟಿಕೋಟಿಸಾಗರೋಪಮಕಾಲಂ ಪ್ರಮಾಣಮಕ್ಕುಂ. ಮತ್ತಮುತ್ಸರ್ಪಿಣಿ ಸುಷಮಸುಷಮೆಯುಂ ಸುಷಮೆಯುಂ, ಸುಷಮದುಷ್ಷಮೆಯುಂ ದುಷ್ಷಮಸುಷಮೆಯುಂ ದುಷ್ಷಮೆಯುಂ ಅತಿದುಷ್ಷಮೆಯುಮೆಂದು ಷಟ್ಪ್ರಕಾರಮನುಳ್ಳುದಕ್ಕುಂ. ವ್ಯತಿಕ್ರಮದಿನವಸರ್ಪಿಣಿಯುಮಂತೆಯಕ್ಕುಂ. ಅಲ್ಲಿ ಮೊದಲ ಕಾಲಕ್ಕೆ ನಾಲ್ಕು ಕೋಟಿಕೋಟಿಸಾಗರೋಪಮಂ, ಎರಡನೆಯದರ್ಕೆ ಮೂಱು ಕೋಟಿಕೋಟಿಸಾಗರೋಪಮಂ, ಮೂಱನೆಯದರ್ಕೆರಡು ಕೋಟಿಕೋಟಿಸಾಗರೋಪಮಂ, ನಾಲ್ಕನೆಯದರ್ಕೆ ನಾಲ್ವತ್ತೆರಡು ಸಾಸಿರವರ್ಷಂ ಕೂಡಿದೊಂದು ಕೋಟಿಕೋಟಿ, ಅಯ್ದನೆಯದರ್ಕೆ ಇರ್ಪತ್ತೊಂದುಸಾಹಸ್ರವತ್ಸರಮಾಱನೆಯದರ್ಕಮನಿತೆ ಪ್ರಮಾಣಂ. ವ್ಯತಿರೇಕದಿನವಸರ್ಪಿಣಿಯ ಕಾಲಂಗಳ್ಗಮನಿತೆಯಕ್ಕುಂ. ಅದಲ್ಲದೆಯುಂ,

ಎನಿತೊಳವು ಕರ್ಮಭೂಮಿಗ ।
ಳನಿತಱೊಳಂ ಮ್ಲೇಚ್ಛಖಂಡಮಯ್ದು ದಲವಱೊಳ್ ॥
ಜನಿಯಿಸಿದಾಮ್ಲೇಚ್ಛರ್ ತದ ।
ವನಿಖಂಡವಿಭೇದದಿಂದಮಯ್ದುಱನಪ್ಪರ್ ॥ ೧೭

ಮತ್ತಮಾರ್ಯರುಂ ಷಟ್ಕರ್ಮಭೇದದಿಂ ಷಟ್ಪ್ರಕಾರಮಪ್ಪರ್. ಅನಗರಂ ಮಿಥ್ಯಾದೃಷ್ಟಿ ಸಾಧನಸಮ್ಯಕ್ದೃಷ್ಟಿ ಸಮ್ಯಗ್ಮಿಥ್ಯಾದೃಷ್ಟಿ ಅಸಂಯುತಸಮ್ಯಗ್ದೃಷ್ಟಿ ದೇಶವ್ರತಿ ಪ್ರಮತ್ತಸಂಯುತಂ ಅಪ್ರಮತ್ತಸಂಯುತಂ ಅಪೂರ್ವಕರಣ ಕ್ಷಪಕೋಪಶಮಕಸಂಯುತಂ ಸೂಕ್ಷ್ಮಪರಾಯ ಕ್ಷಪಕೋಪಶಮಕಸಂಯುತಂ ಅನಿವೃತ್ತಿಕರಣ ಕ್ಷಪಕೋಪಶಮಕಸಂಯುತಸೂಕ್ಷ್ಮಸಾಂಪರಾಯ ಕ್ಷಪಕೋಪಶಮಕಸಂಯುತನುಪಶಾಂತಿಕಷಾಯ ವೀತರಾಗಛದ್ಮಸ್ಥಸಂಯುತ ಕ್ಷೀಣಕಷಾಯವೀತರಾಗಛದ್ಮಸಂಯುತಂ ಸಂಯೋಗಕೇವಲಿಭಟ್ಟಾರಕನಯೋಗಿಕೇವಲಿಜಿನಭಟ್ಟಾರಕನುಮೆಂದು

ವಿದಿತಗುಣಸ್ಥಾನಂಗಳ್ ।
ಪದಿನಾಲ್ಕವಱಿಂದಮಾರ್ಯಜನಕಂ ಭೇದಂ ॥
ಪದಿನಾಲ್ಕಕ್ಕುಂ ಭಾವಿಸ್ಸೆ ।
ಇದು ದಲನೇಕಾಂತಸಮಯಸತ್ಸಿದ್ಧಾಂತಂ ॥ ೧೮

ಮತ್ತಂ ದೇವಗತಿಚತುರ್ನಿಕಾಯಭೇದದಿಂ ನಾಲ್ಕುಮಕ್ಕುಂ. ಅಲ್ಲಿ ಭವನವಾಸಿಗರ್ ಅಸುರಕುಮಾರಾದಿಭೇದದಿಂ ದಶವಿಧಂ; ವ್ಯಂತರರ್ ಕಿನ್ನರಾದಿಭೇದದಿನಷ್ಟವಿಧಂ; ಜ್ಯೋತಿಷ್ಕರ್ ಚಂದ್ರಾದಿತ್ಯಭೇದದಿಂ ಪಂಚವಿಧಂ; ವೈಮಾನಿಕರ್ ಕಲ್ಪಜಕಲ್ಪಾತೀತಭೇದದಿಂ ದ್ವಿವಿಧಂ. ಅಲ್ಲಿ ಭವನಾಮರರೊಳಸುರಕುಮಾರರ್ಗುತ್ಸೇಧಂ ಪಂಚವಿಂಶತಿಧನು, ಉೞಿದರ್ಗೆ ದಶಧನು, ವ್ಯಂತರಜ್ಯೋತಿಷ್ಕರ್ಗೆ ದಶಸಪ್ತಧನು, ಸೌಧರ್ಮೇಶಾನಕಲ್ಪಜರ್ಗೆ ಶರೀರಮಾನಂ ಸಪ್ತಾರತ್ನಿ, ಸನತ್ಕುಮಾರಮಾಹೇಂದ್ರಕಲ್ಪಜರ್ಗೆ ಷಡರತ್ನಿ, ಬ್ರಹ್ಮಬ್ರಹ್ಮೋತ್ತರಾದಿಚತುಃಕಲ್ಪಜರ್ಗೆ ಪಂಚಾರತ್ನಿ, ಶುಕ್ರಾದಿಚತು, ಕಲ್ಪಜರ್ಗೆ ಚತುರರತ್ನಿ, ಆನತಪ್ರಾಣತಕಲ್ಪಜರ್ಗೆ ಸಾರ್ಧತ್ರಯಾರತ್ನಿಃ ಆರಣಾಚ್ಯುತಕಲ್ಪಜರ್ಗೆ ಅರತ್ನಿತ್ರಯಂ, ಕಲ್ಪಾತೀತಂಗಳಪ್ಪಧೋಗ್ರೈ

ವೇಯಕತ್ರಯದವರ್ಗೆ ಸಾರ್ಧಹಸ್ತತ್ರಯಂ, ಮಧ್ಯಮಗ್ರೈವೇಯಕದವರ್ಗೆ ಹಸ್ತದ್ವಯಂ, ಊರ್ಧ್ವಗ್ರೈವೇಯಕತ್ರಯದವರ್ಗೆ ಸಾರ್ಧಹಸ್ತಂ, ಅಲ್ಲಿಂ ಮೇಗಣವರ್ಗೆಲ್ಲಂ ಹಸ್ತಪ್ರಮಾಣಮಕ್ಕುಂ. ಮತ್ತಮುತ್ಕೃಷ್ಟದಿಂ ಭವನವ್ಯಂತರರ್ಗೆ ಸಾಗರೋಪಮಸಾಧಿಕಪಲ್ಯೋಪಮಂ ಜೀವನಂ, ಜಘನ್ಯದಿಂ ದಶಸಹಸ್ರವರ್ಷಂ. ಜ್ಯೋತಿಷ್ಕದೇವರ್ಗೆ ಸಾಧಿಕಪಲ್ಯಂ, ಜಘನ್ಯದಿಂ ಪಲ್ಯಾಷ್ಟಮಭಾಗಂ. ಸೌಧರ್ಮೈಶಾನಕಲ್ಪಂಗಳೊಳಾಯುಷ್ಯಂ ಸಾಗರೋಪಮಮೆರಡು, ಸನತ್ಕುಮಾರಮಾಹೇಂದ್ರಕಲ್ಪಂಗಳೊಳೇೞು, ಬ್ರಹ್ಮಬ್ರಹ್ಮೋತ್ತರಕಲ್ಪಂಗಳೊಳ್ ಪತ್ತು, ಲಾಂತವಕಾಪಿತ್ಥಕಲ್ಪಂಗಳೊಳ್ ಪದಿನಾಲ್ಕು, ಅಲ್ಲಿಂಮೇಗಣೆರಡೆರಡು ಕಲ್ಪಂಗಳೊಳೆರಡೆರಡು ಸಾಗರೋಪಮಂ ಪೆರ್ಚಲ್, ಕಡೆಯೊಳಾರಣಾಚ್ಯುತಕಲ್ಪಂಗಳೊಳಿರ್ಪತ್ತೆರಡು. ಮತ್ತಂ ಕಲ್ಪಾತೀತವಿಮಾನಂಗಳೊಳೇಕೈಕವೃದ್ಧಿಯಿಂ ಕಡೆಯ ಸರ್ವಾರ್ಥಸಿದ್ಧಿಯೊಳ್ ಮೂವತ್ತುಮೂಱಕ್ಕುಮೆಂದಿಂತು

ನರಕಾದಿಗತಿಚತುಷ್ಟಯ ।
ಪರಿಗತಜೀವಪ್ರಕಾರಮಂ ಪೇೞ್ದು ಸುರಾ ॥
ಸುರಸಭೆಗೆ ಜೀವತತ್ತ್ವ ।
ಸ್ವರೂಪಮಂ ಬೞಿಕೆ ತಿಳಿಪಿದಂ ಸಕಳಜ್ಞಂ ॥ ೧೯

ಅದೆಂತೆಂದೊಡೆ— ಧರ್ಮಾಧರ್ಮಕಾಲಾಕಾಲಪುದ್ಗಲಭೇದದಿಂ ಜೀವಂ ಪಂಚಪ್ರಕಾರಮಕ್ಕುಂ. ಅಲ್ಲಿ

ಸಮನಿಸಿ ಜೀವಂ ತಾಮವು ।
ಸಮಂತು ಷಡ್ದ್ರವ್ಯಮೆನಿಕುಮವೆ ಮತ್ತಂ ಕಾ ॥
ಲಮದಿಲ್ಲದಂದು ಪರಮಾ ।
ಗಮದೊಳ್ ಪಂಚಾಸ್ತಿಕಾಯಮೆಸಿಕುಮಮೋಘಂ ॥ ೨೦

ಮತ್ತಂ ಧರ್ಮಾಧರ್ಮಂಗಳೆಂಬೆರಡುಂ ಲೋಕಾಕಾಶವ್ಯಾಪಕಂಗಳುಂ ಜೀವಪುದ್ಗಲಂಗಳ್ಗೆ, ಮತ್ಸ್ಯಂಗಳ್ಗೆ ಜಳದಂತೆಯುಂ, ಪಥಿಕರ್ಗೆ ತರುಚ್ಛಾಯೆಯುಂತೆಯುಂ, ಗತಿಸ್ಥಿತಿಕಾರಣಂಗಳಕ್ಕುಂ. ಆಕಾಶಮೆಂಬುದು ನಿತ್ಯ

ಮುಂ ವ್ಯಾಪಕಮುಮವಗಾಹಲಕ್ಷಣಮುಮಕ್ಕುಂ. ಜೀವಾದಿದ್ರವ್ಯಂಗಳ ನುಳ್ಳುದು ಲೋಕಾಕಾಶಮುಳಿದುದಲೋಕಾಕಾಶಮುಕ್ಕುಂ. ಮತ್ತಂ ಧರ್ಮಾಧರ್ಮಂಗಳುಮೇಕಜೀವನುಮಸಂಖ್ಯಾತಪ್ರದೇಶಂಗಳ್. ಆಕಾಶ ಮನಂತಪ್ರದೇಶಮಕ್ಕುಂ. ಮತ್ತಂ ಜೀವಾಜೀವಾದಿದ್ರವ್ಯಪರಿವರ್ತನಾ ರೂಪಮಪ್ಪುದು ಕಾಲಂ. ಅದುವುಂ ವ್ಯವಹಾರಮುಖ್ಯಭೇದದಿಂ ದ್ವಿವಿಧಂ: ತತ್ಪರ್ಯಾಯಸ್ಥಿತಂಗಳಪ್ಪ ಸಮಯಘಟಿಕಾಭೇದಲಕ್ಷಣವ್ಯವಧಾನಕಾಲಂ ತಮ್ಮಿಂ ತಾಮೆ ನಾನಾರೂಪದಿಂ ಪರಿಣಾಮಿಸುವ ಪದಾರ್ಥಂಗಳ ವರ್ತನೆಗೆ ಸಹಕಾರಿಣಿಯಾಗಿರ್ಪ ದ್ರವ್ಯಮುಖ್ಯಕಾಲಮಕ್ಕುಂ. ಪುದ್ಗಲಮೆಂಬುದು ರೂಪರಸಗಂಧಸ್ಪರ್ಶಶಬ್ದಂಗಳನುಳ್ಳುದು. ಅದುವೆ ಮೇಣ್ ಸ್ಕಂಧ ಭೇದದಿಂದಿರ್ತೆಱನಕ್ಕುಂ. ಅವರ್ಕಂ ಸ್ಥೂಳಸೂಕ್ಷ್ಮಛಾಯಾತಪಾದಿರೂಪವಿಕಲ್ಪದಿನನೇಕಭೇದಮಕ್ಕುಂ. ಅದಲ್ಲದೆಯುಂ,

ಆರಯೆ ಕರ್ಮಾಗಮನ ।
ದ್ವಾರಂ ವಾಕ್ತನುಮನಃಕ್ರಿಯಾಯೋಗಮ್ಮಾ ॥
ಪಾರಯುತಮಾಶ್ರವಂ ಸಮು ।
ದೀರಿತಮಿದು ಸದಭಿಹಿತದೊಳರ್ಹನ್ಮತದೊಳ್ ॥ ೨೧

ಅದುವುಂ ಪುಣ್ಯಪಾಪಾಪೇಕ್ಷೆಯಿಂ ಶುಭಾಶುಭರೂಪಮಕ್ಕುಂ. ಮತ್ತಂ ತದಾಶ್ರವಕ್ಕೆ ಸಕಷಾಯನುಮಕಷಾಯನುಂ ಕರ್ತೃಗಳಕ್ಕುಂ. ಅಲ್ಲಿ ಪ್ರದೋಷಾಸಾಧನಮಾತ್ಸರ್ಯೋಪಘಾತಾಂತರಾಯನಿಹ್ನವಂಗಳ್ ಜ್ಞಾನದರ್ಶನಾವರಣಕರ್ಮಾಶ್ರವಂ; ಸಂತಾಪಶೋಕಪರಿದೇವನಾಕ್ರಂದವಧಾದಿಗಳ್, ಅಸಾತವೇದನೀಯಾಶ್ರವಂ; ಸರಾಗಸಂಯಮದಾನಾನುಕಂಪನಕ್ಷಾಂತ್ಯಾದಿಗಳ್ ಸಾತವೇದನೀಯಾಶ್ರವಂ, ಆಕೇವಲಶ್ರುತಧರ್ಮಸಂಘದೇವಾವರ್ಣವಾದಂಗಳ್ ದರ್ಶನಮೋಹನೀಯಾಶ್ರವಂ; †ಕಷಾಯೋದಯಪ್ರಭೂತತೀವ್ರಪರಿಣಾಮಂಗಳ್ ಚಾರಿತ್ರಮೋಹನೀಯಾಶ್ರವಂ; ಬಹ್ವಾರಂಭಪರಿಗ್ರಹಂಗಳ್ ಬಹುಪ್ರಕಾರಮಾಯೆಗಳ್ ತಿರ್ಯಗಾಯುಷ್ಯಾಶ್ರವಂ; ಸ್ವಲ್ಪಾರಂಭಪರಿಗ್ರಹಂಗಳ್ ಮಾನುಷಾಯುಷ್ಯಾಶ್ರವಂ; ಕುರಾಗಸಂಯಮಾದಿಗಳ್ ದೇವಾಯುಷ್ಯಾಶ್ರವಂ; ವಿಸಂವಾದನಯೋಗವಕ್ರತೆಗಳ್ ಅಶೋಭನಾಮಾಶ್ರ

ವಂ; ತದ್ವಿಪರೀತಂಗಳ್ ಶುಭನಾಮಕ್ಕಾಶ್ರವಂ; ದಾನಾದಿವಿಘ್ನಕರಣಮಂತರಾಯಾಶ್ರವಂ. ಅದಲ್ಲದೆಯುಂ, †

ಪರಿಭಾವಿಸೆ ಮಿಥ್ಯಾತ್ವಾ ।
ವಿರತಿಕಷಾಯಪ್ರಮಾದಯೋಗಾಖ್ಯಂಗಳ್ ॥
ನಿರುತಮಿವಯ್ದುಂ ತತ್ತ್ವ ।
ಜ್ಞರುಕ್ತಿಯಿಂ ಬಂಧಕಾರಣಂಗಳೆನಿಕ್ಕುಂ ॥ ೨೨

ಸತತಂ ಜೀವಂ ಸಕಷಾ ।
ಯತೆಯಿಂದಂ ಕರ್ಮಯೋಗ್ಯಮಂ ಪುದ್ಗಲಸಂ ॥
ತತಿಯುಂ ಕೈಕೊಳ್ವುದು ನಿ ।
ಶ್ಚಿತಮಂತದೆ ಬಂಧಮೆಂಬ ಪೆಸರಂ ಪಡೆಗುಂ ॥ ೨೩

ಕ್ರಮದಿಂ ಪ್ರಕೃತಿಸ್ಥಿತಿಯುಗ ।
ಳಮುಮನುಭಾಗಪ್ರದೇಶಯುಗಳಮುಮೆನೆ ಭೇ ॥
ದಮಿನಿತು ನಾಲ್ಕುಂ ತೆಱದಿಂ ।
ಸಮನಿಸುಗುಂ ಬಂಧಕತ್ವಸಂಬಂಧಂಗಳ್ ॥ ೨೪

ಮತ್ತಮಯ್ದುಂ ತೆಱದ ಜ್ಞಾನಾವರಣಮುಮೊಂಭತ್ತುಂ ತೆಱದ ದರ್ಶನಾವರಣಮುಮೆರಡುಂ ತೆಱದ ವೇದನೀಯಮುಮಿರ್ಪತ್ತೆಂಟುಂ ತೆಱದ ಮೋಹನೀಯಮುಂ ನಾಲ್ಕುಂ ತೆಱದಾಯುಷ್ಯಮುಂ ತೊಂಭತ್ತುಮೂಱುಂ ತೆಱದ ನಾಮಮುಮೆರಡುಂ ತೆಱದ ಗೋತ್ರಮುಮಯ್ದುಂತೆಱದಂತರಾಯಮುಮೆಂಬಿವೆಂಟುಂ ಪ್ರಕೃತಿಗಳ ಬಂಧಭೇದಮಕ್ಕುಂ. ಮತ್ತಂ ಜ್ಞಾನದರ್ಶನಾವರಣವೇದನೀಯಾಂತರಾಯಂಗಳುತ್ಕೃಷ್ಟದಿಂ ಪ್ರತ್ಯೇಕಂ ಮೂವತ್ತು ಕೋಟಿಕೋಟಿ, ಮೋಹನೀಯಕ್ಕೆಪ್ಪತ್ತು ಕೋಟಿಕೋಟಿ, ನಾಮಗೋತ್ರಂಗಳ್ಗೆ ಪ್ರತ್ಯೇಕಮಿರ್ಪತ್ತು ಕೋಟಿ, ಆಯುಷ್ಯಕ್ಕೆ ಮೂವತ್ತಮೂ

† ನಾರಕಾಯುಷ್ಯಾಶ್ರವಂ ದರ್ಶನವಿಶುದ್ಧ್ಯಾದಿಷೋಡಶಭಾವನೆಗಳ್ ಶುಭನಾಮಕರ್ಮವಿಶೇಷತೀರ್ಥಕೃನ್ನಾಮಾಶ್ರವಂ ಪರಾತ್ಮನಿಂದಾಪ್ರಸಂಸೆಗಳ್ ನೀಚೈರ್ಗೋತ್ರಾಶ್ರವಂ ತದ್ವಿಪರ್ಯಾಸಂಗಳುಚ್ಚೈರ್ಗೋತ್ರಾಶ್ರವಂ ದಾನಾದಿವಿಘ್ನಕರಣಮಂತರಾಯಾಶ್ರವಮದಲ್ಲದೆಯುಂ. ಎಂದು ಪಾಠಾಂತರ.

ಜುಸಾಗರೋಪಮಂ, ಜಘನ್ಯದಿಂ ವೇದನೀಯಕ್ಕೆ ಪನ್ನೆರಡು ಮುಹೂರ್ತಂ, ನಾಮಗೋತ್ರಂಗಳ್ಗೆಂಟು ಮುಹೂರ್ತಂ, ಉಳಿದವರ್ಕಂತರ್ಮುಹೂರ್ತಂ ಸ್ಥಿತಿಬಂಧಮಕ್ಕುಂ.

ಬದವಿದ ಕರ್ಮದ ಶಕ್ತಿಯೆ ।
ವಿದಿತಮಾದನುಭಾಗಬಂಧಮಕ್ಕುಂ ಬಹುಭೇ ॥
ದದಿನಾದ ಜೀವಕರ್ಮ ।
ಪ್ರದೇಶಯೋಗಂ ಪ್ರದೇಶಬಂಧಮೆನಿಕ್ಕುಂ ॥ ೨೫

ಅದಲ್ಲದೆಯುಂ,

ನಿರವಿಸುವೊಡೆ ಕರ್ಮಾಶ್ರವ ।
ನಿರೋಧಮದೆ ಸಂವರಾಖ್ಯಮಕ್ಕುಂ ತತ್ವಂ ॥
ವರತತ್ವಕ್ಕಂ ತೋರ್ಕುಂ ।
ದೊರೆವೆತ್ತು ಸಮಗ್ರಕಾರಣಂಗಳ್ ಪಲವುಂ ॥ ೨೬

ಅವಾವುವೆಂದೊಡೆ– ಮನೋಗುಪ್ತ್ಯಾದಿತ್ರಿಗುಪ್ತಿಯುಂ, ಈರ್ಯಾದಿಪಂಚಸಮಿತಿಯುಂ, ಉತ್ತಮಕ್ಷಮಾದಿದಶಧರ್ಮಮುಂ, ಅಧ್ರುವಾದಿದ್ವಾದಶಾನುಪ್ರೇಕ್ಷೆಯುಂ, ಕ್ಷುಧಾದಿದ್ವಾವಿಂಶತಿಪರೀಷಹಜಯಮುಂ, ಸಾಮಾಯಿಕಾದಿಪಂಚಚಾರಿತ್ರಮುಮಕ್ಕುಂ. ಅದಲ್ಲದೆಯುಂ,

ಸಾಕ್ಷಾತ್ಕರ್ಮಕ್ಷಪಣಾ ।
ಲಕ್ಷಣಮಂದು ನಿರ್ಜರಾಹ್ವಯಂ ತತ್ವಮದ ।
ಕೀರ್ಕ್ಷಿಸೆ ಕಾಲೋಪಕ್ರಮ ।
ಲಕ್ಷಿತಭೇದದ್ವಯಂ ವಿವಿಕ್ಷಿತಮಕ್ಕುಂ ॥ ೨೭

ಅದೆಂತೆಂದೊಡೆ— ನರಕಾದಿಗತಿಗಳೊಳ್ ಕರ್ಮಂಗಳನುಂಡು ತವಿಸುವುದು ಯಥಾಕಾಲನಿರ್ಜರೆಯೆಂಬುದು, ತಪಶ್ಚರಣದಿಂ ತವಿಸುವುದು ಉಪಕ್ರಮನಿರ್ಜರೆಯೆಂಬುದು. ತಪಮುಂ ಬಾಹ್ಯಾಭ್ಯಂತರವಿಕಲ್ಪದಿಂ ದ್ವಿಪ್ರಕಾರಮಕ್ಕುಂ. ಅಲ್ಲಿಯುಮನಶನಾವಮೋದರ್ಯವೃತ್ತಪರಿಸಂಖ್ಯಾನರಸಪರಿತ್ಯಾಗವಿವಿಕ್ತಾವಾಸಕಾಯಕ್ಲೇಶಮೆಂಬಾಱುಂ ಬಾಹ್ಯತಪಂಗಳುಂ; ಪ್ರಾಯಶ್ಚಿತ್ತ ವಿನಯ ವೈಯ್ಯಾಪೃತ್ಯ ಸ್ವಾಧ್ಯಾಯ ಉತ್ಸರ್ಗ ಧ್ಯಾನಮೆಂ

ಬಾಹ್ಯಮಾಭ್ಯಂತರಾನಶನಾವಮೋದರ್ಯವೃತ್ತಿ ತಪಂಗಳ್. ಇವು ಕರ್ಮನಿರ್ಜರೇಚ್ಛುಗಳ್ಗೆ ನಿರ್ವಿಕಲ್ಪದಿಂದಾಚರಣೀಯಂಗಳ್. ಅಂತರತಪಂಗಳೊಳ್ ಧ್ಯಾನಮೆಂಬುದಾರ್ತ ರೌದ್ರ ಧರ್ಮ ಶುಕ್ಲ ಭೇದದಿಂ ನಾಲ್ಕು ತೆಱಂ. ಅವಱೊಳಾರ್ತಧ್ಯಾನಮುಮನೋಜ್ಞದ್ರವ್ಯ ವಿಪ್ರಯೋಗಾಕಾಂಕ್ಷಯುಂ ಮನೋಜ್ಞದ್ರವ್ಯಸಂಯೋಗಾಕಾಂಕ್ಷಯುಂ, ದುಸ್ಸಹವೇದನೋಪಸಮಚಿಂತಾಪ್ರಬಂಧಮುಂ, ಹರ್ಷೋನ್ಮತ್ತಾರ್ತಲಾಭಜಮುಮೆಂದು ನಾಲ್ಕು ತೆಱಂ. ರೌದ್ರಧ್ಯಾನಂ ಹಿಂಸಾನೃತಸ್ತೇಯವಿಷಯಪರಿಪಾಲನಪ್ರಬಂಧದಿಂ ನಾಲ್ಕುಂ ತೆಱಂ. ಧರ್ಮಧ್ಯಾನಮಾಜ್ಞಾಪಾಯವಿಪಾಕಸಂಸ್ಥಾನನಿಚಯವಿವರಣೆಯಿಂ ನಾಲ್ಕುಂ ತೆಱಂ. ಶುಕ್ಲಧ್ಯಾನಂ ಪೃಥಕ್ತ್ವವಿತರ್ಕವಿಚಾರನೈಕತ್ವವಿತರ್ಕವಿಚಾರಣಸೂಕ್ಷ್ಮಕ್ರಿಯಾಪ್ರತಿಪಾತಿವ್ಯುಪರಕ್ರಿಯಾನಿವೃತ್ತಿ ಭೇದದಿಂ ನಾಲ್ಕು ತೆಱಂ. ಮತ್ತಂ ಮೊದಲವೆರಡು ಧ್ಯಾನಂಗಳ್ ನಿಷೇಧಮುಖದಿಂ ನಿರ್ಜರಾಕರಣಂಗಳ್; ಉೞಿದುವೆರಡುಂ ವಿಧಿಮುಖದಿನಖಿಳಕರ್ಮನಿರ್ಜರಾಕರಣಂಗಳ್. ಅದಲ್ಲದೆಯುಂ,

ಸಮನಿಸಿರೆಕೃತ್ಸ್ನಕರ್ಮ ।
ಪ್ರಮುಕ್ತಿ ಪರಿಣಾಮಿಯೆನಿಸ ಭವ್ಯಂಗದೆ ಮೋ ॥
ಕ್ಷಮೆನಿಪ್ಪ ಸಪ್ತಮುಂ ತ ।
ತ್ತ್ವಮದರ್ಕೆ ಸಮಂತು ಹೇತುರತ್ನತ್ರಿತಯಂ ॥ ೨೮

ಅದೆಂತೆಂದೊಡೆ— ಸಮ್ಯಗ್ದರ್ಶನಜ್ಞಾನಚಾರಿತ್ರಮೆಂದಕ್ಕುಂ. ಅಲ್ಲಿ ದರ್ಶನಮೆಂಬುದು-ತತ್ತ್ವಾರ್ಥಶ್ರದ್ಧಾನಂ, ಅದರ್ಕೆ ಯಥಾಸ್ವರೂಪಗ್ರಹಣಕಾರಣಂ ಸಮ್ಯಕ್ಪದಪ್ರಯೋಗಂ. ಜ್ಞಾನಮೆಂಬುದು-ಜೀವಾದಿಪದಾರ್ಥನಿಶ್ಚಯಾವಬೋಧಂ, ಅದರ್ಕೆ ಸಂಶಯವಿಪರ್ಯಾಸಾದಿನಿವಾರಣಾರ್ಥಂ ಸಮ್ಯಕ್ಪದಪ್ರಯೋಗಂ. ಚಾರಿತ್ರಮೆಂಬುದು— ಪಾಪಕ್ರಿಯಾನಿವೃತ್ತಿ, ಅದರ್ಕಜ್ಞಾನಾಚರಣಪರಿಹಾರನಿಮಿತ್ತಂ ಸಮ್ಯಕ್ಪದಪ್ರಯೋಗಂ. ಅದಲ್ಲದೆಯುಂ,

ಸಂಸೃತಿಗಿವಱ ಸಮಾಯೋ ।
ಗಂ ಸಮನಿಸುಗುಂ ಸಮಂತು ನಿಸ್ಸಾರ್ಶಮನಾ ॥

ದಂ ನೆಮುನಿಪೆಂದದಿಂ ವಿ ।
ಧ್ವಂಸನಮಂ ರೋಗಸಮಿತಿಗೌಷಧಯೋಗಂ ॥ ೨೯

ಮತ್ತಂ ರತ್ನತ್ರಯೆಸಂ ।
ಪತ್ತಿಯೆ ರಾಗದಿಗಳ್ಗೆ ಸಮನಿಸುಗುಂ ವ್ಯಾ ॥
ಪತ್ತಿಯನವು ಕಿಡೆ ಹೇತು ನಿ ।
ವೃತ್ತಿಯಿನಾಸಕಳಕರ್ಮವಂ ಕಿಡುತರ್ಕುಂ ॥ ೩೦

ಕರ್ಮಕ್ಷಯದೊಳ್ ಚರಮವ ।
ಪ್ರರ್ಮಾತ್ರಾಕೃತಿಯಿನೆಯ್ದಿ ಲೋಕಾಗ್ರಮುಮಂ ॥
ನಿರ್ಮಳಮಪ್ಪಷ್ಟಗುಣ ।
ಕ್ಕಾರ್ಮಂ ತಾನಾಗಿ ಮುಕ್ತನಕ್ಕುಂ ಜೀವಂ ॥ ೩೧

ಅಂತಗ್ನಿಶಿಖಿಯಂತೂರ್ಧ್ವಗತಿಸ್ವಭಾವತೆಯಿಂ ತ್ರಿಭುವನಾಗ್ರಕ್ಕೆ ಸಂದು ಗತಿಕಾರಣಮಪ್ಪ ಧರ್ಮಾಸ್ತಿಕಾಯಾಭಾವದಿನಾಲೋಕಕೆ ಸಲಪಿಲ್ಲದಿಲ್ಲಿಯೆ ನಿಶ್ಚಳತ್ವಮನವಳಂಬಿಸಿಕುಂ.

ಅಮದೋರ್ಸೆದಪ್ಪದಾನನಸುಧಾಂಶುವಿನಿಂಬೆನೆ ದಿವ್ಯಭಾಷೆ ಚೆ ।
ಲ್ವಮದೋರ್ಗೆತರ್ಪಿನಂ ಸಕಳತತ್ವಸಮುಚ್ಚಯಮಂ ಸಮಾಸದಿಂ ॥
ದಮೆ ತಿಳಿವಂತು ಪೇಳ್ದನನವದ್ಯಗುಣಾಶ್ರಯಣಂ ಗಣಾಗ್ರಣಿ ॥
ಪ್ರಮುಖಸಮಸ್ತಭವ್ಯನಿಕರಕ್ಕೆ ಜಿನಂ ವರಬೋಧಲೋಚನಂ ॥ ೩೨

ಜಿನವಚನರಸಾಯನವಾ ।
ಹಿನಿಯೊಳಗವಗಾಹಮಿರ್ದು ಗಣಮನಿತುಂ ತ ॥
ಣ್ಣನೆ ತಣಿದುದು ಪರಿವರ್ಜಿತ ।
ಘನಮಿಥ್ಯಾತ್ವಾಭಿತಾಪಮುಪಗತಲೇಪಂ ॥ ೩೩

ಅನಂತರಂ ಮಿಥ್ಯಾತ್ವತಮಃಪರಿಹಾರಕಾಲಮನವಧಿಬೋಧದಿನರಿದನಾ ರರಾಜಂ ಮುಕುಳಿತಕರಸರೋಜಂ ಜಿನರಾಜಾಭಿಮುಖನಾಗಿ

ಭರತಕ್ಷೇತ್ರದ ಧರ್ಮಭೂಮಿಗಳ್ ಭವ್ಯಗರ್ವಗಂ ಭಾಸದೊಳ್ ।
ಪರಿತೋಷಂ ಬಳೆವನ್ನೆಗಂ ಕಜೆಯುತುಂ ಧರ್ಮಾಮೃತಾಸಾರಮಂ ॥

ಪಿರಿದುಂ ನಿರ್ಮಳಧರ್ಮತೀರ್ಥರಸಕಂ ಲೋಕಕ್ಕೆ ಕಣ್ಬಚ್ಚವು ।
ಚ್ಚರಿಯುಪ್ಪಂತು ವಿಹಾರಿಸಲ್ಕಿದೆ ಪದಂ ತ್ರೈಲೋಕ್ಯರಕ್ಷಾಮಣೀ ॥ ೩೪

ಎಂದು ಬಿನ್ನಪಂಗೆಯ್ವುದುಂ ತದನಂತರಂ,

ತ್ರಿದಶಜ್ಯೋತಿಷ್ಕಮುಖ್ಯಾಮರಗಣಯುಗಪತ್ತಾಡಿತಸ್ಫಾರಭೇರೀ ।
ಗದಿತಪ್ರಕ್ಷೋಭದಿಂ ಮಾರ್ದನಿವಿಡೆ ದೆಸೆಗಳ್ ಪ್ರೋಚ್ಚಳತ್ಕೇತನವ್ರಾ ॥
ತದ ತಳ್ತೊತ್ತೊತ್ತೆಯಂ ಪೆತ್ತೆಡೆಗಿಡೆ ಗಗನಂ ಧರ್ಮಚಕ್ರಾಧಿಪತ್ಯ ।
ಕ್ಕಿದೆ ದಲ್ದಿಗ್ಜೈತ್ರಯಾತ್ರೋತ್ಸವಮೆನೆ ತಳರ್ದಂ ಖ್ಯಾತತೀರ್ಥಾಧಿನಾಥಂ

ಅಂತಶೇಷಭವ್ಯಮಂಡಳಿಯ ಪುಣ್ಯಪ್ರೇರಣದಿನಾಖಂಡಳಂ ಸಮವಸರಣಮಂಡಳಮಂ ಗಗನಮಂಡಳದೊಳಂ ನಡೆಯಿಪಲ್ಲಿ,

ಚರಣನ್ಯಾಸೋಚಿತಮೋ ।
ದುರುಕಾಂಚನಕಮಳಸಪ್ತಕಂ ಕರಮೆಸೆಗುಂ ॥
ತರದಿಂ ಹರಿಪೀಠಾಗ್ರದ ।
ಪರಭಾಗದೊಳಂ ಸ್ಥಳಾಬ್ಜವನಮಾಳೆಯವೋಲ್ ॥ ೩೬

ನ್ಯಾಯಾನ್ವಿತತತ್ವಾಭಿ ।
ಪ್ರಾಯಂ ಪಸರಿಪುದು ಭಾಷೆ ಸಾಧುಜನಶ್ರ ॥
ದ್ಧೇಯಂ ಪರಪ್ರಮಾಣಾ ।
ಜೇಯಂ ಸರ್ವಾರ್ಥಮಾಗಮೀಯಂ ಶ್ರೇಯಂ ॥ ೩೭

ಸಕಳಜನಗೋಚರಂ ಕೌ ।
ತುಕಕರಮೆನಿಸಿದ ಜನಾನುರಾಗಂ ತತ್ತೀ ॥
ರ್ಥಕರಪರಮೇಶ್ವರಾಸ್ಥಾ ।
ಯಿಕೆ ವಿಹರಿಸುತಲ್ಲಿ ಕೂಡೆ ಪರಿವರ್ತಿಸುಗುಂ । ೩೮

ಆಡೆ ಪತಾಕಾತತಿ ತೂ ।
ಗಾಡೆ ಕನದ್ರತ್ನತೋರಣಾವಳಿ ಮುದದೊಳ್ ॥
ಕೂಡೆ ಸಭಾಜನಮೊಯ್ಯನೆ ।
ತೀಡಿದುದನುಕೂಳಸುರಭಿಸಾರಸಮೀರಂ ॥ ೩೯

ಧರೆಯುಂ ವಿಗತತೃಣಪ್ರ ।
ಸ್ತರಕಂಟಕಧೂಳಿಕೀಟಶರ್ಕರನುಷ್ಣಂ ॥
ತಿರೆ ಯೋಜನಪರಿಮಿತಮುಂ ।
ಮರುತ್ಕುಮಾರರ್ ಸಮಂತು ಸಂಮಾರ್ಜಿಸುವರ್ ॥ ೪೦

ಕುಳಿಶಧರನಾಜ್ಞೆಯಿಂದಂ ।
ತಳಿವರ್ ಬೞಿವೞಿಯೊಳಾವಗಂ ತನ್ಮಹಿಮಂ ॥
ಡಳಮಂ ಸ್ತನಿತಕುಮಾರರ್ ।
ಮಳಯಜಕಾಶ್ಮೀರಗಂಧಬಂಧುರಜಳದಿಂ ॥ ೪೧

ಸಕಳರ್ತುಸಮಾಗಮಸೂ ।
ಚಕಪಲ್ಲವಪುಷ್ಪಫಳಸಮುಲ್ಲಸಿತತರು ॥
ಪ್ರಕರಚಿತಂ ಮುಕುರತಳಾ ।
ನುಕಾರಿ ಭೂವಳಯಮೊಪ್ಪುಗುಂ ರತ್ನಮಯಂ ॥ ೪೨

ತ್ರೈಳೋಕ್ಯನಾಥವಿಭವಸ ।
ಮಾಳೋಕನಜಾತಹರ್ಷಪುಳಕವಿಳಾಸ ॥
ವ್ಯಾಳಂಬಮಾಯ್ತು ಪುಳನತ ।
ಶಾಳಿವ್ರೀಹ್ಯಾದಿಸಕಳಸಸ್ಯಸಮೂಹಂ ॥ ೪೩

ನರತಿರ್ಯಗ್ಜೀವಾವಳಿ ।
ಪರಸ್ಪರಕ್ರೋಧಬುದ್ಧಿಯಂ ಬಿಟ್ಟು ನಿರಂ ॥
ತರಮೈತ್ರೀಭಾವನನಂ ।
ತರಂಗದೊಳ್ ತಾಳ್ದಿ ತೊಳ್ದುದು ಕುಟಿಲತೆಯುಂ ॥ ೪೪

ಅಪಗತಘನಪಟಳೋದಯ ।
ಮಪಕ್ಷಿಸಂಚಾರಮಸ್ತಲಹರೀಸಂದೋ ॥
ಹಪಯೋಧಿವಿಮಳಮಾಕಾ ।
ಶಪಥಂ ಚೆಲ್ವಾಯ್ತು ಧೌತಖಡ್ಗಶ್ಯಾಮಂ ॥ ೪೫

ಪಸರಿಸ ತನುದಿಂ ರಜದಿಂ ।
ಮಸುಳ್ಕೆವೆತ್ತಿರದೆ ಬೆಸೆಗಳುಂ ದಿಗ್ದೇವೀ ॥

ವಿಸರದ ಪೊಗೆದೊಡನೆನಸುಂ ।
ಪ್ರಸನ್ನಭಾವಮನದೇಂ ಪ್ರಮಂಗೊಳಿಸಿದುದೋ ॥ ೪೬

ದಿವಿಜಜ್ಯೋತಿರ್ವ್ಯಂತರ ।
ಭವನಾಮರರಿಂದ್ರನಾಜ್ಞೆಯಿಂದತ್ತಿತ್ತ ॥
ರ್ದವರುಮನಭವವಿಹಾರೋ ।
ತ್ಸವಕ್ಕೆ ನೆಱೆ ಕರೆವ ಸಂಭ್ರಮಂ ಕರಮೆಸೆಗುಂ ॥ ೪೭

ಪರಮಸುಭಾವಮಂಡಳಸಂ ।
ಚರಣಕ್ಕಿನಮಂಡಳಂ ಪುರಸ್ಕ್ರಸನಾದಂ ॥
ತಿರೆ ಧರ್ಮಚಕ್ರಮೆಸೆದ ।
ತ್ತರದಶಶತಕಿರಣಭರಿತರೋಚಿಶ್ಚಕ್ರಂ ॥ ೪೮

ವಿಮಳಮಣಿವರ್ಣಾದ್ಯ ।
ಷ್ಟಮಂಗಳೋತ್ಕರಮನಾಂತು ಬರೆ ಮುಂದಮರ ॥
ಪ್ರಮದೆಯರಂಬರದೊಳ್ ನಾ ।
ಡೆ ಮನೋಹರಮಾಯ್ತು ಸಮವಸರಣವಿಹಾರಂ ॥ ೪೯

ಅಂತು ದೇವಕಲ್ಪಿತಚತುರ್ದಶಾತಿಶಯಮುಂ ಪ್ರಾಕ್ಪ್ರಣೀತಸಹೋತ್ಪನ್ನದಶಾತಿಶಯಮುಂ ಘಾತಿಕ್ಷಯಾನಂತರಜನಿತದಶಾತಿಶಯಮುಮೆಂಬ ಚತುಸ್ತ್ರಿಂಶದತಿಶಯಮುಮಷ್ಟಮಹಾಪ್ರಾತಿಹಾರ್ಯಮುಮನಂತಚತುಷ್ಟಯಮುಂ ತ್ರಿವಿಷ್ಟಪಾಧಿಪತ್ಯಮುಂ ಸ್ಪಷ್ಟಂಮಾಡೆ ಸೌರಾಷ್ಟ್ರಮಹಾರಾಷ್ಟ್ರಕುಂತಳಾವಂತಿವಿದರ್ಭಪಾಂಚಾಳಕುರುಜಾಂಗಣಾದಿವಿಷಯದೊಳಂ ಧರ್ಮತೀರ್ಥಪ್ರಭಾವನೆಯಂ ಸಂಭಾವಿಸುತುಂ ಬರ್ಪನ್ನೆಗಂ

ಇಳೆಗೆ ಸುಧರ್ಮಮೆಂಬಮೃತವರ್ಷಮನಾಗಿಪಪೂರ್ವಮೇಘಮಂ ।
ತಳೆವೊ ಕುತೀರ್ಥಮೆಂಬ ತಮಮಂ ಸಲೆ ತೂಳ್ದುವ ನೂತ್ನಭಾನುವಂ ॥
ತಳೆವೊ ದಿಟಕ್ಕೆ ತಾನೆನಿಸಿ ಚಂದ್ರಜಿನೇಂದ್ರಸಭಾಸಮಗ್ರಮಂ ।
ತಳೆವೊಸೆದಿರ್ದುದಬ್ಧಿಪಥಮಂಡಳಲಕ್ಷ್ಮಿಯನರ್ಘ್ಯಮಂಡನಂ ॥ ೫೦

ಪಿರಿದುಂ ಚೆಲ್ವಾಯ್ತು ಭೇರೀಸಿವಹಪಟುರವವ್ಯಾಪ್ತದಿಕ್ಚಕ್ರಪೂರಂ ।
ಸುರಪುಷ್ಪಾಸಾರಸಾರಂ ಭುವನವಿನುತಧರ್ಮಾವತಾರಂ ಪ್ರರಸ್ಸಂ ॥

ಚರಚಂಚದ್ಧರ್ಮಚಕ್ರಪ್ರಚುರಕಿರಣಭಾರಂ ಸಮಸ್ತಾರ್ತಿದೂರಂ ।
ಪುರುಹೂತಾನಂದಕಾರಂ ಜಿನಪತಿಪರಿಷನ್ಮಂಡಳಶ್ರೀವಿಹಾರಂ ॥ ೫೧

ಮತ್ತಂ ದ್ಯಾವಾಪೃಥಿವಿಯೆಲ್ಲಂ ಜಯಜಯನಿನಾದಮಯಮುಂ, ಅಗುರುಧೂಪಾಮೋದಮಯಮುಂ, ದಯಾರಸಪ್ರವಾಹಮಯಮುಂ, ಅನೇಕಮಂಗಳಸಮೂಹಮಯಮುಂ, ವೃಂದಾರಕಬೃಂದಮಯಮುಂ, ಆನಂದಮಯಮುಂ, ಪುಣ್ಯಕಾರ್ಯಮಯಮುಂ, ಆಶ್ಚರ್ಯಮಯಮುಮಾಗಿ ವಿಹಾರಿಸುತ್ತುಂ ಬಂದು ಛದ್ಮಸ್ಥಕಾಲಂ ಮೂಱುತಿಂಗಳ್ ಪೋಱಗಾಗೆ ತೊಂಬತ್ತೊಂಬತ್ತು ಸಾಸಿರದೊಂಬೈನೂಱ ತೊಂಬತ್ತೊಂಬತ್ತು ಪೂರ್ವಮುಮೆಣ್ಬತ್ತುಮೂಱು ಲಕ್ಕೆಯುಂ ತೊಂಬತ್ತೊಂಬತ್ತು ಸಾಸಿರದೊಂಬೈನೂಱಿಪ್ಪತ್ತೆರಡು ಪೂರ್ವಾಂಗಮುಮೆಣ್ಬತ್ತುಮೂಲಕ್ಕೆಯುಂ ತೊಂಬತ್ತೊಂಬತ್ತು ಸಾಸಿರದೊಂಬೈನೂಱ ತೊಂಬತ್ತೊಂಬತ್ತು ಬರಿಸಮುಮೊಂಬತ್ತು ತಿಂಗಳುಮಪ್ಪ ಕೇವಳಿಕಾಲಂ ಮಾಸಾವಶೇಷಮಾದುದೆಂಬಂದಿಂಗೆ

ಎಸೆವಂತರೀಪನಂ ಗಗ ।
ನಸಮುದ್ರದ ನಾವೆ ಸಾರ್ದುದೆನೆ ತಜ್ಜಿನರಾ ॥
ಜಸಭಾವಳಯಂ ಸಾರ್ದ ।
ತ್ತಸನಂ ಸಮ್ಮೇದಮೇದಿನೀಧರಶಿರಮಂ ॥ ೫೨

ಆಗಳರ್ಹತ್ಪ್ರಭಾವದಿಂದಂ

ಆಡುತ್ತಿರ್ದುದು ಸೋಗೆವಿಂಡು ತರುಷಂಡಂ ತೋರಮಣ್ ಪೇಱೆ ತೂ ।
ಗಾಡುತ್ತಿರ್ದುದು ಕೈರವಾಬ್ಜನಿಳಯಂ ಸ್ವಚ್ಛಾಂಬುವಿಂ ತುಂಬಿ ತು ॥
ಳ್ಕಾಡುತ್ತಿರ್ದುದು ಪೂತ ವಲ್ಲಿಗಳೊಳೆಲ್ಲಂ ಕೂಡೆ ಭೃಂಗಾಳಿ ಮು ।
ದ್ದಾಡುತ್ತಿರ್ದುದು ವಿಸ್ಮಯಂ ನೆಗಱ್ವನಂ ಸಮ್ಮೇದಶೈಲೇಂದ್ರದೊಳ್ ॥

ಮತ್ತಂ

ಭೂಮಿಯೊಳದ್ರಿಗಳ್ ಪಲವುಮಿರ್ದೊಡಮಂ ಪೆಱಗಿಕ್ಕಿ ಭಸ್ವರ ।
ಕ್ಷಾಮಣಿ ಘಾತಿಜಾತತಿಮಿರಾಘನಭೋಮಣಿ ಸಾಧುಸಂಘಚಿಂ ॥
ತಾಮಣಿಯೆಂದು ಬಂದೆನಗೆ ಚಂದ್ರಜಿನೇಶ್ವರನಾದನಲ್ತೆ ಚೂ ।
ಡಾಮಣಿಯೆಂಬಗಂ ಮುದಮನಾಳ್ದಪ್ಪೊಲಾಂತುದಪೂರ್ವಶೋಭೆಯಂ ॥

ಅಂತುಮದಲ್ಲದೆಯುಂ

ತ್ರಿದಶೇಂದ್ರಾದ್ರಿಯೊಳಾದುದೀವಿಭುಗೆ ಮುಂ ದ್ವೈತೀಯಕಲ್ಯಾಣಮಂ
ತೆ ದಲಾದಪ್ಪುದದೆನ್ನೊಳಂ ಕುಳಿಶಿಯಿಂ ನಿರ್ವಾಣಕಲ್ಯಾಣಮಿಂ ॥
ಸದೃಶಂ ಪೂತತೆಯಿಂದಮಾಗಿರಿಯೊಳಾನೆನ್ನೊಳ್ ತದುರ್ವೀಧ್ರಮಾ ।
ವುದು ಮತ್ತೆಂದುಲಿವಂತುಟಾಯ್ತು ಗಿರಿ ತನ್ಮಾಯೂರಕೋಳಾಹಳಂ॥ ೫೫

ನಾನಾಜೈನಗೃಹಾಧಿ ।
ಸ್ಥಾನಂ ವಿಂಶತಿಜಿನೇಶಪರಿನಿರ್ವಾಣ ॥
ಸ್ಥಾನಂ ವಿಚಿತ್ರಕೂಟವಿ ।
ತಾನಂ ಸಮ್ಮೇದಮುಸಮುಶೋಭಾಧಾನಂ ॥ ೫೬

ಆಮಹಾಮಹೀಧರದಧಿತ್ಯಕದೊಳೊಂದತ್ಯಂತಪಾವನಪ್ರದೇಶದೊಳ್ ವಿಸರ್ಜಿತವಿಹರಣವಿಧಾನನುಮೇಕಮಾಸಪರ್ಯಂತಪರ್ಯಂಕಾಸನಸ್ಥಿತನುಮುತ್ತರಾಭಿಮುಖನುಮನೇಕಗಣಧರಮುನಿವೃಷಭಸಭಾಪರಿವೃತನುಮಾಗಿ ಯೋಗನಿರೋಧದಿಂದಿರ್ದ ಚಂದ್ರಪ್ರಭಜಿನೇಂದ್ರಂ ಶುಕ್ಲಧ್ಯಾನಸಾಮಾನ್ಯದಿಂ ತೃತೀಯಮುಂ ಪರಮಶುಕ್ಲಾಪೇಕ್ಷೆಯಿಂ ಪ್ರಥಮಮುಮಪ್ಪ ಸೂಕ್ಷ್ಮಕ್ರಿಯಾಪ್ರತಿಪಾತಿಧ್ಯಾನಮನೊಳಕೆಯ್ದಂತರ್ಮುಹೂರ್ತದಿಂ ಚರಮಾಂಗತ್ರಿಗುಣಬಾಹುಲ್ಯದಿನೇಕಸಮಯದೊಳ್ ಚತುರ್ದಶರಜ್ಜೂತ್ಸೇಧಜೀವಪ್ರದೇಶವಿಸರ್ಪಣಮಪ್ಪ ದಂಡಸಮುದ್ಘಾತಮುಮಂ ದ್ವಿತೀಯಸಮಯದೊಳ್ ಪ್ರಾಕ್ಪ್ರಣೀತಬಾಹುಲ್ಯಾಯಾಮದಿಂ ಯಮಳಕವಾಟಾಕೃತಿಜೀವಪ್ರದೇಶವಿಸರ್ಪಣಮಪ್ಪ ಕವಾಟಸಮುದ್ಘಾತಮುಮಂ ತೃತೀಯಸಮಯದೊಳ್ ವಾಯುತ್ರಯಾನಶೇಷಲೋಕಾಕಾಶಜೀವಪ್ರದೇಶಪ್ರವರ್ತನಮಪ್ಪ ಪ್ರತರಸಮುದ್ಘಾತಮುಮಂ ಚತುರ್ಥಸಮಯದೊಳ್ ಸಕಳಲೋಕವ್ಯಾಪ್ತಿಜೀವಪ್ರದೇಶಪ್ರವರ್ತನಮಪ್ಪ ಲೋಕಪೂರಣಸಮುದ್ಘಾತಮುಮಂ ನೆಱಪಿ ಮತ್ತಂ ವ್ಯುತ್ಕ್ರಮಪ್ರವರ್ತಿತತತ್ತದುಪಸಂಹೃತಿಕ್ರಿಯೆಯಿಂ ಘಾತಿತಾಘಾತಿಸ್ಥಿತ್ಯನುಭಾಗಪರಿಪ್ರಾಪ್ತಪೂರ್ವಕಾಯಪ್ರಮಾಣಾತ್ಮಪ್ರದೇಶನಾಯುಸ್ಸ್ಥಿತಿಯೊಳುೞಿದ ಘಾತಿಸ್ಥಿತಿಯುಂ ಸಮೀಕರಿಸಿ ಬೞಿಯುಮಂತರ್ಮುಹೂರ್ತದಿಂ ಬಾದರಮನೋವಚನೋಚ್ಛ್ವಾಸಂಬಾದರಕಾಯಯೋಗಸೂಕ್ಷ್ಮ

ಮನೋಶ್ವಾಸುಗಳುಮಂ ನಿರೋಧಿಸಿ ಸೂಕ್ಷ್ಮಕಾಯಯೋಗನಾಗಿ ಸಮನಂತರಂ ನೀಲೋದಂಗೆಯ್ದು ಲಘ್ವಕ್ಷರಪಂಚಕೋಚ್ಚಾರಣಸಮಯಸಮಿತಾಯೋಗಕೇವಳಿಗುಣಸಂಸ್ಥಾನಸ್ಥಿತಂ ಸಮುಚ್ಛಿನ್ನಪ್ರಾಣಾಪಾನಸಮಾನಪ್ರಚಾರಸರ್ವಕಾಯವಾಙ್ಮನೋಯೋಗಪರಿಸ್ಪಂದಕ್ರಿಯಾವ್ಯಾಪಾರಮಪ್ಪ ಸಮುಚ್ಛಿನ್ನಕ್ರಿಯಾನಿವೃತ್ತಿಯೆಂಬ ಚತುರ್ಥಪರಮಶುಕ್ಲಧ್ಯಾನದೊಳ್ ನಿಂದು ಸಂಶುದ್ಧಸರ್ವಾಶ್ರವಂ ಸಂಪೂರ್ಣಸಕಲಶೀಲಗುಣಸಮಾಜಂ ನಿಜೋಪರತಿಸಮಯದೊಳನ್ಯತರವೇದನೀಯದೇವಗತಿ ತತ್ಪ್ರಾಯೋಗ್ಯಾನುಪೂರ್ವಶರೀರಬಂಧನಸಂಘಾತವರ್ಣರಸಪ್ರತ್ಯೇಕಪಂಚಕಸಂಹನನಸಂಸ್ಥಾನಷಟ್ಕಗಂಧದ್ವಿತೀಯಾಂಗೋಪಾಂಗದ್ವಿತೀಯವಿಹಾಯೋಗತಿಸ್ಪರ್ಶಾಷ್ಟಕಾಗುರುಲಘುಚತುಷ್ಕಶುಭಾಶುಭ ಸ್ಥಿರಾಸ್ಥಿರ ಸುಸ್ವರ ದುಸ್ವರ ಸುಭಗದುರ್ಭಗ ಪ್ರತ್ಯೇಕಶರೀರಯಶಸ್ಕೀರ್ತ್ಯನಾದೇಯನಿರ್ಮಾಣಪರ್ಯಾಪ್ತನೀಚೈರ್ಗೋತ್ರಂಗಳೆಂಬೆಪ್ಪತ್ತೆರಡುಂ ಪ್ರಕೃತಿಗಳಂ ನಿರವಶೇಷಂಮಾಡಿ ನಿಜಚರಮಸಮಯದೊಳವಶಿಷ್ಟಾನ್ಯತರವೇದ್ಯಮನುಷ್ಯಾಯುರ್ಗತಿ ತತ್ಪ್ರಾಯೋಗ್ಯಾನುಪೂರ್ವಪಂಚೇಂದ್ರಿಯಜಾತಿತ್ರಸನಾಮಶುಭಗಾದೇಯಪರ್ಯಾಪ್ತಬಾದರಯಶಸ್ಕೀರ್ತ್ಯುಚ್ಚೈರ್ಗೋತ್ರತೀರ್ಥಕರನಾಮಂಗಳೆಂಬ ಪದಿಮೂಱುಂ ಪ್ರಕೃತಿಗಳುಮನುನ್ಮೂಳಿಸಿದಂ. ಇಂತು

ಪರಮಧ್ಯಾನಮಣಿಪ್ರದೀಪದಿನಘೌಘಧ್ವಾಂತಮುಟ್ಕಡೆ ಸಾ |
ರ್ತರೆ ವಿಸ್ಪಷ್ಟಗುಣಾಷ್ಟಕಂ ವಿಗತಕಿಟ್ಟಪ್ರಸ್ತರಸ್ವರ್ಣಭಾ ||
ಸುರಸಂಶುದ್ಧನಿಜಸ್ವರೂಪನಘನಂ ಚಂದ್ರಪ್ರಭಸ್ವಾಮಿ ಮು |
ಕ್ತಿರಮಾಸಂಗಮಸೌಖ್ಯಮಂ ನೆಱೆಯೆ ಪೆತ್ತಂ ನಿತ್ಯಮಂ ಸ್ತುತ್ಯಮಂ ||

ತಾಂ ತನ್ನಂ ತನ್ನಿಂದಾ |
ದಂ ತನಗೆಡೆಮಾಡೆ ಪ್ರಕ್ಷ್ಟಿ ತನ್ನತ್ತಣಿನಂ ||
ಟುಂ ತನ್ನಯ ಗುಣಮವಿಚಳ |
ತಂ ತನ್ನೊಳ್ ನೆಲಸೆ ನೆಲಸಿದಂ ನಿರ್ವೃತಿಯೊಳ್ || ೫೮

ಸಮನಿಸೆ ಫಾಲ್ಗುನಸಿತಸ |
ಪ್ತಮಿಯಪರಾಹ್ಣಂ ಶುಭಪ್ರದಂ ಜ್ಯೇಷ್ಠ ತದು ||

ತ್ತಮಸಮಯುದೊಳಪಗತಸಕ ।
ಳಮಳಂ ತ್ರೈಲೋಕ್ಯಶಿಖರಿಶೇಖರನಾದಂ ॥ ೫೯

*
ನೆಗೞ್ದೀಷತ್ಪ್ರಾಗ್ಭಾರಂ ।
ಜಗತಿ ಗುಣಾಷ್ಟಕಮಪಷ್ಟಮಂಗಳಮಾವಾ ॥
ಯುಗಣಂ ಮಂಡಪಮಾಗಿರೆ ।
ಜಗನ್ನುತಂ ಮದುವೆನೆರೆದನಮೃತಶ್ರೀಯೊಳ್ ॥ ೬೦

ಮನುಜಕ್ಷೇತ್ರದವೊಲ್ ಯೋ ।
ಜನಲಕ್ಷಂ ತನಗಮಗಲದೊಳ್ ನಾಲ್ವತ್ತೆ ॥
ಯ್ದನೆ ತೋರಮೆಂಟು ಯೋ ।
ಜನಮೆನೆ ಸಮವೃತ್ತಂ ಕ್ರಮೋನ್ನತಂ ಶುಚಿತೇಜಂ ॥ ೬೧

ಓರಂತೆಸೆವುದು ಲೋಕಾ ।
ಕಾರಶ್ರೀಗೆತ್ತಿ ನಿಂದ ಧವಳಚ್ಛತ್ರಂ ॥
ಕಾರಮನಾಂತೀಷತ್ಪ್ರಾ ।
ಗ್ಭಾರಶಿಳಾವಳಯಮತುಳಶೋಭಾನಿಳಯಂ ॥ ೬೨

ಅಂತಷ್ಟಮಭೂಮಿಯೆನಿಸುವ ಲೋಕಶಿಖರದೊಳ್ ನಾಲ್ವತ್ತೈದು ಲಕ್ಷಯೋಜನಸಮವೃತ್ತಮುಂ ಸಮಸ್ಥಾನಮುಂ ಸುಗಂಧಮುಂ ಸಮಗುಣಮುಂ ಅತಿಪ್ರಸಿದ್ಧಮುಂ ವಿಶುದ್ಧಮುಮಾಗಿರ್ದ ಸಿದ್ಧಶಿಲೆಯ ಮೇಗಣ ವಾಯುತ್ರಯಭಾಗದೊಳ್ ಕಿಂಚಿನ್ನ್ಯೂನಚರಮಶರೀರಮಾತ್ರಜೀವಘನಾಕಾರನುಂ ಕ್ಷಾಯಿಕಾಸಮ್ಯಕ್ತ್ವಾನಂತಜ್ಞಾನದರ್ಶನಾನಂತವೀರ್ಯಸೂಕ್ಷ್ಮತ್ವಾವಗಾಹಗುರುಲಘುಕಾವ್ಯಾಬಾಧಾಷ್ಟಗುಣಮಣಿನಿಧಾನನುಂ ನಿಶ್ಚಳನುಂ ನಿ

ಸಮತಳಸಮತೇಜಮಯಂ ।
ಸಮವೃತ್ತಂ ಸುಖಮಯಂ ವಿಶುದ್ಧವಿಶಾಲಂ ॥
ಸಮಲಕ್ಷ್ಮೀಮಣಿಪೀಠಂ ।
ಸಮಲೋಕೋತ್ತಮಂ ಸಮಾಯ್ತು ಸಿದ್ಧಕ್ಷೇತ್ರಂ ॥ ೬೩

ಇದು ಗ್ರಂಥಕರ್ತನದಲ್ಲವೆಂದು ತೋರುತ್ತದೆ, ಒಂದು ಪ್ರತಿಯಲ್ಲಿಲ್ಲ.

ರಾಕಾರನುಂ ನಿತ್ಯನುಂ ನಿರಂತರಸುಖನುಂ ನಿರಂಜನನುಮಾಗಿ ಸಿದ್ಧಪದವಿ ಯೊಳ್ ನಿಂದನನ್ನೆಗಮಿತ್ತಲ್

ಜ್ಯೋತಿಷ್ಕಾವಳಿ ಭಾವನಪ್ರತತಿ ವಾನೇಯವ್ರಜಂ ಕಲ್ಪಜ।
ವ್ರಾತಂ ಯಾನವಿಮಾನಸೈನಿಕವಧೂವರ್ಗಾನ್ವಿತಂ ಪ್ರೋಚ್ಛ್ವಳ॥
ತ್ಕೇತುಚ್ಛತ್ರಕದಂಬಚುಂಬಿತನಭೋಭಾಗಂ ಸ್ಫುರದ್ಭೂಷಣೋ।
ದ್ದ್ಯೋತಂ ಬಂದುದು ಮಾಳ್ಪ ಕೌತುಕದಿನಾನಿರ್ವಾಣಕಲ್ಯಾಣಮಂ॥

ಅಂಬರಮಾವಗಂ ನೆರೆದು ತಿಂಬಿದ ದೇವನಿಕಾಯದಿಂದೆ ಚಿ।
ತ್ರಂಬರೆದಂಬರಕ್ಕೆ ದೊರೆಯಾದುದು ದುಂದುಭಿರಾವದಿಂ ಪ್ರಪೂ॥
ರ್ಣಾಂಬುಧಿಘೋಷಮಾದ ತೆಱದಿಂದೆಸೆದೆಣ್ದೆಸೆಯಿರ್ದುದೇಂ ಮಹಾ।
ಡಂಬರಮಾಯ್ತೊ ಬರ್ಪ ಬರವಂದು ಸಮಸ್ತಸುರೇಂದ್ರಬೃಂದದಾ॥ ೬೫

ಅಂತು ಬರ್ಪಲ್ಲಿ

ಕಳಶಮನಂಸದ ಕೆಲದೊಳ್।
ಜಳರುಹಗಂಧಾಂಬುಪೂರ್ಣಮಂ ಕರತಳದಿಂ॥
ತಳೆದಮರರಮಣಿ ನಿಜಕುಚ।
ಕಳಶದ ಚೆಲ್ವಿಂಗೆ ಮಾಡಿದಳ್ ಸಂಗಡಮಂ॥

ಅಳವಡೆ ಕೇಸರರಸಮಂ।
ಪಳಿಕಿನ ಶುಕ್ತಿಕೆಯೊಳಾಂತ ಕಾಂತೆ ಕರಂ ಕ॥
ಣ್ಗೊಳಿಸಿದಳುದಯದ ಕೆಂಪಡ।
ರ್ದೆಳಮಿಂಚೆಯಂ ತಳದೊಳಕ್ಕೆ ತೋಱುವ ತೆಱದಿಂ॥ ೬೭

ಭರಿತಸಿತಾಕ್ಷತಕುಳಮಂ।
ಪರಿಯಣಮಂ ತಳೆದು ಬರ್ಪ ಸುರವಧುವಗೆಮ್ಮೊ॥
ಯ್ದಿರಿಸಿಟ್ಟ ಪುಣ್ಯಬೀಜಾಂ।
ಕುರಪಾತ್ರಮನಾಂತ ಲಕ್ಷ್ಮಿಯಂ ನೆನೆಯಿಸಿದಳ್॥ ೬೮

ಮುರಿಪಿದ ಕರಂಬಬಾಸಿಗ।
ದೆರಡುಂ ಕಡೆಯುಂ ವಿಳಾಸವತಿ ಪಿಡಿದೆರಡುಂ॥

ಕರದಿನನುಕರಿಸಿದಳ್ ಸುರ ।
ಶರಾಸನಶ್ರೀಯುನಾಳ್ದ ಗಗನಶ್ರೀಯುಂ ॥ ೭೯

ಅನಿಮಿಷಕಾಂತೆ ಸುಧಾಶನ ।
ವಿಸಿಹಿತಮಂ ಪೊನ್ನ ಬೋನನಮಂ ಪೊತ್ತು ಬರು ॥
ತ್ತನಸುಂ ಪೋಲ್ತಸೆದಳ್ ಭೋ ।
ಜನಾಂಗವಂ ಕಲ್ಪಲತೆಯನಾವ್ಯತಿಕರದೊಳ್ ॥ ೮೦

ನಂದನಮಣಿದೀಪೋತ್ಕರ ।
ದಿಂದೆಸೆವಾರತಿಯುನಾಂತು ಬರ್ಪಮರಿ ಮನ ॥
ಕ್ಕಂದೊಪ್ಪಿದಳಲಗೊ*ಂಚಲೊ ।
ಳೊಂದಿದ ಬಂಧೂಕಲತಿಕೆಯಂದದಿನೊರ್ವಳ್ ॥ ೮೧

ಮಿಳಿ*ರ್ದ ಸಿತಾಗರುಧೂಮಾ ।
ವಳಿ ಮೊಗದಿಂದೊಗೆವ ಧೂಪಘಟಮನದೊರ್ವಳ್ ॥
ತಳೆದಮರಿ ತಮಾಳದ ತಳಿ ।
ಗ*ಳಸಮನಂದಾಂತ ಸಂದೆಗಕ್ಕೆಡೆಯಾದಳ್ ॥ ೮೨

ಪರಿನಿರ್ವಾಣೋತ್ಸವತ ।
ತ್ಪರತೆಯಿನೇಟ್ತರ್ಪ ಸಮಯದೊಳ್ ಪುಣ್ಯಪರಂ ।
ಪರೆ ಕೆಯ್ಯೊಳ್ ಫಳಯಿಸಿದಂ ।
ತಿರೆ ಫಳವಂ ತಳೆದು ತತ್ತಳೋದರಿಯೆಸೆದಳ್ ॥ ೮೩

ಅಂತನೂನದೇವನಿಕಾಯಂಬೆರಸಮರರಾಜಂ ಬಂದು ಸಮ್ಮೇದಮೇದಿನೀಧರಶಿಖರದೊಳವತರಿಸಿ

ಜಯಜಯಜಯ ದುರಿತಾಂತಕ ।
ಜಯಜಯಜಯ ವಿಮಳಬೋಧ ಜಯಜಯಜಯ ನಿ ॥
ರ್ವ್ಯಯ ಲಕ್ಷ್ಮೀಪತಿ ಜಯ ಜಯ ।
ಜಯ ಚಂದ್ರಪ್ರಭ ಜಿನೇಂದ್ರ ವಿಘಟಿತತಂದ್ರಾ ॥ ೮೪

ಎಂದಭಿನಂದಿಸುತ್ತುಂ ಗೀರ್ವಾಣನಾಯಕಂ ಸರ್ವಜ್ಞಪರಿನಿರ್ವಾಣ

ಕ್ಷೇತ್ರಮನತಿಪವಿತ್ರಮಂ ತ್ರಿಪ್ರದಕ್ಷಿಣಂಗೆಯ್ದು ಬೞಿಯಂ ಸಮಸ್ತಪ್ರಶಸ್ತವಸ್ತುಗಳಿಂ ತತ್ಪ್ರದೇಶಪೂಜೆಯಂ ವಿರಾಜಿಪಂತು ಮಾಡೆ

ತಣಿಯದು ಕಲ್ಪಭೂಜತತಿಯಿತ್ತು ಸುರಾಸುರಕೋಟಿ ತಂದಣಂ ।
ತಣಿಯದು ಕೈಗೆ ನೀಡಿ ತಣಿಯಳ್ ಶಚಿ ಪೂಜಿಸಿ ನಾಕಿನಾಯಕಂ ॥
ತಣಿಯನಶೇಷಪುಷ್ಪಫಳಚಂದನವಸ್ತ್ರವಿಭೂಷಣಾರ್ಚನಾ ।
ಗುಣಮನದೇಂ ಜಿನೇಂದ್ರಪರಿನಿರ್ವೃತಿಪೂಜೆಯುಗುರ್ವವೆತ್ತುದೋ ॥ ೭೫

ಆನಿರ್ವಾಣಕಲ್ಯಾಣಪೂಜಾಕರಣಾನಂತರಂ

ರಸಭಾವಾಭಿನಯಂ ನೋ ।
ಳ್ಪ ಸಮಸ್ತಸ್ವರ್ಗಿಜನದ ಕಣ್ಗಂ ಮನಕಂ ॥
ಪೊಸತಾಗೆ ರಾಗದಿಂ ನಟಿ ।
ಯಿಸಿದಂ ಪುರುಹೂತನಾತ್ಮಕುತಪಸಮೇತಂ ॥ ೭೬

ಕೃತಕೃತ್ಯಂ ಬುದ್ಧಬೋಧ್ಯಂ ಬಗೆವೊಡೆ ದಿಟದಿಂ ಸಿದ್ಧಸಾಧ್ಯಂ ದಲೆಂ
ಬು । ನ್ನತಿಯಂ ಕೈಕೊಂಡು ಮುಂ ಮಾಡಿದ ಪರಮತಪಂ ಮತ್ತೆ ತಾಂ
ಪೆತ್ತ ಬೋಧೋ ॥ ದ್ಗತಿಯೀಗಳ್ ಸಾರ್ದ ಶಾಶ್ವತ್ಪದಮುಖಿಪಲೆ ಸಾಲ್ದಿರ್ದರ್
ವಿನ್ನಪ್ಪುದಿನ್ನು । ನ್ನತಿಯೇನೆಂದಿಂದ್ರನಿಂದುಪ್ರಭನ ಮಹಿಮೆಗಂ ವಿಸ್ಮಿತ
ಸ್ವಾಂತನಾದಂ ॥ ೭೭

ಆಗಿ ಮತ್ತಂ

ಶ್ರೀಮನ್ಮಂದಾರಧಾರಾನಿಕರಪರಿವೃತಂ ದಿವ್ಯವಾಗ್ವಿಸ್ತರಾಂಶು ।
ಸ್ತೋಮಪ್ರದ್ಯೋತಿತಾಶಾಂಬರಪಥನಮಳಜ್ಞಾನಪೀಯೂಷಗರ್ಭಂ ॥
ವ್ಯಾಮೃಷ್ಟಾಂಹಸ್ತಮಂ ಸಂಭೃತಕುಮುದವನಂ ಮಾಳ್ಕೆ ಚಂದ್ರಪ್ರಭಂ
ಪ್ರೋ । ದ್ದಾಮಶ್ರೀಪಾದಸೇವೋತ್ಸವಮನೆ ಜಿನಪಂ ಹೃಚ್ಚಕೋರಕ್ಕೆ
ನಮ್ಮಾ ॥ ೭೮

ಎಂದು ಬೞಿಯಂ ಗಣಧರಪಾದಾರವಿಂದಂಗಳಂ ವಂದನಾರ್ಚನಾವಿಧಾನದಿನಾರಾಧಿಸಿ ತೀರ್ಥಭೂತಮಂ ಸಮ್ಮೇದಪರ್ವತಮಂ ಪ್ರದಕ್ಷಿಣೀಕರಿಸಿ ಪ್ರೋಪವಸರದೊಳರ್ಹದಾಗಮದಿನಱಿದವಸರ್ಪಣದ ಕಡೆಯ ಕಾಲದೊಳಪ್ಪ ತೀರ್ಥಕರಬಿಂಬಂಗಳಂ ತದ್ವರ್ಣೋತ್ಸೇಧಲಕ್ಷಣೋಪಲಕ್ಷಿತಂಗ

ಳುಂ ರತ್ನಮಯಂಗಳುಮಾಗೆ ಭರತಸಗರಚಕ್ರಿಗಳ್ ಮುನ್ನಮೆ ಮಾಡಿಸಿದುವಂ ತತ್ಪರ್ವತಾಪತ್ಯಕದ ಚೈತ್ಯಾಗಾರಂಗಳೊಳ್ ಕಂಡು ಶತಮಖಪುಣ್ಯಾರ್ಜನೋನ್ಮುಖನಭಿಮುಖನಾಗಿ

|| ಶ್ಲೋಕಂ ||

ಶ್ರೀನಿಕೇತಾಯಿತಾತ್ಮಾಂಘ್ರಿನೀರಜಂ ನೀರಜೋವ್ರಜಂ |
ಆದ್ಯಂತಶೂನ್ಯಮಾದ್ಯಂತಂ ವಂದೇಹಂ ವೃಷಭಂ ವಿಭುಂ || ೧
ಅಜಿತಂ ವಿಜಿತಾಶೇಷವೃಜಿನಂ ಜಿನಪಂ ಸ್ತುವೇ |
ದ್ವಿತೀಯಮದ್ವಿತೀಯೋರುವಿಭವಂ ವಿಭವಶ್ರಿಯೇ || ೨
ಸಂಭವಂ ನಿರ್ಜಿತಸ್ವಾಂತಸಂಭವಂ ಭುವನಾಧಿಪಂ |
ತೃತೀಯಂ ನೌಮಿ ನೌರೂಪಂ ಭವ್ಯಾನಾಂ ಭವವಾರಿಧೌ || ೩
ಅಭಿನಂದಿನತಾನಂದಮಭಿನಂದೇಭಿನಂದನಂ |
ಚತುರ್ಥಂ ತೀರ್ಥನಾಥಾನಾಂ ಮನ್ಮಥೋತ್ಸೇಕಮಾಥಿನಾಂ || ೪
ಸುಮತಿಂ ಸುಮತಿಂ ತ್ಯಕ್ತ್ವಾಪ್ರವ್ರಜ್ಯಾರಾಜ್ಯಮಾಶ್ರಿತಂ |
ಪಂಚಮಂ ಗತಿಮುದ್ದಿಶ್ಯ ಪಂಚಮಂ ನೌಮ್ಯಪಂಚಮಂ || ೫
ಸಪ್ರಭಾವಂ ಸ್ತುವೇ ದೇವಂ ಪದ್ಮಪ್ರಭಮುರುಪ್ರಭಂ |
ಅಶ್ರಾಂತಶಾಂತಿಶಾರೀರಸೌಷ್ಠವಂ ಷಷ್ಠಮಿಷ್ಟದಂ || ೬
ಸುಪಾರ್ಶ್ವಂ ಪದಪಾರ್ಶ್ವಸ್ಥಸೇವಾಗತಸುರಾಧಿಪಂ |
ಸಪ್ತಮಂ ಲುಪ್ತಸಂಸಾರಂ ನಮಾಮ್ಯುದ್ದೃಪ್ತಸದ್ಗುಣಂ || ೭
ಅಷ್ಟಮೀಂ ಪೃಥಿವೀಂ ವೇಷ್ಟುಮಿಚ್ಛುರ್ವರ್ದೇಹಮಷ್ಟಮಂ |
ಚಂದ್ರಪ್ರಭಂ ಪ್ರಭೂತಾಷ್ಟಪ್ರಾತಿಹಾರ್ಯಮನೋಹರಂ || ೮
ಪುಷ್ಪದಂತಮಘಧ್ವಾಂತಪುಷ್ಪವಂತಂ ಸ್ತುವೇಭವಂ |
ನವಮಂ ನವಮಂದಾರಸ್ಮೇರಪ್ರಸವವರ್ಷಿಣಂ || ೯
ಚತುರ್ಗತಿಭ್ರಮಾಯಸ್ತಜನಶೀತಳನಾಶ್ರಯಂ |
ಶೀತಳಂ ನೌಮಿ ದಶಮಂ ಸಶಮಂ ಶಮನಾಪಹಂ || ೧೦
ಶ್ರೇಯೋಜಿನಂ ಜನಶ್ರೇಯಃಪ್ರದಮಕ್ಷಯಸಂಪದಂ |
ಏಕಾದಶಂ ಸಮಾರೂಢಾಶೇಷಪುಣ್ಯಾದಶಂ ಸ್ತುವೇ || ೧೧
ವಾಸವಾಕಲ್ಪಿತಾಕ್ಷೂಣನಿಜಕಲ್ಯಾಣಪಂಚಕಂ |
ವಾಸುಪೂಜ್ಯಂ ಜಗಜ್ಜ್ಯೇಷ್ಠಂ ವಂದೇಹಂ ದ್ವಾದಶಂ ವೃಷಂ || ೧೨

ವಿಮಲಂ ವಿಮಲಜ್ಞಾನಭಾನೂದಯಮಹಾಚಲಂ |
ನೌಮಿ ತ್ರಯೋದಶಂ ಲೋಕತ್ರಯರಕ್ಷಕಮಕ್ಷಯಂ ॥ ೧೩
ಅನಂತಂ ಸಹಜಾನಂತಚತುಷ್ಟಯವಿರಾಜಿತಂ |
ಅನೇಕಾಂತರಮಾಕಾಂತಂ ನಮಾಮೀಶಂ ಚತುರ್ದಶಂ ॥ ೧೪
ಧರ್ಮಂ ಧರ್ಮಾಮೃತಾಸಾರಪರ್ಜನ್ಯಂ ನಿರ್ಜಿತೈನಸಂ |
ವಂದೇ ಪಂಚದಶಂ ಚಂಚತ್ಪಂಚಮಜ್ಞಾನಸಂಚಿತಂ ॥ ೧೫
ಷೋಡಶಂ ತೀರ್ಥನಾಥಾನಾಂ ಪಂಚಮಂ ಚಕ್ರವರ್ತಿನಾಂ |
ಅಗಣ್ಯಪುಣ್ಯಶಾಂತೀಶಂ ವಂದೇಹಮಘಶಾಂತಯೇ ॥ ೧೬
ಕುಂಥುಂ ಕುಂಥ್ವಾದಿಸತ್ವಾನಾಂ ದಯೈಕಮಯವರ್ತನಂ |
ನೌಮಿ ಸಪ್ತದಶಂ ಪ್ರಾಪ್ತಪರಮಸ್ಥಾನಸಪ್ತಕಂ ॥ ೧೭
ನೌಮಿ ಪಂಚಶರೋಗ್ರಾರಿಶರಾರುಮರಮವ್ಯಯಂ |
ಅಷ್ಟಾದಶಂ ವಿನಿರ್ಮುಕ್ತತತ್ಸಂಖ್ಯಾದೋಷದೂಷಣಂ ॥ ೧೮
ಮಲ್ಲಿಂ ವಿದ್ರಾವಿತಾನಂಗಮಲ್ಲಂ ತಲ್ಲಂ ದಯಾಂಭಸಂ |
ಏಕೋನವಿಂಶಂ ತೀರ್ಥೇಶಂ ಸ್ತುವೇ ಭಕ್ತ್ಯತಿಶಕ್ತಯಾ ॥ ೧೯
ಸುವ್ರತಂ ಮೋಕ್ಷಸೌಧಾಗ್ರನಿಶ್ರೇಣೀಕೃತಸುವ್ರತಂ |
ವಿಂಶಂ ತೀರ್ಥಕರಂ ವಂದೇ ದಯಾರಸಜಲಾಕರಂ ॥ ೨೦
ನಮಿಂ ನಮಿತದೇವೇಂದ್ರಂ ನೌಮಿ ನಿತ್ಯಂ ನಿರತ್ಯಯಂ |
ಏಕವಿಂಶಂ ಗಳದ್ರಾಗಂ ಜನ್ಮವಾರಾಶಿಪಾರಗಂ ॥ ೨೧
ಧರ್ಮಚಕ್ರದೃಢಾಯುತ್ತನೇಮಿಂ ನೇಮಿಂ ನಮಾಮ್ಯಹಂ |
ದ್ವಾವಿಂಶತಿತಮಂ ಧ್ವಸ್ತದ್ವಾವಿಂಶತಿಪರೀಷಹಂ ॥ ೨೨
ದುಷ್ಕರ್ಮಕರ್ಮಠಕ್ರೂರಕಮಠಾಶ್ಚರ್ಯಧೈರ್ಯಕಂ |
ಪಾರ್ಶ್ವೇಶ್ವರಂ ತ್ರಯೋವಿಂಶತಮಂ ಸ್ತೌಮೀಶಸತ್ತಮಂ ॥ ೨೩
ಚತುರ್ವಿಂಶಂ ಜಿನಂ ಜನ್ಮಸಿಂಧುಸೇತೂಕೃತವ್ರತಂ |
ವರ್ಧಮಾನಮಧಿಜ್ಞಾನವೃದ್ಧಂ ವಂದೇ ಸಮೃದ್ಧಯೇ ॥ ೨೪

॥ ವಸಂತತಿಲಕಂ ॥

ಪುಣ್ಯಾಮೃತಸ್ತವನಮಗ್ಗಳಸೂರಿಸೂಕ್ತ
ಮತ್ಯಂತಭಕ್ತಿಪರತಂತ್ರಧಿಯಾ ಪಠೇದ್ಯಃ |
ಸಪ್ರಾಪ್ನುಯಾವನಘತೀರ್ಥಕೃತಾಂ ಪ್ರಸಾದಾ
ದಾಮುತ್ರಿಕಂ ಚ ಸುಖಮೀಹಿತಮೈಹಿಕಂ ಚ ॥ ೨೫

ಅಂತತ್ಯಂತಭಕ್ತಿಯಿಂ ಸ್ತುತಿಯಿಸಿ ಮತ್ತಮಿಂತೆಂದಂ:—

ಘನಕೈಲಾಸದೊಳತ್ಯುದಾತ್ತಮೆನಿಪೀಸಮ್ಮೇದದೊಳ್ ಚಂಪೆಯೊಳ್ ।
ವನಲೀಲಾಮಿಳಿತೋರ್ಜಯಂತಗಿರಿಯೊಳ್ ತತ್ಪಾವೆಯೊಳ್ ಧಾತ್ರಿ ಪೇ ॥
ಯೆನೆ ನಿರ್ವಾಣಪದಕ್ಕೆ ಸಂದ ಸಲಲಿದರ್ಾವಿಶ್ವತೀರ್ಥೇಶರೀ ।
ಗನಘರ್ ಭವ್ಯಜನಕ್ಕೆ ಮಂಗಳಮಹಾಶ್ರೀಯಂ ನಿಜಶ್ರೀಯುಮಂ ॥ ೮೦

ಎಂದು ಸಕಳಾಮರೇಂದ್ರಬೃಂದಮಂ ನಿಜಮಂದಿರಕ್ಕೆ ಪೋಗಲ್ವೇಟ್ಟು

ಕ್ರಮದಿಂ ನಿರ್ವಾಣಕಲ್ಯಾಣಮನೊಡರಿಸಿದಂ ಶ್ರೀಜಿನಸ್ತೋತ್ರಕಲ್ಪ ।
ದ್ರುಮಮೆಯ್ದಿತ್ತೆಯ್ದೆ ಸಾಫಲ್ಯಮನಭಿಮತಸಂಸಿದ್ಧಿಯಂ ಪೆತ್ತನಿಂದೆಂ ॥
ದಮಳಂ ಸದ್ಧರ್ಮಶೀಳಂ ವಿಬುಧಪತಿ ಸಮಂತಗ್ಗಳಂ ಪೆರ್ಚೆ ರಾಗಂ ।
ಸುಮನೋಲೋಕಕ್ಕೆ ಸಂದಂ ಸುಲಲಿತಕವಿತಾನರ್ತಕೀನೃತ್ಯರಂಗಂ ॥ ೮೧

ಪ್ರಮುದಿತಭವ್ಯಮಂ ಸುಕವಿಸಂಕುಳಸೇವ್ಯಮನಾಪ್ತತತ್ವವಿ ।
ತ್ಸಮುದಯಭಾವ್ಯಮಂ ಸಕಳಸತ್ಕೃತಿನವ್ಯಮನೀಜಿನಾನ್ವಯ ॥
ಕ್ರಮಯುತಕಾವ್ಯಮಂ ನೆಱೆಯೆ ನಿರ್ಮಿಸಿ ನಿರ್ಮಳಭಕ್ತಿಭಾವದಿಂ ।
ದಮಳನಕೀರ್ತಿಗಂ ಸುಕೃತಪೂರ್ತಿಗಮಗ್ಗಳನಂತು ನೋಂತರಾರ್ ॥ ೮೨

ಚಂದ್ರಪ್ರಭಚರಿತಮನಾ ।
ಚಂದ್ರಾರ್ಕಸ್ಥಾಯಿಯಿಂತಿದೆನೆ ಪೇೞ್ದ ಶರ ॥
ಚ್ಚಂದ್ರೋಜ್ಜ್ವಳಕೀರ್ತಿಗೆ ಸುಕ ।
ವೀಂದ್ರಂ ನೆಲೆಯಾದನಾದಮಗ್ಗಳದೇವಂ ॥ ೮೩

ಆತ್ರಿಭುವನೈಕಗುರುವ ಚ ।
ರಿತಾಬ್ಧಿಯ ಪಾರಮೆಯ್ದಿದಂ ಸ್ವೀಕೃತರ ॥
ತ್ನತ್ರಿತಯನಗ್ಗಳಂ ಸಾಂ ।
ಯಾತ್ರಿಕನೆನೆಸಂದ ಮತಿಜಚಿತ್ರದ ಬಲದಿಂ ॥ ೮೪

ಅಸಹಾಯತೆಯಿಂ ಸಂಸಾ ।
ರಸಮುದ್ರಮನೀಸಿದಂ ಶಶಿಪ್ರಭನೆಂತಂ ॥
ತಸಹಾಯತೆಯಿಂ ತಚ್ಚರಿ ।
ತಸಮುದ್ರಮನೀಸಿ ಜಸಮನಗ್ಗಳನಾಂತಂ ॥ ೮೫

ಪರಮೇಶ್ವರಕೀರ್ತಿಸುಧಾ ।
ಕರಬಿಂಬದೊಳಮರ್ದು ತೋರ್ಪ ಷೋಡಶಕಲೆಯೊಳ್ ॥
ದೊರೆಯಾದುವು ಚಂದ್ರಪ್ರಭ ।
ಪುರಾಣದೊಳ್ ನೆಗಳ್ದ ಷೋಡಶಾಶ್ವಾಸಂಗಳ್ ॥ ೮೬

ಏಕಾದಶಶತಮುಂ ಮು ।
ತ್ತೇಕಾದಶಮಾಗೆ ಶಕನೃಪಾಬ್ದಂ ಸೌಮ್ಯ ॥
ಪ್ರಾಕಟವರ್ಷದ ಚೈತ್ರಸಿ ।
ತೈಕಾದಶಿಯಂದು ನೆಗಳ್ದುದೀಕೃತಿರತ್ನಂ ॥ ೮೭

॥ ಗದ್ಯಂ ॥

ಇದು ಪರಮಪುರುನಾಥಕುಳಕುಭೃತ್ಸಮುದ್ಭೂತಪ್ರವಚನಸರಿತ್ಸರಿನ್ನಾಥ
ಶ್ರುತಕೀರ್ತಿತ್ರೈವಿದ್ಯಚಕ್ರವರ್ತಿಪದಪದ್ಮನಿಧಾನದೀಪವರ್ತಿ

ಶ್ರೀಮದಗ್ಗಳದೇವ

ವಿರಚಿತಮಪ್ಪ

ಚಂದ್ರಪ್ರಭಪುರಾಣದೊಳ್

ನಿರ್ವಾಣಕಲ್ಯಾಣವರ್ಣನಂ

ಷೋಡಶಾಶ್ವಾಸಂ.

ಚಂದ್ರಪ್ರಭಪುರಾಣಂ ಸಮಾಪ್ತಂ.